# ಮುಮುಕ್ಷು ಹಿತಬೋಧೆ

(ಅಧಿಕಾರಭಾಗ, ಸಾಧನಭಾಗ, ಜ್ಞಾನಭಾಗ-ಸಮೇತ)

ಬರೆದವರು

ಸಜ್ಜನಗಡನಿವಾಸಿ ರಾಮಸ್ವಾಮಿ

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

www.adhyatmaprakasha.org

2010

# ಗ್ರಂಥ

''ಪರಮಾರ್ಥಶಾಸ್ತ್ರದಲ್ಲಿಯ ತತ್ವ ಹಾಗೂ ಸಾಧನೆಗಳನ್ನು ಅರಿತುಕೊಳ್ಳಲು ಹಂಬಲಿಸುವವರಿಗೆ 'ಮುಮುಕ್ಷು'ಗಳು ಎನ್ನುತ್ತಾರೆ ಇಂಥ ಮುಮುಕ್ಷುಗಳಿಗೆ ಹಿತಕರವಾದ ಬೋಧೆಯನ್ನಿತ್ತು ಮಾರ್ಗದರ್ಶನ ಮಾಡಿರುವ ಈ ಗ್ರಂಥಕ್ಕೆ 'ಮುಮುಕ್ಷುಹಿತಬೋಧೆ' ಎಂಬ ಹೆಸರು ಯೋಗ್ಯವೇ ಆಗಿದೆ''

ದೇವರಾಯ ಕುಲಕರ್ಣಿ

ಚಿರಪರಿಚಿತರಾದ ರಾಮಸ್ವಾಮಿಗಳು ನಿಸ್ಪೃಹರು. ಪರಮಾರ್ಥಕ್ಕಾಗಿ ಜೀವಿತವನ್ನು ಉಪಯೋಗಿಸುತ್ತಿದ್ದಾರೆ. ಅಧಿಕ ಮಂದಿ ಮುಮುಕ್ಷುಗಳ ಸೇವೆಗಾಗಿ ಮುಂಚೆ ತೆಲುಗಿನಲ್ಲಿ. ಈಗ ಪ್ರಸ್ತುತ ಕನ್ನಡದಲ್ಲಿಯೂ ಪ್ರಕಟಿಸಿರುತ್ತಾರೆ. ಮೋಕ್ಷಾಸಕ್ತರು ಇದನ್ನು ಉಪಯೋಗಿಸಿ ಪ್ರಯೋಜನವನ್ನು ಪಡೆಯಿರಿ.

ಶ್ರೀ ಸೇಗು ವೇಣುಗೋಪಾಲ ಬ್ರಹ್ಮಚಾರಿ

# ಗ್ರಂಥಕರ್ತ

''ಇದರ ನಿರ್ಮಾತೃಗಳಾದ 'ಶ್ರೀರಾಮಸ್ವಾಮಿ'ಗಳು ಸರ್ವ ಸಂಗ ಪರಿತ್ಯಾಗಿಗಳಾಗಿ ಶ್ರೀ ಸಮರ್ಥರಾಮದಾಸ ಮಹಾಸ್ವಾಮಿಗಳಂಥ ಅನುಭಾವಿಗಳ ಪರಂಪರೆಗೆ ಸೇರಿ, ಅನೇಕ ದೇಶಪರ್ಯಟನಗಳಿಂದ ಸತ್ಪುರುಷರನೇಕರ ದರ್ಶನ ಲಾಭ ಪಡೆದು ತಾವು ಸ್ವತಃ ಸಾಧನೆಮಾಡಿ ಅನುಭವಪಡೆದ ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದಾರೆ.

ದೇವರಾಯ ಕುಲಕರ್ಣಿ

ಅಧ್ಯಾತ್ಮಗ್ರಂಥಾವಳಿ

# ಮುಮುಕ್ಷುಹಿತಬೋಧೆ

(ಅಧಿಕಾರಭಾಗ, ಸಾಧನಭಾಗ, ಜ್ಞಾನಭಾಗ-ಸಮೇತ)

ಬರೆದವರು :

ಸಜ್ಜನಗಡನಿವಾಸಿ ರಾಮಸ್ವಾಮಿ

ಕ್ರಮಾಂಕ : 81

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂ. : 08175 273820
www.adhyatmaprakasha.Org.
2010

**Mumukshu hithabodhe :**
Written by **Sri Sajjanagadanivasi Ramaswamy,**
Published by Adhyatma Prakasha Karyalaya, Public Charitable Trust,
Holenarasipur - 573211(INDIA)
Phone : 08175-273820 www.adhyatmaprakasha.org.

ಮೊದಲನೆಯ ಮುದ್ರಣ **I** 1966 (1000 ಪ್ರತಿಗಳು)
ಎರಡನೆಯ ಮುದ್ರಣ **II** 1998 (1000 ಪ್ರತಿಗಳು)
ಮೂರನೆಯ ಮುದ್ರಣ **III** 2010 (1000 ಪ್ರತಿಗಳು)

ಪುಟಗಳು : 12 + 138 = 150

ಬೆಲೆ : ರೂ. 30/-

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮ ಪ್ರಕಾಶಕಾರ್ಯಾಲಯದ್ದು
All Rights Reserved

**ಅಕ್ಷರ ಜೋಡಣೆ :**
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂ - 28, ದೂರವಾಣಿ : 26761539

**ಮುದ್ರಣಸ್ಥಾನ :**
**ಶ್ರೀರಾಮ ಪ್ರಿಂಟರ್ಸ್**
ನಂ. 25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು - 560 062 .
ದೂ. 98453 46197

॥ಶ್ರೀರಾಮ॥

# ಶ್ರೀಶ್ರೀಶ್ರೀಪರಮಹಂಸ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರ ಆಶೀರ್ವಾದ

''ಶ್ರೀ ಸಜ್ಜನಗಡನಿವಾಸಿ ರಾಮಸ್ವಾಮಿಯವರು ಬರೆದಿರುವ ''**ಮುಮುಕ್ಷು ಹಿತಬೋಧೆ**'' ಯೆಂಬ ಗ್ರಂಥವನ್ನು ನೋಡಿದೆವು. ಶ್ರೀಯುತರು ವಿರಕ್ತರು ಮತ್ತು ಅಧ್ಯಾತ್ಮಸಾಧಕರು. ಇವರು ಜನೋಪಕಾರಬುದ್ಧಿಯಿಂದ ಸಿದ್ಧಾಂತಪ್ರಧಾನವಾಗಿ ಸರಳವಾದ ಕನ್ನಡದಲ್ಲಿ ಈ ಗ್ರಂಥವನ್ನು ಮುಮುಕ್ಷುಗಳಿಗಾಗಿಯೇ ಬರೆದಿರುತ್ತಾರೆ. ವಿಷಯಗಳನ್ನು ನಡುನಡುವೆ ಉದಾಹರಣೆಗಳು ಹಾಗೂ ದೃಷ್ಟಾಂತಗಳ ಮೂಲಕ ಸುಲಭವಾಗಿ ಮನಸ್ಸಿಗೆ ಹಿಡಿಯುವಂತೆ ವಿವರಿಸಿರುತ್ತಾರೆ. ಶ್ರೀಯುತರ ಈ ಗ್ರಂಥರಚನೆಯ ಪ್ರಥಮಪ್ರಯತ್ನವು ಮುಮುಕ್ಷುಗಳಿಗೆ ಅಧ್ಯಾತ್ಮ ವಿಚಾರಮಾರ್ಗದಲ್ಲಿ ಸಹಾಯಕವಾಗಲೆಂದು ನಾವು ನಾರಾಯಣಸ್ಮರಣಪೂರ್ವಕವಾಗಿ ತಿಳಿಸುತ್ತೇವೆ.''

ತಾ. 5–2–1966
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.

ಶ್ರೀಶ್ರೀಗಳವರ ಅಪ್ಪಣೆಯಂತೆ ಸನ್ನಿಧಿಯ ಪಂಡಿತರು
ಎಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ
ಅಧ್ಯಾತ್ಮವಿದ್ಯಾಪ್ರವೀಣ

ಅಧ್ಯಾತ್ಮವಿದ್ಯಾಪ್ರವೀಣ
**ಎಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ, ಪಂಡಿತ,**
ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.

## ಶ್ರೀ || ಸಜ್ಜನಗಡ ರಾಮಸ್ವಾಮಿಯವರ ಸ|| ಕ್ಕೆ ವಂದನೆಗಳು

ತಮ್ಮ ಗ್ರಂಥವಾದ ''ಮುಮುಕ್ಷುಹಿತಬೋಧೆ''ಯನ್ನು ನೋಡಿ ಬಹಳ ಸಂತೋಷವಾಗಿದೆ. ಶ್ರೀಶ್ರೀಗಳವರ ಆಶೀರ್ವಾದಕ್ಕೆ ಪಾತ್ರವಾಗಿರುವ ಈ ಗ್ರಂಥದ ಬಗ್ಗೆ ನಾನು ಹೇಳಬೇಕಾದದ್ದು ಏನೂ ಉಳಿದಿರುವದಿಲ್ಲ. ಆದರೂ ತಮ್ಮ ವಿಶ್ವಾಸದ ಕರೆಗಾಗಿ ಎರಡು ಮಾತುಗಳನ್ನು ಬರೆಯುತ್ತೇನೆ.

ಗ್ರಂಥವು ಹೆಸರಿಗೆ ತಕ್ಕಂತೆ ಮುಮುಕ್ಷುಗಳಿಗೆ ಹಿತವನ್ನೇ ಎಂದರೆ ಪರಮ ಪುರುಷಾರ್ಥವಾದ ಮೋಕ್ಷವನ್ನೇ ಬೋಧಿಸುತ್ತದೆ. ವಿಷಯಪ್ರತಿಪಾದನೆಯು ಶ್ರೀ ಶಂಕರ ಭಗವತ್ಪಾದರವರ ಸಿದ್ಧಾಂತಾನುಗುಣವಾಗಿಯೂ ಶೈಲಿಯು ಸರಳವಾಗಿಯೂ ಇದೆ. ಸಾಧಕರಿಗೆ ತಕ್ಕ ಸೂಚನೆಗಳನ್ನೂ ಇಲ್ಲಿ ಕೊಡಲಾಗಿದೆ. ಪ್ರಮಾಣವಚನಗಳನ್ನು ಆರಿಸಿಕೊಳ್ಳುವಾಗ 'ದಾಸಬೋಧ'ದಂಥ ಭಾಷಾಗ್ರಂಥಗಳನ್ನೂ ಉಪಯೋಗಿಸಿ ಕೊಳ್ಳಲಾಗಿದೆ. ವಿಷಯಪ್ರತಿಪಾದನೆಯು ಲಲಿತವಾಗಿ ಚೆನ್ನಾಗಿ ಸಾಗಿದೆ. ಸಾಮಾನ್ಯ ರಿಗೂ ಅರ್ಥವಾಗುವಂಥ ಈ ಅಮೂಲ್ಯಪುಸ್ತಕವು ಮುಮುಕ್ಷುಗಳೆಲ್ಲರ ಪಠನಕ್ಕೂ ಸರ್ವಥಾ ಯೋಗ್ಯವಾಗಿದೆಯೆಂದು ತಿಳಿಸಲು ಸಂತೋಷಿಸುತ್ತೇನೆ.

ಇತಿ

ತಾ|| 5–7–1966

ವಂದನೆಗಳು,
**ಎಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

॥ ಶ್ರೀ ಗುರುದೇವ ದತ್ತ॥

ಪರಮಾರ್ಥತತ್ತ್ವವು ನಮ್ಮೆಲ್ಲರ ನಿಜಸ್ವರೂಪವೇ ಆದ 'ಆತ್ಮ'ವೇ ಆಗಿದ್ದು ಇಡೀ ವಿಶ್ವದ ತಿರುಳೇ ಅದಾಗಿದೆ. ಅದು ಇಂದ್ರಿಯಮನಸ್ಸುಗಳಿಗೆ ಗೋಚರವಲ್ಲದ ಕೇವಲ ಅನುಭವಸ್ವರೂಪವಾದ ತತ್ತ್ವವಾಗಿದೆ. ಹೀಗಿದ್ದರೂ ಒಂದಾನೊಂದು ಕ್ರಮದಿಂದ ಮನಸ್ಸನ್ನು ತರಬೇತಿಗೊಳಿಸಿ ಆ ಅನುಭವಸ್ವರೂಪವಾದ ಪರಮಾರ್ಥತತ್ತ್ವದೆಡೆಗೆ ತಿರುಗಿಸಿಕೊಂಡು ಅದರಲ್ಲಿಯೇ ನೆಲೆನಿಲ್ಲುವ ಮಟ್ಟಕ್ಕೆ ಏರಲು ಮಾನವನಿಗೆ ಸಾಧ್ಯವಿದೆ –ಎಂಬುದೇ ಉಪನಿಷತ್ತುಗಳ ಮುಖ್ಯೋಪದೇಶವಾಗಿದೆ. ಈ ಉಪದೇಶಕ್ಕನುಗುಣವಾಗಿ ಆ ಪರಮತತ್ತ್ವದಲ್ಲಿ ನೆಲೆನಿಂತರೆ ಸರ್ವಸಂಸಾರದುಃಖಗಳೂ ತೊಲಗಿ ಜೀವಂತವಿರುವಾಗಲೇ ಸರ್ವವೂ ಬ್ರಹ್ಮಮಯವೆಂಬ ಅನುಭವವನ್ನು ಮಾನವನು ಪಡೆಯುತ್ತಾನೆ. ಇಂಥ ಸದ್ಯಃಫಲವುಳ್ಳ ಈ ಪರಮಾರ್ಥಶಾಸ್ತ್ರದಲ್ಲಿಯ ತತ್ತ್ವ, ಹಾಗೂ ಸಾಧನೆಗಳನ್ನು ಅರಿತುಕೊಳ್ಳಲು ಹಂಬಲಿಸುವವರಿಗೆ **'ಮುಮುಕ್ಷು'**ಗಳು ಎನ್ನುತ್ತಾರೆ. ಇಂಥ ಮುಮುಕ್ಷುಗಳಿಗೆ ಹಿತಕರವಾದ ಬೋಧೆಯನ್ನಿತ್ತು ಮಾರ್ಗದರ್ಶನಮಾಡಿರುವ ಈ ಗ್ರಂಥಕ್ಕೆ **''ಮುಮುಕ್ಷುಹಿತಬೋಧೆ''** ಎಂಬ ಹೆಸರು ಯೋಗ್ಯವೇ ಆಗಿದೆ. ಇದರ ನಿರ್ಮಾತೃಗಳಾದ **'ಶ್ರೀರಾಮಸ್ವಾಮಿ'**ಗಳು ಸರ್ವಸಂಗಪರಿತ್ಯಾಗಿಗಳಾಗಿ ಶ್ರೀಸಮರ್ಥರಾಮದಾಸಮಹಾಸ್ವಾಮಿಗಳಂಥ ಅನುಭಾವಿಗಳ ಪರಂಪರೆಗೆ ಸೇರಿ, ಅನೇಕ ದೇಶಪರ್ಯಟನಗಳಿಂದ ಸತ್ಪುರುಷರನೇಕರ ದರ್ಶನಲಾಭಪಡೆದು ತಾವೂ ಸ್ವತಃ ಸಾಧನೆಮಾಡಿ ಅನುಭವಪಡೆದ ನೈಷ್ಠಿಕಬ್ರಹಚಾರಿಗಳಾಗಿದ್ದಾರೆ. ಇಂಥವರ ವಾಣಿ, ಬರಹಗಳು ಮುಮುಕ್ಷುಗಳಿಗೆ ಪೂರ್ಣಹಿತಕಾರಕಗಳಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಕನ್ನಡ ನಾಡಿನಲ್ಲಿರುವ ಜಿಜ್ಞಾಸುಗಳಿಗೆ ಈ ಗ್ರಂಥದ ಪ್ರಯೋಜನವು ವಿಶೇಷವಾಗಿ ಲಭಿಸಿ ಗ್ರಂಥಕರ್ತರ ಶ್ರಮವು ಸಾರ್ಥಕವಾಗುವಂತೆ ಭಗವಂತನು ಅನುಗ್ರಹಿಸಲೆಂದು ಹಾರೈಸುತ್ತೇನೆ.

**ಶ್ರೀಗುರುದೇವ ದತ್ತ**

ತಾ. 5–7–66 ದೇವರಾಯ ಕುಲಕರ್ಣಿ (ಹೊಂಬಳ)

ಆಷಾಢ ಕೃಷ್ಣ ತೃತೀಯ ''ಶ್ರೀ ದತ್ತನಿಲಯ''

ಬೆಂಗಳೂರು

## ಎರಡನೆಯ ಮುದ್ರಣಕ್ಕೆ ಗ್ರಂಥಕರ್ತರ ಮುನ್ನುಡಿ

ಈ ಗ್ರಂಥವು ಮೊದಲು ಮುಮುಕ್ಷುಗಳ ಪ್ರಶ್ನೆಗಳಿಗೆ ಉತ್ತರರೂಪವಾಗಿ ಪತ್ರಗಳನ್ನು ಬರೆದು ರೂಪದ್ದಾಗಿತ್ತು. ಅನಂತರ 1954ನೇ ಇಸವಿಯಲ್ಲಿ ಬೆಂಗಳೂರು ಕಂಟೋನ್‌ಮೆಂಟಿನಲ್ಲಿರುವ ಗೀತಾಪ್ರಚಾರಮಂಡಲಿಯಲ್ಲಿ ನಡೆದ ಚಾತುರ್ಮಾಸ್ಯ ಕಾಲದಲ್ಲಿ ಅಲ್ಲಿಯ ಮುಮುಕ್ಷುಗಳ ಕೋರಿಕೆಯ ಪ್ರಕಾರ ತೆಲುಗಿನಲ್ಲಿ ಪ್ರಶ್ನೋತ್ತರರೂಪದ ಗ್ರಂಥವಾಗಿ ಪ್ರಕಟವಾಯಿತು. ಆನಂತರ ಕನ್ನಡಿಗರ ಇಚ್ಛೆಯಂತೆ 1955ನೇ ಇಸವಿಯಲ್ಲಿ ಕನ್ನಡದಲ್ಲಿ ರಚಿತವಾಯಿತು. ಇದರಲ್ಲಿ ಮೊದಲು ಕೇವಲ ಜ್ಞಾನಭಾಗವೊಂದೇ ಇತ್ತು. ಈಚೆಗೆ ಸರ್ವರಿಗೂ ಉಪಯೋಗವಾಗಬೇಕೆಂಬ ಇಚ್ಛೆಯಿಂದ 1956ರಲ್ಲಿ ಅಧಿಕಾರಭಾಗ, ಸಾಧನಭಾಗ, ಜ್ಞಾನಭಾಗ – ಎಂಬುದಾಗಿ ಮೂರು ಪ್ರಕರಣಗಳಾಗಿ ಆಗಿದೆ. ಅಂತರ್ಯಾಮಿಯಾಗಿ ಆತ್ಮರೂಪದಿಂದ ವಿರಾಜಮಾನರಾಗಿರುವ ಸಮರ್ಥಸದ್ಗುರುಗಳ ಪ್ರೇರಣೆಯಂತೆ ಈ ಗ್ರಂಥವನ್ನು ರಚಿಸಿದ್ದೇನೆ.

ಇದನ್ನು ಮೊದಲು ಪರಮಪೂಜ್ಯ ಗುರುಗಳಾದ ಭಗವಾನ್ ಶ್ರೀ ಶ್ರೀಧರಸ್ವಾಮಿಗಳವರು ಪರಿಶೀಲಿಸಿ ಕೆಲವು ತಿದ್ದುಪಡಿಗಳನ್ನು ಅನುಗ್ರಹಿಸಿದರು. ಅನಂತರ ಹೊಳೆನರಸೀಪುರದ ಪರಮಪೂಜ್ಯಯತಿವರೇಣ್ಯರಾದ ಸದ್ಗುರು ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರೂ ನೋಡಿ ಕೆಲವು ಸೂಚನೆಗಳನ್ನು ಕೊಟ್ಟರು. ಈ ಗ್ರಂಥಕ್ಕೆ ಅವರು ಆಶೀರ್ವಾದವನ್ನೂ ದಯಪಾಲಿಸಿರುತ್ತಾರೆ. ನನ್ನ ಆತ್ಮೀಯರೂ ಪರಮಮಿತ್ರರೂ ಆದ ಬ್ರ॥ ಶ್ರೀ॥ ದೇವರಾಯ ಕುಲಕರ್ಣಿ (ಹೊಂಬಳ), ಬೆಂಗಳೂರು ಇವರು ಇದನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಅಲ್ಲಲ್ಲೇ ಸಂದರ್ಭಾನುಸಾರವಾಗಿ ಕೆಲವು ತಿದ್ದುಪಡಿಗಳನ್ನು ಸೇರಿಸಿಕೊಟ್ಟಿರುತ್ತಾರೆ. ಹೊಳೆ ನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪಂಡಿತರಾಗಿರುವ ಅಧ್ಯಾತ್ಮ ವಿದ್ಯಾಪ್ರವೀಣ ಬ್ರ॥ ಶ್ರೀ ॥ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಇದರ ಕೊನೆಯ ಭಾಗವನ್ನು ನೋಡಿ ಮುದ್ರಣಕ್ಕೆ ಅನುಕೂಲವಾಗುವಂತೆ ಸರಿಪಡಿಸಿ ಅಚ್ಚಿನ ಕರಡುಗಳ ಲೋಪದೋಷಗಳನ್ನೂ ಸಹ ತಿದ್ದಿ ಈ ಕಾರ್ಯಕ್ಕೆ ತುಂಬಾ ಸಹಾಯವನ್ನು ಮಾಡಿರುತ್ತಾರೆ. ಇವರೆಲ್ಲರಿಗೂ ನಾನು ಕೃತಜ್ಞನಾಗಿರುತ್ತೇನೆ.

ಈ ಗ್ರಂಥದ ಪ್ರಕಟನೆಗೆ ಅಗತ್ಯವಾದಷ್ಟು ಮುದ್ರಣಕಾಗದವನ್ನು ಬೆಂಗಳೂರಿನಲ್ಲಿರುವ ಮೇಸರ್ಸ್ ಖೋಡೆ ಈಶ್ವರಸಾ ಅಂಡ್ ಸನ್ಸ್ ಸಂಸ್ಥೆಯ ಯಜಮಾನರಾದ ಶ್ರೀ ಖೋಡೆ ರಾಮಚಂದ್ರಸಾರವರು ತಮ್ಮ ದಿವಂಗತ ಪೂಜ್ಯ

ಮಾತಾ ಪಿತೃಗಳಾದ ಶ್ರೀಮತಿ ನಾಗಮ್ಮ ಮತ್ತು ಶ್ರೀ ಲಕ್ಷ್ಮಣಸಾರವರ ನೆನಪಿಗಾಗಿ ಒದಗಿಸಿಕೊಟ್ಟಿರುತ್ತಾರೆ; ಮತ್ತು ಬೆಂಗಳೂರು ಹನುಮಂತನಗರದಲ್ಲಿಯ ಶ್ರೀ ಕೆ.ಎಲ್. ಗೋಪಾಲಕೃಷ್ಣ ಶೆಟ್ಟರು (ಬಿಲ್ಡರ್ಸ್ ಮತ್ತು ಲ್ಯಾಂಡ್ ಡೆವಲಪರ್ಸ್) ರೂ.1001/– ಗಳ ಧನಸಹಾಯವನ್ನು ನೀಡಿರುತ್ತಾರೆ. ಈ ಮಹನೀಯರುಗಳಿಗೆ ನಾವೂ ಕೃತಜ್ಞರಾಗಿರುತ್ತೇವೆ. ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದವರು ಈ ಗ್ರಂಥದ ಪ್ರಕಟನೆಯ ಭಾರವನ್ನೆಲ್ಲಾ ನಿರ್ವಹಿಸಿರುತ್ತಾರೆ. ಇವರೆಲ್ಲರಿಗೂ ಸರ್ವೇಶ್ವರನು ಭಕ್ತಿಜ್ಞಾನವೈರಾಗ್ಯಗಳನ್ನು ಕರುಣಿಸಲೆಂದು ಹಾರೈಸುತ್ತೇನೆ. ಈ ಗ್ರಂಥರಚನೆಗೆ ಕಾರಣರಾದ ಹಾಗೂ ಪ್ರೇರಕರಾದ ಅಂತರ್ಯಾಮಿ ನಾರಾಯಣನ ಪಾದಕಮಲಗಳಲ್ಲಿ ಈ ಅಲ್ಪಸೇವೆಯನ್ನು ಸಮರ್ಪಿಸುತ್ತೇನೆ.*

ಜಯ ಜಯ ರಘುವೀರ ಸಮರ್ಥ

ಸಜ್ಜನಗಡನಿವಾಸಿ ರಾಮಸ್ವಾಮಿ

2-2-1998

ಗ್ರಂಥಕರ್ತ

*ಈ ಮುನ್ನುಡಿಯನ್ನು ಗ್ರಂಥಕರ್ತರು ಎರಡನೆ ಮುದ್ರಣಕ್ಕೆ ಅನುಕೂಲವಾಗುವಂತೆ ತಾವೇ ಬರೆದುಕೊಟ್ಟಿರುತ್ತಾರೆ.

# ಮೂರನೆಯ ಮುದ್ರಣಕ್ಕೆ ಪ್ರಕಾಶಕರ ಬಿನ್ನಹ

ಗುರುಭಕ್ತರೂ, ವಿರಕ್ತರೂ ವಯೋವೃದ್ಧರೂ ಈ ಗ್ರಂಥ ಕರ್ತೃಗಳೂ ಆದ ಪೂಜ್ಯ ಸಜ್ಜನಗಡ ರಾಮಸ್ವಾಮಿಗಳು ಈ ಗ್ರಂಥದ ಎರಡನೆಯ ಮುದ್ರಣದ ಮುನ್ನುಡಿಯಲ್ಲಿ ಈ ಗ್ರಂಥದ ಔಚಿತ್ಯವನ್ನೂ ವಿಚಾರಗಳನ್ನೂ ಸುಮಗ್ರವಾಗಿ ತಿಳಿಯಪಡಿಸಿದ್ದಾರೆ.

ಪುನಃ ಮೂರನೆಯ ಮುದ್ರಣಕ್ಕೆ ಅವರ ಆಶೀರ್ವಾದಪೂರ್ವಕ ಕೋರಿದಾಗ, ತಮಗೆ ವಯಸ್ಸಾಗಿರುವದರಿಂದ ಕಾರ್ಯಾಲಯದವರೇ ಸೂಕ್ತವಾದ ಬಿನ್ನಹವನ್ನು ಬರೆದು ಕಾರ್ಯಾಲಯದ ಮೂಲಕವೇ ಪ್ರಕಟಪಡಿಸಿ ಮುಮುಕ್ಷುಗಳಿಗೆ ಉಪಯೋಗವಾದರೆ ಬಹಳ ಸಂತೋಷ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಇದೂ ಅಲ್ಲದೆ ಗ್ರಂಥಕರ್ತರು ಈ ಪುಸ್ತಕದ ತಮ್ಮ ಎಲ್ಲಾ ಹಕ್ಕುಗಳನ್ನೂ (Copy Rights) ಕಾರ್ಯಾಲಯಕ್ಕೆ ಸಮರ್ಪಿಸಿ ಗ್ರಂಥ ಪ್ರಕಟನೆಗೆ 1000/– ರೂ.ಗಳ ಕಾಣಿಕೆಯನ್ನೂ ಸಹ ದಯಪಾಲಿಸಿದ್ದಾರೆ. ಕಾರ್ಯಾಲಯವು ಈ ಮಹಾಗುರುಭಕ್ತರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತದೆ. ಗ್ರಂಥ ಶರೀರದಲ್ಲಿ ಯಾವ ಬದಲಾವಣೆಯನ್ನೂ ಮಾಡದೆ ಮುದ್ರಣದ ತಪ್ಪುಗಳನ್ನೆಲ್ಲಾ ಪರಿಷ್ಕರಿಸಿ ಮೂರನೆಯ ಬಾರಿಗೆ ಹೊರತರಲಾಗಿದೆ.

ಕೆಳಕಂಡ ಮಹನೀಯರುಗಳು ಈ ಗ್ರಂಥ ಪ್ರಕಟನೆಗೆ ಉದಾರವಾಗಿ ಸಹಾಯ ಮಾಡಿರುತ್ತಾರೆ.

| | | |
|---|---|---|
| 1. | ಪೂಜ್ಯ ಭಗವತ್ಪಾದ ಸ್ವಾಮಿಗಳು, ಕುರುಡಿ, | 2500 ರೂ. |
| 2. | ಪೂಜ್ಯ ಕೃಷ್ಣಾನಂದ ಸ್ವಾಮಿಗಳು ಕುರುಡಿ | 2500 ರೂ. |
| 3. | ಶ್ರೀಮತಿ ಸಾವಿತ್ರಿ ದೇವರಾಜ್ U.S.A. | 2159 ರೂ. |
| 4. | ಶ್ರೀಮತಿ ಮುನಿಯಮ್ಮ ಬೆಂಗಳೂರು | 2000 ರೂ. |
| 5. | ಶ್ರೀ ವಿ.ಕೆ. ಕನಾಗೊ, ಹೈದರಾಬಾದ್ | 1500 ರೂ. |
| 6. | ಶ್ರೀ ಎನ್. ಬಾಲಸುಬ್ರಹ್ಮಣ್ಯ ಬೆಂಗಳೂರು | 1000 ರೂ. |
| 7. | ಶ್ರೀ ಎಮ್.ವಿ. ರಾಮಚಂದ್ರ , ಬೆಂಗಳೂರು | 1000 ರೂ. |
| 8. | ಶ್ರೀ ಬಿ.ಕೆ. ಚಂದ್ರಶೇಖರ್, ಮೈಸೂರು | 1000 ರೂ. |

| | | |
|---|---|---|
| 9. | ಶ್ರೀ ಎಸ್. ಎಸ್.ಶ್ರೀನಿವಾಸರಾವ್ ಬೆಂಗಳೂರು | 500 ರೂ. |
| 10. | ಶ್ರೀ ಕೃಷ್ಣಮೂರ್ತಿ ಸಕಲೇಶಪುರ | 500 ರೂ. |
| 11. | ಶ್ರೀ ಎ.ಆರ್. ಅಶ್ವತ್ಥನಾರಾಯಣ ಬೆಂಗಳೂರು | 200 ರೂ. |
| 12. | ಶ್ರೀಮತಿ ಓ.ಆರ್ . ಲಲಿತಮ್ಮ ಮದನಪಲ್ಲಿ | 102 ರೂ |
| 13. | ರೇವಣ್ಣ ಬಸಪ್ಪ ಕುಡಲಿಕಟ್ಟಿ, ಬಿಜಾಪುರ | 500 ರೂ. |

ಮೇಲ್ಕಂಡ ಭಕ್ತರೆಲ್ಲರಿಗೂ ಕಾರ್ಯಾಲಯದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇವೆ. ಮುಮುಕ್ಷುಗಳು ಈ ಗ್ರಂಥವನ್ನು ಬರಮಾಡಿಕೊಂಡು ಅಧ್ಯಾತ್ಮ ಪ್ರೇಮಿಗಳಿಗೆ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರಕಿ ಪ್ರಯೋಜನ ಪಡೆಯುವಂತೆ ಗ್ರಂಥ ಪ್ರಕಟನೆಗೆ ಪ್ರೋತ್ಸಾಹ ನೀಡಬೇಕೆಂದು ಪ್ರಾರ್ಥಿಸುತ್ತೇವೆ.

ವಿಕೃತಿ ಸಂವತ್ಸರ ಮಾರ್ಗಶಿರ,
ಬಹುಳ ಅಷ್ಟಮಿ, (ಸದ್ಗುರುಗಳ ಜಯಂತಿ) — ಪ್ರಕಾಶಕರು
28.12.2008

## ವಿಷಯಾನುಕ್ರಮಣಿಕೆ

# ಆತ್ಮಜ್ಞಾನಕ್ಕೆ ಅಧಿಕಾರಿ ಯಾರು?

### (1ನೇ ಪ್ರಕರಣ – ಅಧಿಕಾರ ಭಾಗ )


| | | ಪುಟ |
|---|---|---|
| 1. | ಮನುಷ್ಯರೂಪಿ ಪಶು | 1 |
| 2. | ಮನುಷ್ಯನೆಂದರೆ ಯಾರು ? | 2 |
| 3. | ಮುಮುಕ್ಷುವೆಂದರೆ ಯಾರು ? | 3 |
| 4. | ಸದ್ಗುರುವು ದುರ್ಲಭ | 4 |
| 5. | ಮನುಷ್ಯದೇಹದ ಸಾರ್ಥಕತೆ | 5 |
| 6. | ಮಾನವದೇಹದ ಹೆಚ್ಚುಗಾರಿಕೆ | 6 |
| 7. | ಆತ್ಮಜ್ಞಾನದ ಮಹತ್ವ | 8 |
| 8. | ಆತ್ಮಜ್ಞಾನಪ್ರಾಪ್ತಿಗೆ ಏನು ಮಾಡಬೇಕು | 12 |
| 9. | ಶ್ರವಣವೆಂದರೇನು? | 12 |
| 10. | ಮನನವೆಂದರೇನು ? | 12 |
| 11. | ನಿದಿಧ್ಯಾಸನವೆಂದರೇನು? | 13 |
| 12. | ಸದ್ಗುರುವಿನ ಆವಶ್ಯಕತೆ | 13 |
| 13. | ಸದ್ಗುರುವೆಂದರೆ ಯಾರು? | 14 |
| 14. | ಜ್ಞಾನವನ್ನು ಪಡೆಯಲು ಯಾರು ಯೋಗ್ಯರು ? | 17 |
| 15. | ಜಿಜ್ಞಾಸುವಿನ ಲಕ್ಷಣ (ಸದ್ಗುರುವಿನ ಸಮೀಪಕ್ಕೆ ಹೋಗುವವನು ಹೇಗಿರಬೇಕು ?) | 20 |
| 16. | ಸಚ್ಛಿಷ್ಯನು ಯಾರು ? | 21 |
| 17. | ಆತ್ಮಜ್ಞಾನಕ್ಕೆ ಸಾಧನೆ | 24 |
| 18. | ಗುರುಸೇವೆ ನಾಲ್ಕುವಿಧ | 25 |
| 19. | ಮುಮುಕ್ಷುವಿನ ಮುಖ್ಯಕರ್ತವ್ಯ | 28 |
| 20. | ಅಧಿಕಾರವು ಹೇಗೆ ಬರುತ್ತದೆ ? | 32 |
| 21. | ಭಕ್ತಿ ಎಂದರೇನು? | 32 |
| 22. | ಭಕ್ತಿಯು ಸುಲಭವಾದ ಸಾಧನೆ | 34 |
| 23. | ಪಾಪಿಗಳೂ ಸಹ ಪುಣ್ಯಾತ್ಮರಾಗಿರುತ್ತಾರೆ | 34 |
| 24. | ಸಮಸ್ತವೂ ಪರಮಾತ್ಮನ ಸೇವೆ | 35 |
| 25. | ಪರಮಾತ್ಮನ ಸೇವೆಯಿಂದ ಫಲವೇನು ? | 37 |
| 26. | ನವವಿಧಭಕ್ತಿ | 40 |


# ಪರಮಾತ್ಮನಲ್ಲಿ ಮನಸ್ಸನ್ನು ಹೇಗೆ ನಿಲ್ಲಿಸಬೇಕು ?

### (2ನೇ ಪ್ರಕರಣ – ಸಾಧನ ಭಾಗ )


| | | |
|---|---|---|
| 1. | ಜಗತ್ತು ಸತ್ಯವಾಗಿ ಇಲ್ಲ | 47 |
| 2. | ಜಗತ್ತಿನಲ್ಲಿ ಸುಖವಿಲ್ಲ | 49 |
| 3. | ವಿಷಯಗಳನ್ನು ಭೋಗಿಸುವು50ದರಿಂದ ಸುಖವಿಲ್ಲ, ದುಃಖವೇ ತುಂಬಿದೆ. | 50 |

4. ಭೋಗಗಳಿಂದ ಶಕ್ತಿಯನ್ನು ಕಳೆಮುಕೊಳ್ಳುತ್ತಾನೆ 52
5. ಭೋಗವಸ್ತುಗಳೇ ತನ್ನನ್ನು ಭೋಗಿಸುತ್ತವೆ 53
6. ವಿಷಯವಾಸನೆಯಿಂದಲೇ ಜನ್ಮ 54
7. ಯಾರಿಗೆ ನಿತ್ಯಸುಖವು ಸಿಕ್ಕುತ್ತದೆ ? 56
8. ನಿತ್ಯ ಸುಖವು ತನ್ನೊಳಗೇ ಇದೆ. 57
9. ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವ ಉಪಾಯ 59
10. ಶ್ರವಣದ ಮಹತ್ವ 60
11. ಯಾವುದನ್ನು ಶ್ರವಣಮಾಡಬೇಕು ? 63
12. ಮನನದ ಮಹತ್ವ 65
13. ಗುರುಧ್ಯಾನದ ಮಹತ್ವ 66
14. ನಿತ್ಯ ಸುಖವನ್ನು ಪಡೆಯಲು ಕೆಲವು ಉಪಾಯಗಳು 67
15. ಸಾಧಕನೆಂದರೆ ಯಾರು? 70


## ಆತ್ಮಜ್ಞಾನ

(3ನೇ ಪ್ರಕರಣ – ಜ್ಞಾನಭಾಗ)


1. ಆತ್ಮಜ್ಞಾನದಿಂದಲೇ ಮೋಕ್ಷ 73
2. ಅಜ್ಞಾನವೆಂದರೇನು? 78
3. ಅಜ್ಞಾನದ ಫಲವೇನು? 79
4. ಮೋಕ್ಷವೆಂದರೇನು? 80
5. ಜ್ಞಾನವೆಂದರೇನು? 81
6. ಯಾರಿಗೂ ಬಂಧವಿಲ್ಲ 82
7. ಜ್ಞಾನಿಯ ತಿಳಿವಳಿಕೆ 88
8. ಈ ದೇಹವು ನಾನಲ್ಲ 90
9. ಜೀವನು ತಾನಲ್ಲ, ಜೀವತ್ವವು ಮಿಥ್ಯೆ 97
10. ಆತ್ಮಸ್ವರೂಪವೇ ತಾನು. 102
11. ಪರಮಾತ್ಮಸ್ವರೂಪವು ಹೇಗಿದೆ ? 107
12. ಪರಮಾತ್ಮಸ್ವರೂಪನೇ ನಾನು 110
13. ನಾನು ನಿಷ್ಕ್ರಿಯನು 115
14. ಈ ಸಂಸಾರವು ಒಂದು ಕನಸು 118
15. ಪ್ರಪಂಚವೂ ಸಹ ಪರಮಾತ್ಮಸ್ವರೂಪವೇ ಆಗಿದೆ 123
16. ಮನಸ್ಸು ಆತ್ಮನಲ್ಲಿ ಕಲ್ಪಿತವಾಗಿದೆ 126
17. ಸ್ವರೂಪಾನುಸಂಧಾನ 130
18. ಪೂರ್ಣಸ್ಥಿತಿಯ ಲಕ್ಷಣ 134
19. ಜ್ಞಾನಿಯ ದೃಷ್ಟಿಯು ಹೇಗಿರುತ್ತದೆ ? 135
20. ಸಾಧಕರಿಗೆ ಸೂಚನೆ 138

## ಸಂಕ್ಷೇಪಾಕ್ಷರಗಳ ವಿವರಣೆ

### ಈ ಪುಸ್ತಕದಲ್ಲಿ ಉಪಯೋಗಿಸಿರುವ ಸಂಕೇತಗಳನ್ನು ಪರಾಮರ್ಶಿಸುವ ಗ್ರಂಥಗಳ ಹೆಸರುಗಳು

| | |
|---|---|
| ಅ. | ಅನುಭವಾಮೃತ |
| ಅ.ರಾ. | ಅಧ್ಯಾತ್ಮರಾಮಾಯಣ |
| ಅ.ಸಂ. | ಅವಧೂತ ಸಂಹಿತೆ |
| ಆ.ಉ. | ಆತ್ಮಬೋಧೋಪನಿಷತ್ತು |
| ಈ. | ಈಶಾವಾಸ್ಯೋಪನಿಷತ್ತು |
| ಕಠ. | ಕಠೋಪನಿಷತ್ತು |
| ಕೇ. | ಕೇನೋಪನಿಷತ್ತು |
| ಕೈ. | ಕೈವಲ್ಯೋಪನಿಷತ್ತು |
| ಗೀ. | ಭಗವದ್ಗೀತೆ |
| ಛಾಂ. | ಛಾಂದೋಗ್ಯೋಪನಿಷತ್ತು |
| ತೈ. | ತೈತ್ತೀರಿಯೋಪನಿಷತ್ತು |
| ದಾ. | ದಾಸಬೋಧ (ಸಮರ್ಥರಾಮದಾಸವಿರಚಿತ) |
| ಪಂ. | ಪಂಚದಶಿ |
| ಬೃ. | ಬೃಹದಾರಣ್ಯಕೋಪನಿಷತ್ತು |
| ಭಾ. | ಭಾಗವತ |
| ಮುಂ. | ಮುಂಡಕೋಪನಿಷತ್ತು |
| ಮಾಂ.ಕಾ. | ಮಾಂಡೂಕ್ಯಗೌಡಪಾದೀಯಕಾರಿಕೆಗಳು |
| ಮ. | ಮನಾಚೇ ಶ್ಲೋಕ |
| ರಾ. | ರಾಮತತ್ತ್ವಾಮೃತ |
| ವಿ.ಚೂ. | ವಿವೇಕಚೂಡಾಮಣಿ |
| ಶ್ವೇ. | ಶ್ವೇತಾಶ್ವತರೋಪನಿಷತ್ತು |
| ಸೂ.ಭಾ. | ಬ್ರಹ್ಮಸೂತ್ರಭಾಷ್ಯ |

ಜಯ ಜಯ ರಘುವೀರ ಸಮರ್ಥ

# ಮುಮುಕ್ಷು ಹಿತಬೋಧೆ

ಶುಕಾಸಾರಿಖೇ ಪೂರ್ಣ ವೈರಾಗ್ಯ ಜ್ಯಾಚೇ ।
ವಸಿಷ್ಠಾಪರೀ ಜ್ಞಾನ ಯೋಗೇಶ್ವರಾಚೇ ॥

ಕವಿ ವಾಲ್ಮಿಕಾಸಾರಖಾ ಮಾನ್ಯ ಐಸಾ ।
ನಮಸ್ಕಾರ ಮಾಝಾ ಸದ್ಗುರು ರಾಮದಾಸಾ ॥

ಗಣೇಶಃ ಶಾರದಾ ಚೈವ ಸದ್ಗುರುಃ ಸಜ್ಜನಸ್ತಥಾ ।
ಆರಾಧ್ಯದೈವತಂ ಗುಹ್ಯಂ ಸರ್ವಂ ಮೇ ರಘುನಂದನಃ ॥

ಶ್ರೀರಾಮಸಮರ್ಥ । ಶ್ರೀಗುರುಭ್ಯೋ ನಮಃ ॥

## ಆತ್ಮಜ್ಞಾನಕ್ಕೆ ಅಧಿಕಾರಿ ಯಾರು?

(1ನೇ ಪ್ರಕರಣ – ಅಧಿಕಾರ ಭಾಗ)

ದುರ್ಲಭಂ ತ್ರಯಮೇವೈತದ್ದೇವಾನುಗ್ರಹಹೇತುಕಮ್ ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷಸಂಶ್ರಯಃ ॥ (ವಿ.ಚೂ)

ಮನುಷ್ಯನಿಗೆ ಪರಮಾತ್ಮನ ಅನುಗ್ರಹವಿಲ್ಲದೆ ಮನುಷ್ಯತ್ವವೂ, ಮುಮುಕ್ಷುತ್ವವೂ, ಮಹಾತ್ಮರ ಸಂಗವೂ (ಸದ್ಗುರುವೂ) ದೊರೆಯುವುದಿಲ್ಲ. ಆದುದರಿಂದ ಮೇಲ್ಕಂಡ ಮೂರು ವಿಷಯಗಳು ಮನುಷ್ಯನಿಗೆ ದುರ್ಲಭ.

### 1. ಮನುಷ್ಯರೂಪಿ ಪಶು

ಮೊದಲನೆಯದಾಗಿ ಮನುಷ್ಯತ್ವವು ಬರುವುದೇ ದುರ್ಲಭ. ಮನುಷ್ಯನಾಗಿ ಹುಟ್ಟಿದರೂ ಸಹ ಸಾಮಾನ್ಯವಾಗಿ ಬಹಳ ಜನರಿಗೆ ಪಶುಬುದ್ಧಿಯೇ ಇರುತ್ತದೆ. ಧರ್ಮಾಧರ್ಮದ ವಿವೇಕವಿಲ್ಲದೆ ಮನಸ್ಸಿಗೆ ಬಂದಂತೆ ವ್ಯವಹರಿಸುವುದು ; ಪಶುಗಳಂತೆ ಯಾವಾಗಲು ಆಹಾರ, ನಿದ್ರೆ, ಭಯ, ಮೈಥುನ ಇವುಗಳಲ್ಲಿಯೇ ನಿರತ

ರಾಗಿರುವುದು ; ಇದೇ ಮನುಷ್ಯನ ಕರ್ತವ್ಯವೆಂದೂ, ಇದೇ ಪುರುಷಾರ್ಥವೆಂದೂ ತಿಳಿದುಕೊಂಡಿರುವುದು ; ಪರಮಾತ್ಮನಲ್ಲಿ ಮಹಾತ್ಮರಲ್ಲಿ ಭಕ್ತಿ, ಅವರ ಸೇವೆ– ಇವುಗಳು ಲೇಶಮಾತ್ರವೂ ಇಲ್ಲದೇ ಶಾಸ್ತ್ರದ ಕಟ್ಟಲೆಯನ್ನು ಮೀರಿ ವರ್ಣಾಶ್ರಮಧರ್ಮವನ್ನು ಪರಿಪಾಲಿಸದೆ ಸ್ವೇಚ್ಛೆಯಿಂದ ವರ್ತಿಸುವುದು ; ದಾನ ಧರ್ಮ ಪರೋಪಕಾರವನ್ನು ಮಾಡದಿರುವುದು ; ಅಧರ್ಮದಿಂದಾಗಲೀ ಮೋಸದಿಂದಾಗಲೀ ವಂಚನೆಯಿಂದಾಗಲೀ ಹಿಂಸೆಯಿಂದಾಗಲೀ ಯಾವರೀತಿಯಿಂದಾದರೂ ವಿಷಯಗಳನ್ನು ಸಂಪಾದಿಸುವುದು ; ಅವುಗಳನ್ನು ಭೋಗಿಸುವುದು; ಈ ಸಂಸಾರವು ನಿತ್ಯವೆಂದು ತಿಳಿದುಕೊಂಡಿರುವುದು – ಇಂತಹ ಬುದ್ಧಿಯುಳ್ಳವರು ಮನುಷ್ಯರೇ ಅಲ್ಲ. ಅವರು ಎರಡು ಕಾಲಿನ ನರಪಶುಗಳೇ ಸರಿ. ಏತಕ್ಕೆಂದರೆ :–

**ಆಹಾರನಿದ್ರಾಭಯಮೈಥುನಾನಿ**
**ಸಾಮಾನ್ಯಮೇತತ್ಪಶುಭಿರ್ನರಾಣಾಮ್ ।**
**ಜ್ಞಾನಂ ನರಾಣಾಮಧಿಕಂ ವಿಶೇಷೋ**
**ಜ್ಞಾನೇನ ಹೀನಾಃ ಪಶುಭಿಃ ಸಮಾನಾಃ ॥**

ಪಶುಗಳೂ ಸಹ ಮನುಷ್ಯರಂತೆಯೇ ಆಹಾರವನ್ನು ತೆಗೆದುಕೊಳ್ಳುವುದು, ನಿದ್ರೆ ಮಾಡುವುದು, ಭಯಪಡುವುದು, ಮೈಥುನ ಇವೆಲ್ಲವನ್ನೂ ಮಾಡುತ್ತವೆ. ಇವುಗಳಲ್ಲಿ ಮನುಷ್ಯರಿಗೂ ಪಶುಗಳಿಗೂ ಏನೂ ಭೇದವಿಲ್ಲ. ಮನುಷ್ಯನಾಗಿ ಹುಟ್ಟಿ ಇವನೂ ಸಹ ಇಷ್ಟನ್ನೇ ಮಾಡುತ್ತಿದ್ದರೆ ಇವನು ಹೇಗೆ ಮನುಷ್ಯನಾಗುತ್ತಾನೆ? ವಿವೇಕ ವಿಚಾರಗಳಿಲ್ಲದಿದ್ದರೆ, ಸಾರಾಸಾರಜ್ಞಾನವೊಂದಿಲ್ಲದಿದ್ದರೆ ಪಶುವಿಗೂ ಇವನಿಗೂ ಏನು ಭೇದವಿದೆ? ಇಂಥವನು ಮನುಷ್ಯನಲ್ಲ! ಮನುಷ್ಯರೂಪಿ ಪಶುವೇ ಸರಿ.

## 2. ಮನುಷ್ಯನೆಂದರೆ ಯಾರು ?

ಶಾಸ್ತ್ರಗಳಲ್ಲಿ ಹೇಳಿದಂತೆ, ಮಹಾತ್ಮರು ಬೋಧಿಸಿದಂತೆ, ಅಧರ್ಮವನ್ನು ಬಿಟ್ಟು ಧರ್ಮದಿಂದ ನಡೆಯುವುದು ; ತನ್ನ ತನ್ನ ವರ್ಣಾಶ್ರಮಧರ್ಮಗಳನ್ನು ಪಾಲಿಸುವುದು; ಪರಮಾತ್ಮನಲ್ಲಿ ಮತ್ತು ಮಹಾತ್ಮರಲ್ಲಿ ಭಕ್ತಿ ಇಡುವುದು ; ತನು ಮನ ಧನಗಳಿಂದ ತನ್ನ ತನ್ನ ಶಕ್ತಿಯಂತೆ ಅವರ ಸೇವೆಯನ್ನು ಮಾಡುವುದು ; ತನ್ನ ತನ್ನ ಯೋಗ್ಯತಾನುಸಾರವಾಗಿ ದಾನ, ಧರ್ಮ, ಪರೋಪಕಾರವನ್ನು ಮಾಡುವುದು ; ಯಾರಿಗೂ ಮೋಸ, ದ್ರೋಹ, ವಂಚನೆ, ಅನ್ಯಾಯಗಳನ್ನು ಮಾಡದೆ, ಇತರರು ದುಃಖದಲ್ಲಿದ್ದರೆ ಅವರಿಗೆ

ತಾನು ಯಥಾಶಕ್ತಿ ಸಹಾಯವನ್ನು ಮಾಡುವುದು ; ಎಲ್ಲರನ್ನೂ ಪ್ರೇಮದಿಂದ ಕಾಣುವುದು ; ಮನೆಗೆ ಬಂದ ಅತಿಥಿಗಳನ್ನು ಪರಮಾತ್ಮಸ್ವರೂಪರೆಂದು ಭಾವಿಸಿ ಅವರನ್ನು ಯಥಾಶಕ್ತಿ, ಪ್ರೇಮದಿಂದ ಸತ್ಕರಿಸುವುದು ; ಕಾಮಕ್ರೋಧಾದಿಗಳಿಗೆ ವಶನಾಗದೆ ವಿವೇಕ ವಿಚಾರಗಳಿಂದ ವರ್ತಿಸುವುದು ; ತನ್ನಲ್ಲಿರುವ ದುರ್ಗುಣಗಳನ್ನು ಬಿಟ್ಟು ಸದ್ಗುಣಗಳನ್ನು ಸಂಪಾದಿಸುವುದು ; ಪರಮಾತ್ಮನ ಧ್ಯಾನ ಜಪ ತಪಾದಿಗಳನ್ನು ಮಾಡುವುದು ; ಈ ವಿಧವಾಗಿ ಸರಿಯಾಗಿ ನಡೆಯುವವನೇ ಮನುಷ್ಯನೆನಿಸುತ್ತಾನೆ.

## 3. ಮುಮುಕ್ಷುವೆಂದರೆ ಯಾರು ?

ಮನುಷ್ಯತ್ವವು ಬಂದರೂ ಸಹ ಮುಮುಕ್ಷುತ್ವವು ಬರುವುದು ದುರ್ಲಭ. ಮುಮುಕ್ಷುತ್ವವೆಂದರೆ : – ನಾನು ಯಾರು ? ನನಗೆ ಏತಕ್ಕೆ ಈ ಮನುಷ್ಯಜನ್ಮವು ಬಂದಿದೆ ? ನನ್ನ ಕರ್ತವ್ಯವೇನು ? ಈ ಸಂಸಾರವು ನನಗೇತಕ್ಕೆ ಗಂಟುಬಿದ್ದಿದೆ ? ನನಗೆ ಈ ಬಂಧನವು ಏತಕ್ಕಾಯಿತು? ನನಗೆ ದುಃಖವೇತಕ್ಕೆ ಆಗುತ್ತಿದೆ ? ಇವುಗಳಿಂದ ನಾನು ಹೇಗೆ ಬಿಡುಗಡೆಯನ್ನು ಹೊಂದುವುದು ? ದುಃಖವಿಲ್ಲದ ನಿತ್ಯಸುಖವು ಇದೆಯೇ ? ಇದ್ದರೆ ಅದು ಹೇಗಿದೆ ? ಎಲ್ಲಿದೆ ? ಅದು ನನಗೆ ಪ್ರಾಪ್ತಿಯಾಗಬೇಕಾದರೆ ಅದಕ್ಕೆ ನಾನು ಏನು ಮಾಡಬೇಕು? ಈ ಜನ್ಮಮರಣಗಳಿಂದ ಹೇಗೆ ಬಿಡುಗಡೆಯನ್ನು ಹೊಂದುವುದು ? ಬಂಧವೆಂದರೇನು? ಮೋಕ್ಷವೆಂದರೇನು? ನಾನು ಯಾರು ? ದೇವರು ಯಾರು ? ನನಗೂ ದೇವರಿಗೂ ಏನು ಸಂಬಂಧವಿದೆ? ಎಂಬುದಾಗಿ ತನ್ನಲ್ಲಿಯೇ ತಾನು ಚೆನ್ನಾಗಿ ವಿಚಾರವನ್ನು ಮಾಡಿ, ನಿಜಸ್ಥಿತಿಯನ್ನು ತಿಳಿದುಕೊಳ್ಳಬೇಕು – ಎನ್ನುವ ಇಚ್ಛೆಗೆ ಮುಮುಕ್ಷುತ್ವವೆನ್ನುತ್ತಾರೆ. ನಾನು ನನ್ನ ನಿಜಸ್ವರೂಪವನ್ನು ತಿಳಿದುಕೊಂಡು ಹುಟ್ಟುವುದು ಸಾಯುವುದೇ ಮೊದಲಾದ ಸಮಸ್ತ ದುಃಖಪರಂಪರೆ ಗಳಿಂದ ಬಿಡುಗಡೆಯನ್ನು ಹೊಂದಬೇಕು; ಇದಕ್ಕಾಗಿ ಸದ್ಗುರುವನ್ನು ಸೇರಬೇಕು ; ಅವನ ಸೇವೆಯನ್ನು ಮಾಡಿ ಅವನು ಹೇಳಿದಂತೆ ಸಾಧನೆಯನ್ನು ಮಾಡಿ ಪರಮಾನಂದವನ್ನು ಪಡೆಯಬೇಕು ಎನ್ನುವ ಇಚ್ಛೆಯುಳ್ಳವನಿಗೇ ಮುಮುಕ್ಷುವೆನ್ನುತ್ತಾರೆ. ಇಂಥ ಮುಮುಕ್ಷುತ್ವವು ಬರುವುದು ದುರ್ಲಭ. ಏತಕ್ಕೆಂದರೆ **''ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ''** (ಗೀ. 7–3) ಸಾವಿರಾರು ಜನಗಳಲ್ಲಿ ಎಲ್ಲಿಯೋ ಒಬ್ಬೊಬ್ಬರಿಗೆ ಮಾತ್ರ ಈ ವಿಧವಾದ ಇಚ್ಛೆಯು ಬರುತ್ತದೆ– ಎಂಬುದಾಗಿ ಭಗವಂತನೇ ಹೇಳಿರುತ್ತಾನೆ. ಪರಮಾತ್ಮನ ಕೃಪೆಯಾದಾಗಲೇ ಮುಮುಕ್ಷುತ್ವವು ಬರುತ್ತದೆ.

## 4. ಸದ್ಗುರುವು ದುರ್ಲಭ

ಒಂದು ಪಕ್ಷ ಮುಮುಕ್ಷುತ್ವವು ಹುಟ್ಟಿದರೂ ಸಹ ಸರಿಯಾದ ಸದ್ಗುರುವು ಸಿಕ್ಕುವುದು ಬಹಳ ದುರ್ಲಭ. ಎಷ್ಟೋ ಜನರು ಬ್ರಹ್ಮನಿಷ್ಠರೂ ವೇದವೇದಾಂಗ ಪಾರಂಗತರೂ ಇರಬಹುದು. ಆದರೆ ಮುಮುಕ್ಷುವಿಗೆ ತಿಳಿಯುವಂತೆ ಹೇಳಿ ಅವನಲ್ಲಿರುವ ಅಜ್ಞಾನವನ್ನೂ, ಅದರಿಂದಾಗುವ ದುಃಖಪರಂಪರೆಗಳನ್ನೂ ನಾಶಪಡಿಸಿ, ಸಮಸ್ತಸಂಶಯಗಳನ್ನೂ ನಿವಾರಿಸಿ, ಪೂರ್ಣವಾದ ನಿತ್ಯಸುಖವನ್ನೂ ಪರಮಶಾಂತಿಯನ್ನೂ ದೊರಕಿಸಿಕೊಡುವಂಥ ಸದ್ಗುರುವು ಸಿಕ್ಕುವುದು ಬಹಳ ದುರ್ಲಭ. ಇಂಥ ಗುರುವು ಸಿಕ್ಕುವುದೆಂದರೆ ಪೂರ್ವಜರ ಮತ್ತು ತನ್ನ ಅನೇಕ ಜನ್ಮಗಳ ಸುಕೃತವಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಎಂಥವರು ಸಿಕ್ಕುತ್ತಾರೆಂದರೆ ,

**ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ ।**
**ಗುರವೋ ವಿರಲಾಃ ಸಂತಿ ಶಿಷ್ಯಹೃತ್ತಾಪಹಾರಕಾಃ ॥**

ನಾನಾ ವಿಧವಾದ ಉಪಾಯಗಳಿಂದ ಒಳ್ಳೆಯ ಮಾತುಗಳನ್ನಾಡಿ ತನಗೆ ಶರಣು ಬಂದಿರುವ ಮುಮುಕ್ಷುವಿನ ಹಿತವನ್ನು ಬಯಸದೆ, ಅವನಿಗೆ ಸರಿಯಾಗಿ ಬೋಧಿಸದೆ, ಏನಾದರೂ ಮಾಡಿ ಏನಾದರೂ ಹೇಳಿ ಶಿಷ್ಯನ ದ್ರವ್ಯವನ್ನೇ ಅಪಹರಿಸುವಂಥ ವೇಷಧಾರೀ ಗುರುಗಳೇ ಜಗತ್ತಿನಲ್ಲಿ ಬಹಳವಾಗಿ ತುಂಬಿದ್ದಾರೆ. ಆದರೆ ಸತ್ಯವಾದ ವಿಚಾರವನ್ನು ಹೇಳಿ, ಭಕ್ತಿಜ್ಞಾನವೈರಾಗ್ಯಗಳನ್ನು ಪ್ರತಿಪಾದಿಸಿ, ಶಿಷ್ಯನನ್ನು ಅನಾಚಾರದಿಂದ ಸದಾಚಾರಕ್ಕೂ, ಅವಿಚಾರದಿಂದ ಸುವಿಚಾರಕ್ಕೂ, ಕಾಮಕ್ರೋಧಾದಿ ಗಳಿಂದ ಶಮದಮಾದಿಗಳಿಗೂ, ರಾಗದ್ವೇಷಾದಿಗಳಿಂದ ಮೈತ್ರಿ ಕರುಣ ಉಪೇಕ್ಷಾದಿ ಗಳಿಗೂ ಪ್ರಯತ್ನಮಾಡಿ ತರುವವನೇ ಸದ್ಗುರುವಾಗುತ್ತಾನೆ. ಅವನ ಮನಸ್ಸಿನಲ್ಲಿರುವ ಸಮಸ್ತ ತಾಪಗಳನ್ನೂ ಪರಿಹರಿಸುವಂಥವನೇ ಸದ್ಗುರುವಾಗುತ್ತಾನೆ. ದೇಹಾತ್ಮ ಬುದ್ಧಿಯನ್ನು ಹೋಗಲಾಡಿಸಿ, ಸತ್ಯಾತ್ಮಬುದ್ಧಿಯನ್ನುಂಟುಮಾಡುವವನೇ ಸದ್ಗುರುವಾಗುತ್ತಾನೆ. ನಾನಾತ್ವವಿಲ್ಲ, ಜಗತ್ತು ಇಲ್ಲ, ಸಂಸಾರವಿಲ್ಲ, ಇದೆಲ್ಲವೂ ಕೇವಲ ಕಲ್ಪನಾಮಾತ್ರವೆನ್ನುವ ಜ್ಞಾನವನ್ನು ಅನುಭವಕ್ಕೆ ತಂದುಕೊಡುವವನೇ ಸದ್ಗುರು ವಾಗುತ್ತಾನೆ. ಇಂಥ ಸದ್ಗುರುವು ದೊರೆಯುವುದು ಬಹಳ ದುರ್ಲಭ – ಎಂಬುದಾಗಿ ಗುರುಗೀತೆಯಲ್ಲಿ ಈಶ್ವರನು ಪಾರ್ವತಿಗೆ ಹೇಳಿರುತ್ತಾನೆ.

**ಜೇ ಜೇ ಮನ ಅಂಗಿಕಾರೀ । ತೇ ತೇ ಸ್ವಯೇ ಮುಕ್ತ ಕರೀ ।**
**ತೋ ಗುರು ನವ್ಹೇ ಭಿಕಾರೀ । ಝುಡೇ ಆಲಾ ॥**

**ಶಿಷ್ಯಾಸ ನ ಲವಿತೀ ಸಾಧನ । ನ ಕರವಿತೀ ಇಂದ್ರಿಯೇದಮನ ।**
**ಐಸೇ ಗುರು ಆಡಕ್ಯಾಚೇ ತೀನ । ಮಿಳಾಲೇ ತರೀ ತ್ಯಜಾವೇ ॥**
(ದಾ.5–2–20,21)

''ಶಿಷ್ಯನ ದಾಕ್ಷಿಣ್ಯಕ್ಕೆ ಒಳಗಾಗಿ ಅವನಿಂದ ಸರಿಯಾದ ಸಾಧನೆಗಳನ್ನು ಮಾಡಿಸದೆ, ವಿಷಯವ್ಯಾಮೋಹವನ್ನು ತಪ್ಪಿಸದೆ, ಇಂದ್ರಿಯನಿಗ್ರಹವನ್ನು ಕಲಿಸದೆ, ಸ್ವೇಚ್ಛೆಯಾಗಿ ವರ್ತಿಸುವುದಕ್ಕೆ ಸಮ್ಮತಿಯನ್ನು ಕೊಡುವಂತ ಗುರುವು ಗುರುವಲ್ಲ, ಅವನು ಯಮಕಿಂಕರನು. ಏತಕ್ಕೆಂದರೆ ಮೊದಲೇ ವಿಷಯಾಸಕ್ತಿಯಿಂದ ಮನಸ್ಸಿಗೆ ಬಂದಂತೆ ವರ್ತಿಸಿ ಅನುಭವಿಸುತ್ತಿದ್ದ ದುಃಖಗಳು ಏನು ಕಡಿಮೆಯಾಗಿದ್ದವು ? ಈಗ ಗುರುವನ್ನು ಮಾಡಿಕೊಂಡದ್ದರಿಂದ ಹೊಸದಾಗಿ ಏನು ಪ್ರಯೋಜನವಾಯಿತು ? ಆದುದರಿಂದ ಅಂತವನನ್ನು ಗುರು ಎಂದು ಹೇಳುವುದೂ ಸಹ ತಪ್ಪಾಗುತ್ತದೆ'' ಎಂಬುದಾಗಿ ಸದ್ಗುರು ಸಮರ್ಥರಾಮದಾಸಸ್ವಾಮಿಗಳು ಹೇಳಿರುತ್ತಾರೆ. ಸರಿಯಾದ ಶುದ್ಧವಾದ ಜ್ಞಾನಬೋಧೆಯನ್ನು ಮಾಡಿ ದೇಹಬುದ್ಧಿಯನ್ನು ತೊಲಗಿಸಿ, ವಿಷಯ ವ್ಯಾಮೋಹವನ್ನು ತಪ್ಪಿಸಿ, ಯಾವಾಗಲೂ ಸದಾಚಾರ ಆತ್ಮನಿಷ್ಠೆಯನ್ನು ತಂದುಕೊಡುವಂತಹ ಸದ್ಗುರುವು ಸಿಕ್ಕಬೇಕಾದರೆ ಮೊದಲು ಸಕಲ ಗುರುಗಳಿಗೂ ಗುರುವಾದ ಪರಮಾತ್ಮನನ್ನೇ ಶರಣುಹೊಂದಬೇಕು. ಅವನ ಕೃಪೆಯಾದ ಕೂಡಲೇ ಸದ್ಗುರುವು ಸಿಕ್ಕುತ್ತಾನೆ.

## 5. ಮನುಷ್ಯ ದೇಹದ ಸಾರ್ಥಕತೆ

**ದೇಹ ಪರಮಾರ್ಥೀ ಲಾವಿಲೇ ।**
**ತರೀ ಚ ಯಾಚೇ ಸಾರ್ಥಕ ಜಾಲೇ ।**
**ನಾಹೀ ತರೀ ಹೇ ವ್ಯರ್ಥ ಚಿ ಗೇಲೇ ।**
**ನಾನಾ ಆಘಾತೇ ಮೃತ್ಯು ಪಂಥೇ ॥** (ದಾ. 1–10–61)

ಈ ದೇಹವನ್ನು ಪರಮಾತ್ಮನ ಪ್ರಾಪ್ತಿಗಾಗಿಯೇ ಉಪಯೋಗಿಸಿದರೆ ಮಾತ್ರ ಇದರ ಸಾರ್ಥಕತೆಯಾಗುತ್ತದೆ. ಇಲ್ಲದಿದ್ದರೆ ವ್ಯರ್ಥವಾಗಿ ನಾನಾ ಆಘಾತಗಳ ಮೂಲಕ ಮೃತ್ಯುವಿನ ಬಾಯಿಗೆ ತುತ್ತಾಗಿ ಹೋಗುತ್ತದೆ.

**ಪಶುದೇಹೀ ನಾಹೀ ಗತೀ । ಐಸೇ ಸರ್ವತ್ರ ಬೋಲತೀ**
**ಹ್ಮಣೋನಿ ನರದೇಹೀ ಚ ಪ್ರಾಪ್ತಿ ॥** (ದಾ. 1–10–21)

ಜೀವನಿಗೆ ಈ ಮಾನವಶರೀರವು ತನ್ನ ನಿಜವಾದ ಸತ್ಯಸ್ವರೂಪವನ್ನು ತಿಳಿದುಕೊಳ್ಳುವುದಕ್ಕಾಗಿಯೇ ಬಂದಿದೆಯೇ ಹೊರತು ಪಶುಗಳಂತೆ ವಿಷಯ ಭೋಗಗಳನ್ನು ಮಾತ್ರ ಭೋಗಿಸುವುದಕ್ಕೆ ಬರಲಿಲ್ಲ. ಏತಕ್ಕೆಂದರೆ ಈ ನರದೇಹವನ್ನು ಬಿಟ್ಟು ಉಳಿದ ಪಶುದೇಹಗಳಲ್ಲಿ ತನ್ನ ಸ್ವರೂಪವನ್ನು ತಿಳಿದು ಮುಕ್ತನಾಗಲು ಸಾಧ್ಯವಿಲ್ಲವೆಂದು ವೇದಗಳು ಸಾರುತ್ತಿವೆ, ಮಾಹಾತ್ಮರು ಉಪದೇಶಿಸುತ್ತಿರುವರು. ಆದುದರಿಂದ ಜನನ ಮರಣಗಳಿಂದ ಬಿಡುಗಡೆಯನ್ನು ಹೊಂದುವುದಕ್ಕಾಗಿಯೇ ಈ ನರದೇಹವು ಪ್ರಾಪ್ತವಾಗಿರುತ್ತದೆ. ತನ್ನ ನಿಜವಾದ ಆತ್ಮಸ್ವರೂಪವನ್ನು ತಿಳಿದಾಗಲೇ ಈ ಶರೀರವು ಬಂದುದಕ್ಕೆ ಸಾರ್ಥಕವಾಗುತ್ತದೆ. ಮನಸ್ಸಿನ ಆಚೆಗಿರುವ ತನ್ನ ನಿಜ ಸ್ವರೂಪವನ್ನು ತಿಳಿದವನೇ ಮಾನವನಾಗುತ್ತಾನೆ. ಅವನೇ ಅಮರನಾಗುತ್ತಾನೆ. ಅವನಿಗೇ ಪರಮಾನಂದವು ಸಿಕ್ಕುತ್ತದೆ.

**ಪರಮ ಮೂರ್ಖಾಮಾಜೀ ಮೂರ್ಖ।**
**ಜೋ ಸಂಸಾರಿ ಮಾನೀ ಸುಖ।**
**ಯಾ ಸಂಸಾರದುಃಖಾ ಐಸೇ ದುಃಖ।**
**ಆಣೀಕ ನಾಹೀ॥ ॥** (ದಾ. 2–10–40)

ಕೇವಲ ಸಂಸಾರದಲ್ಲಿಯೇ ಸುಖವಿದೆ, ಎಂದು ತಿಳಿಯುವವನು ಮೂರ್ಖಶಿರೋಮಣಿಯೇ ಸರಿ. ಈ ಸಂಸಾರದುಃಖದಷ್ಟು ದುಃಖ ಮತ್ತೊಂದಿಲ್ಲ. ವಿಷಯಭೋಗಗಳಲ್ಲಿಯೇ ಸುಖವಿದೆಯೆಂದು ತಿಳಿಯುವವನು ನರಪಶುವೇ ಸರಿ.

## 6. ಮಾನವ ದೇಹದ ಹೆಚ್ಚುಗಾರಿಕೆ

**ಇಹ ಚೇದಶಕದ್ಬೋದ್ಧುಂ ಪ್ರಾಕ್ ಶರೀರಸ್ಯ ವಿಸ್ರಸಃ।**
**ತತಃ ಸರ್ಗೇಷು ಲೋಕೇಷು ಶರೀರತ್ವಾಯ ಕಲ್ಪತೇ ॥** (ಕಠ. 2–3–4)

ಇಲ್ಲಿಯೇ ಎಂದರೆ ಈ ಮಾನವದೇಹವು ಬಿದ್ದುಹೋಗುವುದಕ್ಕೆ ಮುಂಚೆಯೇ, ಈ ಜನ್ಮದಲ್ಲಿಯೇ ಯಾವ ವಿವೇಕಿಯು ತನ್ನ ನಿಜಸ್ವರೂಪವೇ ಆಗಿರುವಂಥ ಪರಮಾತ್ಮನನ್ನು ತಿಳಿದುಕೊಳ್ಳುತ್ತಾನೆಯೋ ಎಂದರೆ ಆತ್ಮಜ್ಞಾನವನ್ನು ಪಡೆಯುತ್ತಾನೆಯೋ ಅವನು ಸಮಸ್ತಸಂಸಾರಬಂಧನಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ಹುಟ್ಟು ಸಾವುಗಳಿಂದ ಮುಕ್ತನಾಗುತ್ತಾನೆ. ಪ್ರಹ್ಲಾದಾದಿಗಳಂತೆ ಬಾಲ್ಯದಲ್ಲಿಯೇ ಎಂದರೆ ವಿಷಯವ್ಯಾಮೋಹಕ್ಕೆ ಸಿಕ್ಕಿ ಬೀಳುವುದಕ್ಕೆ ಮುಂಚೆಯೇ, ಹೃದಯವು ಶುದ್ಧವಾಗಿರು ವಾಗಲೇ ಸದ್ಗುರುವಿನಿಂದ ತಮ್ಮ ನಿಜಸ್ವರೂಪವನ್ನು ತಿಳಿದುಕೊಂಡು ಮುಕ್ತರಾಗುವವರು ಉತ್ತಮರು. ಇವರೇ ನಿಜವಾಗಿಯೂ ಧನ್ಯರು. ಇದು ಸಾಧ್ಯವಾಗದಿದ್ದರೆ ಪ್ರಾಯದಲ್ಲಿ

ಮುಪ್ಪು ಬರುವುದರೊಳಗೇ ದೇಹದಲ್ಲಿ ಶಕ್ತಿಯೂ, ಇಂದ್ರಿಯಗಳಲ್ಲಿ ಸಾಮರ್ಥ್ಯವೂ ಬುದ್ಧಿಯಲ್ಲಿ ವಿಚಾರಮಾಡಿ ತಿಳಿದುಕೊಳ್ಳುವ ಚೈತನ್ಯವೂ ಇರುವಾಗಲೇ ಮೋಕ್ಷವನ್ನು ಸಾಧಿಸುವವರು ಜಾಣರು. ಇದೂ ಸಾಧ್ಯವಾಗದೇ ಪ್ರಾಯವು ಕಳೆದುಹೋಗಿದ್ದರೆ ಕೊನೆಗೆ ಮುಪ್ಪಿನ ಕಾಲದಲ್ಲಿಯಾದರೂ ಸಾಂಸಾರಿಕಚಿಂತೆಗಳಲ್ಲಿ ಮುಳುಗದೆ ಆತ್ಮಜ್ಞಾನವನ್ನು ಪಡೆದುಕೊಳ್ಳಲೇಬೇಕು. ಅಂತೂ ತಾತ್ಪರ್ಯವೇನೆಂದರೆ ಪ್ರಾಣ ಹೋಗುವುದರೊಳಗೇ ಮುಕ್ತನಾಗಬೇಕೆಂಬುದೇ ಮುಖ್ಯ ಉದ್ದೇಶ.

ಈ ಮಾನವ ಶರೀರದಲ್ಲಿ ತನ್ನ ಸತ್ಯಸ್ವರೂಪವನ್ನು ಕಂಡುಕೊಳ್ಳದಿದ್ದರೆ, ಆತ್ಮಜ್ಞಾನವನ್ನು ಪಡೆಯದಿದ್ದರೆ ಹುಟ್ಟು ಸಾವುಗಳು ತಪ್ಪುವುದಿಲ್ಲ. ಪುಣ್ಯಪಾಪಾದಿಕರ್ಮಗಳಿಂದ ಸ್ವರ್ಗನರಕಾದಿಗಳಿಗೆ ಸುತ್ತಿಸುತ್ತಿ ಬಳಲಬೇಕಾಗುತ್ತದೆ. ಅನೇಕ ಯೋನಿಗಳಲ್ಲಿ ಹುಟ್ಟಿ, ಪರಿಪರಿಯ ಕಷ್ಟಗಳನ್ನನುಭವಿಸಬೇಕಾಗುತ್ತದೆ. ಈ ಮನುಷ್ಯದೇಹವನ್ನು ಬಿಟ್ಟರೆ ಸ್ವರ್ಗಾದಿಲೋಕಗಳಲ್ಲಾಗಲೀ ದೇವತಾದಿಶರೀರಗಳಲ್ಲಾಗಲೀ ಜ್ಞಾನವನ್ನು ಪಡೆಯೋಣವೆಂದರೆ, ಈ ಲೋಕದಲ್ಲಿ ಈ ಮಾನವಜನ್ಮದಲ್ಲಿ ಆತ್ಮಜ್ಞಾನವು ಸ್ಪಷ್ಟವಾಗಿ ಆಗುವಂತೆ ಇತರ ಲೋಕಗಳಲ್ಲಿ ಆಗುವುದಿಲ್ಲ. ಈ ವಿಷಯದಲ್ಲಿ ಶ್ರುತಿಯು ಏನು ಹೇಳುತ್ತದೆಯೋ ನೋಡೋಣ–

**ಯಥಾದರ್ಶೇ ತಥಾತ್ಮನಿ ಯಥಾ ಸ್ವಪ್ನೇ ತಥಾ ಪಿತೃಲೋಕೇ ।**
**ಯಥಾಪ್ಸು ಪರೀವ ದದೃಶೇ ತಥಾ ಗಂಧರ್ವಲೋಕೇ**
**ಛಾಯಾತಪಯೋರಿವ ಬ್ರಹ್ಮಲೋಕೇ ॥** (ಕಠ. 2–3–5)

ಯಾವ ರೀತಿ ಕನ್ನಡಿಯಲ್ಲಿ ಪ್ರತಿಬಿಂಬಿತವಾದ ತನ್ನ ಮುಖವು ಅತ್ಯಂತ ಸ್ಪಷ್ಟವಾಗಿ ಕಾಣಿಸುತ್ತದೆಯೋ ಅದೇ ರೀತಿಯಲ್ಲಿ, ಈ ಮಾನವಲೋಕದಲ್ಲಿ ಮನುಷ್ಯನಿಗೆ ಕನ್ನಡಿಯಂತೆ ಅತ್ಯಂತ ಪರಿಶುದ್ಧವಾದ ಅಂತಃಕರಣದಲ್ಲಿ ಆತ್ಮಸ್ವರೂಪವು ಅತ್ಯಂತ ಸ್ಪಷ್ಟವಾಗಿ ಕಾಣಿಸುತ್ತದೆ. ಯಾವ ರೀತಿ ಕನಸಿನಲ್ಲಿ ಎಚ್ಚರಿಕೆಯ ವಾಸನೆಯಿಂದ ಹುಟ್ಟಿದವುಗಳು ಅಸ್ಪಷ್ಟವಾಗಿ ತೋರುತ್ತವೆಯೋ ಅದರಂತೆಯೇ, ಪಿತೃಲೋಕದಲ್ಲಿ ಕರ್ಮಫಲಗಳ ಭೋಗಗಳಲ್ಲಿ ಆಸಕ್ತನಾಗಿರುವುದರಿಂದ ಆತ್ಮಸ್ವರೂಪವು ಅಸ್ಪಷ್ಟವಾಗಿ ತೋರುತ್ತದೆ. ಯಾವ ವಿಧದಲ್ಲಿ ನೀರಿನಲ್ಲಿ ಪ್ರತಿಬಿಂಬಿಸಿದ ತನ್ನ ರೂಪದಲ್ಲಿ ಅವಯವಗಳು ಸ್ಪಷ್ಟವಾಗಿ ಕಾಣಿಸುವದಿಲ್ಲವೋ ಹಾಗೆಯೇ, ಗಂಧರ್ವಲೋಕದಲ್ಲಿ ಅಸ್ಪಷ್ಟವಾಗಿ ಆತ್ಮಸ್ವರೂಪವು ತೋರುತ್ತದೆ. ಇತರ ಲೋಕಗಳಲ್ಲಿಯೂ ಸಹ ಇದೇ ರೀತಿಯಲ್ಲಿ ಅಸ್ಪಷ್ಟವಾಗಿಯೇ ಆತ್ಮದರ್ಶನವಾಗುತ್ತದೆ ಎಂಬುದಾಗಿ ಶಾಸ್ತ್ರಪ್ರಮಾಣಗಳಿಂದ ತಿಳಿಯಬರುತ್ತದೆ. ಇದರ

ಅರ್ಥವೇನೆಂದರೆ ಈ ಮಾನವಲೋಕವನ್ನು ಬಿಟ್ಟು ಉಳಿದ ಲೋಕಗಳಲ್ಲಿ ಸರಿಯಾಗಿ ಆತ್ಮಜ್ಞಾನವಾಗುವುದಿಲ್ಲ. ಬ್ರಹ್ಮಲೋಕವೊಂದರಲ್ಲಿ ಮಾತ್ರ ತನ್ನ ನೆರಳಿನಂತೆಯೂ, ಸೂರ್ಯನ ಪ್ರಕಾಶದಂತೆಯೂ ತೋರುತ್ತದೆ. ಬ್ರಹ್ಮಲೋಕವನ್ನು ಪಡೆಯುವುದು ಸುಲಭ ಸಾಧ್ಯವಲ್ಲ. ಅತ್ಯಂತ ವಿಶಿಷ್ಟತರವಾದ ಕರ್ಮಗಳನ್ನು ಮಾಡಿದ್ದರೆ ಮತ್ತು ಇದರ ಜೊತೆಯಲ್ಲಿ ಪರೋಕ್ಷಜ್ಞಾನವನ್ನುಪಡೆದಿದ್ದರೆ ಮಾತ್ರ ಆ ಲೋಕವು ಸಿಕ್ಕುತ್ತದೆ. ಇಲ್ಲದಿದ್ದರೆ ಇಲ್ಲ. ಇದರ ತಾತ್ಪರ್ಯವೇನೆಂದರೆ ಈ ಮಾನವ ಲೋಕದಲ್ಲಿಯೇ, ಮನುಷ್ಯದೇಹವು ಬಂದಿರುವಾಗಲೇ ಆತ್ಮಜ್ಞಾನವನ್ನು ಪಡೆಯಲು ಪ್ರಯತ್ನಮಾಡಬೇಕು.

## 7. ಆತ್ಮಜ್ಞಾನದ ಮಹತ್ವ

ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ
ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ॥ (ಕಠ. 2–2–12)

ಒಬ್ಬನೇ ಒಬ್ಬನಾಗಿಯೂ, ಸಮಸ್ತವನ್ನೂ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವವನಾಗಿಯೂ , ಸಮಸ್ತಜೀವರಾಶಿಗಳ ಅಂತರಾತ್ಮನಾಗಿಯೂ ಇರುವ, ಯಾವ ಪರಮಾತ್ಮನೊಬ್ಬನೇ ಈ ಸಮಸ್ತ ಪ್ರಪಂಚವಾಗಿ ತೋರುತ್ತಿರುವನೋ, ಅಂಥ ತನ್ನ ಹೃದಯದಲ್ಲಿಯೇ ಇರುವಂಥ ತನ್ನ ನಿಜ ಸ್ವರೂಪವೇ ಆದ ಆತ್ಮಸ್ವರೂಪವನ್ನು ಯಾವ ಧೀರನು ನೋಡುತ್ತಾನೆಯೋ ಅವನಿಗೇ ಶಾಶ್ವತವಾದ, ದುಃಖರಹಿತವಾದ, ನಿತ್ಯಸುಖವು, ಪರಮಾನಂದವು ಸಿಕ್ಕುತ್ತದೆ. ಉಳಿದವರಿಗೆ ತನ್ನ ನಿಜಸ್ವರೂಪವನ್ನು ಕಾಣದವರಿಗೆ ಖಂಡಿತವಾಗಿಯೂ ಸುಖವು ಶಾಂತಿಯು ಸಿಕ್ಕುವುದಿಲ್ಲವೆಂದು ಕಠೋಪನಿಷತ್ತು ಘೋಷಿಸುತ್ತಿದೆ.

ಇಹ ಚೇದವೇದೀದಥ ಸತ್ಯಮಸ್ತಿ
ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ ।
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ (ಕೇ. 2–25)

ಈ ಲೋಕದಲ್ಲಿಯೇ ಎಂದರೆ ಈ ಮಾನವಜನ್ಮದಲ್ಲಿಯೇ ಯಾವನು ತನ್ನ ನಿಜಸ್ವರೂಪವನ್ನು ತಿಳಿದುಕೊಳ್ಳುತ್ತಾನೆಯೋ ಅವನಿಗೇ ಮಹತ್ತರವಾದ

ಬ್ರಹ್ಮಾನಂದದ ಲಾಭವಾಗುತ್ತದೆ. ಯಾವನು ಈ ಜನ್ಮದಲ್ಲಿಯೇ ತಿಳಿದುಕೊಳ್ಳುವುದಿಲ್ಲವೋ ಅವನಿಗೆ ಮಹತ್ತರವಾದ ಹಾನಿಯಾಗುತ್ತದೆ ಎಂದರೆ ಜನ್ಮಮೃತ್ಯುಜರಾವ್ಯಾಧಿ ಮೊದಲಾದ ಭಯಂಕರವಾದ ದುಃಖಪರಂಪರೆಯು ತಪ್ಪುವುದಿಲ್ಲ. ಎಲ್ಲಾ ಭೂತಗಳಲ್ಲಿಯೂ ಎಂದರೆ ಚರಾಚರಾತ್ಮಕವಾದ ಸಮಸ್ತ ಪ್ರಪಂಚದಲ್ಲಿಯೂ ಇರುವಂಥ ಒಂದೇ ಒಂದಾದ ಪರಮಾತ್ಮಸ್ವರೂಪವನ್ನು ಯಾವ ಧೀರನು ತಿಳಿದುಕೊಳ್ಳುತ್ತಾನೆಯೋ, ಅವನು ಹುಟ್ಟು ಸಾವುಗಳಿಂದ ಬಿಡುಗಡೆಯನ್ನು ಹೊಂದಿ ಅಮೃತಸ್ವರೂಪವನ್ನು ಪಡೆಯುತ್ತಾನೆ. ಎಂದರೆ ಪುನಃ ಹುಟ್ಟದೇ ಇರುವಂಥ ಪರಮಾತ್ಮಸ್ವರೂಪವೇ ಆಗುತ್ತಾನೆ, ಎಂಬುದಾಗಿ ಕೇನೋಪನಿಷತ್ತು ಡಂಗುರವನ್ನು ಹೊಡೆಯುತ್ತಿದೆ. **''ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ।''** (ಗೀ. 4–39) ಜ್ಞಾನವನ್ನು ಪಡೆದಕೂಡಲೇ ಯಾವ ವಿಧವಾದ ಲವಲೇಶವೂ ದುಃಖವಿಲ್ಲದಂಥ, ಮೋಕ್ಷರೂಪವಾದ, ಶ್ರೇಷ್ಠವಾದ, ಶಾಶ್ವತವಾದ ಪರಮಶಾಂತಿಯು ಲಭಿಸುತ್ತದೆ. ದೀಪವನ್ನು ಹಚ್ಚಿದ ಕೂಡಲೇ ಹೇಗೆ ಕತ್ತಲೆಯು ಹೋಗಿ ತಡವಿಲ್ಲದೇ ಆ ಕ್ಷಣವೇ ಬೆಳಕಾಗುತ್ತದೆಯೋ ಹಾಗೆಯೇ ಜ್ಞಾನವಾದ ಕೂಡಲೇ ಸಮಸ್ತ ವಿಧವಾದ ದುಃಖಗಳೂ ಹೋಗಿ ಆ ಕ್ಷಣವೇ ನಿತ್ಯಸುಖವು ಸಿಕ್ಕುತ್ತದೆ. ಇತರ ಸುಖಗಳಂತೆ ಈ ಸುಖವು ಹೋಗುವುದಿಲ್ಲ.

**ಶಂಕೆ : ''ಶ್ರೇಯಾಂಸಿ ಬಹು ವಿಘ್ನಾನಿ''** ಎಂಬಂತೆ ಒಳ್ಳೇ ಮಾರ್ಗದಲ್ಲಿ ತೊಂದರೆಗಳು, ವಿಘ್ನಗಳು ಬಹಳವಾಗಿ ಇರುತ್ತವೆ. ಅದರಲ್ಲಿಯೂ ಜ್ಞಾನಮಾರ್ಗದಲ್ಲಂತೂ ಕೇಳುವುದೇ ಬೇಡ. ದೇವತೆಗಳೇ ವಿಘ್ನವನ್ನುಂಟುಮಾಡುತ್ತಾರೆ. ಆದುದರಿಂದ ಸದ್ಗುರುವಿನಿಂದ ಆತ್ಮಸ್ವರೂಪವನ್ನು ಸರಿಯಾಗಿ ತಿಳಿದುಕೊಂಡು ಮನನ ನಿದಿಧ್ಯಾಸನಗಳಿಂದ ದೃಢವಾದ ಜ್ಞಾನವನ್ನು ಪಡೆದಂಥ ಬ್ರಹ್ಮವೇತ್ತನು ಪುನಃ ಹುಟ್ಟುತ್ತಾನೆಯೋ ಹೇಗೆ? ಅಥವಾ ಮೋಕ್ಷವನ್ನು ಪಡೆಯದೆ ಮತ್ತೆ ಯಾವುದಾದರೂ ಬೇರೆಗತಿಯನ್ನು ಹೊಂದುತ್ತಾನೆಯೋ ಹೇಗೆ?

**ಸಮಾಧಾನ :** –ಖಂಡಿತವಾಗಿಯೂ ಹುಟ್ಟುವುದಿಲ್ಲ. ಏತಕ್ಕೆಂದರೆ ಆತ್ಮಜ್ಞಾನದಿಂದಲೇ ಸಮಸ್ತ ವಿಘ್ನಗಳೂ, ಪ್ರತಿಬಂಧಕಗಳೂ ದೂರವಾಗಿಬಿಡುತ್ತವೆ. ಮೋಕ್ಷಕ್ಕೆ ಅಡ್ಡಿ ಯಾವುದೆಂದರೆ ಅಜ್ಞಾನಮಾತ್ರವೇ ಹೊರತು ಬೇರೆ ಯಾವ ಪ್ರತಿಬಂಧಕವೂ ಇರುವುದಿಲ್ಲ. ಏತಕ್ಕೆಂದರೆ ಮೋಕ್ಷವು ನಿತ್ಯವಾದದ್ದಾಗಿದೆ. ಅಷ್ಟೇ ಅಲ್ಲದೆ ಸಮಸ್ತರ ಆತ್ಮಸ್ವರೂಪವೇ ಆಗಿರುತ್ತದೆ. ಈ ವಿಷಯದಲ್ಲಿ ಶ್ರುತಿಯು ಏನು ಹೇಳುತ್ತದೆಯೋ ಸ್ವಲ್ಪ ನೋಡೋಣ :–

ಸ ಯೋ ಹ ವೈ ತತ್ಪರಮಂ ಬ್ರಹ್ಮ ವೇದ
ಬ್ರಹ್ಮೈವ ಭವತಿ ನಾಸ್ಯಾಬ್ರಹ್ಮವಿತ್ಕುಲೇ ಭವತಿ ।
ತರತಿ ಶೋಕಂ ತರತಿ ಪಾಪ್ಮಾನಂ ಗುಹಾಗ್ರಂಥಿಭ್ಯೋ
ವಿಮುಕ್ತೋಽಮೃತೋ ಭವತಿ ॥ (ಮುಂ. 3–2–9)

ಯಾರು ಈ ಲೋಕದಲ್ಲಿ ಪರಮ ಶ್ರೇಷ್ಠವಾದ ಪರಮಾತ್ಮಸ್ವರೂಪವನ್ನು ಇದ್ದದ್ದನ್ನು ಇದ್ದಂತೆ ತಿಳಿಯುತ್ತಾರೆಯೋ, ಎಂದರೆ ಸಾಕ್ಷಾತ್ತಾಗಿ ಪರಮಾತ್ಮಸ್ವರೂಪವೇ ತಾನಾಗಿದ್ದೇನೆಂದು ತಿಳಿಯುತ್ತಾರೆಯೋ ಅವರು ಪರಮಾತ್ಮಸ್ವರೂಪರೇ ಆಗುತ್ತಾರೆ. ಇವರು ಬೇರೆಗತಿಯನ್ನು ಹೊಂದುವುದಿಲ್ಲ, ಬೇರೆಯಾಗಿ ಉಳಿಯುವುದಿಲ್ಲ, ಅವರ ಮೋಕ್ಷಪ್ರಾಪ್ತಿಗೆ ಸಾಕ್ಷಾತ್ ದೇವತೆಗಳಿಂದಲೂ ವಿಘ್ನವನ್ನುಂಟುಮಾಡಲು ಸಾಧ್ಯವಿಲ್ಲ. ಏತಕ್ಕೆಂದರೆ ಅವರು ದೇವತೆಗಳ ಆತ್ಮವೇ ತಾವಾಗಿರುತ್ತಾರೆ. ಆದುದರಿಂದ ಪರಮಾತ್ಮಸ್ವರೂಪವನ್ನು ತಿಳಿದುಕೊಂಡವರು ಪರಮಾತ್ಮಸ್ವರೂಪವೇ ಆಗುತ್ತಾರೆ. ಅಂಥವರನ್ನು ಆಶ್ರಯಿಸಿದವರೆಲ್ಲರೂ ಜ್ಞಾನಿಗಳೇ ಆಗುತ್ತಾರೆ. ಮುಕ್ತರೇ ಆಗುತ್ತಾರೆ. ಅವರು ಸಮಸ್ತದುಃಖಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ. ಜೀವಂತರಾಗಿರುವಾಗಲೇ ಇಷ್ಟವಸ್ತುಗಳ ವಿಯೋಗದಿಂದಾಗುವ ಸಮಸ್ತ ದುಃಖಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ. ಧರ್ಮ ಅಧರ್ಮ ಇವುಗಳಿಂದುಂಟಾಗುವ ಪಾಪಪುಣ್ಯಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ. ಅಜ್ಞಾನ ಶೃಂಖಲೆಗಳಿಂದ ಮುಕ್ತರಾಗುತ್ತಾರೆ.

ಸ್ನಾತಂ ತೇನ ಸಮಸ್ತತೀರ್ಥನಿಚಯೇ ದತ್ತಂ ಮಹೀಮಂಡಲಮ್ ।
ವಿಪ್ರೇಭ್ಯಃ ಪಿತೃದೇವತಾಃ ಸುರಗಣಾಃ ಸರ್ವೇಽಪಿ ಸಂತರ್ಪಿತಾಃ ॥
ಜಪ್ತಾ ಮಂತ್ರಸಹಸ್ರಕೋಟಿರಮುನಾ ತಪ್ತಂ ಚ ತೀವ್ರಂ ತಪೋ ।
ಯಸ್ಯ ಬ್ರಹ್ಮವಿಚಾರಣೇ ಕ್ಷಣಮಪಿ ಪ್ರಾಪ್ನೋತಿ ಸ್ಥೈರ್ಯಂ ಮನಃ ॥

ಯಾರು ಒಂದು ಕ್ಷಣವಾದರೂ ಸ್ಥಿರವಾದ ಮನಸ್ಸಿನಿಂದ ಆತ್ಮಸ್ವರೂಪವೇ ತಾನೆಂದು ಬ್ರಹ್ಮವಿಚಾರವನ್ನು ಮಾಡುತ್ತಾರೆಯೋ ಅವರಿಗೆ ಜಗತ್ತಿನಲ್ಲಿರುವ ಸಮಸ್ತ ತೀರ್ಥಗಳಲ್ಲೂ ಸ್ನಾನಮಾಡಿದ ಫಲವು ಬರುತ್ತದೆ. ಉತ್ತಮರಾದ ಬ್ರಾಹ್ಮಣರಿಗೆ ಭೂಮಂಡಲವನ್ನೇ ದಾನಮಾಡಿದ ಫಲವು ಬರುತ್ತದೆ. ದೇವತೆಗಳೂ, ಪಿತೃ ದೇವತೆಗಳೂ ತೃಪ್ತರಾಗುತ್ತಾರೆ. ಸಹಸ್ರ ಕೋಟಿ ಮಂತ್ರಗಳನ್ನು ಜಪ ಮಾಡಿದ ಫಲವು ಬರುತ್ತದೆ. ಅನೇಕ ವಿಧವಾದ ತಪಸ್ಸನ್ನು ಮಾಡಿದ ಫಲವು ಬರುತ್ತದೆ.

ಕುಲಂ ಪವಿತ್ರಂ ಜನನೀ ಕೃತಾರ್ಥಾ
ವಸುಂಧರಾ ಪುಣ್ಯವತೀ ಚ ಯೇನ ।
ಅಪಾರ ಸಚ್ಚಿತ್‌ಸುಖಸಾಗರೇಽಸ್ಮಿನ್
ಲೀನಂ ಪರೇ ಬ್ರಹ್ಮಣಿ ಯಸ್ಯ ಚೇತಃ ।

ಮೇರೆ ಇಲ್ಲದೆ ಕೇವಲ ಸುಖಸ್ವರೂಪವಾದ ಸಚ್ಚಿದಾನಂದಸ್ವರೂಪ ಸಮುದ್ರದಂತಿರುವ ಪರಬ್ರಹ್ಮದಲ್ಲಿ ಯಾರ ಮನಸ್ಸು ಲೀನವಾಗಿದೆಯೋ ಅವರ ಕುಲವೆಲ್ಲವೂ ಪಾವನವಾಗುತ್ತದೆ ; ಅವರ ತಾಯಿಯು ಕೃತಾರ್ಥಳಾಗುತ್ತಾಳೆ ; ಭೂದೇವಿಯು ತಾನು ಪುಣ್ಯವತಿ ಎನ್ನುತ್ತಾಳೆ. ಅನುಭವಾಮೃತದಲ್ಲಿಯೂ ಈ ರೀತಿ ಹೇಳಿದೆ.

ಹಿಂದೆ ಮಾಡಿದ ಸಕಲಪಾತಕ ।
ಬೆಂದುಹೋಹುದು ಬ್ರಹ್ಮಚಿಂತೆಯೊ
ಳೊಂದುನಿಮಿಷದೊಳಿರ್ದೊಡವರಿಂ ಹೇಳಲೇನದನು ! ॥
ತಂದೆತಾಯ್ಗಳು ಧನ್ಯರಾತನ ।
ಬಂಧುಗಳು ಕುಲವೆಲ್ಲ ಪಾವನ
ಬಂದು ನಿಂದೆಡೆಯೆಲ್ಲ ಪುಣ್ಯಕ್ಷೇತ್ರವೆನಿಸುವುದು ॥

ಮೇರುಸಾಮ್ಯಸುವರ್ಣದಾನವ ।
ವಾರಿನಿಧಿಪರ್ಯಂತಭೂಮಿಯ ।
ಭೂರಿಕನ್ಯಾದಾನಗೋದಾನಗಳ ಸಂಖ್ಯೆಗಳ ॥
ಧಾರಿಣಿಯ ದಿವಿಜರಿಗೆ ಪರಮೋ ।
ದಾರಬುದ್ಧಿಯಲಿತ್ತ ಫಲ ಕೈ ।
ಸೇರುವುದು ನಿಮಿಷಾರ್ಧವಾತ್ಮಧ್ಯಾನನಿಷ್ಠರಿಗೆ ॥

ಜಗತ್ತಿನಲ್ಲಿ ಸಮಸ್ತದ ಮಹತ್ವವನ್ನೂ ವರ್ಣಿಸಬಹುದು. ಆದರೆ ಆತ್ಮಜ್ಞಾನದ ಮಹತ್ವವನ್ನು ಮಾತ್ರ ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲ. ಇಂಥ ಅಪಾರವಾದ ಫಲವು ಆತ್ಮಜ್ಞಾನದಿಂದ ಲಭಿಸುತ್ತದೆ.

## 8. ಆತ್ಮಜ್ಞಾನಪ್ರಾಪ್ತಿಗೆ ಏನು ಮಾಡಬೇಕು

**ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ**
**ಮಂತವ್ಯೋ ನಿದಿಧ್ಯಾಸಿತವ್ಯಃ ॥** (ಬೃ. 4–5–6)

ಆತ್ಮಸ್ವರೂಪವನ್ನು ಸದ್ಗುರುವಿನಿಂದ ಶ್ರವಣ ಮನನ ನಿದಿಧ್ಯಾಸನಗಳನ್ನು ಮಾಡಿಯೇ ತಿಳಿಯಬೇಕು.

**ಶ್ರವಣಂ ತು ಗುರೋಃ ಪೂರ್ವಂ ಮನನಂ ತದನಂತರಮ್ ।**
**ನಿದಿಧ್ಯಾಸನಮಿತ್ಯಾಹುಃ ಪೂರ್ಣಬೋಧಸ್ಯ ಲಕ್ಷಣಮ್ ॥** (ಶು)

ಮೊದಲು ಗುರುಮುಖದಿಂದ ವೇದಾಂತಶ್ರವಣವನ್ನು ಮಾಡತಕ್ಕದ್ದು. ಅನಂತರ ಅದನ್ನು ಮನನಮಾಡಬೇಕು. ಈ ರೀತಿ ಶ್ರವಣಮನನಗಳ ಅನಂತರ ಮಾಡಲ್ಪಡುವ ನಿದಿಧ್ಯಾಸನದಿಂದ ಗಟ್ಟಿಮಾಡಲ್ಪಟ್ಟ ಜ್ಞಾನವೇ (ಆತ್ಮವೇ ನಾನು, ನನಗಿಂತಲೂ ಭಿನ್ನವಾಗಿ ಮತ್ತೊಂದಿಲ್ಲವೆಂಬ ನಿಶ್ಚಯವಾದ ತಿಳುವಳಿಕೆಯೇ) ಸಂಪೂರ್ಣಜ್ಞಾನದ ಒಂದು ಮುಖ್ಯಲಕ್ಷಣ.

## 9. ಶ್ರವಣವೆಂದರೇನು?

**ಇತ್ಥಂ ವಾಕ್ಯೈಸ್ತದರ್ಥಾನುಸಂಧಾನಂ ಶ್ರವಣಂ ಭವೇತ್ ॥ಪಂ॥**

ಸಕಲ ಇಂದ್ರಿಯಗಳನ್ನೂ ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಶಮದಮಾದಿ ಗುಣಗಳಿಂದ ಕೂಡಿದವನಾಗಿ ಸದ್ಗುರುವು ಹೇಳುವ ಆತ್ಮವಿಷಯವನ್ನು ಲಕ್ಷ್ಯಕೊಟ್ಟು ಏಕಾಗ್ರಚಿತ್ತನಾಗಿ ಸರಿಯಾಗಿ ಕೇಳುವುದಕ್ಕೆ ಶ್ರವಣವೆನ್ನುತ್ತಾರೆ.

## 10. ಮನನವೆಂದರೇನು?

**ಯುಕ್ತ್ಯಾ ಸಂಭಾವಿತತ್ವಾನುಸಂಧಾನಂ ಮನನಂ ತು ತತ್ ॥**

ಈ ರೀತಿಯಾಗಿ ಕೇಳಿದ್ದನ್ನು ಯುಕ್ತಿಗಳಿಂದ ತನ್ನ ಅನುಭವಕ್ಕೆ ತಂದುಕೊಂಡು ಅನಾತ್ಮವನ್ನು ಬಿಟ್ಟು ಆತ್ಮಸ್ವರೂಪವೊಂದನ್ನೇ ಚಿಂತಿಸುವುದಕ್ಕೆ ಮನನವೆನ್ನುತ್ತಾರೆ.

## 11. ನಿದಿಧ್ಯಾಸನವೆಂದರೇನು?

**ತಾಭ್ಯಾಂ ನಿರ್ವಿಚಿಕಿತ್ಸೇಽರ್ಥೇ ಚೇತಸಃ ಸ್ಥಾಪಿತಸ್ಯ ಯತ್ ।**
**ಏಕತಾನತ್ವಮೇತದ್ಧಿ ನಿದಿಧ್ಯಾಸನಮುಚ್ಯತೇ ॥** (ಪಂ. 1–54)

ಹೀಗೆ ಶ್ರವಣ ಮನನಗಳಿಂದ ಸಂಶಯರಹಿತವಾಗಿ ಸದ್ಗುರುವಿನಿಂದ ತಿಳಿದುಕೊಂಡಿರುವ ಆತ್ಮಸ್ವರೂಪದಲ್ಲಿಯೇ ತನ್ನ ಮನಸ್ಸನ್ನು ಸತತವಾಗಿ ನೆಲೆಗೊಳಿಸುವುದೇ ನಿದಿಧ್ಯಾಸನ. ಈ ನಿದಿಧ್ಯಾಸದಿಂದಲೇ ಆತ್ಮಸಾಕ್ಷಾತ್ಕಾರವಾಗುತ್ತದೆ.

## 12. ಸದ್ಗುರುವಿನ ಆವಶ್ಯಕತೆ

**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ॥** (ಮುಂ. 1–2–12)

ಸಕಲ ವೇದಶಾಸ್ತ್ರಗಳನ್ನು ಕಲಿತವನಾಗದಾಗ್ಯೂ ಸಹ ಆತ್ಮಸಾಕ್ಷಾತ್ಕಾರಕ್ಕಾಗಿ ವೈರಾಗ್ಯಶೀಲನಾಗಿ ಶಮದಮಾದಿಗಳಿಂದ ಕೂಡಿಕೊಂಡು ಶ್ರದ್ಧಾಭಕ್ತಿಯಿಂದ ಸದ್ಗುರುವಿನ ಬಳಿ ಹೋಗಬೇಕೆಂದು ಶ್ರುತಿಯು ಹೇಳುತ್ತಿದೆ. ಸದ್ಗುರುವಿಗೆ ಶರಣು ಹೋಗದೆ ಎಷ್ಟು ವೇದಶಾಸ್ತ್ರಗಳನ್ನು ಅಭ್ಯಾಸಮಾಡಿದರೂ ಸಹ ಪರಮಶಾಂತಿಯು ಸಿಕ್ಕುವುದಿಲ್ಲ. ಆತ್ಮಸಾಕ್ಷಾತ್ಕಾರವಾಗುವುದಿಲ್ಲ. **''ಪುಸ್ತಕಜ್ಞಾನೇ ನಿಶ್ಚಯೇ ಧರಣೇ । ತರೀ ಗುರು ಕಾಸಯಾ ಕರಣೇ ॥** (ದಾ. 12–6–30) ಪುಸ್ತಕಗಳನ್ನು ಓದುವುದರಿಂದಲೇ ಬ್ರಹ್ಮಾನುಭವವು ಆಗುವುದಾಗಿದ್ದರೆ ಸದ್ಗುರುವು ಏತಕ್ಕೆ ಬೇಕಾಗಿತ್ತು ? ಎಂಬುದಾಗಿ ಸಮರ್ಥರು ಕೇಳುತ್ತಾರೆ. ನಾರದಮಹರ್ಷಿಗಳು ನಾಲ್ಕು ವೇದ ಹದಿನೆಂಟು ಪುರಾಣ ಆರು ಶಾಸ್ತ್ರಗಳನ್ನೆಲ್ಲಾ ಮುಖಪಾಠ ಮಾಡಿದ್ದರೂ ಸಹ ಪರಮಶಾಂತಿಯು ಸಿಕ್ಕದೆ ಸದ್ಗುರುವನ್ನು ಶರಣು ಹೋಗಬೇಕಾಯಿತು. ಸದ್ಗುರುವಿನ ಹೊರತು ಪರಮಶಾಂತಿಯು ಸಿಕ್ಕುವುದಿಲ್ಲ. ಬ್ರಹ್ಮಾನುಭವವು ಆಗಬೇಕಾದರೆ ಬ್ರಹ್ಮನಿಷ್ಠನಾದ ಸದ್ಗುರುವಿನ ಅತ್ಯಂತ ಆವಶ್ಯಕತೆ ಇದೆ. ಏತಕ್ಕೆಂದರೆ ನಮಗೆ ವ್ಯವಹಾರದಲ್ಲಿಯೂ ಸಹ ಏನಾದರೂ ಕೆಲಸವಾಗಬೇಕಾದರೆ ಆ ಕೆಲಸದಲ್ಲಿ ಅನುಭವವುಳ್ಳವರನ್ನೇ ಆಶ್ರಯಿಸಬೇಕಾಗುತ್ತದೆ. ಇಂದ್ರಿಯಗಳಿಗೆ ಗೋಚರವಾಗುವ ಸಾಮಾನ್ಯವಿಷಯವೇ ಹೀಗಿರುವಾಗ ಮನಸ್ಸುಬುದ್ಧಿಗಳಿಗೆ ನಿಲುಕದಿರುವಂಥ ಆತ್ಮಜ್ಞಾನವಿಷಯದಲ್ಲಂತೂ ಅನನುಭವಿಗಳಿಂದ ಎಂದೂ ಪೂರ್ಣಶಾಂತಿಯು ಸಿಕ್ಕುವುದಿಲ್ಲ. ಶ್ರುತಿಗಳೂ ಸಹ ಸದ್ಗುರುವೆಂದು ಯಾರಿಗೆ ಹೇಳುತ್ತಿವೆ ?

## 13. ಸದ್ಗುರುವೆಂದರೆ ಯಾರು?

ಸ ಗುರುಮೇವಾಭಿಗಚ್ಛೇತ್ ...... ಶ್ರೋತ್ರಿಯಂ ಬ್ರಹ್ಮನಿಷ್ಠಮ್ ।
(ಮುಂ. 1–2–12)

ಶ್ರುತಿ ಶಾಸ್ತ್ರಗಳ ತತ್ತ್ವವನ್ನು ಅಳವಡಿಸಿಕೊಂಡು ಬೋಧೆಯಿಂದಲೂ ತನ್ನ ಕೃಪೆಯಿಂದಲೂ ತನಗೆ ಶರಣುಬಂದಿರುವ ಶಿಷ್ಯನಿಗೆ ಆತ್ಮಸಾಕ್ಷಾತ್ಕಾರವನ್ನುಂಟು–ಮಾಡುವ ಸಾಮರ್ಥ್ಯವುಳ್ಳ ಬ್ರಹ್ಮನಿಷ್ಠನೇ ಸದ್ಗುರುವು. ಸಮಸ್ತ ವಿಧವಾದ ಲೌಕಿಕ ಕರ್ಮಗಳನ್ನೂ ತ್ಯಾಗಮಾಡಿ, ಭಕ್ತಿ ಜ್ಞಾನ ವೈರಾಗ್ಯಗಳಿಂದ ಕೂಡಿದವನಾಗಿ, ಅನವರತವೂ ಬ್ರಹ್ಮಚಿಂತನೆಯಲ್ಲಿರುವವನೇ ಸದ್ಗುರುವು. ಮುಮುಕ್ಷುಗಳಾದವರು ಇಂಥ ಗುರುವನ್ನೇ ಶರಣುಹೊಂದಬೇಕೆಂದು ವೇದಗಳು ಹೇಳುತ್ತಿವೆ.

ಯಾವಾಗಲೂ ಲೌಕಿಕ ಅಥವಾ ಸಾಂಸಾರಿಕ ಕರ್ಮಗಳಲ್ಲಿಯೇ ಇದ್ದು ಯಾವಾಗಲೋ ಸ್ವಲ್ಪ ಹೊತ್ತುಮಾತ್ರ ಬ್ರಹ್ಮವಿಚಾರ ಮಾಡುವವರು ಸದ್ಗುರುಗಳಲ್ಲ. ಏತಕ್ಕೆಂದರೆ ಅಂಥವರಿಂದ ಬ್ರಹ್ಮನಿಷ್ಠೆಯು ಲಭಿಸುವುದಿಲ್ಲ. ಮೇಲೆ ಹೇಳಿದ ಪರಾನುಗ್ರಹದ ಯೋಗ್ಯತೆ ಇಲ್ಲದ ಕೇವಲ ಬ್ರಹ್ಮನಿಷ್ಠರು ಪೂಜ್ಯರೇ ಹೊರತು ಸದ್ಗುರುಗಳಾಗಲಾರರು. ಏತಕ್ಕೆಂದರೆ ಅವರು ಮುಕ್ತರಾಗಿದ್ದರೂ ಸಹ ಇನ್ನೊಬ್ಬರಿಗೆ ಆತ್ಮಸ್ವರೂಪವನ್ನು ತಿಳಿಸುವ ಮಿಕ್ಕ ಉಳಿದ ಯೋಗ್ಯತೆಯು ಅವರಿಗಿರುವುದಿಲ್ಲ. ಇನ್ನು ಕೇವಲ ಶ್ರೋತ್ರಿಯರೆಂದರೆ ಆತ್ಮಾನುಭವವಿಲ್ಲದೆ ವೇದವೇದಾಂತಗಳನ್ನು ಕಲಿತು ಉಪದೇಶಿಸುವವರು. ಇವರೂ ಸಹ ಸದ್ಗುರುಗಳಲ್ಲ. ಏಕೆಂದರೆ " ಬಾವಿಯಲ್ಲಿದ್ದರೇ ಕೊಡದಲ್ಲಿ ಬರುವುದು" ಎಂಬ ನ್ಯಾಯದಂತೆ ತನಗೇ ಇಲ್ಲದವನು ಮತ್ತೊಬ್ಬರಿಗೆ ಹೇಗೆ ಕೊಡಬಲ್ಲನು ? ಸ್ವತಃ ತಾನೇ ದರಿದ್ರನಾಗಿರುವವನು ಮತ್ತೊಬ್ಬರಿಗೆ ಧನವನ್ನು ಕೊಡಬಲ್ಲನೇ ? ತನ್ನ ಹೊಟ್ಟೆಗೇ ಇಲ್ಲದವನು ಪರರಿಗೆ ಅನ್ನದಾನವನ್ನೆಂತು ಮಾಡುವನು? ಅದರಂತೆ ತನಗೇ ಶಾಂತಿ ಇಲ್ಲದವನು ಮತ್ತೊಬ್ಬರಿಗೆ ಹೇಗೆ ಶಾಂತಿಯನ್ನು ಕೊಡುವನು? ಆದುದರಿಂದ ಆತ್ಮಾನುಭವವುಳ್ಳವನೂ ಮತ್ತು ಪರರಿಗೆ ಸರಿಯಾದ ತತ್ತ್ವವನ್ನು ತಿಳಿಸಿ ಸಂಶಯಗಳನ್ನು ನಿವಾರಿಸುವ ಸಾಮರ್ಥ್ಯವುಳ್ಳವನೇ ಸದ್ಗುರುವಾಗುತ್ತಾನೆ. "**ಜೋ ಸದ್ವಸ್ತು ದಾಖವಿ ತೋಚಿ ಸದ್ಗುರು ಜಾಣಾವ**" ಯಾರು ತನಗೆ ತನ್ನ ಸತ್ಯಸ್ವರೂಪವನ್ನು ತೋರಿಸುತ್ತಾರೋ ಅವರೇ ಸದ್ಗುರುವೆಂದು ತಿಳಿಯಬೇಕು.

**ಜೋ ಬ್ರಹ್ಮಜ್ಞಾನ ಉಪದೇಸೀ । ಅಜ್ಞಾನ ಅಂಧಾರೇ ನಿರಸೀ ।**
**ಜೀವಾತ್ಮಯಾ ಪರಮಾತ್ಮಯಾಸೀ । ಐಕ್ಯತಾ ಕರೀ ॥**

**ವಿಘಡಲೇ ದೇವ ಆಣೇ ಭಕ್ತ। ಜೀವ ಶಿವಪಣೆ ದ್ವೈತ।**
**ತಯಾ ದೇವಭಕ್ತಾ ಯೇಕಾಂತ । ಕರೀ ತೋ ಸದ್ಗುರು ॥**
**ಪ್ರಾಣೀ ಮಾಯಾಜಾಳೀ ಪಡಿಲೇ। ಸಂಸಾರದುಃಖೇ ದುಃಖವಲೇ।**
**ಐಸೇ ಜೇಣೇ ಮುಕ್ತ ಕೇಲೇ। ತೋ ಸದ್ಗುರು ಜಾಣಾವಾ ॥**
(ದಾ. 5–2–9, 10, 11)

ಯಾರು ಬ್ರಹ್ಮಜ್ಞಾನವನ್ನು ಉಪದೇಶಮಾಡಿ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುತ್ತಾರೋ, ಮಾಯೆಯೆಂಬ ದೊಡ್ಡ ಪ್ರವಾಹದಲ್ಲಿ ಸಿಕ್ಕಿಕೊಂಡು ಅದರಿಂದ ಬಿಡುಗಡೆಯಾಗಲು ದಾರಿಕಾಣದೆ ದುಃಖಪಡುತ್ತಿರುವ ಜೀವಿಗಳನ್ನು ಯಾರು ಅದರಿಂದ ಮುಕ್ತರನ್ನಾಗಿ ಮಾಡುತ್ತಾರೋ ನಾನು ಜೀವನು ನೀನು ದೇವನು ಎನ್ನುವ ಭೇದಬುದ್ಧಿಯನ್ನು ಹೋಗಲಾಡಿಸಿ **"ವಾಸುದೇವಃ ಸರ್ವಮಿತಿ"** (ಗೀ. 7–19) ಇದೆಲ್ಲವೂ ಪರಮಾತ್ಮಸ್ವರೂಪವೇ **"ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ"** (ಗೀ. 13–2) ಎಂಬಂತೆ ಎಲ್ಲದಕ್ಕೂ ಆಧಾರವಾದ ಎಲ್ಲವನ್ನೂ ತಿಳಿಯುವ ಜನನ ಮರಣವಿಲ್ಲದ, ನಿರ್ವಿಕಲ್ಪ ಎಂದರೆ ಕಲ್ಪನಾರಹಿತವಾದ , ನಿರಾಕಾರವೆಂದರೆ ನಾಮ ರೂಪಗಳಿಲ್ಲದ, ನಿಷ್ಕ್ರಿಯ ಎಂದರೆ ಏನನ್ನೂ ಮಾಡದ, ಪರಮಾನಂದಸ್ವರೂಪಿಯಾದ ಆತ್ಮನೇ ನಾನೆಂಬ ಅನುಭವವನ್ನು ಯಾರು ತಂದುಕೊಡುತ್ತಾರೋ ಅವರೇ ಸದ್ಗುರುವೆಂದು ತಿಳಿಯಬೇಕೆಂಬುದಾಗಿ ಸಮರ್ಥರಾಮದಾಸಸ್ವಾಮಿಗಳು ಹೇಳಿರುತ್ತಾರೆ. ಅವರೇ ತಮ್ಮ ಮನಾಚೇ ಶ್ಲೋಕದಲ್ಲಿ ಈ ರೀತಿ ಹೇಳಿರುತ್ತಾರೆ.

**ಜನೀ ಭಕ್ತ ಜ್ಞಾನೀ ವಿವೇಕೀ ವಿರಾಗೀ।**
**ಕೃಪಾಳೂ ಮನಸ್ವೀ ಕ್ಷಮಾವಂತ ಯೋಗೀ ॥**
**ಪ್ರಭು ದಕ್ಷ ವ್ಯುತ್ಪನ್ನ ಚಾತುರ್ಯ ಜಾಣೇ।**
**ತಯಾಚೇನಿ ಯೋಗೇ ಸಮಾಧಾನ ಬಾಣೇ ॥ 183 ॥**

**ಜನೀ ಭಕ್ತ :** ನಾಸ್ತಿಕನಂತೆ ಅದರಲ್ಲೇನು ಇದರಲ್ಲೇನು ಎಲ್ಲವೂ ಮಿಥ್ಯೆಯಾದ್ದರಿಂದ ದೇವರ ಪೂಜೆಮಾಡುವುದು ಬೇಡ. ಅದು ಕಲ್ಲು ಇದು ಮಣ್ಣು ಅದರಲ್ಲೇನಿದೆ ? ಎನ್ನುವುದು, ನಾನೇ ಬ್ರಹ್ಮನೆಂದು ಜಪ ಧ್ಯಾನ ಬಿಟ್ಟು ಬಿಡುವುದು, ಅಷ್ಟೇ ಅಲ್ಲದೆ ಇತರರಿಗೂ ಬೇಡವೆಂದು ಬೋಧಿಸುವುದು , ಈ ರೀತಿ ಮಾಡದೆ, ಆಚಾರ, ವಿಚಾರ, ನೀತಿ, ನ್ಯಾಯ, ಧರ್ಮಪರತೆ, ಸ್ವಕರ್ಮ, ಅಂತರ್ಬಾಹ್ಯ ಉಪಾಸನೆ ಇವುಗಳನ್ನು ಮಾಡುವವನೂ ಈ ರೀತಿ ಅಂತರಂಗಭಕ್ತನಾಗಿರುವವನೂ, ಎಲ್ಲೆಲ್ಲೂ ಪರಮಾತ್ಮನನ್ನು ಕಾಣುತ್ತಾ ಶ್ರೇಷ್ಠಭಕ್ತನಾಗಿರುವವನೂ ; **ಜ್ಞಾನಿ :** ಎಲ್ಲವೂ ತನ್ನ

ವಿಲಾಸವೇ ; ತನಗಿಂತಲೂ ಭಿನ್ನವಾಗಿ ಮತ್ತೊಂದೇನೂ ಇರುವುದೇ ಇಲ್ಲ, ಮೂರು ಅವಸ್ಥೆಗಳಿಗೂ ಸಾಕ್ಷಿಯಾಗಿ ಎಲ್ಲವನ್ನೂ ಬೆಳಗುವಂಥ ಕೇವಲ ಶುದ್ಧ ಚೈತನ್ಯಸ್ವರೂಪವೇ ತಾನಾಗಿದ್ದೇನೆಂದು ತಿಳಿದುಕೊಂಡು, ಚರಾಚರಾತ್ಮಕವಾದ ಸಮಸ್ತ ಜೀವರಾಶಿಗಳನ್ನೂ ತನ್ನ ಸ್ವರೂಪವಾಗಿ ಕಾಣುವವನೂ ; **ವಿವೇಕೀ :** ಮನಸ್ಸನ್ನು ವಿಕಾರಗೊಳಿಸುವ ಎಂತಹ ಪರಿಸ್ಥಿತಿಯಲ್ಲಾದರೂ ಆ ವಿಕಾರಗಳಿಗೆ ಆಸ್ಪದ ಕೊಡದೆ ಸದಸದ್ವಿವೇಕದಿಂದಿರುವವನೂ ; **ವಿರಾಗಿ :** ಶಬ್ದ ಸ್ಪರ್ಶಾದಿ ವಿಷಯೋಪ ಭೋಗಗಳಲ್ಲಿ ಲೇಷಮಾತ್ರವಾದರೂ ಆಸಕ್ತಿ ಇಲ್ಲದೆ ಮೂರು ಲೋಕದ ಸಾಯುಜ್ಯವು ಸಿಗುವಂಥ ಸಂದರ್ಭದಲ್ಲೂ ಅದಕ್ಕೆ ಆಶೆಪಡದಿರುವವನೂ ಕಾಮಿನೀ ಕಾಂಚನಗಳಲ್ಲಿ ಸ್ವಲ್ಪವಾದರೂ ಮನಸ್ಸಿಲ್ಲದವನೂ ; **ಕೃಪಾಳು :** ಅತ್ಯಂತ ಕೋಮಲ ಹೃದಯವುಳ್ಳವನೂ, ಸಂಸಾರತಾಪದಿಂದ ತಪ್ತರಾಗಿ ತನಗೆ ಶರಣುಬಂದಂಥ ಜನರ ಮೇಲೆ ಅತ್ಯಂತ ದಯೆಗೊಂಡು ಅವರ ಉದ್ಧಾರಕ್ಕಾಗಿ ಸತತವಾಗಿ ನಾನಾ ವಿಧದಿಂದ ಪ್ರಯತ್ನಮಾಡುವವನೂ, ಸಮಸ್ತ ಜೀವರಾಶಿಗಳಲ್ಲೂ ದಯಾಬುದ್ಧಿಯುಳ್ಳವನೂ ; **ಮನಸ್ವೀ:** ಮನೋಜಯವುಳ್ಳವನೂ, ಯಾವಾಗಲೂ ಸ್ವಸ್ವರೂಪಾನುಸಂಧಾನ ಪರಾಯಣನೂ ಎಂದರೆ ನಿರಂತರವೂ ತನ್ನ ನಿಜಸ್ವರೂಪದಲ್ಲೇ ನೆಲೆನಿಂತಿರುವವನೂ; **ಕ್ಷಮಾವಂತ :** ಇತರರು ಮಾಡಿದ ಅಪರಾಧಗಳನ್ನು ಉದಾರ ಮನಸ್ಸಿನಿಂದ ಕ್ಷಮಿಸುವವನೂ ; **ಯೋಗಿ :** ಜ್ಞಾನಯೋಗಪರಾಯಣನೂ; **ಪ್ರಭು :** ಅನನ್ಯಭಕ್ತರ ಸಂರಕ್ಷಣೆ ಮಾಡುವ ಸಾಮರ್ಥ್ಯವುಳ್ಳವನೂ; **ದಕ್ಷ :** ದೇಹೇಂದ್ರಿಯ ಮನೋ ಬುದ್ಧಿಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವುದರಲ್ಲಿಯೂ, ಪರಮಾರ್ಥಸಾಧನೆಗಳನ್ನು ಮಾಡುವುದರಲ್ಲಿಯೂ ಇತರರಿಗೆ ಮಾಡಿಸುವುದರಲ್ಲಿಯೂ ಸ್ವರೂಪನಿಷ್ಠೆಯಲ್ಲೂ ದಕ್ಷತೆಯುಳ್ಳವನೂ; **ವ್ಯುತ್ಪನ್ನ :** ಶಾಸ್ತ್ರಾರ್ಥಗಳನ್ನರಿತವನೂ ; **ಚಾತುರ್ಯ ಜಾಣೇ:** ಸಮಯವರಿತು ಯಾವಾಗ ? ಎಲ್ಲಿ? ಹೇಗೆ ? ಯಾರ್‍ಯಾರ ಹತ್ತಿರ ಹೇಗೆ ವರ್ತಿಸಬೇಕು? ಎನ್ನುವುದನ್ನು ತಿಳಿದುಕೊಂಡು, ತನ್ನದೇ ಸರಿ ಎಂದು ಹಠ ಹಿಡಿಯದೆ ಯಾರು ಏನು ಹೇಳಿದರೂ ಅದರಲ್ಲಿ ಯೋಗ್ಯವಾಗಿರುವುದನ್ನು ಗ್ರಹಿಸುತ್ತಾ ಇತರರಿಗೆ ಯಾವಾಗ ಎಲ್ಲಿ ಹೇಗೆ ಹೇಳಬೇಕು ? ಯಾರ್‍ಯಾರಿಗೆ ಹೇಗೆ ಹೇಗೆ ಹೇಳಿದರೆ ಅವರಿಗೆ ಆತ್ಮನಿಷ್ಠೆಯು ಬರುತ್ತದೆ ; ದೇಹಬುದ್ಧಿಯು ಹೋಗುತ್ತದೆ; ವೈರಾಗ್ಯವು ಬರುತ್ತದೆ, ಎಂಬುವ ಬುದ್ಧಿ ಶಕ್ತಿಯುಳ್ಳವನೂ ಆಗಿರುವನೋ ; **ತಯಾಚೀನಿಯೋಗೀ ಸಮಾಧಾನ ಬಾಣೇ :** ಈ ಮೇಲ್ಕಂಡ ಯೋಗ್ಯತೆಯುಳ್ಳವನಿಂದಲೇ ನಿಜವಾದ ಶಾಂತಿಯು ಸಿಕ್ಕುತ್ತದೆ , ಆತ್ಮನಿಷ್ಠೆಯು ಬರುತ್ತದೆ, ಸಕಲ ದುರ್ಗುಣಗಳೂ ವಿಷಯವ್ಯಾಮೋಹವೂ ಹೋಗುತ್ತವೆ, ಇಂತಹವನನ್ನೇ ಸದ್ಗುರುವೆಂದು ತಿಳಿಯಬೇಕು.

''ಆಚಾರ್ಯಾಃ ತತ್ತ್ವದರ್ಶಿನಃ'' (ಪಂ. 1–32) ''ಜ್ಞಾನಿನಸ್ತತ್ತ್ವ ದರ್ಶಿನಃ'' (ಗೀ. 4–34) ಎಂಬ ಪ್ರಮಾಣಗಳಿಂದ ಆತ್ಮಸ್ವರೂಪವನ್ನು ಸರಿಯಾಗಿ ತಿಳಿದುಕೊಂಡು ಆತ್ಮಾನುಭವವನ್ನುಳ್ಳ ಜ್ಞಾನಿಗಳ ಹತ್ತಿರವೇ ಹೋಗಬೇಕು. ಏತಕ್ಕೆಂದರೆ ಜ್ಞಾನಿಗಳೆಂದು ಹೇಳಿಸಿಕೊಳ್ಳುವವರಿಗೆಲ್ಲ, ವಿದ್ವಾಂಸರಿಗೆಲ್ಲ ಯಥಾರ್ಥವಾಗಿ ಆತ್ಮಾನುಭವವಿರುವುದಿಲ್ಲ ಎಂದರೆ ಆತ್ಮಸಾಕ್ಷಾತ್ಕಾರವಾಗಿರುವುದಿಲ್ಲ ''ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ'' (ಗೀ. 7–19) ಇದೆಲ್ಲವೂ ಪರಮಾತ್ಮಸ್ವರೂಪವೇ ಎಂಬ ಅನುಭವಜ್ಞಾನವುಳ್ಳ ಮಹಾತ್ಮರು ಬಹಳ ಕಡಿಮೆ ಇರತ್ತಾರೆ ಎಂಬುದಾಗಿ ಭಗವಂತನೇ ಹೇಳಿರುತ್ತಾನೆ. ಅಂತಹ ಅನುಭವ ಜ್ಞಾನವುಳ್ಳವರಿಂದಲೇ ತನಗೆ ಸರಿಯಾದ ಜ್ಞಾನವಾಗುತ್ತದೆ, ಉಳಿದವರಿಂದಾಗುವುದಿಲ್ಲ

## 14. ಜ್ಞಾನವನ್ನು ಪಡೆಯಲು ಯಾರು ಯೋಗ್ಯರು ?

**ಪರೀಕ್ಷ್ಯ ಲೋಕಾನ್ಕರ್ಮಚಿತಾನ್ ಬ್ರಾಹ್ಮಣೋ**
**ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ॥** (ಮುಂ. 1–2–12)

ನಾನಾ ವಿಧವಾದ ಕಾಮನೆಗಳಿಂದ ಬಹಳ ಕಷ್ಟಪಟ್ಟು ಶಾಸ್ತ್ರಗಳಲ್ಲಿ ಹೇಳಿದ ಪ್ರಕಾರ ಅನೇಕ ಬಗೆಯ ಕರ್ಮಗಳನ್ನು ಮಾಡಿದರೂ ಸಹ, ಅದರಿಂದ ದೊರೆಯುವಂಥ ಈ ಲೋಕದ ಅಥವಾ ಪರಲೋಕದ ಸುಖಗಳು, ಭೋಗಗಳು ಶಾಶ್ವತವಾದವುಗಳಲ್ಲ, ''ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿ – ನೋಽರ್ಜುನ'' (ಗಿ. 8–16) ಬ್ರಹ್ಮಲೋಕಕ್ಕೆ ಹೋದರೂ ಸಹಿತ ಪುನಃ ಇಲ್ಲಿಗೇ ಬರಬೇಕಾಗುತ್ತದೆ ಎಂಬುದಾಗಿ ಭಗವಂತನೇ ಹೇಳಿರುತ್ತಾನೆ. ಎಲ್ಲಾ ವಿಧವಾದ ಭೋಗಗಳಲ್ಲಿರುವ ದೋಷಗಳನ್ನೂ ವಿವೇಕವಿಚಾರಗಳಿಂದ ಮನಸ್ಸಿಗೆ ತಂದುಕೊಂಡಿರಬೇಕು. ಏತಕ್ಕೆಂದರೆ ಭೋಗಸಾಧನೆಗಳಾದ ವಸ್ತುಗಳನ್ನು ಪಡೆಯುವಾಗಲೂ ಅವುಗಳನ್ನು ರಕ್ಷಣೆಮಾಡುವಾಗಲೂ, ಅವು ಕಡಿಮೆಯಾದರೂ, ಕೊನೆಗೆ ಅವುಗಳನ್ನು ತಾನು ಬಿಟ್ಟು ಹೋಗುವಾಗ ಅಥವಾ ಅವುಗಳೇ ತನ್ನನ್ನು ಬಿಟ್ಟು ಹೋದರೂ ಯಾವಾಗಲೂ ದುಃಖವನ್ನೇ ಅನುಭವಿಸಬೇಕಾಗುತ್ತದೆ.

**ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।**
**ಆದ್ಯಂತವಂತಃ ಕೌಂತೇಯ ನ ತೇಷು ರಮತೇ ಬುಧಃ ॥** (ಗೀ.5–22)

ವಿಷಯಗಳಿಗೂ ಇಂದ್ರಿಯಗಳಿಗೂ ಸಂಬಂಧವಾದಾಗ ಆಗುವಂಥ ಭೋಗಗಳು (ಸುಖಗಳು) ಸಮಸ್ತವೂ ದುಃಖಕ್ಕೇ ಕಾರಣವಾದವುಗಳು. ಏತಕ್ಕೆಂದರೆ

ಇವೆಲ್ಲವೂ ಅವಿದ್ಯೆ ಎಂದರೆ ಅಜ್ಞಾನದಿಂದಲೇ ಹುಟ್ಟಿದವುಗಳು. ಆದುದರಿಂದ ಇವು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕವೆಂಬ ಮೂರು ವಿಧದ ದುಃಖಗಳಿಗೂ ಮೂಲವಾಗಿರುತ್ತವೆ. ಸಂಸಾರದಲ್ಲಿ ಸುಖದ ಗಂಧವೂ ಇರುವುದಿಲ್ಲ. ಸುಖವಿದ್ದಂತೆ ತೋರುತ್ತದೆ ಅಷ್ಟೇ. ಇದು ಕೇವಲ ಭ್ರಮೆಯೇ ಸರಿ. ಇದನ್ನು ತಿಳಿದುಕೊಂಡು ಇಂದ್ರಿಯಗಳನ್ನು ವಿಷಯಗಳಿಂದ ಹಿಂತಿರುಗಿಸಬೇಕು. **''ಆಧೌ ಚ ಮಧ್ಯೇ ಚ ತಥೈವ ಚಾಂತತೋ ಭವಂ ವಿದಿತ್ವಾ ಭಯಶೋಕಕಾರಣಮ್''** (ಅ.ರಾ. 7–5–55) ಸಮಸ್ತವಿಷಯಭೋಗಗಳೂ ಆದಿಯಲ್ಲೂ, ಮಧ್ಯದಲ್ಲೂ, ಅಂತ್ಯದಲ್ಲೂ ಭಯಶೋಕಗಳಿಂದ ತುಂಬಿರುತ್ತವೆ. **''ಅನಿತ್ಯಮಸುಖಂ ಲೋಕಮಿಮಂ''** (ಗೀ. 9–33) ಅನಿತ್ಯವಾದವುಗಳೂ, ಕ್ಷಣಭಂಗುರವಾದವುಗಳೂ, ಸುಖವಿಲ್ಲದವುಗಳೂ ಆಗಿವೆ. **''ದುಃಖಾಲಯಮಶಾಶ್ವತಮ್''** (ಗೀ. 8–15) ದುಃಖಗಳಿಗೆಲ್ಲಾ ತೌರುಮನೆಯಾಗಿವೆ. ಅಷ್ಟೇ ಅಲ್ಲದೆ ಇವು ಆದಿ ಅಂತ್ಯ ಉಳ್ಳವುಗಳು. ಹೇಗೆಂದರೆ ವಿಷಯಸುಖಗಳು ಅನುಭವಿಸುವುದಕ್ಕೆ ಮೊದಲು ಇರುವುದಿಲ್ಲ, ಭೋಗವಾದ ಮೇಲೆ ಹೋಗಿಬಿಡುತ್ತವೆ. ಕನಸಿನ ಸುಖಗಳಂತೆ ನಡುವೆ ಸ್ವಲ್ಪ ಹೊತ್ತು ಮಾತ್ರ ತೋರಿ ಅಡಗುತ್ತವೆ. ಭೋಗಗಳು ಶಾಶ್ವತವಾಗಿ ಇರುವುದಿಲ್ಲ, ಇವು ಅನಿತ್ಯವಾದವುಗಳು. ಆದುದರಿಂದ ಪರಮಾರ್ಥಪ್ರಾಪ್ತಿಯಾಗಬೇಕೆನ್ನುವ ವಿವೇಕಿಯು, ಬ್ರಹ್ಮಾನಂದವನ್ನು ಪಡೆಯಬೇಕೆನ್ನುವ ಬುದ್ಧಿವಂತನು, ದುಃಖದ ಸೋಂಕಿಲ್ಲದ ನಿತ್ಯಸುಖವನ್ನು ಪಡೆಯಬೇಕೆನ್ನುವ ಚತುರನು ವಿಷಯೋಪಭೋಗಗಳಲ್ಲಿ ರಮಿಸುವುದಿಲ್ಲ, ಆಸಕ್ತನಾಗುವುದಿಲ್ಲ, ಇವುಗಳಿಂದ ದೂರವಿರುತ್ತಾನೆ. ತನ್ನ ನಿಜವಾದ ಹಿತವನ್ನರಿಯದ ವಿವೇಕವಿಚಾರಗಳಿಲ್ಲದ ಕೇವಲ ಪಶುಬುದ್ಧಿಯುಳ್ಳ ಮೂಢಮಾನವನೇ ವಿಷಕ್ಕೆ ಸಮಾನವಾದ ವಿಷಯಗಳನ್ನು ಪ್ರೇಮಿಸುತ್ತಾನೆ, ಕಾಮಿಸುತ್ತಾನೆ, ಕೊನೆಗೆ ಅವುಗಳಿಗಾಗಿಯೇ ಪ್ರಾಣವನ್ನೂ ಬಿಡುತ್ತಾನೆ.

ಶಾಸ್ತ್ರಗಳಲ್ಲಿ ನಿಷೇಧಿಸಿರುವಂಥ ಕರ್ಮಗಳನ್ನು ಎಂದರೆ ಮಾಡಬಾರದೆಂದು ಹೇಳಿರುವಂಥ ದುಷ್ಟಕರ್ಮಗಳನ್ನು ಮಾಡಬಾರದು. ಅವು ಯಾವುವೆಂದರೆ ಅನಾಚಾರ, ಅನ್ಯಾಯ, ದ್ರೋಹ, ವಂಚನೆ, ಕಪಟ, ಮೋಸ, ಪರರಿಗೆ ಹಿಂಸೆ ಕೊಡುವುದು, ವ್ಯಭಿಚಾರ ಇವೇ ಮೊದಲಾದವುಗಳು. ಇಂಥ ಕೆಟ್ಟ ಕೆಲಸಗಳನ್ನು ಮಾಡಿದರೆ ಇಹದಲ್ಲಿ ಅಪಮಾನ, ಕಷ್ಟ, ರೋಗವೇ ಮೊದಲಾದ ನಾನಾವಿಧದ ದುಃಖಗಳನ್ನೂ, ಪರದಲ್ಲಿ ಘೋರವಾದ ನರಕವನ್ನೂ ಅನುಭವಿಸಬೇಕಾಗುತ್ತದೆ. ಅಷ್ಟೇ ಅಲ್ಲದೆ ಭೂತ, ಪ್ರೇತ, ಪಿಶಾಚಾದಿಗಳಾಗಿಯೂ, ನಾಯಿ, ನರಿ, ಹಂದಿ, ಕ್ರಿಮಿ,

ಕೀಟಗಳಾಗಿಯೂ ಹುಟ್ಟಿ ಬಹಳ ಘೋರವಾದ ದುಃಖಗಳನ್ನನುಭವಿಸಬೇಕಾಗುತ್ತದೆ. ಆದುದರಿಂದ ದುಷ್ಟಕರ್ಮಗಳಿಂದಾಗುವ ಅನರ್ಥಪರಂಪರೆಗಳನ್ನು ತಾನು ಸ್ವತಃ ವಿಚಾರಮಾಡಿಯೂ ಮತ್ತು ಗುರುಶಾಸ್ತ್ರಗಳಿಂದ ತಿಳಿದುಕೊಂಡವನಾಗಿಯೂ ಹಿಂದೆ ದುಷ್ಟಕರ್ಮಗಳನ್ನು ಮಾಡಿ ಈಗ ಪ್ರತ್ಯಕ್ಷವಾಗಿ ಕಷ್ಟಗಳನ್ನನುಭವಿಸುವವರನ್ನು ನೋಡಿಯೂ ಅವುಗಳಿಂದ ದೂರವಿರಬೇಕು. ಅವುಗಳನ್ನು ಮನಸ್ಸಿನಲ್ಲಿಯೂ ಯೋಚಿಸಬಾರದು. ಏತಕ್ಕೆಂದರೆ ಒಂದು ಸಣ್ಣ ಬೀಜದಿಂದ ಮುಂದಕ್ಕೆ ದೊಡ್ಡ ಮರವಾಗುವಂತೆ, ಒಂದರಿಂದ ಇನ್ನೊಂದು ಇನ್ನೊಂದರಿಂದ ಮತ್ತೊಂದು ಹೀಗೆ ಒಂದಕ್ಕೊಂದು ಕಾರಣಗಳಾಗಿರುತ್ತವೆ. ಈ ವಿಷಯವನ್ನು ಗೀತೆಯಲ್ಲಿ ಅ. 2 ಶ್ಲೋಕ 62ರಿಂದ ಮುಂದಕ್ಕೆ ವಿವರವಾಗಿ ಹೇಳಿದೆ. ಇವೆಲ್ಲವೂ ಮುಂದಕ್ಕೆ ಅಪಹಾಸ್ಯ, ಅಪಮಾನ, ದುಃಖ, ಸಂಕಟ, ದಾರಿದ್ರ್ಯ, ರೋಗ ಕೊನೆಗೆ ಪ್ರಾಣಹಾನಿ ಮೊದಲುಗೊಂಡು ಸಹಸ್ರಾರು ಅನರ್ಥಪರಂಪರೆಗಳಿಂದ ಕೂಡಿಕೊಂಡಿರುತ್ತವೆ.

ಸಮಸ್ತ ವಿಷಯಗಳೂ ನಿಸ್ಸಾರವಾದವುಗಳು. ಮಾಯಾಮಾತ್ರವಾಗಿಯೂ, ಮೃಗಜಲದಂತೆ ಕೇವಲ ಕಲ್ಪಿತವಾಗಿಯೂ, ಗಂಧರ್ವಪಟ್ಟಣದಂತೆಯೂ, ಗಾರುಡಿಯವನ ಆಟದಂತೆಯೂ, ಸಿನೀಮಾದಂತೆಯೂ, ಸ್ವಪ್ನದಂತೆಯೂ, ಕನ್ನಡಿಯೊಳಗಿನ ಗಂಟಿನಂತೆಯೂ, ನೀರಿನಲ್ಲಿ ತೋರಿ ಅಡಗುವ ಗುಳ್ಳೆಗಳಂತೆಯೂ, ಕ್ಷಣಕ್ಷಣಕ್ಕೂ ನಾಶವಾಗುವಂಥ, ಭ್ರಮರೂಪವಾದ, ಅವಿದ್ಯೆಯೇ ಕಾರಣವಾದ, ಧರ್ಮಾಧರ್ಮಗಳಿಂದಲೂ, ಪಾಪಪುಣ್ಯಗಳಿಂದಲೂ ಕೂಡಿರುವಂತಹ, ಹುಟ್ಟು ಸಾವುಗಳಿಗೆ ಮೂಲವಾದ , ನಾನಾ ವಿಧವಾದ ದುಃಖಗಳಿಗೆ ಕಾರಣವಾದ ಸಮಸ್ತ ವಿಷಯಗಳಲ್ಲಿರುವ ದೋಷಗಳನ್ನೂ ವಿವೇಕವಿಚಾರಗಳಿಂದಲೂ, ಅನುಭವದಿಂದಲೂ, ಯುಕ್ತಿಯಿಂದಲೂ ನೋಡಿ ಇಹ ಮತ್ತು ಪರಗಳಲ್ಲಿಯ ಸಮಸ್ತ ಭೋಗಗಳಲ್ಲೂ ಮನಸಾ ವೈರಾಗ್ಯವುಳ್ಳವನಾಗಿರಬೇಕು. **''ಮೋಕ್ಷಮಿಚ್ಛಸಿ ಚೇತ್ ತಾತ! ವಿಷಯಾನ್ ವಿಷವತ್ ತ್ಯೇಜ ! ''** (ಅ. ಸಂ. 1–1). ನೀನು ಮೋಕ್ಷವನ್ನಪೇಕ್ಷಿಸುವುದಾದರೆ ಶಬ್ದಾದಿವಿಷಯಭೋಗಗಳನ್ನು ವಿಷದಂತೆ ಬಿಡಬೇಕು. ನೀನು ವಮನಮಾಡಿದ ವಾಂತಿಯನ್ನೂ, ನೀನು ಬಿಟ್ಟಂತಹ ಮಲವನ್ನೂ ಹೇಗೆ ಕಾಣುತ್ತೀಯೋ ಹಾಗೆ ಸಮಸ್ತ ಜಗತ್ತಿನಲ್ಲಿಯೂ ಹೇಯಬುದ್ಧಿಯುಳ್ಳವನಾಗಿರಬೇಕು. ಇಂಥವನೇ ಸಚ್ಛಿಷ್ಯನಾಗುತ್ತಾನೆ. ಇಂಥವನೇ ಬ್ರಹ್ಮಾನಂದವನ್ನು ಪಡೆಯಲು ಯೋಗ್ಯನಾದ ಅಧಿಕಾರಿಯಾಗುತ್ತಾನೆ. ಇಂಥವನೇ ಮೋಕ್ಷಸಾಮ್ರಾಜ್ಯವನ್ನು ಪಡೆಯಲು ಸಮರ್ಥನಾಗುತ್ತಾನೆ – ಎಂಬುದಾಗಿ ಮುಂಡಕೋಪನಿಷತ್ತು ಸಾರುತ್ತಿದೆ.

# 15. ಜಿಜ್ಞಾಸುವಿನ ಲಕ್ಷಣ

ಸದ್ಗುರುವಿನ ಸಮೀಪಕ್ಕೆ ಹೋಗುವವನು ಹೇಗಿರಬೇಕು ? ಮತ್ತು ಎಂಥವನಿಗೆ ಆ ಗುರುವು ಬೋಧಿಸಿದ ಜ್ಞಾನವು ಸರಿಯಾಗಿ ಇದ್ದದ್ದು ಇದ್ದಹಾಗೆಯೇ ಅನುಭವಕ್ಕೆ ಬರುತ್ತದೆ ? ಎಂದರೆ ಈ ವಿಷಯದಲ್ಲಿ ಶ್ರುತಿಯು ಹೀಗೆ ಹೇಳುತ್ತಿದೆ.

**ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್**
**ಪ್ರಶಾಂತಚಿತ್ತಾಯ ಶಮಾನ್ವಿತಾಯ ।**
**ಯೇನಾಕ್ಷರಂ ಪುರುಷಂ ವೇದ ಸತ್ಯಂ**
**ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್ ॥** (ಮುಂ. 1–2–13)

''**ಪ್ರಶಾಂತಚಿತ್ತಾಯ**'' ಎಂದರೆ ಶುದ್ಧಾಂತಃಕರಣವುಳ್ಳವನಾಗಿ ಎಂದರ್ಥ. ''**ಉಪರತದರ್ಪಾದಿದೋಷಾಯ**'' ಎಂದರೆ ಅಭಿಮಾನ, ಗರ್ವ, ಅವಿವೇಕ, ವಿಷಯಾಸಕ್ತಿ, ಕುತರ್ಕ, ವಿಪರೀತಭಾವನೆ, ದುರಾಗ್ರಹ ಇವೇ ಮೊದಲಾದ ದೋಷಗಳನ್ನು ಕಳೆದುಕೊಂಡವನಾಗಿರಬೇಕು. ಇಂತಹ ಅಂತಃಕರಣವುಳ್ಳವನಿಗೇ ಶುದ್ಧಾಂತಃಕರಣವುಳ್ಳವನೆಂದು ಹೇಳುತ್ತಾರೆ. ''**ಶಮಾನ್ವಿತಾಯ**'' ಎಂದರೆ ಶಮ ದಮಾದಿ ಸಾಧನಚತುಷ್ಟಯ ಸಂಪತ್ತಿಯಿಂದ ಕೂಡಿದವನಾಗಿರಬೇಕು. ''**ಬಾಹ್ಯೇಂದ್ರಿಯೋಪರಮೇಣ ಚ ಯುಕ್ತಾಯ**'' ಎಂದರೆ ಸ್ವೇಚ್ಛೆಯಾಗಿ ಇಂದ್ರಿಯಗಳನ್ನು ಹೊರಗಡೆ ಬಿಡಬಾರದು. ಸಮಸ್ತ ಇಂದ್ರಿಯಗಳನ್ನೂ ನಿಗ್ರಹಿಸಿ ವಿವೇಕದಿಂದ ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವವನಾಗಿರಬೇಕು. ದೇಹವಾಸನೆ, ಶಾಸ್ತ್ರವಾಸನೆ, ಲೋಕವಾಸನೆಗಳು ಲೇಶಮಾತ್ರವೂ ಇರಬಾರದು. ''**ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು**'' (ಗೀ. 13–9) ದಾರೈಷಣ, ಪುತ್ರೈಷಣ ವಿತ್ತೈಷಣಗಳನ್ನು ಬಿಟ್ಟಿರಬೇಕು. ಹೆಂಡತಿ ಮಕ್ಕಳು ಮೊದಲಾದವರಲ್ಲಿ ಆಸಕ್ತಿ ಇರಬಾರದು. ಸತ್ಪುರುಷರಲ್ಲಿ ವಿನಯ, ಭಯ, ಭಕ್ತಿಗಳಿರಬೇಕು. ಅವರ ಮಾತಿನಲ್ಲಿ ನಂಬಿಕೆ ಶ್ರದ್ಧೆ ವಿಶ್ವಾಸ ಉಳ್ಳವನಾಗಿರಬೇಕು. ''**ಸರ್ವತೋ ವಿರಕ್ತಾಯೇತ್ಯೇತತ್**'' ಸಮಸ್ತ ವಿಷಯಗಳಲ್ಲಿರುವ ದೋಷಗಳನ್ನೂ ವಿವೇಕ ವಿಚಾರಗಳಿಂದ ಕಂಡುಕೊಂಡಿರುವವನಾಗಿರಬೇಕು. ಅವುಗಳಲ್ಲಿ ಆಸಕ್ತನಾಗಿರಬಾರದು. ಸಂಪೂರ್ಣ ವಿರಕ್ತಚಿತ್ತವುಳ್ಳವನಾಗಿರಬೇಕು. ಇಂತಹ ವೈರಾಗ್ಯಶೀಲನಾದವನೇ ಜ್ಞಾನಕ್ಕೆ ಯೋಗ್ಯ ಅಧಿಕಾರಿಯು. ಇಂತಹ ಅಧಿಕಾರದಿಂದ ಕೂಡಿಕೊಂಡವನಾಗಿ ಸದ್ಗುರುವಿನ-ಸಮೀಪಕ್ಕೆ ಹೋದರೆ, ಆಗ ಅವನು ಬೋಧಿಸುವಂತಹ ಶ್ರೇಷ್ಠವಾದ ನಾಶರಹಿತವಾದ ಕಣ್ಣಿಗೆ ಕಾಣಿಸದಿರುವಂತಹ ಈ ದೇಹದೊಳಗೇ ಇರುವಂತಹ ಪರಿಪೂರ್ಣವಾದ

ಸತ್ಯವಾದ ಪರಮಾತ್ಮನ ಜ್ಞಾನವು ಬ್ರಹ್ಮವಿದ್ಯೆಯು "ತತ್ತ್ವತಃ" ಎಂದರೆ ಇದ್ದದ್ದು ಇದ್ದಂತೆ ಸರಿಯಾಗಿ ಅನುಭವಕ್ಕೆ ಬರುತ್ತದೆ. ಇದರ ತಾತ್ಪರ್ಯವೇನೆಂದರೆ ಇಂತಹ ಯೋಗ್ಯತೆಯನ್ನು ಸಂಪಾದಿಸಿಕೊಂಡು ಸಚ್ಛಿಷ್ಯನಾಗಿ ಸದ್ಗುರುವಿನ ಸಮೀಪಕ್ಕೆ ಹೋಗಬೇಕು. ಆಗ ಆ ಗುರುವು ಶಿಷ್ಯನನ್ನು ಅಜ್ಞಾನಸಮುದ್ರದಿಂದ ದಾಟಿಸುತ್ತಾನೆ. ಪರಮಾನಂದಸ್ವರೂಪಿಯನ್ನಾಗಿಯೇ ಮಾಡುತ್ತಾನೆ. ಈ ಅಧಿಕಾರವಿಲ್ಲದಿದ್ದರೆ ವಿಪರೀತವಾಗಿ ತಿಳಿದುಕೊಂಡು ಅನರ್ಥವನ್ನನುಭವಿಸಬೇಕಾಗುತ್ತದೆ. ನಿತ್ಯಸುಖದ ಬದಲು ನಿತ್ಯದುಃಖವೇ ಪ್ರಾಪ್ತಿಯಾಗುತ್ತದೆ.

## 16. ಸಚ್ಛಿಷ್ಯನು ಯಾರು ?

ರೋಗಿಯು ವೈದ್ಯನು ಕೊಟ್ಟ ಔಷಧವನ್ನು ತೆಗೆದುಕೊಂಡು ಅವನು ಹೇಳಿದಂತೆ ಪಥ್ಯವನ್ನು ಪಾಲಿಸಿದಾಗಲೇ ಆತನಿಗೆ ರೋಗವು ಹೋಗಿ ಆರೋಗ್ಯವು ಲಭಿಸುತ್ತದೆ. ಅದರಂತೆಯೇ "**ಗುರವೇ ಸರ್ವಲೋಕಾನಾಂ ಭಿಷಜೇ ಭವ ರೋಗಿಣಾಮ್**" ಎಂಬಂತೆ ಈ ಭವರೋಗಿಯು ಎಂದರೆ ಮುಮುಕ್ಷುವು ಭವರೋಗವೈದ್ಯನಾದ ಸದ್ಗುರುವು ಆಜ್ಞೆಮಾಡಿದಂತೆ ನಡೆಯಬೇಕು. ಹಾಗೆ ನಡೆದರೆ ಮಾತ್ರ ತನ್ನ ಭವರೋಗವನ್ನು ಕಳೆದುಕೊಂಡು ಪರಮಾನಂದವೆಂಬ ಆರೋಗ್ಯವನ್ನು ಪಡೆದು ಸುಖಿಸುತ್ತಾನೆ.

**ಮುಖ್ಯ ಸಚ್ಛಿಷ್ಯಾಚೇ ಲಕ್ಷಣ ।**
**ಸದ್ಗುರುವಚನೀ ವಿಶ್ವಾಸ ಪೂರ್ಣ ।**
**ಅನನ್ಯಭಾವೇ ಶರಣ ।**
**ತ್ಯಾ ನಾವ ಸಚ್ಛಿಷ್ಯ ॥** (ದಾ. 5–3–19)

ಮುಖ್ಯವಾಗಿ ಸಚ್ಛಿಷ್ಯನ ಲಕ್ಷಣವೇನೆಂದರೆ ಸದ್ಗುರುವಿನ ವಾಕ್ಯದಲ್ಲಿ ಪರಿಪೂರ್ಣ ವಿಶ್ವಾಸವಿರುವುದು ಮತ್ತು ಅನನ್ಯವಾದ ಭಾವನೆಯಿಂದ ಆತನಿಗೆ ಶರಣು ಹೋಗುವುದು. ಇಂತಹವನಿಗೇ ಸಚ್ಛಿಷ್ಯನೆನ್ನಬೇಕು. ಉಳಿದವರೆಲ್ಲಾ ಹೆಸರಿಗೆ ಮಾತ್ರ ಶಿಷ್ಯರು ಅಷ್ಟೇ.

**ಗುರೂಚೇ ವಚನ ಪ್ರತಿಪಾಳಣೇ।**
**ಹೇ ಮುಖ್ಯ ಪರಮಾರ್ಥಾಚೇ ಲಕ್ಷಣ।**
**ವಚನಭಂಗ ಕರಿತಾ ವಿಲಕ್ಷಣ।**
**ಸಹಜೇ ಚಿ ಜಾಲೇ ॥** (ದಾ. 6–7–10)

**ಸದ್ಗುರು ವಚನ ಹೃದಯೀಧರೀ।**
**ತೋ ಚಿ ಮೋಕ್ಷಾಚಾ ಅಧಿಕಾರೀ।**
**ಶ್ರವಣ ಮನನ ಕೇಲೇ ಚಿ ಕರೀ।**
**ಅತ್ಯಾದರೇ ॥** (ದಾ. 8–8–57)

ಸದ್ಗುರುವಿನ ವಚನವನ್ನು ಅಕ್ಷರಶಃ ಪರಿಪಾಲಿಸುವುದೇ ಮುಖ್ಯವಾಗಿ ಸಚ್ಛಿಷ್ಯನ ಲಕ್ಷಣ, ಎಂದರೆ ಪರಮಾನಂದವನ್ನು ಪಡೆಯಬೇಕೆನ್ನುವ ಮುಮುಕ್ಷುವಿನ ಮುಖ್ಯ ಲಕ್ಷಣ. ಈ ರೀತಿ ಸದ್ಗುರುವಚನವನ್ನು ಹೃದಯದಲ್ಲಿ ಧರಿಸಿ ಅತ್ಯಂತ ಆದರದಿಂದಲೂ ಶ್ರದ್ಧಾಭಕ್ತಿಯಿಂದಲೂ ಬೇಸರವಿಲ್ಲದೆ ಪದೇ ಪದೇ ಶ್ರವಣಮನನಗಳನ್ನು ಮಾಡಿದ್ದನ್ನೇ ಮಾಡುತ್ತಿರಬೇಕು. ಇಂತಹ ಗುರುಪುತ್ರನೇ ಮೋಕ್ಷಸಾಮ್ರಾಜ್ಯವನ್ನು ಪಡೆಯಲು ಯೋಗ್ಯ ಅಧಿಕಾರಿಯಾಗುತ್ತಾನೆ. ಗುರುವು ಹೇಳಿದ್ದನ್ನು ಕೇಳದೆ ಅವನು ಹೇಳಿದಂತೆ ಸಾಧನೆಯನ್ನೂ ಮಾಡದೆ ಅವನ ಆಜ್ಞೆಯನ್ನು ಮೀರಿ ತನ್ನ ಮನಸ್ಸಿಗೆ ಬಂದಂತೆ ನಡೆದರೆ ವಿಪರೀತವಾಗುತ್ತದೆ. ಅನರ್ಥವಾಗುತ್ತದೆ. ಆಗ ಅವನು ಸಹಜವಾಗಿಯೇ ತನ್ನ ನಿಜಾನಂದಕ್ಕೆ, ನಿತ್ಯಸುಖಕ್ಕೆ ದೂರನಾಗುತ್ತಾನೆ. ಎಂದರೆ ಪರಮಶಾಂತಿಯು ದೊರೆಯುವುದಿಲ್ಲ

**ಅವಿಶ್ವಾಸೇ ಕಾಸ ಸೋಡಿಲೀ।**
**ಐಸೀ ಬಹುತೇಕ ಭಾವೀ ಬುಡಾಲೀ**
**ನಾನಾ ಜಳಚರೀ ತೋಡಿಲೀ।**
**ಮಧ್ಯೇ ಚಿ ಸುಖದುಃಖೇ ॥** (ದಾ. 5–3–37)

ಗುರುವಿನ ವಾಕ್ಯದಲ್ಲಿ ಅವಿಶ್ವಾಸ ಮಾಡಿ ಅವನನ್ನು ಬಿಟ್ಟರೆ ಏನಾಗುತ್ತೆಂದರೆ, ಹೀಗೆ ಮಾಡಿ ಹಿಂದಕ್ಕೆ ಬಹಳ ಜನರು ಸಂಸಾರಸಮುದ್ರದಲ್ಲಿ ಮುಳುಗಿ ಹೋಗಿರುತ್ತಾರೆ. ಅದರಲ್ಲಿರುವ ಕಾಮಕ್ರೋಧಾದಿ ಜಲಚರಗಳಿಗೆ ಸಿಕ್ಕಿ ಭಯಂಕರ ವಾದ ದುಃಖವನ್ನನುಭವಿಸಿರುತ್ತಾರೆ. ಹುಟ್ಟುಸಾವುಗಳನ್ನು ಹೊಂದಿ ಬಹಳ ಕಷ್ಟವನ್ನನುಭವಿಸಿದ್ದಾರೆ.

ಯಾ ಕಾರಣೇ ದೃಢ ವಿಶ್ವಾಸ ।
ತೋ ಚಿ ಜಾಣಾವಾ ಸಚ್ಛಿಷ್ಯ ।
ಮೋಕ್ಷಾಧಿಕಾರೀ ವಿಶೇಷ ।
ಅಗ್ರಗಣ್ಯ ॥ (ದಾ. 5–3–38)

ಆದುದರಿಂದ ಎಂತಹ ಸಂದರ್ಭದಲ್ಲೂ ಗುರುವಿನಲ್ಲಿ ಮತ್ತು ಅವನ ವಾಕ್ಯದಲ್ಲಿ ಅವಿಶ್ವಾಸಮಾಡದೆ ದೃಢವಾದ ಪೂರ್ಣವಿಶ್ವಾಸವುಳ್ಳವನೇ ಸಚ್ಛಿಷ್ಯನು. ಅವನೇ ವಿಶೇಷವಾಗಿ ಮೋಕ್ಷಕ್ಕೆ ಉತ್ತಮ ಅಧಿಕಾರಿಯಾಗುತ್ತಾನೆ. ತಾಯಿಯು ತನ್ನ ಮಕ್ಕಳನ್ನು ಬೈದಾಗ ಮಕ್ಕಳಿಗೆ ತಾಯಿಯ ವಿಷಯದಲ್ಲಿ ವಿಪರೀತವಾಗಿ ತೋರುತ್ತದೆ. ಆದರೆ ತಾಯಿಯು ಎಷ್ಟು ಬೈದರೂ ಹೊಡೆದರೂ ಅವಳಿಗೆ ತನ್ನ ಮಕ್ಕಳ ವಿಷಯದಲ್ಲಿ ಅವರ ಶ್ರೇಯಸ್ಸಿನ ಗುರಿಯೊಂದೇ ಅಲ್ಲದೆ ಮತ್ತಾವ ದುಷ್ಟಹೇತುವೂ ಯಾವರೀತಿಯಾಗಿ ಇರುವುದಿಲ್ಲವೋ , ಅದರಂತೆಯೇ ಸದ್ಗುರುವು ತನ್ನ ಭಕ್ತನಲ್ಲಿರುವ ದೋಷಗಳನ್ನೂ ದುರ್ಗುಣಗಳನ್ನೂ, ವಿಷಯಾಸಕ್ತಿಯನ್ನೂ, ಜಗತ್ತಿನಲ್ಲಿರುವ ಸತ್ಯತ್ವಬುದ್ಧಿಯನ್ನೂ, ದೇಹಾಭಿಮಾನವನ್ನೂ ಹೋಗಲಾಡಿಸಿ ಆತನನ್ನು ಪರಿಪೂರ್ಣನನ್ನಾಗಿ ಎಂದರೆ ತನ್ನಂತೆಯೇ ಮಾಡಿಕೊಳ್ಳುವುದಕ್ಕಾಗಿ ನಾನಾ ವಿಧವಾಗಿ ಸಮಯವರಿತು ಬೈಯುತ್ತಾನೆ, ಕಠಿನಶಬ್ದಗಳನ್ನಾಡುತ್ತಾನೆ. ಆದರೆ ಅದರಲ್ಲಿ ಅವನಿಗೆ ಯಾವ ಸ್ವಾರ್ಥವಾಗಲೀ, ದುಷ್ಟಹೇತುವಾಗಲೀ ಇರುವುದಿಲ್ಲ. ತನ್ನ ಭಕ್ತನು ಪರಿಪೂರ್ಣಸ್ಥಿತಿಯನ್ನು ಪಡೆಯಲೀ, ಸಕಲದೋಷಗಳನ್ನೂ, ವಿಷಯಾಸಕ್ತಿಯನ್ನೂ ದೇಹಾಭಿಮಾನವನ್ನೂ ಬಿಟ್ಟು ತನ್ನಂತೆಯೇ ಸದಾ ಪರಮಾನಂದವನ್ನನುಭವಿಸಲಿ ಎಂಬ ದಯಾಮಯವಾದ ಹೃದಯದಿಂದ ಸದುದ್ದೇಶದಿಂದಲೇ ನಾನಾವಿಧವಾಗಿ ಹೇಳುತ್ತಾನೆ. ಅವನು ಹೇಳುವ ಮಾತುಗಳು ಮೊದಲು ಕೇಳಲು ಮನಸ್ಸಿಗೆ ಸ್ವಲ್ಪ ವ್ಯಥೆಯನ್ನುಂಟುಮಾಡಬಹುದು. ದೇಹದಲ್ಲಿ ದೊಡ್ಡ ಕುರುವಾದಾಗ ವೈದ್ಯರು ಅದನ್ನು ಶಸ್ತ್ರಚಿಕಿತ್ಸೆಮಾಡಿ ತೆಗೆಯುತ್ತಾರೆ. ಆಗ ಅದನ್ನು ಸಹಿಸುವುದು ಬಹಳ ಕಷ್ಟವಾಗುತ್ತದೆ. ಸ್ವಲ್ಪ ಪ್ರಯತ್ನದಿಂದ ಆ ಕಷ್ಟವನ್ನು ಆಗ ಸಹಿಸಿದರೆ ಮುಂದೆ ಅದರ ಬಾಧೆಯು ತಪ್ಪಿ ಸುಖವಾಗುತ್ತದೆಯಲ್ಲವೆ ? ಅದರಂತೆಯೇ ಭವರೋಗ ವೈದ್ಯನಾದ ಸದ್ಗುರುವು ತನ್ನ ಶಿಷ್ಯನಲ್ಲಿರುವ ದೋಷಗಳನ್ನು ಹೋಗಲಾಡಿಸಲು ಹೇಳುವ ಮಾತುಗಳನ್ನು ಸಾಧಕನಾದನು ಸ್ವಲ್ಪ ವಿವೇಕದಿಂದ ಸಹಿಸಿಕೊಂಡು ಗುರುವಿನ ವಾಕ್ಯದಲ್ಲಿ ವಿಶ್ವಾಸವಿಟ್ಟು ಅವನು ಹೇಳಿದಂತೆ ನಡೆದರೆ, ಆಚರಿಸಿದರೆ, ವಿಚಾರಮಾಡಿದರೆ ಆಗ ಸಮಸ್ತದುಃಖಗಳೂ ಹೋಗುತ್ತವೆ ಪರಮಾನಂದವು ಸಿಕ್ಕುತ್ತದೆ.

## 17. ಆತ್ಮಜ್ಞಾನಕ್ಕೆ ಸಾಧನೆ

ಹಾಗಾದರೆ ಪರಮಾನಂದವನ್ನು ಪಡೆಯಬೇಕೆಂಬ ಇಚ್ಛೆಯುಳ್ಳ ಮುಮುಕ್ಷುವು ಏನುಮಾಡಬೇಕೆಂದರೆ, ಸದ್ಗುರುವು ಹೇಳಿದಂತೆ ತಪ್ಪದೆ ಸಾಧನೆಗಳನ್ನು ಮಾಡಬೇಕು. ಮೊದಲು ಆಸುರೀಸಂಪತ್ತನ್ನು (ಗೀ. 16–4)ಬಿಡಬೇಕು. ದೈವೀಸಂಪತ್ತನ್ನು (ಗೀ. 16–1), ಮತ್ತು ಅಮಾನಿತ್ವಾದಿ ಗುಣಗಳನ್ನೂ (ಗೀ. 13–7), ನಿಜವಾದ ಭಕ್ತನ ಗುಣಗಳನ್ನೂ (ಗೀ. 12–13) ಪ್ರಯತ್ನಪೂರ್ವಕವಾಗಿ ಸಂಪಾದಿಸಬೇಕು. ಕಾಯಿಕ, ವಾಚಿಕ, ಮಾನಸಿಕ ತಪಸ್ಸನ್ನು (ಗೀ. 17–14,15,16) ಮಾಡಬೇಕು. ತನುಮನ ಧನಗಳಿಂದ ಸದ್ಗುರುವಿನ ಸೇವೆಯನ್ನು ಮಾಡಬೇಕು. ಭಗವಂತನು ಆತ್ಮಜ್ಞಾನವನ್ನು ಪಡೆಯುವ ಉಪಾಯವನ್ನು ಈ ವಿಧವಾಗಿ ಹೇಳಿರುತ್ತಾನೆ.

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥** (ಗೀ. 4–34)

ಆತ್ಮಾನುಭವವನ್ನು ಪಡೆದಿರುವಂತಹ ಜ್ಞಾನಿಗಳ ಹತ್ತಿರ ಹೋಗಿ ಮೊದಲು ಕುಲ, ಧನ, ವಿದ್ಯೆ,ಅಧಿಕಾರ ಮೊದಲಾದ ತನ್ನ ಸಮಸ್ತ ಅಭಿಮಾನವನ್ನೂ ಬಿಟ್ಟು ಅವರ ಪಾದಗಳಿಗೆ ದೀರ್ಘವಾಗಿ ಸಾಷ್ಟಾಂಗವಾಗಿ ನಮಸ್ಕಾರವನ್ನು ಮಾಡಬೇಕು. ನಂತರ ಅವರ ಹತ್ತಿರ ನನಗೆ ಬಂಧನವು ಹೇಗಾಯಿತು ? ಮೋಕ್ಷವು ಹೇಗಾಗುತ್ತದೆ? ಜ್ಞಾನವೆಂದರೇನು ? ಅಜ್ಞಾನವೆಂದರೇನು? ಎಂಬುದಾಗಿ ಅತ್ಯಂತ ಭಕ್ತಿಯಿಂದಲೂ ವಿನಯದಿಂದಲೂ ಪ್ರಶ್ನೆಯನ್ನು ಮಾಡಬೇಕು. ತನ್ನ ತನ್ನ ಶಕ್ತಿಗನುಸಾರವಾಗಿ ತನು ಮನ ಧನಗಳಿಂದ ಜ್ಞಾನದಾತನಾದ ಸದ್ಗುರುವಿನ ಸೇವೆಯನ್ನು ಅವನ ಮನಸ್ಸು ಪ್ರಸನ್ನವಾಗುವಂತೆ ಮಾಡಬೇಕು. ಇದರಲ್ಲಿ ವಂಚನೆಯನ್ನು ಮಾಡಬಾರದು. ಏತಕ್ಕೆದಂರೆ ಜ್ಞಾನವೆನ್ನುವ ಮಂದಿರದೊಳಗೆ ಪ್ರವೇಶಿಸಬೇಕಾದರೆ ಸದ್ಗುರು ಸೇವೆಯನ್ನುವುದು ಆ ಮಂದಿರದ ಬಾಗಿಲಿದ್ದಂತೆ. ಬಾಗಿಲನ್ನು ದಾಟದೆ ಹೇಗೆ ಮಂದಿರದೊಳಗೆ ಪ್ರವೇಶಿಸಲು ಸಾಧ್ಯವಿಲ್ಲವೋ ಹಾಗೆ ಸದ್ಗುರುಸೇವೆಯನ್ನು ತ್ರಿಕರಣ ಪೂರ್ವಕವಾಗಿ ಮಾಡಿದಾಗಲೇ ಜ್ಞಾನಕ್ಕೆ ಅಡ್ಡಿಯಾಗಿರುವ ಮೂರು ವಿಧವಾದ ಸಕಲಪ್ರತಿಬಂಧಕಗಳೂ ತೊಲಗಿ ಪರಮಾನಂದವೆಂಬ ಮಂದಿರವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ. ಸದ್ಗುರುವಿನಕೃಪೆಯಿಂದ ಪರಮಾನಂದವು ಪ್ರಾಪ್ತಿಯಾಯಿತೆಂದರೆ ಪುನಃ ವಿಷಯಗಳು ಕಳೆದು ಹೋಗುವಂತೆ ಆ ಬ್ರಹ್ಮಾನಂದವು ಯಾವ ಕಾರಣದಿಂದಲೂ ಎಂದೆಂದಿಗೂ ಹೋಗುವುದಿಲ್ಲ.

## 18. ಗುರುಸೇವೆ ನಾಲ್ಕು ವಿಧ

ವಿದಿತ ಗುರು ಶುಶ್ರೂಷೆಗಳು ನಾ ।
ಲ್ಕದರೊಳಗೆ ಸ್ಥಾನಾಂಗ ಭಾವವು ।
ಸದಮಳಾತ್ಮ ಶ್ರುಶ್ರೂಷೆಯೆನಿಸುತ್ತಿರ್ಪುದದರಲ್ಲಿ ॥ (ರಾ)

1) ಸ್ಥಾನಸೇವೆ 2) ಅಂಗಸೇವೆ 3) ಭಾವಸೇವೆ 4) ಆತ್ಮಸೇವೆ

### 1. ಸ್ಥಾನಸೇವೆ

ಮೊದಲು ಗುರುವಿನ ಪಶುವು ಗ್ರಾಮವ ।
ಸದನ ಧನ ಮೊದಲಾದುದೆಲ್ಲವ ।
ಮುದದಿ ರಕ್ಷಿಸುತಿಹುದೆ ಸ್ಥಲ ಶುಶ್ರೂಷೆಯೆನ್ನಿಸುವುದು ॥ (ರಾ)

ಸ್ವಯಂಪಾಕಗೃಹೇ ಭೋಜನಶಾಳಾ ।
ಸಾಮಗ್ರೀ ಗೃಹೇ ಧರ್ಮಶಾಳಾ ।
ನಿದ್ರಿಸ್ತಾಂಕಾರಣೇ ಪಡಶಾಳಾ । ವಿಶಾಳ ಸ್ಥಳೇ ।
ನಾನಾ ಪರಿಮಳದ್ರವ್ಯಾಂಚೇ ಸ್ಥಳೇ ।
ನಾನಾಖಾದ್ಯ ಫಳಾಂಚೀ ಸ್ಥಳೇ ।
ನಾನಾ ರಸಾಂಚೀ ನಾನಾಸ್ಥಳೇ । ಯೇತ್ನೇ ಕರೀತ ಜಾವೀ ॥
ಸರ್ವಾ ಠಾಹೀ ಅತಿ ಸಾದರ । ಆಣೇ ದಾಸ್ಯತ್ವಾಸ ಹಿ ತತ್ಪರ ।
ಕಾರ್ಯಭಾಗಾಚಾ ವಿಸರ । ಪಡಣಾರ ನಾಹೀ ॥
ಸಡೇ ಸಂಮಾರ್ಜನೇ ಕರಾವಿ । ಉದಕಪಾತ್ರೇ ಉದಕೇ ಭರಾವೀ ।
ವಸನೇ ಪ್ರಕ್ಷಾಲೂನ ಆಣಾವೀ । ಉತ್ತಮೋತ್ತಮೇ ॥

(ದಾ. 4–7–14, 15, 17, 24)

ಅನುಷ್ಠಾನಕ್ಕೆ ಕೂರಲು ಸ್ಥಳ, ಅಡಿಗೆಮನೆ, ಊಟದಮನೆ, ಉಗ್ರಾಣದ ಕೋಣೆ, ಮಲಗುವಮನೆ ಹೀಗೆ ಎಲ್ಲಾ ವಿಧದಿಂದ ಗುರುಗಳಿಗೆ ವಾಸಕ್ಕೆ ಸೌಕರ್ಯವಾಗಿರವಂತೆ ಆಶ್ರಮ ಕಟ್ಟುವುದು. ಅಲ್ಲಿ ನಾನಾ ವಿಧವಾದ ಸುಗಂಧ ದ್ರವ್ಯಗಳನ್ನೂ ಆಹಾರಪದಾರ್ಥಗಳನ್ನೂ ಸಂಗ್ರಹಿಸಿಡುವುದು. ಅಲ್ಲಿ ಯಾವ ವಿಧದಿಂದಲೂ ಗುರುಸೇವೆಗೆ ಕಡಿಮೆಯಾಗದಂತೆ ನೋಡಿಕೊಳ್ಳುವುದು. ತಾನು ಸ್ವತಃ

ನಿಂತು ಎಲ್ಲಾ ಕನಿಷ್ಟತರದ ಸೇವೆಯನ್ನೂ ಮಾಡುವುದು. ಗುರುಗಳಿಗಿರುವ ಆಶ್ರಮದಲ್ಲಿ ತಾನು ಸ್ವತಃ ಕಸತೆಗೆಯುವುದು, ಸಾರಿಸುವುದು ಮತ್ತು ಅಲ್ಲಿಗೆ ಬೇಕಾದ ಇತರ ಕೆಲಸಗಳನ್ನು ಮಾಡುವುದು, ಮಾಡಿಸುವುದು ಇವೆಲ್ಲವೂ ಸ್ಥಾನಸೇವೆಯೆಂದು ಸಮರ್ಥರಾಮದಾಸಸ್ವಾಮಿಗಳು ಹೇಳಿರುತ್ತಾರೆ.

## 2. ಅಂಗಸೇವೆ

**ಗುರುವಿಗಭ್ಯಂಜನವ ಸ್ನಾನವ ।**
**ಗುರುಪಾದಾಂಬುಜ ಸೇವೆ ಭಕ್ತಿಯೊ ।**
**ಳರಿತು ಮಾಡುವದದುವೆ ತನು ಶುಶ್ರೂಷೆಯೆನಿಸುವುದು ।(ರಾ)**

**ಚರಣಕ್ಷಾಳಣೇ ಸ್ನಾನೇ ಆಚಮನೇ ।**
**ಗಂಧಾಕ್ಷತೇ ವಸನೇ ಭೂಷಣೇ ।**
**ಆಸನೇ ಜೀವನೇ ನಾನಾ ಸುಮನೇ । ಧೂಪ ದೀಪ ನೈವೇದ್ಯ ॥**
**ಶಯನಾಕಾರಣೇ ಉತ್ತಮ ಸ್ಥಳೇ । ಜಳೇ ಠೇವಾವೀ ಸುಸೀತಳೇ ।**
**ತಾಂಬೂಲ ಗಾಯನೇ ರಸಾಳೇ ॥ ರಾಗರಂಗೇ ಕರಾವೀ ॥**

(ದಾ. 4–7–21, 22)

ಗುರುಗಳಿಗೆ ಸ್ನಾನಮಾಡಿಸುವುದು, ಅವರ ಬಟ್ಟೆ ತೊಳೆದು ಮಡಿ ಮಾಡುವುದು, ಅವರ ಆಹ್ನಿಕಕ್ಕೆ ಬೇಕಾದ ಸಾಮಗ್ರಿಗಳನ್ನು ತಂದಿಡುವುದು, ಅವರ ಪಾದಪೂಜೆಮಾಡುವುದು, ನಮಸ್ಕಾರಮಾಡುವುದು, ಅವರಿಗೆ ಫಲಹಾರಕ್ಕೆ ಭಿಕ್ಷಕ್ಕೆ ತಯಾರುಮಾಡಿ ಬಡಿಸುವುದು, ಅವರಿಗೆ ಮಲಗಲು ಹಾಸಿಗೆ ಹಾಕಿಕೊಡುವುದು, ಅವರ ಪಾದಸೇವೆ ಮಾಡುವುದು ಮೊದಲಾದವುಗಳೆಲ್ಲಾ ಅಂಗಸೇವೆ ಎನ್ನಿಸುವುವು.

## 3. ಭಾವಸೇವೆ

**ಮಾತಾಪಿತಾ ಕುಲಂ ದೈವಮ್ । ಗುರುದೇವೋ ನ ಸಂಶಯಃ ॥**
**ಗುರುವೆ ಮಾತಾ ಪಿತನು ಬಂಧುವು**
**ಗುರುವೆ ಸಾಕ್ಷಾತ್ ಬ್ರಹ್ಮವೆನ್ನುತ ।**
**ಅರಿತು ಕೊಂಡರೆ ಭಾವಶುಶ್ರೂಷೆಯದೆನಿಸಿಕೊಂಬುವದು ॥ (ರಾ)**

ಗುರುಗಳ ಮನಸ್ಸಿನ ಇಂಗಿತವನ್ನು ಅರಿತು ಅದರಂತೆ ನಡೆಯುವುದು. ಅವರ ಮನಸ್ಸು ಪ್ರಸ್ನವಾಗುವಂತೆ ಆಚರಿಸುವುದು. ಅವರಲ್ಲಿ ಅಚಲವಾದ ಶ್ರದ್ಧಾ

ಭಕ್ತಿಗಳನ್ನಿಟ್ಟು ಅನನ್ಯವಾಗಿ ವರ್ತಿಸುವುದು. ತನ್ನ ಮನಸ್ಸಿನ ಕುಕಲ್ಪನೆಯಿಂದಲೂ ದುಷ್ಟ ಜನರ ಸಂಗದಿಂದಲೂ ಗುರುವಿನ ವಿಷಯದಲ್ಲಿ ಎಂತಹ ಸಂದರ್ಭದಲ್ಲೂ ಯಾವ ಕುಕಲ್ಪನೆ ಎಂದರೆ ವಿಪರೀತಭಾವನೆ ತಾಳದಿರುವುದು **''ಯಥಾ ದೇವೇ ತಥಾ ಗುರೌ''** ಯಾವರೀತಿ ದೇವರಲ್ಲಿ ಭಾವನೆ ಇಟ್ಟಿರುತ್ತೀಯೋ ಅದೇರೀತಿ ಸದ್ಗುರುವಿನಲ್ಲಿ ಭಾವನೆ ಇರಬೇಕು. ಜಗತ್ತಿನಲ್ಲಿ ಗುರುವಿಗಿಂತಲೂ ಹೆಚ್ಚಿನವರು ಯಾರೂ ಇಲ್ಲ. ಸರ್ವಸ್ವವೂ ಸದ್ಗುರುವೇ ಎಂಬ ಭಾವನೆ ದೃಢವಾಗಿರಬೇಕು. ಇದಕ್ಕೆ ಭಾವಸೇವೆ ಎನ್ನುವರು.

## 4. ಆತ್ಮಸೇವೆ

**ಗುರುವರನಿಗಿಷ್ಟರ್ಥ ವಸ್ತುವ ।**
**ಗುರುವು ಕೇಳದ ಮುನ್ನಲೊಪ್ಪಿಸಿ ।**
**ಗುರುವಿಗನುಮೋದಿಸುವದಾತ್ಮ ಶುಶ್ರೂಷೆಯೆನಿಸುವುದು ॥**
**ಧರೆಯೊಳಿಂತರ್ಥಿಯಲಿ ಶ್ರೀಗುರು ।**
**ವರನ ಶುಶ್ರೂಷೆಯನು ಗೆಯ್ಯುತ ।**
**ನಿರುತ ಶ್ರವಣವ ಗೆಯ್ಯುವನೆ ಸಚ್ಛಿಷ್ಯನೆನಿಸುವನು ॥** (ರಾ)

ಹೀಗೆ ನಾಲ್ಕು ವಿಧವಾದ ಗುರುಸೇವೆಯನ್ನು ಮಾಡಿದವರಿಗೆ ಜ್ಞಾನಕ್ಕೆ ಅಡ್ಡಿಯಾಗಿರುವ ಸಕಲ ಪ್ರತಿಬಂಧಕಗಳೂ ತೊಲಗಿ ಚಿತ್ತಶುದ್ಧಿದ್ವಾರಾ ಶುದ್ಧವಾದ ಜ್ಞಾನವು ಪ್ರಾಪ್ತಿಯಾಗುತ್ತದೆ. ಇದಕ್ಕೆ ಪ್ರಮಾಣವು ಪಂಚದಶಿಯಲ್ಲಿ ಈ ರೀತಿ ಇದೆ.

**ನಮಃ ಶ್ರೀಶಂಕರಾನಂದಗುರುಪಾದಾಂಬುಜನ್ಮನೇ ।**
**ಸವಿಲಾಸಮಹಾಮೋಹಗ್ರಾಹಗ್ರಾಸೈಕಕರ್ಮಣೇ ॥** (ಪಂ)

ಸದ್ಗುರುವಿನ ಪಾದವು ಎಂತಹುದೆಂದರೆ (ಶಂ) ಕರೋತೀತಿ **''ಶಂಕರಃ''** ಎಂದರೆ ಶಾಶ್ವತವಾದ ಸುಖರೂಪಿಯನ್ನಾಗಿಯೇ ಮಾಡಿಬಿಡುವುದು ಎಂದರ್ಥ. **''ಶಂಕರಾನಂದ ಏವ ಗುರುಃ''** ಎಂದರೆ ಪರಮಾನಂದರೂಪವಾದ ಆತ್ಮಸ್ವರೂಪವೇ ಗುರು ಎಂದರ್ಥ. ಆದುದರಿಂದಲೇ **''ಗುರುಃ ಸಾಕ್ಷಾತ್ಪರಬ್ರಹ್ಮ''** ಎಂದು ಹೇಳುತ್ತಾರೆ. ಈ ಮಾಯೆಯೆನ್ನುವುದು ಒಂದು ದೊಡ್ಡ ಮೊಸಳೆಯಂತಿದೆ. ಮೊಸಳೆಯು ನದಿಯಲ್ಲಿರುವವರನ್ನು ತನ್ನ ಹತ್ತಿರಕ್ಕೆ ಸೆಳೆದುಕೊಂಡು ಕೊಲ್ಲುವಂತೆ, ಸಂಸಾರರೂಪಿ ಸಮುದ್ರದಲ್ಲಿ ಸಿಕ್ಕಿರುವ ಈ ಜೀವರನ್ನು ಅಜ್ಞಾನರೂಪಿಮೊಸಳೆಯು ತನ್ನ ವಶಪಡಿಸಿಕೊಂಡು ಅನೇಕ ಜನ್ಮಮರಣಗಳಿಗೆ ಕಾರಣವಾಗುವುದು. ನಾವೆಯಲ್ಲಿ

ಕುಳಿತವರು ಹೇಗೆ ಮೊಸಳೆಯ ಭಯವಿಲ್ಲದೆ ಸುಲಭವಾಗಿ ನದಿಯನ್ನು ದಾಟುತ್ತಾರೋ ಹಾಗೆ, ಸದ್ಗುರುಪಾದವೆಂಬ ನಾವೆಯನ್ನು ಆಶ್ರಯಿಸಿದವರು ಸಂಸಾರರೂಪಿ ಸಮುದ್ರವನ್ನು ಯಾವ ಕಷ್ಟವೂ ಇಲ್ಲದೆ ಸುಲಭವಾಗಿ ದಾಟುತ್ತಾರೆ. ಪಾದಕಮಲವೆಂದು ಏತಕ್ಕೆ ಹೇಳಿದರೆಂದರೆ ಭೃಂಗಗಳು ಹೇಗೆ ಕಮಲದಲ್ಲಿರುವ ಮಧುವನ್ನು ತೆಗೆದುಕೊಂಡು ಸುಖಿಸುವವೋ ಹಾಗೆ ಸಚ್ಛಿಷ್ಯರೆಂಬ ಭೃಂಗಗಳು ಸದ್ಗುರುಪಾದವೆಂಬ ಕಮಲವನ್ನು ಆಶ್ರಯಿಸಿರುವುದರಿಂದ ಬ್ರಹ್ಮಾನಂದವೆಂಬ ಮಧುವನ್ನು ತೆಗೆದುಕೊಂಡು ಸುಖಿಸುತ್ತಾರೆ. ಆದುದರಿಂದ ಪಾದಕಮಲವೆನ್ನುತ್ತಾರೆ.

**ತತ್ಪಾದಾಂಬುರುಹದ್ವಂದ್ವಸೇವಾನಿರ್ಮಲಚೇತಸಾಮ್ ।**
**ಸುಖಬೋಧಾಯ ತತ್ತ್ವಸ್ಯ ವಿವೇಕೋಽಯಂ ವಿಧೀಯತೇ ॥**

ಯಾರ ಮನಸ್ಸು ಇಂತಹ ಗುರುಪಾದಸೇವೆಯಿಂದ ಶುದ್ಧವಾಗಿದೆಯೋ ಅಂಥವರಿಗೇ ಜ್ಞಾನವು ಸರಿಯಾಗಿ ಸುಲಭವಾಗಿ ತಿಳಿಯುತ್ತದೆ. ಅಮಾನಿತ್ವಾದಿ ಜ್ಞಾನಸಾಧನೆಗಳಲ್ಲಿ(ಗೀ. 13–8) ಆಚಾರ್ಯೋಪಾಸನೆಯು ಬಹಳ ಶ್ರೇಷ್ಠವಾದದ್ದು. ಎಲ್ಲಾ ಸಾಧನೆಗಳಿಗಿಂತಲೂ ಜ್ಞಾನಬೋಧೆಯನ್ನು ಮಾಡುವ ಸದ್ಗುರುವಿನ ಸೇವೆಯು ಬಹಳ ದೊಡ್ಡ ಸಾಧನೆಯಾಗಿದೆ. ಯಾವ ಸಾಧನೆಗಳನ್ನು ಮಾಡದಿದ್ದರೂ ಸಹ, ಸಮಸ್ತ ಸಾಧನೆಗಳನ್ನೂ ಮಾಡಿದರೆ ಬರುವ ಯೋಗ್ಯತೆಗಿಂತಲೂ ಹೆಚ್ಚಿನ ಯೋಗ್ಯತೆಯು, ಸದ್ಗುರುಸೇವೆಯೊಂದರಿಂದಲೇ ಬರುತ್ತದೆ.

## 19. ಮುಮುಕ್ಷುವಿನ ಮುಖ್ಯ ಕರ್ತವ್ಯ

**ಯಚ್ಛೇದ್ವಾಙ್ಮನಸೀ ಪ್ರಾಜ್ಞಸ್ತದ್ಯಚ್ಛೇಜ್ಜ್ಞಾನ ಆತ್ಮನಿ ।**
**ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇಚ್ಛಾಂತ ಆತ್ಮನಿ ॥**

(ಕಠ.1–3–13)

ವಿವೇಕಿಯಾದವನು ವಾಗಿಂದ್ರಿಯವೇ ಮೊದಲಾದ ಸಮಸ್ತ ಇಂದ್ರಿಯಗಳನ್ನೂ ಮನಸ್ಸಿನಲ್ಲಿ ಲಯಗೊಳಿಸಬೇಕು. ಆ ಮನಸ್ಸನ್ನು ಜ್ಞಾನಸ್ವರೂಪವಾದ ಎಂದರೆ ಎಲ್ಲವನ್ನೂ ಬೆಳಗುವಂಥ ಪ್ರಕಾಶಸ್ವರೂಪವಾದ ಬುದ್ಧಿಯಲ್ಲಿ ಲಯಗೊಳಿಸಬೇಕು. ಆ ಬುದ್ಧಿಯನ್ನು ಅದಕ್ಕೆ ಮೂಲವಾದ ಮಹತ್ತತ್ತ್ವ(ಅಹಂಕಾರ)ದಲ್ಲಿ ಲಯಗೊಳಿಸಬೇಕು. ಮಹತ್ತತ್ತ್ವವನ್ನು ನಿರ್ವಿಶೇಷವಾದ ಎಂದರೆ ಸಮಸ್ತ ಗುಣರಹಿತವಾದ, ಯಾವ ಕ್ರಿಯೆಯೂ ಇಲ್ಲದ, ಎಲ್ಲೆಲ್ಲಿಯೂ ಎಲ್ಲದರ ಒಳಗೂ ಇರುವಂಥ ಸಮಸ್ತರ ಬುದ್ಧಿಗೂ ಸಾಕ್ಷಿಯಾಗಿರುವಂಥ, ಮುಖ್ಯವಾದ , ಪರಿಶುದ್ಧವಾದ, ಶಾಂತಸ್ವರೂಪವಾದ ಆತ್ಮನಲ್ಲಿ ಲಯಗೊಳಿಸಬೇಕು.

ಇದರ ತಾತ್ಪರ್ಯವೇನೆಂದರೆ ಕ್ಷಣಭಂಗುರವಾಗಿರುವ, ಕಲ್ಪಿತವಾದ, ಕೇವಲ ಭ್ರಮೆಯಿಂದಲೇ ತೋರುತ್ತಿರುವಂಥ ಶಬ್ದಸ್ಪರ್ಶಾದಿವಿಷಯಗಳನ್ನು ಹಿಂಬಾಲಿಸಿಕೊಂಡು ವ್ಯರ್ಥವಾಗಿ ಸ್ವೇಚ್ಛೆಯಿಂದ ಹೋಗುತ್ತಿರುವಂಥ ಸಮಸ್ತ ಇಂದ್ರಿಯಗಳನ್ನೂ ವಿವೇಕವಿಚಾರಯುಕ್ತವಾದ ಮನಸ್ಸಿನಿಂದ ತನ್ನ ಹತೋಟಿಗೆ ತೆಗೆದುಕೊಳ್ಳಬೇಕು. ಸ್ವೇಚ್ಛೆಯಾಗಿ ಬಿಟ್ಟರೆ ಏನಾಗುತ್ತದೆಂದರೆ ಒಂದೊಂದು ಇಂದ್ರಿಯಕ್ಕೆ ವಶವಾಗಿಯೇ ಒಂದೊಂದು ಜೀವಿಯು ಪ್ರಾಣವನ್ನು ಬಿಟ್ಟಿರುತ್ತದೆ. ಅವು ಯಾವುವೆಂದರೆ

**ಶಬ್ದಾದಿಭಿಃ ಪಂಚಭಿರೇವ ಪಂಚ**
**ಪಂಚತ್ವಮಾಪುಃ ಸ್ವಗುಣೇನ ಬದ್ಧಾಃ ।**
**ಕುರಂಗಮಾತಂಗಪತಂಗಮೀನ –**
**ಭೃಂಗಾ ನರಃ ಪಂಚಭಿರಂಚಿತಃ ಕಿಮ್ ॥** (ವಿ.ಚೂ)

ಸ್ವತಂತ್ರವಾಗಿ ಸಂಚರಿಸುತ್ತಿದ್ದಂಥ ಜಿಂಕೆಗಳು (ಮತ್ತು ಹಾವು) ಇಂಪಾದ ನಾದವನ್ನು ಕೇಳಿ ಲುಬ್ಧವಾಗಿ ಅದರಲ್ಲಿ ಮೈಮರೆತದ್ದರಿಂದ ಅವು ತಮ್ಮ ಪ್ರಾಣವನ್ನು ಬಿಟ್ಟವು. ಅರಣ್ಯದಲ್ಲಿ ತನ್ನ ಇಷ್ಟಾನುಸಾರವಾಗಿ ವಿಹರಿಸುತ್ತಿದ್ದ ಆನೆಯು ಹೆಣ್ಣಾನೆಯನ್ನು ಕಂಡು ಸ್ಪರ್ಶೇಂದ್ರಿಯಕ್ಕೆ ಮೋಹಿಸಿದ್ದರಿಂದ ಮಾವಟಿಗನ ವಶವಾಗಿ ಅನೇಕತರದ ಘೋರಕಷ್ಟಗಳನ್ನನುಭವಿಸಬೇಕಾಯಿತು. ಪತಂಗದ ಹುಳುವು ಬೆಂಕಿಯನ್ನು ನೋಡಿ ಅದರ ರೂಪಕ್ಕೆ ಮೋಹಿಸಿದ್ದರಿಂದ ಪ್ರಾಣವನ್ನೇ ಬಿಟ್ಟಿತು. ಮೀನು ನಾಲಿಗೆಯ ರುಚಿಗೆ ಮಾರುಹೋಗಿದ್ದರಿಂದ ಬೆಸ್ತರವನ ಗಾಳಕ್ಕೆ ಸಿಕ್ಕಿಕೊಂಡು ಪ್ರಾಣವನ್ನು ಬಿಟ್ಟಿತು. ಭ್ರಮರವು ಸುವಾಸನೆಗೆ ಮರುಳಾಗಿ ಕಮಲದಲ್ಲಿ ಕುಳಿತುಕೊಳ್ಳುತ್ತದೆ. ಹಾಗೆಯೇ ಸಾಯಂಕಾಲವಾಗಲು ಕಮಲವು ಮುದುರಿಕೊಳ್ಳುತ್ತದೆ. ಮೋಹದಿಂದ ಅದು ಒಳಗಡೆಯೇ ಸುವಾಸನೆಯಲ್ಲಿ ಮೈಮರೆತಿರಲು ಆನೆಯು ಬಂದು ಆ ಕಮಲವನ್ನು ಕಿತ್ತು ನೆಲಕ್ಕೆ ಹಾಕಿ ತನ್ನ ಕಾಲಿನಿಂದ ತುಳಿಯುತ್ತದೆ. ಹೀಗಾಗಿ ಆ ಭೃಂಗವು ವಾಸನೆಗಾಗಿ ಪ್ರಾಣವನ್ನು ಬಿಡುತ್ತದೆ.

**ಮಚ್ಚ ಜಿಹ್ವಾಲಂಪಟದಿ, ಗಜ ।**
**ಕಚ್ಚೆಯಲಿ, ನೇತ್ರದಲಿ ಶಲಭ, ಶ್ರು ।**
**ತೇಚ್ಛೆಯಲಿ ದರ್ವೀಕರನು, ಘ್ರಾಣೇಚ್ಛೆಯಲಿ ಭ್ರಮರ ॥**
**ಹುಚ್ಚುಗೊಂಡೊಂದೊಂದು ವಿಷಯಕೆ ।**
**ಮೆಚ್ಚಿ ಕೆಟ್ಟವು ; ಪಂಚವಿಧವಿಷ ।**
**ಯೇಚ್ಛೆಯಲಿ ತಗಲಿರ್ಪ ಮನುಜನು ಕೆಡುವದೇನರಿದು ! ॥ ಅ ॥**

ಹೀಗೆ ಒಂದೊಂದು ಇಂದ್ರಿಯಕ್ಕೆ ವಶವಾಗಿ ಅದನ್ನು ಹಿಂಬಾಲಿಸಿದ್ದರಿಂದಲೇ ಒಂದೊಂದು ಜೀವಿಯು ಪ್ರಾಣವನ್ನು ಬಿಟ್ಟಿರುತ್ತದೆ. ಇನ್ನು ಐದೂ ಇಂದ್ರಿಯಗಳ ವಶನಾಗಿ ಅವುಗಳು ಹೇಳಿದಂತೆ ಕೇಳಿಕೊಂಡು ಅವುಗಳನ್ನು ಹಿಂಬಾಲಿಸಿ ಹೋದರೆ ಈ ಮಾನವನ ಪಾಡೇನು? ಸ್ವಲ್ಪ ಯೋಚಿಸಿ ನೋಡಬೇಕು. ಆದುದರಿಂದ ಇವುಗಳಿಂದಾಗುವ ಅನರ್ಥವನ್ನು ವಿಚಾರಮಾಡಿ ನೋಡಿ ವಿವೇಕಯುಕ್ತವಾದ ಬುದ್ಧಿಯಿಂದ ಸಮಸ್ತ ಇಂದ್ರಿಯಗಳನ್ನೂ ತನ್ನ ವಶಕ್ಕೆ ತೆಗೆದುಕೊಳ್ಳಬೇಕು.

**ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।**
**ಬಹುಶಾಖಾ ಹ್ಯನಂತಾಶ್ಚ ಬುದ್ಧಯೋऽವ್ಯವಸಾಯಿನಾಮ್ ॥**

(ಗೀ.2–41)

ಹೇಗೆ ಬ್ಯಾಟರಿಯನ್ನು ಉಪಯೋಗಿಸುವುದರಿಂದ ಅದರಲ್ಲಿರುವ ವಿದ್ಯುಚ್ಛಕ್ತಿಯು ಕ್ರಮೇಣ ನಷ್ಟವಾಗಿ ಹೋಗಿ ಕೊನೆಗೆ ಅದು ನಿರುಪಯೋಗಿಯಾಗುತ್ತದೆಯೋ ಹಾಗೆಯೇ, ಶಾಖೋಪಶಾಖೆಗಳಾಗಿ ಅನೇಕವಾಗಿರುವ, ಹಲವು ವಿಧಗಳಾದ ಕ್ಷಣಕ್ಷಣಕ್ಕೂ ವಿಕಾರವಾಗುತ್ತಿರುವ ವಿಷಯಗಳ ಚಿಂತನೆಯಿಂದ ಮನಸ್ಸಿನಲ್ಲಿರುವ ಮಾನಸಿಕ ಶಕ್ತಿಯು (ಮನನಶಕ್ತಿಯು) ನಷ್ಟವಾಗಿ ಮನಸ್ಸು ದುರ್ಬಲವಾಗುತ್ತದೆ. ಆದರೆ ಯಾವ ಬದಲಾವಣೆಯನ್ನೂ ಹೊಂದದೆ ಒಂದೇ ಸಮನಾಗಿರುವಂಥ, ಒಂದೇ ಒಂದಾದ, ನಿಶ್ಚಲವಾದ, ಸರ್ವತ್ರವ್ಯಾಪಕವಾದ, ತನ್ನ ಸತ್ಯಸ್ವರೂಪವೇ ಆದ ಆತ್ಮಚಿಂತನೆಯಿಂದ ಮನಸ್ಸಿನಲ್ಲಿ ಒಂದು ವಿಧವಾದ ದಿವ್ಯಶಕ್ತಿಯು ಉತ್ಪನ್ನವಾಗುತ್ತದೆ. ಇದರಿಂದ ಉಪಯೋಗವೇನು? ಎಂದರೆ, ಯಾವ ಹೊರಗಿನ ಭೋಗವಸ್ತುಗಳ ಅಪೇಕ್ಷೆಯೂ ಇಲ್ಲದೆ , ಪರಿಶುದ್ಧವಾದ ನಿರತಿಶಯಾನಂದವನ್ನು ಅನುಭವಿಸಬಹುದು. ಮತ್ತೊಂದು ವಿಶೇಷವೇನೆಂದರೆ **"ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ"** (ಗೀ. 6–22) ಯಾವಾಗಲೂ ಆತ್ಮಚಿಂತನೆಯನ್ನು ಮಾಡುತ್ತಾ ಅದರಲ್ಲಿ ನೆಲೆನಿಂತದ್ದೇ ಆದರೆ ಆಗ ಎಂತಹ ಅಗಾಧವಾದ ದುಃಖವು ಬಂದಾಗ್ಯೂ ಘೋರತರವಾದ ಪರಿಸ್ಥಿತಿಯು ಬಂದಾಗ್ಯೂ ಎದೆಗುಂದದೆ , ಧೀರನಾಗಿರುವ ಯೋಗ್ಯತೆಯು ಬರುತ್ತದೆ. ಅಷ್ಟೇ ಅಲ್ಲದೆ ನಿರಂತರದಲ್ಲೂ ನಿತ್ಯಸುಖವನ್ನು ಅನುಭವಿಸಲು ಸಾಧ್ಯವಾಗುತ್ತದೆ. ಆದುದರಿಂದ ಮುಮುಕ್ಷುವು ಯಾವಾಗಲೂ ಆತ್ಮಾನುಸಂಧಾನವನ್ನೇ ಮಾಡುವ ಅಭ್ಯಾಸವನ್ನು ಮಾಡಬೇಕು ; ಆತ್ಮಸ್ವರೂಪದಲ್ಲೇ ನೆಲೆನಿಲ್ಲಬೇಕು ; ಮನಸ್ಸುಬುದ್ಧಿಗಳನ್ನು ಅದರಲ್ಲೇ ಕರಗಿಸಬೇಕು; ಪರಮಾನಂದವನ್ನು ಪಡೆಯಬೇಕು; ಶಾಶ್ವತವಾದ ಸುಖವನ್ನನುಭವಿಸ

ಬೇಕು ; ಸಮಸ್ತದುಃಖಗಳಿಂದ ಬಿಡುಗಡೆ ಹೊಂದಬೇಕು ; ರಾಗದ್ವೇಷಗಳ, ಕಾಮಕ್ರೋಧಗಳ ಹೊಡೆತದಿಂದ ತಪ್ಪಿಸಿಕೊಳ್ಳಬೇಕು; ಹುಟ್ಟು ಸಾವುಗಳಿಂದ ಬಿಡುಗಡೆಯನ್ನು ಹೊಂದಿ ಮೋಕ್ಷಸಾಮ್ರಾಜ್ಯವನ್ನು ಪಡೆಯಬೇಕು ಎನ್ನುವ ಇಚ್ಛೆಯುಳ್ಳ ವಿವೇಕಿಯು, ಬುದ್ಧಿವಂತನು, ಧೀರನು, ಮುಮುಕ್ಷುವು, ಚತುರನು, ಮುಖ್ಯವಾಗಿ ನಿರಂತರದಲ್ಲೂ ಇದನ್ನೇ ಮಾಡಬೇಕು. ಮತ್ತೊಂದನ್ನು ಮಾಡಬಾರದು. ಅದರ ಗೊಡವೆಗೇ ಹೋಗಬಾರದು. ಈ ವಿಷಯದಲ್ಲಿ ಶ್ರುತಿಯು ಏನು ಹೇಳುತ್ತಿದೆ ಸ್ವಲ್ಪ ನೋಡೋಣ –

**ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಂ**
**ಓತಂ ಮನಃ ಸಹ ಪ್ರಾಣೈಶ್ಚ ಸರ್ವೈಃ।**
**ತಮೇವೈಕಂ ಜಾನಥ ಆತ್ಮಾನಮನ್ಯಾ**
**ವಾಚೋ ವಿಮುಂಚಥಾಮೃತಸ್ಯೈ ೄಷ ಸೇತುಃ ॥** (ಮುಂ. 2–2–5)

ಹೇ ಶಿಷ್ಯರುಗಳಿರಾ ಕೇಳಿರಿ ! ಯಾವ ನಾಶರಹಿತವಾದ ಪರಬ್ರಹ್ಮ ಸ್ವರೂಪದಲ್ಲಿಯೇ ಸ್ವರ್ಗಲೋಕ, ಭೂಲೋಕ, ಅಂತರಿಕ್ಷವೇ ಮೊದಲಾದ ಸಮಸ್ತ ಬ್ರಹ್ಮಾಂಡಗಳೂ ಇವೆಯೋ ; ಇದರೊಂದಿಗೆ ಮನಸ್ಸು ಮತ್ತು ಪ್ರಾಣಗಳ ಸಹಿತವಾಗಿ ಸಮಸ್ತ ಇಂದ್ರಿಯಗಳೂ ಇವೆಯೋ ; ಇಂತಹ ಸಮಸ್ತಕ್ಕೂ ಆಧಾರವಾದ, ಆಶ್ರಯವಾದ , ಮೂಲಸ್ಥಾನವಾದ ಒಂದೇ ಒಂದಾದ ಎರಡನೆಯದಿಲ್ಲದ ತಾನೇ ತಾನಾದ ಆತ್ಮಸ್ವರೂಪಒಂದನ್ನೇ ತಿಳಿದುಕೊಳ್ಳಿರಿ. ಈ ವಿಧದಲ್ಲಿ ತನ್ನ ಮತ್ತು ಸಮಸ್ತ ಜೀವರಾಶಿಗಳ ಮೂಲ ಸ್ವರೂಪವಾದ , ನಿಜಸ್ವರೂಪವೇ ಆದ ಆತ್ಮಸ್ವರೂಪವನ್ನು ತಿಳಿದುಕೊಂಡು ಉಳಿದ ಅವಿದ್ಯಾರೂಪವಾದ, ಭ್ರಮರೂಪವಾದ, ಕೇವಲ ಕಲ್ಪಿತವಾದ ಇತರ ವಿಷಯಗಳನ್ನೆಲ್ಲಾ ಬಿಟ್ಟು ಬಿಡಿರಿ. ಆತ್ಮವಿಷಯವಲ್ಲದ ಇತರ ಮಾತುಗಳನ್ನಾಡಬೇಡಿರಿ. ಅವುಗಳನ್ನು ಕೇಳಬೇಡಿರಿ. ಭೋಗವಸ್ತುಗಳನ್ನು ನೋಡಬೇಡಿರಿ. ಅವುಗಳಿಗಾಗಿ ಕಷ್ಟಪಟ್ಟು ಕತ್ತೆಯಂತೆ ವ್ಯರ್ಥವಾಗಿ ದುಡಿಯಬೇಡಿರಿ. ಅವುಗಳ ದಾಸರಾಗಿ ಅವುಗಳ ಸೇವೆಯನ್ನು ಮಾಡಬೇಡಿರಿ. ಅನಾತ್ಮದ ಧರ್ಮಗಳನ್ನೂ ಕರ್ಮಗಳನ್ನೂ ಸಂಪೂರ್ಣವಾಗಿ ಬಿಟ್ಟು ಬಿಡಿರಿ. ಇದು ಅಮೃತತ್ತ್ವವನ್ನು ಪಡೆಯಲು ಸೇತುವೆಯಾಗಿದೆ ಎಂಬುದಾಗಿ ಶ್ರುತಿಯು ಸಾರುತ್ತಿದೆ.

ಹೇಗೆ ಒಂದು ದೊಡ್ಡನದಿಯನ್ನು ದಾಟಬೇಕೆನ್ನುವವರಿಗೆ ಸೇತುವೆಯು ಅತ್ಯಂತ ಆವಶ್ಯಕವೋ ಮತ್ತು ಸಹಕಾರಿಯೋ ಹಾಗೆ, ಈ ಭವಸಮುದ್ರವನ್ನು ದಾಟಬೇಕೆನ್ನು

ವವರಿಗೆ, ಅಮೃತತ್ವವನ್ನು ಪಡೆಯಬೇಕೆನ್ನುವವರಿಗೆ ಈ ಅಮೃತತುಲ್ಯವಾದ ವಿಚಾರಗಳು ಸೇತುವೆಯಂತಿವೆ. ಈ ಸಂಸಾರ ಮಹಾಸಮುದ್ರವನ್ನು ದಾಟುವುದಕ್ಕೆ ಸೇತುವೆ ಯಾವುದೆಂದರೆ ಆತ್ಮಜ್ಞಾನವೊಂದೇ ಹೊರತು ಬೇರೆ ಯಾವ ದಾರಿಯೂ ಇರುವುದಿಲ್ಲ. **''ತಮೇವ ವಿದಿತ್ವಾ ಅತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಽಯನಾಯ''** (ಶ್ವೇ. 3–8). ಆತ್ಮಸ್ವರೂಪವನ್ನು ತಿಳಿದುಕೊಂಡರೆ ಮಾತ್ರ ಜನ್ಮಮರಣಗಳಿಂದ ಬಿಡುಗಡೆಯನ್ನು ಹೊಂದುತ್ತಾರೆ ; (ಇದನ್ನು ಬಿಟ್ಟು ಮತ್ತೇನನ್ನು ತಿಳಿದುಕೊಂಡರೂ, ಏನುಮಾಡಿದರೂ ಮೋಕ್ಷವಾಗುವುದಿಲ್ಲ) ಇದರ ಹೊರತು ಮೋಕ್ಷವನ್ನು ಹೊಂದಲು ಬೇರೆ ದಾರಿಯೇ ಇರುವುದಿಲ್ಲ ಎಂಬುದಾಗಿ ವೇದಗಳು ಡಂಗುರವನ್ನು ಹೊಡೆಯುತ್ತಿವೆ.

## 20. ಅಧಿಕಾರವು ಹೇಗೆ ಬರುತ್ತದೆ ?

ಆತ್ಮಜ್ಞಾನವನ್ನು ಪಡೆಯಬೇಕಾದರೆ ಚಿತ್ತಶುದ್ಧಿಯಾಗಿರಬೇಕು. ಚಿತ್ತ ಶುದ್ಧಿಯಾದ ಲಕ್ಷಣವೇನೆಂದರೆ ಸಮಸ್ತ ವಿಷಯಗಳಲ್ಲೂ ಪ್ರೀತಿ ಇಲ್ಲದಿರುವುದು; ಮತ್ತು ಜ್ಞಾನವನ್ನು , ಮೋಕ್ಷವನ್ನು, ನಿತ್ಯಸುಖವನ್ನು, ಪರಮಾತ್ಮಪ್ರಾಪ್ತಿಯನ್ನು ಮಾಡಿಕೊಳ್ಳಬೇಕೆಂಬ ಇಚ್ಛೆಯು ಪ್ರಬಲವಾಗಿರುವುದು. ಇಂಥವನೇ ಜ್ಞಾನವನ್ನು ಪಡೆಯಲು ಯೋಗ್ಯ ಅಧಿಕಾರಿಯಾಗುತ್ತಾನೆ. ಸರಿಯಾದ ಅಧಿಕಾರವು ಬರುವುದಕ್ಕೆ ಈ ಕಲಿಯುಗದಲ್ಲಿ ಶ್ರೇಷ್ಠವಾದ ಮತ್ತು ಅತ್ಯಂತ ಸುಲಭವಾದ ಸಾಧನ ಯಾವುದೆಂದರೆ,

**ಭಕ್ತಿಃ ಪ್ರಸಿದ್ಧಾ ಭವಮೋಕ್ಷಣಾಯ**
**ನಾನ್ಯತ್ತತಃ ಸಾಧನಮಸ್ತಿ ಕಿಂಚಿತ್ ॥** (ಅ. ರಾ. 1–1–11)

ಪರಮಾತ್ಮನಲ್ಲಿ ಭಕ್ತಿಯು ಭವಬಂಧನದಿಂದ ಬಿಡುಗಡೆ ಹೊಂದುವುದಕ್ಕೆ ಉತ್ತಮವಾದ ಮತ್ತು ಪ್ರಸಿದ್ಧವಾದ ಸಾಧನ. ಗುರು ಮತ್ತು ದೇವರಲ್ಲಿರುವ ಭಕ್ತಿಗಿಂತಲೂ ಸುಲಭವಾದ ಮತ್ತು ಶ್ರೇಷ್ಠವಾದ ಸಾಧನೆಯು ಮತ್ತೊಂದಿಲ್ಲವೆಂದು ಜಗಜ್ಜನನಿಯಾದ ಪಾರ್ವತೀದೇವಿಯು ಹೇಳಿರುತ್ತಾಳೆ.

## 21. ಭಕ್ತಿ ಎಂದರೇನು?

ಪರಮಾತ್ಮನಲ್ಲಿರುವ ಪ್ರೇಮಕ್ಕೆ ಭಕ್ತಿ ಎನ್ನುತ್ತಾರೆ. ಗಂಡ, ಹೆಂಡತಿ , ಹೊಲ, ಮನೆ, ಹಣ, ಕೀರ್ತಿ ಮೊದಲಾದ ವಸ್ತುಗಳಲ್ಲಿರುವ ಪ್ರೇಮಕ್ಕೆ ಮೋಹವೆನ್ನುತ್ತಾರೆ,

ಕಾಮವೆನ್ನುತ್ತಾರೆ. ಇದು ಮನಸ್ಸನ್ನು ವಿಕಾರಗೊಳಿಸುತ್ತದೆ ಮತ್ತು ಬಂಧನಕ್ಕೂ, ದುಃಖಕ್ಕೂ, ಕಾರಣವಾಗುತ್ತದೆ. ಇದೇ ಜನ್ಮಮರಣಗಳಿಗೂ ಕಾರಣವಾಗುತ್ತದೆ. ಸಮಸ್ತ ಅನರ್ಥಪರಂಪರೆಗಳಿಗೂ ವಿಷಯಗಳಲ್ಲಿರುವ (ಅನಾತ್ಮದಲ್ಲಿರುವ) ಪ್ರೇಮವೇ ಕಾರಣವಾಗುತ್ತದೆ. ಇದೇ ಪ್ರೇಮವನ್ನು ಪರಮಾತ್ಮನಲ್ಲಿ, ಸದ್ಗುರುವಿನಲ್ಲಿ ಬ್ರಹ್ಮನಿಷ್ಠರಲ್ಲಿ, ಮಹಾತ್ಮರಲ್ಲಿ, ಭಗವದ್ಭಕ್ತರಲ್ಲಿ ಇಟ್ಟರೆ ಅದಕ್ಕೇ ಭಕ್ತಿ ಎನ್ನುತ್ತಾರೆ. ಇದು ಮನಸ್ಸನ್ನು ನಿರ್ವಿಕಾರವನ್ನಾಗಿ ಮಾಡುತ್ತದೆ. ಇದು ಸಮಸ್ತ ವಿಧವಾದ ದುಃಖಗಳಿಂದ ಬಿಡುಗಡೆಹೊಂದುವುದಕ್ಕೂ ಮೋಕ್ಷಕ್ಕೂ ಕಾರಣವಾಗುತ್ತದೆ. ಇದು ಹುಟ್ಟು ಸಾವುಗಳಿಂದ ಬಿಡುಗಡೆಯನ್ನು ಹೊಂದಲು ಕಾರಣವಾಗುತ್ತದೆ. ಇದೇ ನಿತ್ಯಸುಖವನ್ನೂ, ಪರಮಶಾಂತಿಯನ್ನೂ ಪಡೆಯಲು ಕಾರಣವಾಗುತ್ತದೆ.

**ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।**
**ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥** (ಭಾ.)

''ಹೇ ಪರಮಾತ್ಮಾ! ಪಾಮರರಿಗೆ ಅವಿವೇಕಿಗಳಿಗೆ ಕಾಮುಕರಿಗೆ ಜಗತ್ತಿನಲ್ಲಿ ಸಂಸಾರದಲ್ಲಿ, ವಿಷಯಗಳಲ್ಲಿ ಮತ್ತು ಅವುಗಳ ಭೋಗಗಳಲ್ಲಿ ಎಷ್ಟು ಪ್ರೇಮವಿದೆಯೋ ಅಷ್ಟೇ ಪ್ರೇಮವು ಸದಾ ಸರ್ವದಾ ಕೇವಲ ಸಚ್ಚಿದಾನಂದಸ್ವರೂಪನಾದ, ಸುಖನಿಧಿ ಯಾದ ನಿನ್ನಲ್ಲಿರುವಂತೆ ಅನುಗ್ರಹಿಸು. ನಿನ್ನಲ್ಲಿರುವ ಆ ಪ್ರೇಮವು ನನ್ನ ಹೃದಯದಿಂದ ಎಂದೆಂದಿಗೂ ಹೋಗದಿರಲಿ'' ಎಂಬುದಾಗಿ ಭಾಗವತೋತ್ತಮನಾದ ಪ್ರಹ್ಲಾದನು ಭಗವಂತನನ್ನು ಅನನ್ಯವಾದ ಭಕ್ತಿಯಿಂದ ಪ್ರಾರ್ಥಿಸಿರುತ್ತಾನೆ.

**ಸಮಾಸಕ್ತಂ ಯಥಾ ಚಿತ್ತಂ ಜಂತೋರ್ವಿಷಯಗೋಚರೇ ।**
**ಯದ್ಯೇವಂ ಬ್ರಹ್ಮಣಿ ಸ್ಯಾತ್ತತ್ಕೋ ನ ಮುಚ್ಯೇತ ಬಂಧನಾತ್ ॥**

ಸಾಮಾನ್ಯವಾಗಿ ಜನರಿಗೆ ಇಂದ್ರಿಯಗಳಿಗೆ ತೋರುವಂತಹ ಶಬ್ದಸ್ಪರ್ಶಾದಿ ವಿಷಯಗಳಲ್ಲಿ ಎಂದರೆ ಹೆಂಡತಿ ಮಕ್ಕಳು ಮೊದಲಾದವರಲ್ಲಿ ಎಷ್ಟು ಪ್ರೇಮವು, ಆಸಕ್ತಿಯು ಇದೆಯೋ ಅಷ್ಟೇ ಪ್ರೇಮವನ್ನು ಪರಮಾತ್ಮನಲ್ಲಿಟ್ಟರೆ ಯಾರು ತಾನೆ, ಬಂಧನಗಳಿಂದ ಬಿಡುಗಡೆಹೊಂದುವುದಿಲ್ಲ? ಎಂದರೆ ಖಂಡಿತವಾಗಿಯೂ ಸತ್ಯವಾಗಿಯೂ ಇಂಥವರು ಸಮಸ್ತಬಂಧನಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾರೆ.

## 22. ಭಕ್ತಿಯು ಸುಲಭವಾದ ಸಾಧನೆ

ಮೊಟ್ಟ ಮೊದಲು ಇತರ ಸಾಧನೆಗಳನ್ನು ಮಾಡುವುದು ಬಹಳ ಜನರಿಗೆ ಕಷ್ಟವಾಗುತ್ತದೆ. ಅವುಗಳಿಗೆ ಸ್ವಲ್ಪ ಅಧಿಕಾರವು ಬೇಕಾಗುತ್ತದೆ. ಆದರೆ ಭಕ್ತಿಯು ಹಾಗಲ್ಲ ಇದಕ್ಕೆ ಯಾವ ಅಧಿಕಾರವೂ ಬೇಡ. ಇದಕ್ಕೆ ಜಾತಿಕುಲಗಳ ಕಟ್ಟಿಲ್ಲ. ಬಾಲಕನಾಗಲೀ, ಯುವಕನಾಗಲೀ, ಮುದುಕನಾಗಲೀ, ಸ್ತ್ರೀಯಾಗಲೀ, ಪುರುಷನಾಗಲೀ, ಶಕ್ತನಾಗಲೀ, ಅಶಕ್ತನಾಗಲೀ, ರೋಗಿಯಾಗಲಿ, ನೀರೋಗಿಯಾಗಲೀ, ಸಮಸ್ತರೂ ಬಹಳ ಸುಲಭವಾಗಿ ಭಕ್ತಿಯನ್ನು ಮಾಡಬಹುದು. ಇದಕ್ಕೆ ಯಾವ ನಿರ್ಬಂಧವೂ ಇರುವುದಿಲ್ಲ. ಪಾಪಿಯಾಗಲೀ ಪುಣ್ಯಾತ್ಮನಾಗಲೀ ಸಮಸ್ತರೂ ಭಗವದ್ಭಕ್ತರಾಗಬಹುದು.

## 23. ಪಾಪಿಗಳೂ ಸಹ ಪುಣ್ಯಾತ್ಮರಾಗುತ್ತಾರೆ

**ಅಪಿ ಚೇತ್ಸುದುರಾಚಾರೋ ಭಜತೇ ಮಾಮನನ್ಯಭಾಕ್ ।**
**ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ ॥** (ಗೀ. 9–30)

''ಎಂಥಾ ದುರಾಚಾರಿಗಳಾಗಲೀ ಘೋರವಾದ ಪಾಪಕಾರ್ಯಗಳನ್ನು ಮಾಡಿದವರಾಗಲೀ, ದೇವದೇವನಾದ ನನ್ನನ್ನು ಅನನ್ಯಭಕ್ತಿಯಿಂದ ಭಜಿಸಿದರೆ, ಧ್ಯಾನಮಾಡಿದರೆ ಅವನನ್ನು ಸಾಧುವೆಂದು ತಿಳಿಯಬೇಕು. ಏತಕ್ಕೆಂದರೆ ಅವನು ಒಳ್ಳೆಯ ಭಾವನೆಯಿಂದ ಮಾಡಿರುತ್ತಾನೆ. ಕೇವಲ ಒಳ್ಳೆಯ ಭಾವನೆಯಿಂದ ಏನು ಪ್ರಯೋಜನವಾಗುತ್ತದೆ ? ಎಂದರೆ , ಅಂತರಂಗದಲ್ಲಿ ಒಳ್ಳೆಯ ಭಾವನೆಯನ್ನು ಮಾಡಿದರೆ ಅದರ ಶಕ್ತಿಯಿಂದ ಅದರ ಪ್ರಭಾವದಿಂದ ಹೊರಗಡೆ ಅವನು ದುರಾಚಾರವನ್ನು ಬಿಟ್ಟು –

**ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।**
**ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥** (ಗೀ. 9–31)

ಶೀಘ್ರವಾಗಿಯೇ ಧರ್ಮದಲ್ಲಿ, ಸದಾಚಾರದಲ್ಲಿ ಆಸಕ್ತಿಯನ್ನು ಪಡೆಯುತ್ತಾನೆ. ಧರ್ಮಾತ್ಮನಾಗುತ್ತಾನೆ. ಸದಾಚಾರಸಂಪನ್ನನಾಗುತ್ತಾನೆ. ಇದರಿಂದ ನಿತ್ಯವಾದ ಶಾಶ್ವತವಾದ ಎಂದೆಂದಿಗೂ ಹೋಗದಂತಹ ಶಾಂತಿಯನ್ನು ಸುಖವನ್ನು ಪಡೆಯುತ್ತಾನೆ. ಮನಸ್ಸು ಪರಮಾತ್ಮನಲ್ಲಿಯೇ ನೆಲೆನಿಲ್ಲುತ್ತದೆ. ಅರ್ಜುನನೇ ಕೇಳು ! ಈ ವಿಧದಲ್ಲಿ ನನ್ನಲ್ಲಿಯೇ ಮನಸ್ಸನ್ನಿಟ್ಟ ಭಕ್ತನು ಸತ್ಯವಾಗಿ ಎಂದಿಗೂ ಕೆಡುವುದಿಲ್ಲ; ಹಾಳಾಗುವುದಿಲ್ಲ

ಇದರಲ್ಲಿ ಸಂದೇಹ ಬೇಡ. ಇದು ನಿಶ್ಚಯವೆಂದು ನೀನು ಪ್ರತಿಜ್ಞೆಮಾಡು'' ಎಂಬುದಾಗಿ ಭಗವಂತನೇ ಭಕ್ತಿಯ ಮಹತ್ವವನ್ನು ಮನಸಾ – ಅಪಾರವಾಗಿ ಕೊಂಡಾಡಿರುತ್ತಾನೆ.

ತುಳಸೀದಾಸನು ಎಂತಹ ಕಾಮುಕನು ! ಅವನು ಪರಮಾತ್ಮನನ್ನು ಪ್ರೇಮಿಸಿದ್ದರಿಂದ ಪರಮಪಾವನನಾದನು. ವಾಲ್ಮೀಕಿಯು ಎಂತಹ ಪಾಪಿ ! ಅವನು ರಾಮಭಕ್ತಿಯಿಂದ ಮಹಾತ್ಮನಾದನು. ಅಜಾಮಿಳನು ಎಂತಹ ದುರಾಚಾರಿಯು ! ಅವನೂ ಸಹ ಭಗವಂತನ ನಾಮಸ್ಮರಣೆಯಿಂದ ಉದ್ಧಾರವಾದನು. ಆದುದರಿಂದ ಭವಬಂಧನದಿಂದ ಬಿಡುಗಡೆಹೊಂದಲು ಭಕ್ತಿಯು ಬಹಳದೊಡ್ಡ ಉಪಾಯವು. ಇದಕ್ಕಿಂತಲೂ ಉತ್ತಮವಾದ ಸಾಧನೆಯು ಮತ್ತೊಂದಿರುವುದಿಲ್ಲ. ಭಗವದ್ಭಕ್ತಿಯಿಂದ ಸಮಸ್ತ ಇಷ್ಟಾರ್ಥಗಳೂ ನೆರವೇರುತ್ತವೆ, ಬದ್ಧನು ಮುಮುಕ್ಷುವಾಗುತ್ತಾನೆ. ಮುಮುಕ್ಷುವು ಸಾಧಕನಾಗುತ್ತಾನೆ. ಸಾಧಕನು ಮುಕ್ತನಾಗುತ್ತಾನೆ. ಮುಕ್ತನು ಸದಾ ಆನಂದವನ್ನನುಭವಿಸುತ್ತಾನೆ. ತನ್ನ ಭಕ್ತನನ್ನು ಪರಮಾತ್ಮನು ಸದಾ ರಕ್ಷಿಸುತ್ತಾನೆ. ಭಕ್ತಿಯಿಂದ ಸಮಸ್ತಕಷ್ಟಗಳೂ, ಎಲ್ಲಾ ವಿಧವಾದ ದುಃಖಗಳೂ, ಅಸಂಖ್ಯಾತ ಭಯಗಳೂ ದೂರವಾಗುತ್ತವೆ. ತಾಯಿಯನ್ನು ಆಶ್ರಯಿಸಿಕೊಂಡು ಹೋಗುವ ಮಗುವು ಹೇಗೆ ಯಾವ ಅಪಾಯವೂ ಇಲ್ಲದೆ ದಾರಿತಪ್ಪದೆ ಗಮ್ಯಸ್ಥಾನವನ್ನು ಸುಲಭವಾಗಿ ಪಡೆಯುತ್ತದೆಯೋ ಹಾಗೆಯೇ, ಪರಮಾತ್ಮನನ್ನು ಆಶ್ರಯಿಸಿ ಮೋಕ್ಷಕ್ಕಾಗಿ ಸಾಧನೆಯನ್ನು ಮಾಡಿದರೆ ಆಗ ಯಾವ ಅಪಾಯವೂ ಇಲ್ಲದೆ, ದಾರಿ ತಪ್ಪದೆ, ಸುಲಭ ವಾಗಿ ಮೋಕ್ಷವನ್ನು ಖಂಡಿತವಾಗಿಯೂ ಪಡೆಯುತ್ತಾರೆ.

## 24. ಸಮಸ್ತವೂ ಪರಮಾತ್ಮನ ಸೇವೆ

ಪರಮಾತ್ಮನು ಸಮಸ್ತ ಜೀವರಾಶಿಗಳಲ್ಲೂ ಇದ್ದಾನೆ. ಅಷ್ಟೇ ಏಕೆ ? ಎಲ್ಲವೂ ಪರಮಾತ್ಮಸ್ವರೂಪವೇ ಎಂಬುದಾಗಿ ವೇದಶಾಸ್ತ್ರಗಳು ಸಾರುತ್ತಿವೆ. ಮಹಾತ್ಮರು ಅದನ್ನೇ ಬೋಧಿಸುತ್ತಾರೆ. ಆದುದರಿಂದ ಎಲ್ಲರಲ್ಲೂ ಪರಮಾತ್ಮನ ಭಾವನೆಯನ್ನು ಮಾಡಬೇಕು. ಹೀಗೆ ಎಲ್ಲರಲ್ಲೂ ಪರಮಾತ್ಮನನ್ನು ಕಾಣುತ್ತಿದ್ದರೆ ಆಗ ಮೋಸ ದ್ರೋಹ ವಂಚನೆ ಅನ್ಯಾಯ ಹಿಂಸೆ ಇವೆಲ್ಲವೂ ಮಾಯವಾಗುತ್ತವೆ. ಮನಸ್ಸು ಶುದ್ಧವಾಗುತ್ತದೆ. ಆಗ ಸಹಜವಾಗಿ ನಿನ್ನ ಮೇಲೆ ಭಗವಂತನ ಕೃಪೆಯಾಗುತ್ತದೆ. ಯಾರಿಗೆ ಏನು ಮಾಡಿದರೂ ಸಹ ಪರಮಾತ್ಮನಿಗೇ ಮಾಡಿದೆನೆಂದು ತಿಳಿಯಬೇಕು. ನನ್ನ ಹೆಂಡತಿಗೆ ಮಾಡುತ್ತೇನೆ, ನನ್ನ ಗಂಡನಿಗೆ ಮಾಡುತ್ತೇನೆ, ನನ್ನ ಮಕ್ಕಳಿಗೆ ಮಾಡುತ್ತೇನೆ, ನನ್ನ ಬಂಧುಗಳಿಗೆ ಮಾಡುತ್ತೇನೆ ಎಂಬುದಾಗಿ ತಿಳಿದುಕೊಂಡು ಮಾಡಿದರೆ ಅದು ದುಃಖಕ್ಕೂ

ಬಂಧನಕ್ಕೂ ಕಾರಣವಾಗುತ್ತದೆ. ಅದು ಜನ್ಮಮರಣಗಳಿಗೆ ಕಾರಣವಾಗುತ್ತದೆ. ನೀನು ಮಾಡುವುದು ಎಲುಬಿನ ಗೊಂಬೆಯಾದ ಜಡದೇಹಕ್ಕಲ್ಲ. ಜಡವಾದ ದೇಹಕ್ಕೇ ಮಾಡುವುದಾಗಿದ್ದರೆ, ಅದನ್ನೇ ನೀನು ಪ್ರೇಮಿಸುವುದಾಗಿದ್ದರೆ, ಹೆಣಕ್ಕೂ ಮಾಡಬೇಕು. ಅದನ್ನೂ ಪ್ರೇಮಿಸಬೇಕು. ಹಾಗೆ ಯಾರೂ ಹೆಣವನ್ನು ಪ್ರೇಮಿಸುವುದಿಲ್ಲ. ಅದನ್ನು ಕಂಡರೆ ಭಯಪಡುತ್ತಾರೆ. ಹಾಗಾದರೆ ಮಾಡುವುದಾಗಲೀ, ಪ್ರೇಮಿಸುವುದಾಗಲೀ, ಯಾರಿಗೆ ಎಂದರೆ, ಜಡವಾದ ದೇಹದಲ್ಲಿರುವ ಚೈತನ್ಯಸ್ವರೂಪನಾದ ಪರಮಾತ್ಮನಿಗೇ. ಆದುದರಿಂದ ಗಂಡ, ಹೆಂಡತಿ, ಮಕ್ಕಳು, ಬಂಧುಗಳು ಅತಿಥಿಗಳು ಮೊದಲಾದ ಯಾರಿಗೇ ಮಾಡು ; ಯಾರನ್ನೇ ಪ್ರೇಮಿಸು ; ಯಾರನ್ನೇ ಆದರಿಸು ; ಆದರೆ ಈ ರೂಪದಲ್ಲಿ ಪರಮಾತ್ಮನಿಗೇ ಮಾಡುತ್ತಿದ್ದೇನೆ ; ಪರಮಾತ್ಮನ ಸೇವೆಯನ್ನೇ ಮಾಡುತ್ತಿದ್ದೇನೆ ; ಪರಮಾತ್ಮನನ್ನೇ ಪ್ರೇಮಿಸುತ್ತಿದ್ದೇನೆ ಎಂಬುದಾಗಿ ಎಲ್ಲರಲ್ಲೂ ಪರಮಾತ್ಮನಿದ್ದಾನೆ. ಅಷ್ಟೇ ಅಲ್ಲ, ಎಲ್ಲರೂ ಪರಮಾತ್ಮಸ್ವರೂಪವೇ ಎಂಬುದಾಗಿ ಭಾವಿಸು.

ಬರುವಾಗ ಯಾರೂ ಜೊತೆಯಲ್ಲಿ ಏನನ್ನೂ ತರುವುದಿಲ್ಲ. ಹೋಗುವಾಗ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಇದೆಲ್ಲವನ್ನೂ ಪರಮಾತ್ಮನೇ ಕೊಟ್ಟಿರುತ್ತಾನೆ. ಈ ಸಮಸ್ತವೂ ಅವನದೇ, ಇಲ್ಲಿ ನಿನ್ನದು ಲೇಶಮಾತ್ರವೂ ಇರುವುದಿಲ್ಲ. ಸಮಸ್ತ ಜಗತ್ತಿಗೂ ಯಜಮಾನನು ಪರಮಾತ್ಮನು. ನೀನು ಅವನ ಸೇವಕನು. ಪರರ ಆಸ್ತಿಯನ್ನು ನನ್ನದೆಂದರೆ ಅವರು ಸುಮ್ಮನೆ ಬಿಡುತ್ತಾರೆಯೇ ? ಅವರಿಂದ ಪರಿಪರಿ ವಿಧದಲ್ಲಿ ಕಷ್ಟಗಳನ್ನನುಭವಿಸಬೇಕಾಗುತ್ತದೆ. ಅದರಂತೆಯೇ ಪರಮಾತ್ಮನ ಸ್ವತ್ತಾದ ಇದೆಲ್ಲವನ್ನೂ ನನ್ನದೆಂದರೆ ಅವನು ಸುಮ್ಮನೆ ಬಿಡುತ್ತಾನೆಯೇ? ಇದಕ್ಕಾಗಿಯೇ ಅವನು ಪರಿಪರಿ ವಿಧದಲ್ಲಿ ಕಷ್ಟಗಳನ್ನು ಕೊಡುತ್ತಾನೆ. ಈ ಅಪರಾಧಕ್ಕಾಗಿಯೆ ನಾನಾ ವಿಧವಾದ ದುಃಖಗಳನ್ನನುಭವಿಸಬೇಕಾಗುತ್ತದೆ. ಆದುದರಿಂದ ಇನ್ನು ಮುಂದೆ ನನ್ನ ಸಂಸಾರ, ನನ್ನ ಕುಟುಂಬ, ನನ್ನ ಮನೆ, ನನ್ನ ಐಶ್ವರ್ಯ ಎಂಬುವ ವೃಥಾ ಅಭಿಮಾನವನ್ನು ಬಿಟ್ಟುಬಿಡು. ಇದೆಲ್ಲವೂ ಪರಮಾತ್ಮನದೇ ; ಇದೆಲ್ಲಕ್ಕೂ ಭಗವಂತನೇ ಮಾಲೀಕನು; ನಾನು ಅವನ ಸೇವಕನು; ನನಗೆ ದೇವರು ಈ ಸೇವೆಯನ್ನು ಕೊಟ್ಟಿರುತ್ತಾನೆ ; ನಾನು ಅವನ ಸೇವೆಯನ್ನು ಮಾಡುತ್ತಿದ್ದೇನೆ. –ಎಂಬುದಾಗಿ ತಿಳಿದುಕೊ, ಪದೇ ಪದೇ ಸ್ಮರಣೆಗೆ ತಂದುಕೋ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥ (ಗೀ. 9–27)

''ಪ್ರತಿನಿತ್ಯವೂ ನೀನು ನಿನ್ನ ಜೀವನಕ್ಕಾಗಿ ಯಾವ ಯಾವ ಕೆಲಸಗಳನ್ನು ಮಾಡುತ್ತೀಯೋ, ಯಾವ ಯಾವ ಸಮಯದಲ್ಲಿ ಹೊಟ್ಟೆ ತುಂಬುವುದಕ್ಕಾಗಿ ಏನನ್ನು ಊಟ ಮಾಡುತ್ತೀಯೋ, ಬ್ರಾಹ್ಮಣಾದಿ ಸತ್ಪಾತ್ರರಲ್ಲಿ ಏನನ್ನು ದಾನಮಾಡುತ್ತೀಯೋ, ಕಾಯಿಕ ವಾಚಿಕ ಮಾನಸಿಕ ಎಂಬ ಯಾವ ತಪಸ್ಸನ್ನು ಮಾಡುತ್ತಿಯೋ ಅದೆಲ್ಲವನ್ನೂ ಪರಮಾತ್ಮನಿಗೆ ಸಮರ್ಪಣೆಯಾಗಲಿ ಎಂಬುದಾಗಿ ನನಗೇ ಅರ್ಪಿಸು'' ಎಂಬುದಾಗಿ ಭಗವಂತನೇ ಹೇಳಿರುತ್ತಾನೆ. ಸೇವಕನು ಹೇಗೆ ತಾನು ಮಾಡಿದ ಸಮಸ್ತಕೆಲಸಗಳನ್ನೂ ತನ್ನ ಯಜಮಾನನಿಗೇ ಸಮರ್ಪಿಸುತ್ತಾನೆಯೋ ಹಾಗೆ, ನೀನು ಯಾವ ಕೆಲಸ ಕಾರ್ಯಗಳನ್ನು ಮಾಡಿದರೂ ಸಹ ಅದೆಲ್ಲವನ್ನೂ ಪರಮಾತ್ಮನಿಗೇ ಸಮರ್ಪಣೆಯನ್ನು ಮಾಡು. ಏತಕ್ಕೆಂದರೆ ಇಲ್ಲಿ ನಿನ್ನದು ಏನೂ ಇರುವುದಿಲ್ಲ, ಇದೆಲ್ಲವೂ ಪರಮಾತ್ಮನದೇ ಆಗಿರುತ್ತದೆ. ಯಾವುದಕ್ಕೆ ನಾನು ನಾನೆಂದು ತಿಳಿದುಕೊಂಡಿರುತ್ತೀಯೋ, ಯಾವುದನ್ನು ಬಹಳವಾಗಿ ಪ್ರೇಮಿಸುತ್ತೀಯೋ ಅಂತಹ ಈ ಶರೀರವೇ ನಿನ್ನದಲ್ಲ. ಕೊನೆಗೆ ಇದನ್ನೂ ಸಹ ಇಲ್ಲಿಯೇ ಬಿಟ್ಟು ಹೋಗಬೇಕಾಗುತ್ತದೆ. ಇದೂ ಸಹ ಪರಮಾತ್ಮನದೇ ಆಗಿರುತ್ತದೆ. – ಎಂದಮೇಲೆ ಇಲ್ಲಿ ನಿನ್ನದು ಎನ್ನುವುದು ಯಾವುದಿದೆ ? ಸ್ವಲ್ಪ ವಿಚಾರ ಮಾಡಿ ನೋಡು. ಹೀಗೆ ವಿಚಾರಮಾಡಿ ನೋಡಿದರೆ ಇಲ್ಲಿ ನನ್ನದು ಎಂಬುವುದು ಲೇಶ ಮಾತ್ರವೂ ಇಲ್ಲವೆಂಬುದು ಅನುಭವಕ್ಕೆ ಬರುತ್ತದೆ. ಆದುದರಿಂದ ಸಮಸ್ತವೂ ಪರಮಾತ್ಮನದೇ ; ಎಲ್ಲರಲ್ಲೂ ಪರಮಾತ್ಮನಿದ್ದಾನೆ. ನಾನು ಅವನ ಸೇವಕ ; ನಾನು ಪರಮಾತ್ಮನ ಸೇವೆಯನ್ನೇ ಮಾಡುತ್ತಿದ್ದೇನೆ. – ಎಂಬುದಾಗಿ ಪದೇ ಪದೇ ಭಾವನೆಯನ್ನು ಮಾಡಿಕೋ. ಯಾರನ್ನು ನೋಡಿದರೂ, ಏನನ್ನು ಕಂಡರೂ ಪರಮಾತ್ಮಭಾವನೆಯನ್ನೇ ಮಾಡು. ಹೀಗೆ ಮಾಡುವುದರಿಂದ ಏನು ಲಾಭವಾಗುತ್ತದೆ ? ಎಂದರೆ,

## 25. ಪರಮಾತ್ಮನ ಸೇವೆಯಿಂದ ಫಲವೇನು ?

**ಶುಭಾಶುಭಫಲೈರೇವಂ ಮೋಕ್ಷ್ಯಸೇ ಕರ್ಮಬಂಧನೈಃ ।**
**ಸಂನ್ಯಾಸಯೋಗಯುಕ್ತಾತ್ಮಾ ವಿಮುಕ್ತೋ ಮಾಮುಪೈಷ್ಯಸಿ ॥(ಗೀ. 9–28)**

ಯಾವ ರೀತಿ ಮಲಿನವಾದ ಬಟ್ಟೆಗೆ ಸಾಬೂನನ್ನು ಹಚ್ಚಿ ಒಗೆದರೆ ಹೇಗೆ ಆ ಬಟ್ಟೆಯು ಶುದ್ಧವಾಗುತ್ತದೆಯೋ ಅದೇ ರೀತಿಯಲ್ಲಿಯೇ ಇದೆಲ್ಲವೂ ಪರಮಾತ್ಮನದೇ, ನಾನು ಅವನ ಸೇವೆಯನ್ನು ಮಾಡುತ್ತಿದ್ದೇನೆ ಎನ್ನುವ ಭಾವನೆಯಿಂದ ಸಮಸ್ತ ಕೆಲಸಗಳನ್ನೂ ಮಾಡಿದರೆ, ಮಲಿನವಾದ ಕಾಮಕ್ರೋಧಾದಿಗಳಿಂದ, ರಾಗದ್ವೇಷಾದಿ ಗಳಿಂದ ಕೂಡಿದ ಮನಸ್ಸು ಶುದ್ಧವಾಗಿ, ಶುಭಾಶುಭಫಲಗಳಿಂದ, ಪಾಪಪುಣ್ಯಗಳಿಂದ,

ಸುಖದುಃಖಗಳಿಂದ, ಹುಟ್ಟುಸಾವುಗಳಿಂದ ಬಿಡುಗಡೆಯನ್ನು ಹೊಂದುತ್ತೀಯೆ. ಎಲ್ಲವೂ ಪರಮಾತ್ಮನದೆಂದು ತಿಳಿದುಕೊಂಡು, ಎಲ್ಲರಲ್ಲೂ ಪರಮಾತ್ಮಭಾವನೆಯನ್ನು ಮಾಡುತ್ತಾ, ಎಲ್ಲವೂ ಪರಮಾತ್ಮನ ಸೇವೆ ಎಂಬುದಾಗಿ ಮಾಡಿ, ಎಲ್ಲವನ್ನೂ ಪರಮಾತ್ಮನಿಗೆ ಅರ್ಪಿಸುವುದು, ಅದೂ ಒಂದು ವಿಧವಾದ ಸಂನ್ಯಾಸವೇ ಸರಿ. ಇದರಿಂದ ಚಿತ್ತಶುದ್ಧಿಯನ್ನು ಪಡೆದು ನಿತ್ಯಸುಖವನ್ನೂ ಶಾಶ್ವತವಾದ ಶಾಂತಿಯನ್ನೂ ಪಡೆಯುತ್ತೀಯೆ. ನಂತರ ನನ್ನನ್ನೇ ಸೇರುತ್ತೀಯೆ ಎಂಬುದಾಗಿ ಪರಮಾತ್ಮನೇ ಹೇಳಿರುತ್ತಾನೆ. ಸಾಮಾನ್ಯವಾದ ಕೆಲಸಕಾರ್ಯಗಳನ್ನೇ ಪರಮಾತ್ಮನ ಸೇವೆ ಎಂಬುದಾಗಿ ತಿಳಿದುಕೊಂಡು ಮಾಡಿದರೇ ಇಷ್ಟು ಮಹತ್ತರವಾದ ಫಲವಿರುವಾಗ ಪ್ರತ್ಯಕ್ಷವಾಗಿ ಪರಮಾತ್ಮನ ಸೇವೆಯನ್ನೂ ; ಸದ್ಗುರುವಿನ ಸೇವೆಯನ್ನೂ ಮತ್ತು ಮಹಾತ್ಮರ ಸೇವೆಯನ್ನೂ ಮಾಡಿದರೆ ಎಷ್ಟು ಮಹತ್ತರವಾದ ಲಾಭವಾಗುತ್ತದೆಯೋ ಹೇಳಲು ಸಾಧ್ಯವಿಲ್ಲ.

ಒಬ್ಬನು ಬೆಂಗಳೂರಿನಿಂದ ಬೊಂಬಾಯಿಗೆ ಹೋಗಬೇಕಾದರೆ ಸ್ವತಂತ್ರವಾಗಿ ಕಾಲುನಡಿಗೆಯಿಂದ ಹೊರಟರೆ ದಾರಿಯಲ್ಲಿ ಕಳ್ಳರ ಭೀತಿ ಇದೆ. ಅರಣ್ಯದಲ್ಲಿ ಹುಲಿ, ಸಿಂಹ, ಅಜಗರ, ಘಟಸರ್ಪಗಳೇ ಮೊದಲಾದ ಕಾಡು ಮೃಗಗಳಿಂದ ಅಪಾಯವಿದೆ. ದಾರಿಯಲ್ಲಿ ನದಿ, ಗುಡ್ಡ, ಬೆಟ್ಟಗಳನ್ನು ದಾಟುವುದು ಕಷ್ಟವಾಗುತ್ತದೆ. ಕೊನೆಗೆ ಬೊಂಬಾಯಿ ಸಿಕ್ಕಿದರೂ ಸಿಕ್ಕಬಹುದು. ಇಲ್ಲದಿದ್ದರೂ ಇಲ್ಲ. ಆದರೆ ಅವನು ಹಣವನ್ನು ಕೊಟ್ಟು ರೈಲ್ವೇಟಿಕೇಟನ್ನು ಕೊಂಡುಕೊಂಡು ಪೂನಾ ರೈಲಿನಲ್ಲಿ ಕುಳಿತರೆ ಕಾಲಕಾಲಕ್ಕೆ ಅವನಿಗೆ ಅಲ್ಲಿಯೇ ಆಹಾರವನ್ನು ಕೊಡುತ್ತಾರೆ. ಕೊನೆಗೆ ಆ ರೈಲು ಪೂನಾ ಸ್ಟೇಷನ್ನಿಗೆ ಅವನನ್ನು ತೆಗೆದುಕೊಂಡು ಹೋಗಿ ಅಲ್ಲೇ ಬೊಂಬಾಯಿಗೆ ಹೋಗುವ ರೈಲಿನ ಸಮೀಪಕ್ಕೆ ಅವನನ್ನು ಬಿಡುತ್ತದೆ. ಆ ರೈಲಿನಲ್ಲಿ ಕುಳಿತುಕೊಂಡರೆ ಅದೇ ಟಿಕೇಟೇ ಅವನನ್ನು ಬೊಂಬಾಯಿಗೆ ಮುಟ್ಟಿಸುತ್ತದೆ. ಇದರಂತೆಯೇ ಮಾನವನು ಮೋಕ್ಷವೆಂಬ ಬೊಂಬಾಯನ್ನು ಹೊಂದಬೇಕಾಗಿದೆ. ಇದಕ್ಕಾಗಿ ಬೊಂಬಾಯಿಗೆ ಕಾಲು ನಡಿಗೆಯಿಂದ ಹೊರಟವನಂತೆ ಸ್ವತಂತ್ರವಾಗಿ ಯೋಗಾದಿಸಾಧನೆಗಳನ್ನು ಮಾಡಿದರೆ ಅಥವಾ ಬ್ರಹ್ಮವಿಚಾರವನ್ನು ಮಾಡಿದರೆ ಅವನಿಗೆ ದಾರಿಯಲ್ಲಿ ಕಳ್ಳರ ಭೀತಿಯು ಇದ್ದಂತೆ ಆವರಣ ವಿಕ್ಷೇಪಗಳೆಂಬ ಕಳ್ಳರ ಭೀತಿಯು ಇದೆ. ದೊಡ್ಡ ಅರಣ್ಯದಲ್ಲಿ ಹುಲಿ ಸಿಂಹ ಅಜಗರ ಘಟಸರ್ಪಗಳೇ ಮೊದಲಾದ ಕಾಡುಮೃಗಗಳಿಂದ ಅಪಾಯವಿದ್ದಂತೆ, ಮಾಯಾಪ್ರಪಂಚವೆಂಬ ಗೊಂಡಾರಣ್ಯದಲ್ಲಿ ಲೋಕವಾಸನೆ ಶಾಸ್ತ್ರವಾಸನೆ ದೇಹವಾಸನೆ ಅಭಿಮಾನ ಕಾಮ ಕ್ರೋಧಗಳೆಂಬ ಕಾಡುಮೃಗಗಳಿಂದ ಅಪಾಯವಿದೆ.

ದಾರಿಯಲ್ಲಿ ನದಿ ಗುಡ್ಡಬೆಟ್ಟಗಳು ದಾಟಲು ಅಡ್ಡಿಯಾಗಿದ್ದಂತೆ, ಆಗಾಮಿ, ವರ್ತಮಾನ, ಭಾವಿ ಪ್ರತಿಬಂಧಕಗಳೆಂಬ ನದಿಗುಡ್ಡಬೆಟ್ಟಗಳು ದಾಟಲು ಅಡ್ಡಿಯಾಗಿವೆ. ಕಾಲುನಡಿಗೆಯಲ್ಲಿ ಹೊರಟವನಿಗೆ ಬೊಂಬಾಯಿ ಸಿಕ್ಕಿದರೂ ಸಿಕ್ಕಬಹುದು, ಇಲ್ಲದಿದ್ದರೂ ಇಲ್ಲದಂತೆ, ಇಷ್ಟೆಲ್ಲಾ ಸಾಧನೆಗಳನ್ನು ಮಾಡಿಯೂ ಕೊನೆಗೆ ಮೋಕ್ಷವನ್ನು (ಅಪರೋಕ್ಷ ಜ್ಞಾನವನ್ನು) ಪಡೆದರೂ ಪಡೆಯಬಹುದು ಇಲ್ಲದಿದ್ದರೂ ಇಲ್ಲ. ಆದರೆ ಸರಿಯಾಗಿ ಯಥೋಚಿತ ಧನವನ್ನು ಕೊಟ್ಟು ರೈಲ್ವೇ ಟಿಕೇಟನ್ನು ಕೊಂಡುಕೊಂಡು ಪೂನಾ ರೈಲಿನಲ್ಲಿ ಕುಳಿತವನಂತೆ, ಸರಿಯಾಗಿ ಯಥೋಚಿತವಾಗಿ ವಿವೇಕವಿಚಾರವೆಂಬ ಧನವನ್ನು ಕೊಟ್ಟು ಶ್ರದ್ಧೆ ಎನ್ನುವ ಟಿಕೇಟನ್ನು ತೆಗೆದುಕೊಂಡು ಪರಮಾತ್ಮಭಕ್ತಿ, ಗುರುಭಕ್ತಿ, ಸಾಧು ಸತ್ಪುರುಷರ ಭಕ್ತಿ , ಅವರ ಸೇವೆ ಎನ್ನುವ ರೈಲಿನಲ್ಲಿ ಕುಳಿತರೆ, ಪೂನಾ ರೈಲಿನಲ್ಲಿ ಕುಳಿತವನಿಗೆ ಹೇಗೆ ಆ ಟಿಕೇಟು ಯಾವ ವಿಧವಾದ ಭಯ ಭೀತಿಗಳೂ ಇಲ್ಲದೆ ಕಾಲ ಕಾಲಕ್ಕೆ ಆಹಾರವನ್ನು ಕೊಟ್ಟು ಕೊನೆಗೆ ಅವನನ್ನು ಪೂನಾ ಸ್ಟೇಷನ್ನಿಗೆ ತೆಗೆದುಕೊಂಡು ಹೋಗಿ ಬೊಂಬಾಯಿಗೆ ಹೋಗುವ ಬ್ರಾಡ್‌ಗೇಜ್ ರೈಲಿನ ಹತ್ತಿರ ಬಿಡುತ್ತದೆಯೋ ಹಾಗೇ, ಪರಮಾತ್ಮನ ಭಕ್ತನಿಗೆ ಆ ಭಕ್ತಿಯು ಮೋಕ್ಷಕ್ಕೆ (ಆತ್ಮಜ್ಞಾನಕ್ಕೆ, ಅಪರೋಕ್ಷಜ್ಞಾನಕ್ಕೆ) ಅಡ್ಡಿಯಾದ, ಸಕಲ ವಿಧವಾದ ಪ್ರತಿಬಂಧಕಗಳನ್ನೂ ತೊಲಗಿಸಿ ಯಾವ ಭೀತಿಯೂ ಇಲ್ಲದೆ ಯಾವ ಕಷ್ಟವೂ ಇಲ್ಲದೆ ಆತ್ಮಾನಾತ್ಮವಿವೇಕ, ವೈರಾಗ್ಯ, ಶಮದಮಾದಿಗಳೆಂಬ ಆಹಾರವನ್ನು ಕೊಟ್ಟು ಮುಮುಕ್ಷುತ್ವವೆಂಬ ಪೂನಾ ಸ್ಟೇಷನ್ನಿಗೇ ಕರೆದುಕೊಂಡು ಹೋಗಿ ಮೋಕ್ಷದಾತನಾದ ಸದ್ಗುರುವೆಂಬ ಬೊಂಬಾಯಿಗೆ ಹೋಗುವ ರೈಲಿನ ಹತ್ತಿರ ಬಿಡುತ್ತದೆ. ಆ ರೈಲಿನಲ್ಲಿ ಕುಳಿತರೆ ಅದೇ ಟಿಕೇಟಿನಿಂದಲೇ ಬೊಂಬಾಯಿಯನ್ನು ಮುಟ್ಟುವಂತೆ , ಸದ್ಗುರುವಿಗೆ ಅನನ್ಯವಾದ ಭಾವನೆಯಿಂದ ಶರಣಾಗತನಾದರೆ ಆ ಭಕ್ತಿಯ ಪ್ರಭಾವದಿಂದಲೇ ಮೋಕ್ಷಸಾಮ್ರಾಜ್ಯವೆಂಬ ಬೊಂಬಾಯನ್ನು ಹೊಂದುತ್ತಾನೆ. ಇದರ ತಾತ್ಪರ್ಯವೇನೆಂದರೆ ಅನನ್ಯವಾದ ಪರಮಾತ್ಮನ ಭಕ್ತಿಯಿಂದ ಯಾವ ಕಷ್ಟಗಳೂ ಇಲ್ಲದೆ ಸುಲಭವಾಗಿ ಮೋಕ್ಷವನ್ನು ಪಡೆಯಬಹುದು. ಭಕ್ತಿಯಲ್ಲಿ ಒಂಬತ್ತು ವಿಧವಿದೆ. ಅವುಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇವೆ. ಇವು ಮನುಷ್ಯಜನ್ಮದ ಸಾರ್ಥಕತೆಗೆ ಮತ್ತು ಮೋಕ್ಷಸಾಧನೆಗೆ ಮಾರ್ಗ. ಇವುಗಳನ್ನು ತಿಳಿದುಕೊಂಡು ಇದರಂತೆ ನಡೆದರೆ ಮರ್ತ್ಯನಾದ ಮಾನವನು ಅಮರನಾಗುತ್ತಾನೆ.

## 26. ನವವಿಧ ಭಕ್ತಿ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

ಶ್ರವಣ, ಕೀರ್ತನ, ನಾಮಸ್ಮರಣೆ , ಪಾದಸೇವೆ, ಅರ್ಚನೆ, ನಮಸ್ಕಾರ, ದಾಸ್ಯತ್ವ, ಸಖ್ಯ, ಆತ್ಮನಿವೇದನೆ –ಎಂಬುದಾಗಿ ಒಂಬತ್ತು ವಿಧವಾದ ಭಕ್ತಿ ಇದೆ. ಇವುಗಳನ್ನು ಯಾರು ಮಾಡಿದ್ದಾರೆಂದರೆ ,

ಶ್ರೀವಿಷ್ಣೋಃ ಶ್ರವಣೇ ಪರೀಕ್ಷಿದಭವತ್ ವೈಯಾಸಕಿಃ ಕೀರ್ತನೇ ।
ಪ್ರಹ್ಲಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ ಪೃಥುಃ ಪೂಜನೇ ।
ಅಕ್ರೂರಸ್ತ್ವಭಿವಂದನೇ ಕಪಿಪತಿರ್ದಾಸ್ಯೇಽಥ ಸಖ್ಯೇಽರ್ಜುನಃ
ಸರ್ವಸ್ವಾತ್ಮನಿವೇದನೇ ಬಲಿರಭೂತ್ ಕೃಷ್ಣಾಪ್ತಿರೇಷಾಂ ಪರಮ್ ॥

ಭಾಗವತವನ್ನು ಶ್ರವಣಮಾಡುವುದರಿಂದಲೇ ಪರೀಕ್ಷಿತನು ಮುಕ್ತನಾದನು. ಶುಕರು ಭಗವಂತನ ಕೀರ್ತನೆಯಿಂದಲೂ, ಪ್ರಹ್ಲಾದನು ನಾಮಸ್ಮರಣೆಯಿಂದಲೂ, ಶ್ರೀಲಕ್ಷ್ಮಿಯು ಶ್ರೀಹರಿಯ ಪಾದಸೇವೆಯಿಂದಲೂ, ಪೃಥುಚಕ್ರವರ್ತಿಯು ಪರಮಾತ್ಮನನ್ನು ಪೂಜಿಸುವದರಿಂದಲೂ, ಅಕ್ರೂರನು ಶ್ರೀಕೃಷ್ಣನಿಗೆ ನಮಸ್ಕಾರವನ್ನು ಮಾಡುವದರಿಂದಲೂ, ಮಾರುತಿಯು ಶ್ರೀರಾಮನ ಸೇವೆಯಿಂದಲೂ, ಅರ್ಜುನನು ಶ್ರೀಕೃಷ್ಣನ ಸ್ನೇಹವನ್ನು ಮಾಡಿಯೂ ಧನ್ಯರಾದರು. ಬಲಿಚಕ್ರವರ್ತಿಯು ಆತ್ಮನಿವೇದನೆಯಿಂದ ಮುಕ್ತನಾದನು.

**1. ಶ್ರವಣ ಭಕ್ತಿ:** ಶ್ರವಣವೆಂದರೆ ಕೇಳುವುದು. ಮೊದಲು ಯಾವುದನ್ನಾದರೂ ಕೇಳಿದರೇ ಅಲ್ಲವೇ, ನಂತರ ಅದರಂತೆ ಆಚರಿಸುವುದು? ಆದುದರಿಂದ ಶ್ರವಣಕ್ಕೆ ಮೊದಲನೇ ಸ್ಥಾನವಿದೆ. ಪರೀಕ್ಷಿತ್ ಮಹಾರಾಜನು ಏಳು ದಿನಗಳು ಭಾಗವತವನ್ನು ಕೇಳಿ ಮುಕ್ತನಾದನು. ಅರ್ಜುನನು ಭಗವದ್ಗೀತೆಯನ್ನು ಕೇಳಿಯೇ ಜೀವನ್ಮುಕ್ತನಾದನು. ಖಟ್ವಾಂಗನು ಆತ್ಮತತ್ತ್ವವನ್ನು ಕೇಳಿದಕೂಡಲೇ ಮೋಕ್ಷವನ್ನು ಹೊಂದಿದನು. **ಶ್ರವಣ ಮಾಡಬೇಕಾದ ವಿಷಯಗಳು :** ಪರಮಾತ್ಮನ ಲೀಲೆಗಳು, ಅವನ ಗುಣಗಾನಗಳು, ಭಗವದ್ಭಕ್ತರ ಮಹಾತ್ಮರ ಜ್ಞಾನಿಗಳ ಸದ್ಗುರುಗಳ ಚರಿತ್ರೆಗಳು. ಮುಖ್ಯವಾಗಿ ಅಧ್ಯಾತ್ಮ ವಿಚಾರವನ್ನು ಕೇಳಬೇಕು. ಇದರಿಂದಾಗುವ **ಪ್ರಯೋಜನಗಳು :** ದೇವರೆಂದರೆ ಯಾರು ? ಅವನು ಹೇಗಿದ್ದಾನೆ ? ನಾನು ಎಂದರೆ ಯಾರು ? ಪ್ರಪಂಚದ ಸ್ವರೂಪವೇನು? ಸುಖವೆಂದರೇನು ? ದುಃಖವೆಂದರೇನು? ಆತ್ಮವೆಂದರೇನು?

ಅನಾತ್ಮವೆಂದರೇನು? ಎಂಬುವುದೆಲ್ಲವೂ ತಿಳಿಯುತ್ತದೆ. ಶ್ರವಣದಿಂದ ನಾನು ನನ್ನದೆಂಬ ಅಭಿಮಾನವು ಕಡಿಮೆಯಾಗುತ್ತದೆ. ಪ್ರಪಂಚದಲ್ಲಿರುವ ಆಸಕ್ತಿಯು, ಮೋಹವು ಕಡಿಮೆಯಾಗುತ್ತದೆ. ದುಃಖವು ತೊಲಗುತ್ತದೆ. ಈ ವಿಷಯವನ್ನು ಮುಂದಕ್ಕೆ ವಿಶದಪಡಿಸುತ್ತದೆ. ಶ್ರವಣಮಾಡುವಾಗ ಮನಸ್ಸು ಅತ್ತಿತ್ತ ಹರಿಯಬಾರದು. ಏಕಾಗ್ರ ಚಿತ್ತದಿಂದ ಶ್ರವಣವನ್ನು ಮಾಡಬೇಕು. ಶುದ್ಧವಾದ ಮನಸ್ಸಿನಿಂದ ಕೇಳಬೇಕು. ಹೀಗೆ ಸರಿಯಾಗಿ ಶ್ರವಣಮಾಡಿದರೆ ಶ್ರವಣದಿಂದಲೇ ನಿಜವಾಗಿಯೂ ಮುಕ್ತರಾಗುತ್ತಾರೆ. ಆದುದರಿಂದಲೇ ಎಲ್ಲದಕ್ಕಿಂತಲೂ ಹೆಚ್ಚಾಗಿ ಶ್ರವಣಕ್ಕೇ ಅತ್ಯಂತ ಮುಖ್ಯಸ್ಥಾನವಿದೆ. ಪ್ರತಿಯೊಬ್ಬರೂ ಪ್ರತಿನಿತ್ಯವೂ ಸ್ವಲ್ಪ ಕಾಲವಾದರೂ ಶ್ರವಣಮಾಡಿಯೇ ತೀರಬೇಕು.

**2. ಕೀರ್ತನ ಭಕ್ತಿ:** ಪ್ರೇಮದಿಂದ ಪರಮಾತ್ಮನ ಲೀಲೆಗಳನ್ನು ಪಾಡುವುದು, ಭಕ್ತಿಯಿಂದ ಅಂತಃಕರಣಪೂರ್ವಕವಾಗಿ ಭಗವಂತನನ್ನು ಸ್ತೋತ್ರಮಾಡುವುದು, ಅವನ ನಾಮಸಂಕೀರ್ತನವನ್ನು ಮಾಡುವುದು. ರಾಮದಾಸ್ ತುಳಸೀದಾಸ್ ಕಬೀರ್‌ದಾಸ್ ತುಕಾರಾಮ್ ಇವರುಗಳಂತೆಯೂ, ಸಖೂಬಾಯಿ ಮೀರಾಬಾಯಿ ಜನಾಬಾಯಿ ವೇಣೂಬಾಯಿ ಇವರುಗಳಂತೆಯೂ ಭಾವಪರವಶನಾಗಿ ಪರಮಾತ್ಮನ ಗುಣಗಾನವನ್ನು ಮಾಡುವುದು ; ಅಭಿಮಾನವನ್ನು ಬಿಟ್ಟು ಭಗವಂತನ ಭಜನೆಯನ್ನು ಮಾಡುತ್ತಾ ಕುಣಿಯುತ್ತಾ ಅವನಲ್ಲಿ ಒಂದಾಗುವುದು, ಮೈಮರೆಯುವುದು (ತನ್ನನ್ನು ತಾನು ಮರೆಯುವುದು), ಪರಮಾತ್ಮನ ಕತೆಗಳನ್ನು ಹೇಳುವುದು. ಅಧ್ಯಾತ್ಮ ವಿಚಾರಗಳನ್ನು ಹೇಳುವುದು, ಒಬ್ಬರಿಗೊಬ್ಬರು ಅದನ್ನು ಚರ್ಚೆಮಾಡುವುದು ಇದೆಲ್ಲಾ ಕೀರ್ತನಭಕ್ತಿ.

**3. ಸ್ಮರಣಭಕ್ತಿ:** ಪರಮಪಾವನವಾದ ಭಗವಂತನ ನಾಮವನ್ನು ಪದೇ ಪದೇ ಚಿಂತನೆ ಮಾಡುತ್ತಿರುವುದಕ್ಕೆ ಸ್ಮರಣಭಕ್ತಿ ಎನ್ನುತ್ತಾರೆ. ನಿರಂತರದಲ್ಲೂ ಎಂದರೆ ಕುಳಿತಾಗ ಓಡಾಡುವಾಗ ಮಲಗುವಾಗ ಊಟಮಾಡುವಾಗ ಭೋಗಗಳನ್ನು ಭೋಗಿಸುವಾಗ ಸದಾ ಸರ್ವದಾ ಪವಿತ್ರವಾದ ಪರಮಾತ್ಮನ ನಾಮವನ್ನು ಸ್ಮರಣೆಮಾಡುವುದು. ಪರಮಾತ್ಮನು ಬೇರೆ ಅವನ ನಾಮವು ಬೇರೆ ಅಲ್ಲ. ನಾಮವೂ ಸಹ ಪರಮಾತ್ಮನ ಸ್ವರೂಪವೇ ಆಗಿದೆ. ನಾಮಸ್ಮರಣೆಯಿಂದ ಸಮಸ್ತಪಾಪಗಳೂ ನಾಶವಾಗುತ್ತವೆ. ಎಲ್ಲಾ ವಿಧವಾದ ದುಃಖಗಳೂ ನಿವಾರಣೆಯಾಗುತ್ತವೆ. ಸಮಸ್ತ ಇಷ್ಟಾರ್ಥಗಳೂ ನೆರವೇರುತ್ತವೆ. ಸುಖಶಾಂತಿಗಳು ಸಿಕ್ಕುತ್ತವೆ. ರಾಮನಾಮಜಪದಿಂದ ಪಾಪಿಯಾದ ವಾಲ್ಮೀಕಿಯು ಮಹಾತ್ಮನಾದನು. ರಾಮನಾಮದಿಂದ ಕಲ್ಲುಗಳು ತೇಲಿದವು.

**4. ಪಾದಸೇವನಭಕ್ತಿ :** ನಮಗೆ ಜಗತ್ತಿನಲ್ಲಿ ಯಾರಿಂದ ಕೆಲಸವಾಗಬೇಕೋ ಅವರ ಕಾಲುಹಿಡಿಯಬೇಕಲ್ಲವೇ ? ಅದರಂತೆಯೇ ಮೋಕ್ಷಕ್ಕಾಗಿ ಮನೋವಾಕ್ಕಾಯಗಳಿಂದ ಜ್ಞಾನದಾತನಾದ ಸದ್ಗುರುವಿನ ಪಾದಸೇವೆಯನ್ನು ಮಾಡಬೇಕು. ಸದ್ಗುರುವಿನ ಕೃಪೆಯ ಹೊರತು ಭವಬಂಧನವು ತೊಲಗುವುದಿಲ್ಲ. ಆದುದರಿಂದ ಹುಟ್ಟು ಸಾವುಗಳಿಂದ ಬಿಡುಗಡೆಯನ್ನು ಹೊಂದುವುದಕ್ಕಾಗಿ ಶ್ರದ್ಧಾಭಕ್ತಿಗಳಿಂದ ಸದ್ಗುರು ಪಾದಗಳನ್ನು ತೊಳೆದು ಪೂಜೆಮಾಡಬೇಕು. ಸದ್ಗುರುವು ಜ್ಞಾನವನ್ನು ಬೋಧಿಸಿ ಅಜ್ಞಾನವನ್ನು ನಾಶಪಡಿಸುತ್ತಾನೆ. ಸತ್ಯಸ್ವರೂಪವನ್ನು ತೋರಿಸುತ್ತಾನೆ. ನಿತ್ಯಸುಖವನ್ನು ಕೊಡುತ್ತಾನೆ. ಪರಮಶಾಂತಿಯನ್ನು ಕೊಡುತ್ತಾನೆ. ಮಹಾತ್ಮರಾದವರೆಲ್ಲರೂ ಸದ್ಗುರು ಸೇವೆಯಿಂದಲೇ ಮಹಾತ್ಮರಾಗಿರುತ್ತಾರೆ. ಸದ್ಗುರು ಸೇವೆಯಿಂದಲೇ ಶೀಘ್ರವಾಗಿ ಚಿತ್ತಶುದ್ಧಿಯಾಗುತ್ತದೆ; ಅಧಿಕಾರವು ಲಭಿಸುತ್ತದೆ. ಅಧಿಕಾರವು ಬಂದರೆ ಆಗ ಜ್ಞಾನವಾಗಲು ತಡವಾಗುವುದಿಲ್ಲ. ಆದ್ದರಿಂದ ಯಥಾಶಕ್ತಿ ದೇವ ಬ್ರಾಹ್ಮಣ ಮಹಾತ್ಮರ ಸೇವೆಯನ್ನು ಮಾಡಬೇಕು.

**5. ಅರ್ಚನಭಕ್ತಿ :** ಪರಮಾತ್ಮನನ್ನೂ ಮತ್ತು ಸದ್ಗುರುವನ್ನೂ ಭಕ್ತಿಯಿಂದ ಪೂಜಿಸುವುದಕ್ಕೆ ಅರ್ಚನವೆನ್ನುತ್ತಾರೆ. ಬ್ರಾಹ್ಮಣರನ್ನೂ ಸೂರ್ಯನನ್ನೂ ಅಗ್ನಿಯನ್ನೂ ಬ್ರಹ್ಮನಿಷ್ಠರನ್ನೂ ಪೂಜಿಸಬೇಕು. ಪ್ರತಿನಿತ್ಯವೂ ತನ್ನ ಇಷ್ಟದೇವತೆಯನ್ನೂ ಸದ್ಗುರುವನ್ನೂ ತನ್ನ ತನ್ನ ಯೋಗ್ಯತಾನುಸಾರವಾಗಿ ಷೋಡೋಪಚಾರಾದಿಗಳಿಂದ ಪೂಜಿಸಬೇಕು. **''ದೇವದ್ವಿಜಗುರುಪ್ರಾಜ್ಞಪೂಜನಂ..... ಶಾರೀರಂ ತಪ ಉಚ್ಯತೇ''** (ಗೀ. 17–14) ಇದು ಶರೀರದಿಂದ ಮಾಡುವ ತಪಸ್ಸು ಎಂಬುದಾಗಿ ಭಗವಂತನೇ ಹೇಳಿರುತ್ತಾನೆ. ತಪಸ್ಸು ಮಾಡಿದವರಿಗೇ ಮೋಕ್ಷವು ಪ್ರಾಪ್ತಿಯಾಗುತ್ತದೆ. ಆದುದರಿಂದ ಮೋಕ್ಷವನ್ನಪೇಕ್ಷಿಸುವವರೆಲ್ಲರೂ ಈ ತಪಸ್ಸನ್ನು ತಪ್ಪದೆ ಮಾಡಬೇಕು.

**6. ವಂದನಭಕ್ತಿ :** ವಂದನೆ ಎಂದರೆ ನಮಸ್ಕಾರಮಾಡುವದು. ದೇವರಿಗೆ ಮತ್ತು ಸದ್ಗುರುವಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಬೇಕು. ಸಾಧುಸತ್ಪುರುಷರು ಮಹಾತ್ಮರು ಬ್ರಹ್ಮನಿಷ್ಠರುಗಳನ್ನು ಕಂಡರೆ ಅವಶ್ಯವಾಗಿ ಅವರಿಗೆ ನಮಸ್ಕಾರವನ್ನು ಮಾಡಬೇಕು. ಭಕ್ತರು, ಜ್ಞಾನಿಗಳು, ವಿರಕ್ತರು, ಮಹಾನುಭಾವರು, ತಪಸ್ವಿಗಳು, ಯೋಗಿಗಳು ಮೊದಲಾದ ಸತ್ಪಾತ್ರರನ್ನು ನೋಡಿ ಅವರಿಗೆ ನಮಸ್ಕಾರವನ್ನು ಮಾಡಬೇಕು. ಸೂರ್ಯನಮಸ್ಕಾರವನ್ನೂ ಅಶ್ವತ್ಥಪ್ರದಕ್ಷಿಣೆಯನ್ನೂ ಮಾಡಬೇಕು. ಅಗ್ನಿಗೆ ವಂದಿಸಬೇಕು. **''ಮಾತೃದೇವೋ ಭವ ಪಿತೃದೇವೋ ಭವ''**ಎಂಬಂತೆ

ತಂದೆತಾಯಿಗಳು ಪ್ರತ್ಯಕ್ಷವಾದ ದೇವರು. ಅವರಿಗೆ ಪ್ರತಿನಿತ್ಯವೂ ತಪ್ಪದೆ ನಮಸ್ಕಾರವನ್ನು ಮಾಡಬೇಕು. ''ಸತಿಗೆ ಪತಿಯೇ ಪರದೈವ'' ಎಂಬಂತೆ ಸ್ತ್ರೀಯು ಪ್ರತಿನಿತ್ಯವೂ ದೇವತಾಸ್ವರೂಪನಾದ ತನ್ನ ಪತಿಗೆ ತಪ್ಪದೆ ಅವಶ್ಯವಾಗಿ ನಮಸ್ಕಾರವನ್ನು ಮಾಡಲೇಬೇಕು. ಪೂಜ್ಯಸ್ಥಾನದಲ್ಲಿ ನಮಸ್ಕಾರವನ್ನು ಮಾಡದಿದ್ದರೆ ಪಾಪವು ಬರುತ್ತದೆ. ನಮಸ್ಕಾರವು ಶರಣಾಗತಿಯನ್ನು ತೋರಿಸುತ್ತದೆ. ಅದರಿಂದ ಅಹಂಭಾವವು ಕಡಿಮೆಯಾಗುತ್ತದೆ. ನಮಸ್ಕಾರದಿಂದ ಪಾಪಕ್ಷಯವಾಗುತ್ತದೆ. ದೊಡ್ಡವರ ಅನುಗ್ರಹವು ದೊರೆಯುತ್ತದೆ.

**7. ದಾಸ್ಯಭಕ್ತಿ :** ಈ ಸಮಸ್ತಜಗತ್ತು ಪರಮಾತ್ಮನದು, ಇದೆಲ್ಲದಕ್ಕೂ ಯಜಮಾನನು ಭಗವಂತನೇ, ನಾನು ಅವನ ಸೇವಕನು ಎಂಬುದಾಗಿ ತಿಳಿದುಕೊಳ್ಳಬೇಕು. ಸೇವಕನು ತನ್ನ ಯಜಮಾನನ ಕೆಲಸಕಾರ್ಯಗಳನ್ನು ಮಾಡುವಂತೆ, ಯಾವಾಗಲೂ ದೇವರ ಸನ್ನಿಧಿಯಲ್ಲಿದ್ದು ಅಲ್ಲಿಯ ಸಮಸ್ತ ಕೆಲಸಕಾರ್ಯಗಳನ್ನೂ ಮಾಡಬೇಕು. ಕೀಳುಮೇಲೆಂದು ವಿಚಾರಮಾಡದೆ ಸಮಸ್ತವಿಧವಾದ ದೇವರ ಕೆಲಸಗಳನ್ನೂ ಶ್ರದ್ಧೆಯಿಂದ ಮಾಡಬೇಕು. ಭಗವಂತನ ವೈಭವವನ್ನು ದಿನೇ ದಿನೇ ವೃದ್ಧಿಗೊಳಿಸಬೇಕು. ದೇವಸ್ಥಾನ ಕಟ್ಟಿಸುವುದು, ಜೀರ್ಣೋದ್ಧಾರ ಮಾಡುವುದು, ದೇವರ ಉತ್ಸವಕ್ಕೆ ಬೇಕಾದ ವಾಹನಗಳನ್ನೂ ರಥ ಮಂಟಪ ಛತ್ರಿ ಚಾಮರ ಮೊದಲಾದವುಗಳನ್ನೂ ಮಾಡಿಸುವುದು – ಇವೆಲ್ಲವೂ ದಾಸ್ಯಭಕ್ತಿ. ಮಾರುತಿಯು ರಾಮನ ದಾಸನಾಗಿದ್ದರಿಂದ ಅವನೂ ಸಹ ರಾಮಸ್ವರೂಪವನ್ನೇ ಪಡೆದಿರುತ್ತಾನೆ. ಯಾರು ಮೊದಲು ಕಿಂಕರರಾಗುತ್ತಾರೋ ಅವರೇ ಕೊನೆಗೆ ಶಂಕರರಾಗುತ್ತಾರೆ. ಯಾರು **''ದಾಸೋಽಹಂ''** ಎನ್ನುತ್ತಾರೋ ಅವರೇ **''ಸೋಽಹಂ''** ಭಾವವನ್ನು ಪಡೆಯುತ್ತಾರೆ. ಆದುದರಿಂದ ಮೊದಲು ಕಿಂಕರರಾಗಿ, ದಾಸರಾಗಿ ಪರಮಾತ್ಮನ ದಾಸ್ಯವನ್ನು ಮಾಡಬೇಕು. ಸಾಮಾನ್ಯವಾಗಿ ಎಲ್ಲರೂ ರಾಮನ ದಾಸರಾಗಿರುವುದಿಲ್ಲ, ಕಾಮನ ದಾಸರಾಗಿದ್ದಾರೆ. ಭೋಗಭಾಗ್ಯಗಳಿಗೆ ದಾಸರಾಗಿದ್ದಾರೆ. ಸಂಸಾರಕ್ಕೆ ದಾಸರಾಗಿದ್ದಾರೆ. ಇವುಗಳಿಗೆ ದಾಸನಾದವನು ಪರಿಪರಿವಿಧದಲ್ಲಿ ಕಷ್ಟವನ್ನನುಭವಿಸುತ್ತಾನೆ. ಯಾವನು ಪರಮಾತ್ಮನ ದಾಸನಾಗುತ್ತಾನೆಯೋ ಅವನು ನಿಜವಾದ ಸುಖಶಾಂತಿಯನ್ನು ಪಡೆಯುತ್ತಾನೆ. ದೇವರಸೇವೆಯಂತೆಯೇ ಸದ್ಗುರುವಿನ ಸೇವೆಯನ್ನೂ ಮಾಡಬೇಕು.

**8. ಸಖ್ಯಭಕ್ತಿ:** ಪರಮಾತ್ಮನೇ ತನ್ನ ಸ್ನೇಹಿತನೆಂದು ತಿಳಿದುಕೊಂಡು ಅವನ ಸ್ನೇಹವನ್ನು ಸಂಪಾದಿಸಬೇಕು. ಅವನ ಸೇವೆಯನ್ನೇ ಮಾಡಬೇಕು. ಗೋಪಾಲಕರು

ಭಗವಂತನನ್ನೇ ಸ್ನೇಹಿತನೆಂದು ಭಾವಿಸಿ ಸೇವಿಸಿ ಪೂತರಾದರು. ಅರ್ಜುನನು ಶ್ರೀಕೃಷ್ಣನನ್ನೇ ತನ್ನ ಸ್ನೇಹಿತನೆಂದು ಭಾವಿಸಿ ಧನ್ಯನಾದನು. ಭಗವಂತನೇ ತನ್ನ ನಿಜವಾದ ಹಿತಚಿಂತಕನೆಂದೂ ಅವನೇ ನಿಜವಾದ ಸಖನೆಂದೂ ತಿಳಿದು ಅವನ ಪ್ರೇಮವನ್ನು ಸಂಪಾದಿಸಲು ಪ್ರಯತ್ನಮಾಡಬೇಕು. ಸಹದೇವನು ತನ್ನ ಪ್ರೇಮಪಾಶದಿಂದ ಭಗವಂತನನ್ನು ಕಟ್ಟಿಹಾಕಿದಂತೆ ಶುದ್ಧವಾದ ಪ್ರೇಮದಿಂದ ಪರಮಾತ್ಮನನ್ನು ಕಟ್ಟಬೇಕು. ಅವನಿಗೆ ಯಾವುದು ಪ್ರೀತಿಯೋ ತಾನೂ ಸಹ ಅದರಂತೆಯೇ ನಡೆಯಬೇಕು. ಭಗವಂತನ ಸ್ನೇಹವನ್ನು ಸಂಪಾದಿಸುವಲ್ಲಿ ತನ್ನ ಸುಖದ ಕಡೆ ಲಕ್ಷ್ಯಕೊಡಬಾರದು. ಅವನ ಪ್ರೇಮವನ್ನು ಸಂಪಾದಿಸುವುದಕ್ಕಾಗಿಯೇ ತನುಮನ ಧನವನ್ನೆಲ್ಲಾ ಉಪಯೋಗಿಸಬೇಕು. ಪರಮಾತ್ಮನೇ ತಂದೆಯು ಅವನೇ ತಾಯಿಯು ಅವನೇ ಬಂಧುಬಾಂಧವನು. ಅವನೇ ಸಕಲಸಂಪತ್ತು. ಸಮಸ್ತವೂ ಅವನೇ ಎಂಬುದಾಗಿ ತಿಳಿಯಬೇಕು. ಇದಕ್ಕೆ ಸಖ್ಯಭಕ್ತಿ ಎನ್ನುತ್ತಾರೆ. ಯಾವ ರೀತಿ ದೇವರಲ್ಲೋ ಅದೇ ರೀತಿ ಗುರುವಿನಲ್ಲಿಯೂ ಭಕ್ತಿ ಇರಬೇಕು.

**9. ಆತ್ಮನಿವೇದನೆ :** ಆತ್ಮ ಎಂದರೆ ತಾನು. ನಿವೇದನವೆಂದರೆ ಅರ್ಪಿಸುವುದು. ಆತ್ಮನಿವೇದನವೆಂದರೆ ತನ್ನನ್ನೇ ಪರಮಾತ್ಮನಿಗೆ ಅರ್ಪಿಸುವುದು ಎಂದರ್ಥ. ಇದು ನವವಿಧ ಭಕ್ತಿಯಲ್ಲಿ ಉತ್ತಮವಾದದ್ದು, ಶ್ರೇಷ್ಠವಾದದ್ದು ಮತ್ತು ಇದೇ ಕೊನೆಯದು. ಇದು ಹೇಗೆಂದರೆ ಮೊದಲು ಪರಮಾತ್ಮನು ಯಾರು ? ಅವನು ಹೇಗಿದ್ದಾನೆ ? ಅವನ ಸ್ವರೂಪವೇನು? ಎಂಬುವುದನ್ನು ಅರಿಯಬೇಕು. ನಂತರ ತಾನು ಯಾರು ? ತಾನು ಹೇಗಿದ್ದೇನೆ ? ತನ್ನ ಸ್ವರೂಪವೇನು? ಎಂಬುದನ್ನು ಅರಿಯಬೇಕು. ದೇವರಿಗೂ ತನಗೂ ಇರವ ಸಂಬಂಧವನ್ನು ಅರಿಯಬೇಕು. ಕೊನೆಗೆ ಸದ್ಗುರುವಿನಿಂದ ತಿಳಿದುಕೊಂಡು ಆತ್ಮಾರ್ಪಣೆಯನ್ನು, ಮಾನವತ್ವವನ್ನು, ಜೀವತ್ವವನ್ನು ಪರಮಾತ್ಮನಲ್ಲಿ ಆರ್ಪಣೆಯನ್ನು ಮಾಡಿ ತನ್ನ ನಿಜಸ್ವರೂಪವಾದ ದೇವತ್ವವನ್ನು ಅರಿಯುವುದೇ ಆತ್ಮನಿವೇದನ. ಎಲ್ಲವನ್ನೂ ದೇವರಿಗೇ ಅರ್ಪಿಸಿದ ಮೇಲೆ ನಾನು – ನಾನು ಎನ್ನುವುದೂ ಸಹಾ ಅರ್ಪಣವಾಗಿಬಿಡುತ್ತದೆ. ಆಗ ಸಮಸ್ತವೂ ಪರಮಾತ್ಮಸ್ವರೂಪವೇ ಆಗಿಬಿಡುತ್ತದೆ. ವಿಚಾರಮಾಡಿನೋಡಿದರೆ ನಾನು ಇಲ್ಲದಂತಾಗುತ್ತದೆ. ಇರುವವನು ಪರಮಾತ್ಮನೊಬ್ಬನೇ ಎಲ್ಲೆಲ್ಲೂ ಅವನೇ ಇದ್ದಾನೆ. ಅವನ ಹೊರತು ಮತ್ತೊಂದೇನೂ ಇಲ್ಲವೇ ಇಲ್ಲ – ಎಂಬುವುದು ಅನುಭವಕ್ಕೆ ಬರುತ್ತದೆ. ಇದಕ್ಕೇ ಆತ್ಮನಿವೇದನ ಎನ್ನುತ್ತಾರೆ. ಇದಕ್ಕೇ ಪರಾಭಕ್ತಿ ಎನ್ನುತ್ತಾರೆ. ಇದರಿಂದಲೇ ಸಮಸ್ತ ದುಃಖಗಳೂ

ಹೋಗುತ್ತವೆ. ಇದರಿಂದಲೇ ಪರಮಶಾಂತಿಯು ದೊರೆಯುತ್ತದೆ. ಇದರಿಂದಲೇ ಹುಟ್ಟುಸಾವುಗಳು ತಪ್ಪುತ್ತವೆ. ಇದರಿಂದಲೇ ಮೋಕ್ಷವಾಗುತ್ತದೆ. ಆತ್ಮನಿವೇದನಕ್ಕೆ ಸಾಯುಜ್ಯಮುಕ್ತಿ ಎನ್ನುತ್ತಾರೆ. ಒಂಬತ್ತನೇ ಭಕ್ತಿಯಾದ ಆತ್ಮನಿವೇದನೆಯಾಗದ ಹೊರತು ಜನನ ಮರಣಗಳು ತಪ್ಪುವುದಿಲ್ಲ. ಇದು ಸತ್ಯವಾದ ಮಾತು.ಇದನ್ನೇ ವೇದಗಳು ಹೇಳುತ್ತವೆ. ಮಹಾತ್ಮರು ಸಾರುತ್ತಿದ್ದಾರೆ.

ಈ ವಿಧವಾಗಿ ನವವಿಧ ಭಕ್ತಿಯಿಂದ ಸುಲಭವಾಗಿ ಜಗತ್ತಿನಲ್ಲಿರುವ, ಸಂಸಾರದಲ್ಲಿರುವ, ವಿಷಯಗಳಲ್ಲಿರುವ, ದೇಹದಲ್ಲಿರುವ ಮೋಹವು ಆಸಕ್ತಿಯು ಹೋಗುತ್ತದೆ. ಮುಮುಕ್ಷುತ್ವವು ಹುಟ್ಟುತ್ತದೆ. ಜ್ಞಾನಕ್ಕೆ ಅಧಿಕಾರವು ಬರುತ್ತದೆ. ಅಷ್ಟೇ ಅಲ್ಲದೆ ಭಕ್ತಿಯು ಜ್ಞಾನವನ್ನೂ ಸಹ ತಂದು ಕೊಡುತ್ತದೆ.

✤✤✤✤

ಶ್ರೀರಾಮಸಮರ್ಥ । ಶ್ರೀಗುರುಭ್ಯೋ ನಮಃ ॥

# ಪರಮಾತ್ಮನಲ್ಲಿ ಮನಸ್ಸನ್ನು ಹೇಗೆ ನಿಲ್ಲಿಸಬೇಕು ?

## (2ನೇ ಪ್ರಕರಣ – ಸಾಧನ ಭಾಗ )

ಸಾಧನೆಗಳನ್ನು ಮಾಡುವಾಗ ಮನಸ್ಸನ್ನು ಎಷ್ಟು ಹಿಡಿದರೂ ಸಹ ಕೈಗೆ ಸಿಕ್ಕದೆ ಓಡುತ್ತದೆ. ಜಪಮಾಡುವಾಗಲೂ ಧ್ಯಾನಮಾಡುವಾಗಲೂ ಮನಸ್ಸು ಗಾಳಿಯಂತೆ ಹರಿದಾಡುತ್ತಾ ಇರುತ್ತದೆ. ಸುಖದ ನಿಧಿಯಾದ ಪರಮಾತ್ಮನಲ್ಲಿಯೇ ಮನಸ್ಸು ಸ್ಥಿರವಾಗಿ ನೆಲೆ ನಿಲ್ಲಲಾರದು. ಇದಕ್ಕೆ ಏನು ಉಪಾಯಮಾಡಬೇಕು? ಎಂದರೆ – ಇದೇ ಪ್ರಶ್ನೆಯನ್ನು ಅರ್ಜುನನು ತನ್ನ ಗುರುವಾದ ಶ್ರೀಕೃಷ್ಣನಿಗೆ ಕೇಳಿದ್ದಾನೆ. ಅದಕ್ಕೆ ಭಗವಂತನು ಏನು ಉತ್ತರವನ್ನು ಕೊಟ್ಟಿರುತ್ತಾನೆಂದರೆ **''ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ । ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥''** (ಗೀ. 6–35) ''ನೀನು ಹೇಳುವುದು ನಿಜವು. ಇದರಲ್ಲಿ ಸಂಶಯವಿಲ್ಲ. ಆದರೆ ಬಿಡದೆ ಒಂದೇ ಸಮನೆ ಸತತವಾಗಿ ಮಾಡುವ ಅಭ್ಯಾಸದಿಂದಲೂ ಎಂದರೆ ಜಪಧ್ಯಾನಾದಿಗಳಿಂದಲೂ ಮತ್ತು ವೈರಾಗ್ಯದಿಂದಲೂ ಎಂದರೆ ವಿಷಯಗಳಲ್ಲಿರುವ ದೋಷಗಳನ್ನು ನೋಡುವುದರಿಂದಲೂ ಮನಸ್ಸು ತನ್ನ ಹತೋಟಿಗೆ ಬರುತ್ತದೆ'' ಎಂಬುದಾಗಿ ಉತ್ತರವನ್ನು ಕೊಟ್ಟಿರುತ್ತಾನೆ.

ಮನಸ್ಸು ಏತಕ್ಕೆ ಹೊರಗಡೆ ಹೋಗುತ್ತದೆಂದರೆ, ಜಗತ್ತು ಸತ್ಯವಾಗಿ ಇದೆ ; ಇದರಲ್ಲಿ ಅನೇಕ ವಿಧವಾದ ಭೋಗವಸ್ತುಗಳಿವೆ ; ಅವುಗಳನ್ನು ನಾನು ಪಡೆಯಬೇಕು. ಅವುಗಳಿಂದ ನಾನು ಸುಖಪಡಬೇಕು. ಅವುಗಳಲ್ಲಿ ಮತ್ತೆ ಕೆಲವು ವಸ್ತುಗಳು ನನಗೆ ದುಃಖವನ್ನು ಕೊಡುತ್ತವೆ ; ಅವುಗಳಿಂದ ಬಿಡುಗಡೆ ಹೊಂದಬೇಕು – ಎನ್ನುವ ಭ್ರಮೆ ಇರುವುದರಿಂದಲೇ ಮನಸ್ಸು ಒಂದೇ ಸಮನೆ ಓಡುತ್ತದೆ. ಸಣ್ಣಮಕ್ಕಳು ಮಣ್ಣನ್ನು ತಿನ್ನುತ್ತಿದ್ದರೆ ನಾವು ಹೇಗೆ ಆ ಮಕ್ಕಳಿಗೆ ಮಣ್ಣು ತಿನ್ನುವುದನ್ನು ಬಿಡಿಸುವುದಕ್ಕಾಗಿ – ಮಣ್ಣು ತಿಂದರೆ ಹೊಟ್ಟೆ ಕೆಡುತ್ತದೆ. ಇದು ಬೇಡ. ನಿನಗೆ ಒಳ್ಳೇ ರುಚಿಯಾದ ಸಿಹಿ ತಿಂಡಿಯನ್ನು ಕೊಡುತ್ತೇನೆ. ನನ್ನ ಜೊತೆಗೆ ಬಾ– ಎಂಬುದಾಗಿ ನಾನಾವಿಧವಾಗಿ ಬುದ್ಧಿಯನ್ನು ಹೇಳುತ್ತೇವೆಯೋ ಹಾಗೆಯೇ, ವಿಷಯರೂಪಿ ಮಣ್ಣನ್ನು ತಿನ್ನುತ್ತಿರುವ ಈ ಮನಸ್ಸೆಂಬ ಬಾಲಕನಿಗೆ ಇದನ್ನು ಬಿಡಿಸುವುದಕ್ಕಾಗಿ ನಾನಾವಿಧವಾಗಿ ಬುದ್ಧಿಯನ್ನು

ಹೇಳಬೇಕು. ಜಗತ್ತಿನಲ್ಲಿ ಸಾಮಾನ್ಯವಾಗಿ ಎಲ್ಲರೂ ಇತರರಿಗೆ ಬುದ್ಧಿಯನ್ನು ಹೇಳುತ್ತಾರೆಯೇ ಹೊರತು, ತಮಗೆ ತಾವು ಬುದ್ಧಿಯನ್ನು ಹೇಳಿಕೊಳ್ಳುವುದಿಲ್ಲ. ವಿವೇಕಿಯಾದವನು ಮಾತ್ರ ತನಗೆ ತಾನೇ ಬುದ್ಧಿಯನ್ನು ಹೇಳಿಕೊಳ್ಳುತ್ತಾನೆ. ಮನಸ್ಸಿಗೆ ಯಾವರೀತಿಯಾಗಿ ಬುದ್ಧಿಯನ್ನು ಹೇಳಬೇಕೆಂದರೆ 'ಹೇ ಮನಸ್ಸೇ ಸುಮ್ಮನೆ ಏತಕ್ಕೆ ಹಾಗೆ ಹೊರಗಡೆ ಓಡುತ್ತಿದ್ದೀಯ ? ಅಲ್ಲಿ ನಿನಗೆ ಸುಖವನ್ನು ಕೊಡಲು ಏನಿದೆ? ಏನೂ ಇರುವುದಿಲ್ಲ. ಇದೆಲ್ಲವು ನಿನ್ನ ಕಲ್ಪನೆಯೇ ಸರಿ' ಎಂಬುದಾಗಿ ಬುದ್ಧಿಯನ್ನು ಹೇಳಬೇಕು. ಮತ್ತೇನೆಂದು ಹೇಳಬೇಕೆಂದರೆ,

## 1. ಜಗತ್ತು ಸತ್ಯವಾಗಿ ಇಲ್ಲ

ಒಬ್ಬ ಕುಶಲನಾದ ಚಿತ್ರಗಾರನು ಗೋಡೆಯಮೇಲೆ ಮನೆಮಠಗಳನ್ನೂ, ಮನುಷ್ಯರನ್ನೂ , ಕೆರೆಕಟ್ಟೆಗಳನ್ನೂ, ಗಿಡಮರಗಳನ್ನೂ, ಪಶುಪಕ್ಷಿಗಳನ್ನೂ ಸುಂದರವಾಗಿ ಬಣ್ಣಗಳಿಂದ ಬರೆದಿರುತ್ತಾನೆ. ನೋಡುವುದಕ್ಕೆ ಅವು ನಿಜವಾಗಿಯೂ ಇದ್ದಂತೆ ತೋರುತ್ತವೆ. ಹಾಗೆ ತೋರಿದ ಮಾತ್ರಕ್ಕೆ ಅಲ್ಲಿ ಏನಾದರೂ ಇದೆಯೋ ? ಇಲ್ಲ; ಅಲ್ಲಿರುವುದು ಕೇವಲ ಗೋಡೆಯೇ ಹೊರತು ಮತ್ತೊಂದೇನೂ ಇರುವುದಿಲ್ಲ. ಬಣ್ಣಗಳಿಂದ ಹಾಗೆ ತೋರಿತು ಅಷ್ಟೆ. ಹಾಗೆಯೇ ಪರಮಾತ್ಮಸ್ವರೂಪವೆನ್ನುವ ಗೋಡೆಯ ಮೇಲೆ ಮಾಯೆ ಎನ್ನುವ ಬಣ್ಣಗಳಿಂದ ನಾನಾವಿಧವಾಗಿ ಜಗತ್ತು ತೋರುತ್ತಿದೆ. ಹೀಗೆ ತೋರಿದರೂ ಸಹ ಜಗತ್ತು ಸತ್ಯವಾಗಿ ಇಲ್ಲವೇ ಇಲ್ಲ. ವಾಸ್ತವವಾಗಿ ಇರುವುದೆಂದರೆ ತೋರುವ ಜಗತ್ತಿಗೆ ಆಧಾರವಾದ ಪರಮಾತ್ಮ ಸ್ವರೂಪವೊಂದೇ – ಎಂಬುದಾಗಿ ಮನಸ್ಸಿಗೆ ಬೋಧಿಸಬೇಕು.

ಸಿನೀಮಾದಲ್ಲಿ ಅನೇಕವಿಧವಾದ ಪದಾರ್ಥಗಳು ತೋರುತ್ತವೆ. ತೋರಿದರೂ ಸಹ ಅಲ್ಲಿ ಏನಾದರು ಇದೆಯೋ? ಇಲ್ಲ; ಇದನ್ನು ತಿಳಿಯದ ಬಾಲಕನು ಅಲ್ಲಿ ಕಂಡ ಪದಾರ್ಥಗಳನ್ನು ಸತ್ಯವೆಂದು ತಿಳಿದುಕೊಂಡು ಅವುಗಳನ್ನು ತನಗೆ ಬೇಕೆನ್ನುತ್ತಾನೆ. ಹಾಗೆಯೇ ಈ ಜಗದ್ರೂಪಿ ಸಿನಿಮಾದಲ್ಲಿ ಕಾಣುವದನ್ನು ಅಜ್ಞಾನಿ ಬಾಲಕನು ಸತ್ಯವೆಂದು ತಿಳಿದುಕೊಂಡು, 'ಅದನ್ನು ಪಡೆಯಬೇಕು, ಇದನ್ನು ಪಡೆಯಬೇಕು' ಎಂಬುದಾಗಿ ಹೊಡೆದಾಡುತ್ತಿದ್ದಾನೆ. ಆದರೆ ವಿವೇಕಿಯಾದವನು ಮಾತ್ರ ಸಿನಿಮಾದಲ್ಲಿ ಇರುವುದು ಕೇವಲ ಬಟ್ಟೆ ಮಾತ್ರ; ಫಿಲಂನಿಂದ ನಾನಾವಿಧವಾದದೃಶ್ಯ ತೋರುತ್ತಿದೆ ; ಅಲ್ಲಿ ಏನೂ

ಇಲ್ಲವೆಂದು ತಿಳಿಯುವುದರಿಂದ ಅವನಿಗೆ ಅಲ್ಲಿ ಕಾಣುವ ವಸ್ತುಗಳನ್ನು ಪಡೆಯಬೇಕೆಂಬ ಇಚ್ಛೆಯು ಬರುವುದಿಲ್ಲ. ಅದರಂತೆಯೇ ಮಾಯೆ, ಎಂಬುವ ಫಿಲಮಿನಿಂದ ನಾಮರೂಪಗಳಿಲ್ಲದ, ವಿಕಾರವಿಲ್ಲದ, ನಿರ್ವಿಕಲ್ಪ, ನಿರಾಕಾರ, ನಿಷ್ಕ್ರಿಯವಾದ, ಸರ್ವತ್ರವ್ಯಾಪಕವಾದ, ಪರಿಪೂರ್ಣವಾದ, ಶುದ್ಧವಾದ, ಸಚ್ಚಿದಾನಂದ ಸ್ವರೂಪವೇ ಆದ ಪರಮಾತ್ಮಸ್ವರೂಪವೆಂಬುವ ಬಟ್ಟೆಯ ಮೇಲೆ ಈ ಜಗದ್ರೂಪಿ ಸಿನಿಮಾ ತೋರುತ್ತಿದೆ.

ಹೀಗೆಯೇ ಕನಸಿನಲ್ಲಿಯೂ ಸಹ ಅನೇಕ ಪದಾರ್ಥಗಳು ತೋರುತ್ತವೆ. ತೋರಿದ ಮಾತ್ರಕ್ಕೆ ಅವು ಸತ್ಯವಾಗಿ ಇವೆಯೇನು? ಇಲ್ಲ. ಅದರಂತೆಯೇ ಇದು ಒಂದು ಹಗಲು ಕನಸು. ಇಲ್ಲಿ ಅನೇಕವಾಗಿ ಬೇರೆಬೇರೆಯಾಗಿ ತೋರಿದರೂ ಸಹ ವಾಸ್ತವವಾಗಿ ಏನೂ ಇರುವುದಿಲ್ಲ. ಇದೆ ಎನ್ನುವುದು ಕೇವಲ ಭ್ರಮೆಯೇ ಸರಿ. ಹೇಗೆ ಸ್ವಪ್ನಪ್ರಪಂಚವು ಕೇವಲ ಮನಸ್ಸಿನ ವಿಲಾಸವೋ ಹಾಗೆಯೇ, ಎಚ್ಚರವೆಂಬುದಾಗಿಯೂ ಸತ್ಯವೆಂಬು ದಾಗಿಯೂ ತೋರುವ ಈ ಸಮಸ್ತಜಗತ್ತೂ ಕೇವಲ ಮನಸ್ಸಿನ ಆಟವೇ ಸರಿ. ಏತಕ್ಕೆಂದರೆ ಈ ಜಗತ್ತೆಲ್ಲವೂ ಮನಸ್ಸಿದ್ದರೆ ಮಾತ್ರ ತೋರುತ್ತದೆ. ಮನಸ್ಸಿಲ್ಲದಿದ್ದರೆ ತೋರುವುದೇ ಇಲ್ಲ. ಎಚ್ಚರ ಕನಸುಗಳಲ್ಲಿ ಮನಸ್ಸಿರುವುದರಿಂದ ಜಗತ್ತು ತೋರುತ್ತದೆ. ಗಾಢನಿದ್ರೆಯಲ್ಲಿ ಮನಸ್ಸು ಇಲ್ಲದ್ದರಿಂದ ಆಗ ಜಗತ್ತಾಗಲೀ, ಸಂಸಾರವಾಗಲೀ, ಸುಖ ದುಃಖಗಳಾಗಲೀ ತೋರುವುದೇ ಇಲ್ಲ. ಹೋಗಲಿ, ಎಚ್ಚರಕನಸುಗಳಲ್ಲಿ ತೋರುವ ಜಗತ್ತನ್ನಾದರೂ ಸತ್ಯವೆನ್ನೋಣವೆಂದರೆ ಸತ್ಯದ ಸ್ವರೂಪವೇನು? **''ಸತ್ಯತ್ವಂ ಬಾಧರಾಹಿತ್ಯಂ''** ಯಾವುದು ಮೂರು ಕಾಲದಲ್ಲೂ ಮೂರು ಅವಸ್ಥೆಯಲ್ಲೂ ಬದಲಾವಣೆಯನ್ನು ಹೊಂದದೆ ನಾಶವಾಗದೆ ಒಂದೇ ಸಮನಾಗಿ ಇರುತ್ತದೆಯೋ, ಇಷ್ಟೇ ಅಲ್ಲದೆ ದೇಶ, ಕಾಲ, ಕಾರ್ಯ, ಕಾರಣ, ಮೊದಲಾದವುಗಳನ್ನು ಮೀರಿ ತಾನೇ ತಾನಾಗಿದೆಯೋ ಅದೇ ಸತ್ಯವಾದದ್ದು. ಆದರೆ ಎಚ್ಚರದಲ್ಲಿ ತೋರುವ ಜಗತ್ತು ಕನಸಿನಲ್ಲಿ ತೋರುವುದಿಲ್ಲ; ಕನಸಿನಲ್ಲಿ ತೋರುವ ಜಗತ್ತು ಎಚ್ಚರದಲ್ಲಿ ತೋರುವುದಿಲ್ಲ ಮತ್ತು ತಾನು ತೋರುತ್ತಿರುವಾಗಲೂ ಸಹ ಒಂದೇ ಸಮನಾಗಿರದೆ ನಿರಂತರದಲ್ಲೂ ವಿಕಾರವನ್ನು ಹೊಂದುತ್ತಾ ಬದಲಾವಣೆಯಾಗುತ್ತಿದೆ. ಆದುದರಿಂದ ಇದು ಸತ್ಯವಾದದ್ದಲ್ಲ. ಕೇವಲ ಮನಸ್ಸಿನ ಭ್ರಮೆಯೇ ಸರಿ.

## 2. ಜಗತ್ತಿನಲ್ಲಿ ಸುಖವಿಲ್ಲ

ವಿಷಂ ದೃಷ್ಟ್ವಾಽಮೃತಂ ದೃಷ್ಟ್ವಾ ವಿಷಂ ತ್ಯಜತಿ ಬುದ್ಧಿಮಾನ್ ।
ಆತ್ಮಾನಮಪಿ ದೃಷ್ಟ್ವಾಽಹಮನಾತ್ಮಾನಂ ತ್ಯಜಾಮ್ಯಹಮ್ ॥ (ಆ.ಉ.)

ವಿಷವನ್ನೂ, ಅಮೃತವನ್ನೂ ನೋಡಿದ ಬುದ್ಧಿವಂತನು ಅವೆರಡರ ಯೋಗ್ಯತೆಯನ್ನೂ ತಿಳಿದುಕೊಂಡದ್ದರಿಂದ ಹೇಗೆ ವಿಷವನ್ನು ತ್ಯಜಿಸುತ್ತಾನೆಯೋ ಹಾಗೆ, ಜ್ಞಾನಿಗಳಾದವರು ಆತ್ಮಸ್ವರೂಪವನ್ನು ಅರಿತುಕೊಂಡದ್ದರಿಂದ ಆತ್ಮ ಮತ್ತು ಅನಾತ್ಮಗಳನ್ನು ಬೇರ್ಪಡಿಸಿ ಸರಿಯಾಗಿ ಅವುಗಳನ್ನೂ, ಅವುಗಳ ಯೋಗ್ಯತೆಯನ್ನೂ ತಿಳಿದುಕೊಂಡದ್ದರಿಂದ ವಿಷಯರೂಪವಾದ ಅನಾತ್ಮವಿಷಯಗಳನ್ನು ಬಿಟ್ಟಿರುತ್ತಾರೆ. ಅವುಗಳ ಮೇಲಿನ ಮಮತೆಯು ಅವರಿಗೆ ಹೋಗಿರುತ್ತದೆ. ಇದನ್ನು ತಿಳಿದುಕೊಂಡು ಸಾಧಕರು ಮನಸ್ಸಿಗೆ ಈ ವಿಧವಾಗಿ ಬುದ್ಧಿಹೇಳಬೇಕು. 'ಹೇ ಮನಸ್ಸೇ ! ಇಲ್ಲಿ ಏನೂ ಇರುವುದಿಲ್ಲ. ಇಲ್ಲದೇ ಇರುವ ಜಗತ್ತನ್ನು ಇದೆಯೆಂದು ತಿಳಿದುಕೊಂಡು ಏತಕ್ಕೆ ಸುಮ್ಮನೆ ಓಡುತ್ತೀಯೆ ? ಇದರಿಂದ ನಿನಗೆ ಸುಖವಿಲ್ಲ.' ಹೇಗೆ ಬಿಸಿಲಿನಲ್ಲಿ ತೋರುವ ಮೃಗಜಲವನ್ನು ಕಂಡು ಜಿಂಕೆಯು ನೀರೆಂದು ಭ್ರಮಿಸಿ ಓಡುತ್ತದೆಯೋ ಹಾಗೆ, ಮನಸ್ಸೆಂಬ ಜಿಂಕೆಯು ಪ್ರಪಂಚದಲ್ಲಿ ಸುಖವಿದೆ ಎಂಬುದಾಗಿ ಭ್ರಮಿಸಿ ಓಡುತ್ತಿದೆ. ಆದರೆ ಜಿಂಕೆಗೆ ನೀರು ಸಿಕ್ಕುವುದಿಲ್ಲ; ದಾಹವು ಅಡಗುವುದಿಲ್ಲ; ಆಯಾಸವು ಹೆಚ್ಚಾಗುವುದು ತಪ್ಪುವುದಿಲ್ಲ. ಇಷ್ಟಾದರೂ ಸಹ ಅದಕ್ಕೆ ನೀರಿದ್ದಂತೆಯೇ ತೋರುತ್ತದೆ. ಅದರಂತೆಯೇ ಮನಸ್ಸಿಗೆ ಜಗತ್ತಿನಲ್ಲಿ ಸುಖವು ಸಿಕ್ಕುವುದಿಲ್ಲ. ದುಃಖವು ಹೆಚ್ಚಾಗುವುದು ತಪ್ಪುವುದಿಲ್ಲ. ಸುಖ ಸುಖವೆನ್ನುವ ದಾಹವು ಅಡಗುವುದಿಲ್ಲ. ಇಷ್ಟಾದರೂ ಸಹ ಪ್ರಪಂಚದಲ್ಲಿ ಸುಖವಿದ್ದಂತೆಯೇ ತೋರುತ್ತದೆ. ವಿಚಾರಮಾಡಿ ನೋಡಿದರೆ ಪ್ರಪಂಚದಲ್ಲಿ ಲೇಶಮಾತ್ರವೂ ಸುಖವಿರುವುದಿಲ್ಲ.

ರಾಮನು ಸೀತೆಯ ಮಾತನ್ನು ಕೇಳಿಕೊಂಡು ಅರಣ್ಯದಲ್ಲಿ ಮಾಯಾಮೃಗವನ್ನು ಹಿಡಿದುತರಲು ಅದನ್ನು ಹಿಂಬಾಲಿಸಿ ಓಡಿದನು. ಆ ಮೃಗವು ಇನ್ನೇನು ಕೈಗೆ ಸಿಕ್ಕಿದಂತಾಗುತ್ತಿತ್ತು. ಪುನಃ ದೂರವಾಗಿ ಓಡಿ ಹೋಗುತ್ತಿತ್ತು. ಹೀಗಾಗಿ ಕೊನೆಗೂ ಜಿಂಕೆಯು ಕೈಗೆ ಸಿಕ್ಕದೆ ಓಡಿ ಓಡಿ ಬಳಲಿ ಬೆಂಡಾದನು. ವಿವೇಕವಿಚಾರಗಳಿಂದ ಆ ಮೃಗವು ನಿಜವಾದ ಮೃಗವಲ್ಲ. ಮಾಯೆಯಿಂದ ಮೃಗದಂತೆ ತೋರುತ್ತಿದೆ. ಅದು ರಾಕ್ಷಸನಾಗಿದ್ದಾನೆಂದು ತಿಳಿದು ಬಾಣಬಿಟ್ಟಾಗ ಅದು ಸತ್ತುಹೋಯಿತು. ಆಗ ಆ ಭ್ರಮೆಯು ನಿವಾರಣೆಯಾಯಿತು; ಓಡುವುದು ತಪ್ಪಿತು; ಆಯಾಸವು ಹೋಯಿತು. ಇದರಂತೆಯೇ ಜೀವನೆಂಬ ರಾಮನು ಮನಸ್ಸೆಂಬ ಸೀತೆಯ ಮಾತನ್ನು ಕೇಳಿಕೊಂಡು

ಈ ಜಗದ್ರೂಪಿ ಅರಣ್ಯದಲ್ಲಿ ಭ್ರಮೆಯಿಂದ ತೋರುತ್ತಿರುವ ಕಲ್ಪಿತವಾದ, ಸತ್ಯವಲ್ಲದ ವಿಷಯಸುಖವನ್ನು ಹಿಂಬಾಲಿಸಿಕೊಂಡು ಓಡುತ್ತಿದ್ದಾನೆ. ಇನ್ನೇನು ನನಗೆ ಸುಖಸಿಕ್ಕಿತು ಎನ್ನುವಷ್ಟರಲ್ಲಿ ಅದು ಪುನಃ ಎಲ್ಲಿಗೋ ಓಡಿಹೋಗುತ್ತದೆ. ಇದರಿಂದ ಸುಖವಾಗುತ್ತದೆ, ಅದರಿಂದ ಸುಖವಾಗುತ್ತದೆ ಎಂಬುದಾಗಿ ಮುಂದೆ ಮುಂದಕ್ಕೆ ಓಡುತ್ತಿದ್ದಾನೆ. ಹೀಗಾಗಿ ಕೊನೆಗೂ ಸುಖವು ಸಿಕ್ಕದೆ ಕಷ್ಟಪಟ್ಟು ಬಳಲಿ ಬೆಂಡಾಗುತ್ತಿದ್ದಾನೆ. ರಾಮನಂತೆ ಯಾವಾಗ ವಿವೇಕವಿಚಾರಗಳಿಂದ ವಿಷಯಸುಖವು ನಿಜವಾದ ಸುಖವಲ್ಲ ; ಭ್ರಮೆಯಿಂದ ಸುಖದಂತೆ ತೋರುತ್ತಿದೆ ; ಇದು ಕೇವಲ ದುಃಖರೂಪವೇ ಆಗಿದೆ ; ಇದನ್ನು ನಾನು ತಿಳಿಯದೆ ಮೋಸಹೋಗಿದ್ದೇನೆ ; ಪ್ರಪಂಚದಲ್ಲಿ ವಿಷಯಭೋಗಗಳಲ್ಲಿ ಲೇಶಮಾತ್ರವೂ ಸುಖವಿಲ್ಲ – ಎಂಬುದಾಗಿ ತಿಳಿದುಕೊಂಡು ಆತ್ಮಜ್ಞಾನವೆಂಬ ಬಾಣವನ್ನು ಬಿಟ್ಟಾಗ ಈ ಭ್ರಮೆಯು ನಿವಾರಣೆಯಾಗುತ್ತದೆ. ವಿಷಯಗಳನ್ನು ಹಿಂಬಾಲಿಸಿಕೊಂಡು ಓಡುವುದು ತಪ್ಪುತ್ತದೆ. ಪರಿಪರಿ ವಿಧದಿಂದ ಕಷ್ಟಪಡುವದು ಕೊನೆಗಾಣುತ್ತದೆ. ಇವುಗಳಿಗಾಗಿ ಬಳಲಿ ಬೆಂಡಾಗುವುದು ಬಿಡುಗಡೆಯಾಗುತ್ತದೆ. ವಿಷಯಗಳನ್ನು ಕೂಡಿಹಾಕುವುದಕ್ಕಾಗಿ ಕೊರಗಿ ಸಾಯುವುದು ತಪ್ಪುತ್ತದೆ. ಆಗಲೇ ಲೇಶಮಾತ್ರವೂ ದುಃಖವಿಲ್ಲದ ನಿಜವಾದ ಸುಖಶಾಂತಿಗಳು ದೊರೆಯುತ್ತವೆ.

ಈ ರೀತಿಯಾಗಿ ನಾನಾ ವಿಧದಿಂದ ಪ್ರಪಂಚದಲ್ಲಿ ಸುಖವಿಲ್ಲವೆಂಬುದನ್ನು ಮನಸ್ಸಿಗೆ ತೋರಿಸಿಕೊಡಬೇಕು. ವಿಷಯಭೋಗಗಳಲ್ಲಿರುವ ದೋಷಗಳನ್ನು ವಿಚಾರಮಾಡಿ ನೋಡಬೇಕು. ವಿಷಯಗಳಲ್ಲಿ ಸುಖವಿದೆ ಎಂಬುದಾಗಿ ತಿಳಿದುಕೊಂಡಿರುವುದರಿಂದಲೇ ಮನಸ್ಸು ಅವುಗಳನ್ನು ಅಪೇಕ್ಷಿಸುತ್ತದೆ, ಅವುಗಳ ಕಡೆಗೆ ಓಡುತ್ತದೆ.

## 3. ವಿಷಯಗಳನ್ನು ಭೋಗಿಸುವುದರಿಂದ ಸುಖವಿಲ್ಲ, ದುಃಖವೇ ತುಂಬಿದೆ.

ವಿಷಯಗಳ ಭೋಗಗಳಿಂದ ಸುಖಪಡುವುದು ಹೇಗಿದೆ ಎಂದರೆ, ಒಂದು ಹರಿತವಾದ ಕತ್ತಿಯ ತುದಿಗೆ ಚೆನ್ನಾಗಿ ಜೇನುತುಪ್ಪವನ್ನು ಸವರಿದ್ದರು. ಅದನ್ನು ನೋಡಿ ಒಬ್ಬ ಮೂಢನು ಆ ಜೇನುತುಪ್ಪವನ್ನು ನೆಕ್ಕಿ ಸುಖಪಡಬೇಕೆಂದು ಹೋಗಿ ಆ ಕತ್ತಿಯ ತುದಿಯನ್ನು ನೆಕ್ಕಿ ನಾಲಿಗೆಯನ್ನು ಸೀಳಿಕೊಂಡನಂತೆ. ಯಾವರೀತಿ ಬುದ್ಧಿಯಿಲ್ಲದ ಮೂರ್ಖನು ಒಂದು ತೊಟ್ಟು ಜೇನುತುಪ್ಪದ ರುಚಿಗಾಗಿ ಹೋಗಿ ನಾಲಿಗೆಯನ್ನು ಕೊಯ್ದುಕೊಂಡನೋ ಅದರಂತೆಯೇ ಇವನ ಗತಿಯೂ ಆಗಿದೆ. ವಿವೇಕಶೂನ್ಯನಾದ

ಮೂಢಮಾನವನು ವಿಷಯಗಳಿಂದ ಸುಖಪಡಬೇಕೆಂದು ಹೋಗಿ ಸುಖದ ಬದಲು ಭಯಂಕರವಾದ ದುಃಖಗಳನ್ನೇ ಅನುಭವಿಸುತ್ತಿದ್ದಾನೆ.

ಮಣ್ಣಿನಲ್ಲಿ ಮಾಡಿದಂತಹ ಹಣ್ಣುಗಳು ಬಣ್ಣ ಬಳಿದಿರುವುದರಿಂದ ನಿಜವಾದ ಹಣ್ಣಿನಂತೆಯೇ ತೋರುತ್ತವೆ. ಆದರೆ ಅವುಗಳನ್ನು ತಿಂದರೆ ಬಾಯೆಲ್ಲಾ ಮಣ್ಣಾಗುತ್ತದೆ. ಅದರಂತೆಯೇ ವಿಷಯಗಳು ನೋಡಲು ಸುಖಕೊಡುವಂತೆ ತೋರುತ್ತವೆ. ಅವುಗಳನ್ನು ಭೋಗಿಸಿದರೆ ದುಃಖವೇ ಆಗುತ್ತದೆ. ಸುಖವಂತೂ ಇಲ್ಲವೇ ಇಲ್ಲ. ಕೇವಲ ಸುಖದ ಭ್ರಮೆಮಾತ್ರ.

ಯಾರೋ ಒಂದು ಲಾಡು ಉಂಡೆಯನ್ನು ತಂದುಕೊಡುತ್ತಾರೆ. ಅದು ಚೆನ್ನಾಗಿದೆ, ರುಚಿಯಾಗಿದೆ ಎಂಬುದಾಗಿ ತಿನ್ನುವುದಕ್ಕೆ ಕೈಗೆ ತೆಗೆದುಕೊಂಡಾಗ ಆ ಸಮಯದಲ್ಲಿ ನಿನ್ನ ಆಪ್ತರಾದವರು ಬಂದು ಅದರಲ್ಲಿ ವಿಷವಿದೆ ಎಂದು ಹೇಳಿದರೆ ಆಗ ಅದನ್ನು ತಿನ್ನುತ್ತೀಯೇನು? ಎಂದಿಗೂ ತಿನ್ನುವುದಿಲ್ಲ. ಅಷ್ಟೇ ಅಲ್ಲ ಹಸಿದು ಸಾಯುತ್ತಿದ್ದರೂ ಸಹ ಅದನ್ನು ಮುಟ್ಟುವುದಿಲ್ಲ. ಅದೇ ರೀತಿಯಲ್ಲಿ ವಿಷಯಭೋಗಗಳಲ್ಲಿ ಸುಖವಿದೆ ಎಂಬುದಾಗಿ ತಿಳಿದುಕೊಂಡಿರುವುದರಿಂದ ಅವುಗಳನ್ನು ಪಡೆಯಬೇಕೆಂದು ಮನಸ್ಸು ಓಡುತ್ತಿದೆ. ಆದರೆ ಅದರಲ್ಲಿ ದುಃಖವೆನ್ನುವ ವಿಷವು ಬಹಳವಾಗಿ ತುಂಬಿರುತ್ತದೆ. ಎಷ್ಟಿದೆ ಎಂದರೆ **''ಸುಖಂ ವೈಷಯಿಕಂ ಶೋಕಸಹಸ್ರೇಣಾವೃತತ್ವತಃ । ದುಃಖ –ಮೇವೇತಿ ಮತ್ವಾಹ ನಾಲ್ಪೇಸ್ತಿ ಸುಖಮಿತ್ಯಸೌ॥''** (ಪಂ) ''ಸಾಸುವೆಯಷ್ಟು ಸುಖ ಪರ್ವತದಷ್ಟು ದುಃಖ'' ಎಂಬಂತೆ ಒಂದು ಸುಖ ಪಡಬೇಕಾದರೆ ಸಹಸ್ರಾರು ದುಃಖಗಳನ್ನು ಅನುಭವಿಸಬೇಕಾಗುತ್ತದೆ. **'' ಪ್ರಿಯಂ ತ್ವಾಂ ರೋತ್ಸ್ಯತಿ''** ಒಂದು ಸಲ ಪ್ರೀತಿಗೆ ಪಾತ್ರವಾದದ್ದು ಸುಖಕ್ಕೆ ಕಾರಣವಾದದ್ದು ಅದೇ ಮತ್ತೊಂದುಸಲ ದುಃಖಕ್ಕೆ ಕಾರಣವಾಗುತ್ತದೆ. ಯಾವುದರಿಂದ ಒಂದುಸಲ ಸುಖಪಟ್ಟಿರುತ್ತೀಯೋ ಅದರಿಂದಲೇ ಮತ್ತೊಂದುಸಲ ಕಷ್ಟಪಡಬೇಕಾಗುತ್ತದೆ, ದುಃಖಪಡಬೇಕಾಗುತ್ತದೆ. ಅದೇ ಒಂದುಸಲ ಕಣ್ಣೀರನ್ನು ಹಾಕಿಸುತ್ತದೆ. ಸಿಹಿ ಎಂದರೆ ಅದು ಯಾವಾಗಲೂ ಸಿಹಿಯಾಗಿರಬೇಕು. ಒಂದುಸಲ ಸಿಹಿಯಾಗಿಯೂ ಮತ್ತೊಂದುಸಲ ಕಹಿಯಾಗಿಯೂ ತೋರಿದರೆ ಹೇಗೆ ಅದು ನಿಜವಾದ ಸಿಹಿಯಲ್ಲವೋ ಹಾಗೆಯೇ, ಸುಖವೆಂದರೆ ಯಾವಾಗಲೂ ಸುಖವನ್ನೇ ಕೊಡಬೇಕು. ಹೀಗಲ್ಲದೆ ಒಂದುಸಲ ಸುಖವನ್ನೂ ಮತ್ತೊಂದುಸಲ ದುಃಖವನ್ನೂ ಕೊಟ್ಟರೆ ಹೇಗೆ ಅದು ಸುಖವಲ್ಲವೋ ಹಾಗೆಯೇ, ವಿಷಯಭೋಗಗಳು ಒಂದುಸಲ ಸುಖವನ್ನು ಕೊಡುತ್ತವೆ ; ಮತ್ತೊಂದುಸಲ ಅವೇ ದುಃಖವನ್ನೂ ಕೊಡುತ್ತವೆ. ಆದುದರಿಂದ ವಿಷಯಭೋಗಗಳೆಲ್ಲವೂ ಕೇವಲ

ದುಃಖವೇ ಹೊರತು ಸುಖವಲ್ಲ. ಸುಖದ ಸ್ವರೂಪವೇನೆಂದರೆ **"ಯೋ ವೈ ಭೂಮಾ ತುತ್ಸುಖಂ ನಾಲ್ಪೇ ಸುಖಮಸ್ತಿ ಭೂಮ್ಯೈವ ಸುಖಂ"** (ಛಾಂ.7–23) ಯಾವುದು ದೊಡ್ಡದ್ದೋ, ಪೂರ್ಣವಾದದ್ದೋ, ಸತ್ಯವಾದದ್ದೋ, ನಿತ್ಯವಾದದ್ದೋ, ವಿಕಾರವಿಲ್ಲದ್ದೋ, ಅದೇ ನಿಜವಾದ ಸುಖವು. ಇದರ ಹೊರತು ತೋರುವುದೆಲ್ಲಾ ಸುಖವಲ್ಲವೆಂದು ವೇದಗಳು ಸಾರುತ್ತಿವೆ. ತೋರುವ ಸಮಸ್ತಜಗತ್ತೂ, ಅದರೊಳಗಿನ ವಿಷಯಗಳೂ, ಅವುಗಳ ಭೋಗಗಳೂ ಹೇಗಿವೆ ಎಂದರೆ ಅಲ್ಪವಾಗಿಯೂ, ಅನಿತ್ಯವಾದವುಗಳಾಗಿಯೂ, ಕ್ಷಣಭಂಗುರವಾಗಿಯೂ, ತೋರಿ ಅಡಗುವುದಾಗಿಯೂ ಇವೆ. ಅವಿಚಾರದೆಶೆಯಲ್ಲಿ ತೋರುತ್ತವೆ. ವಿಚಾರಮಾಡಿ ನೋಡಿದರೆ ಇಲ್ಲವೇ ಇಲ್ಲದಂತಾಗುತ್ತವೆ.

## 4. ಭೋಗಗಳಿಂದ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ

**ಶ್ವೋಭಾವಾ ಮರ್ತ್ಯಸ್ಯ ಯದನ್ತಕೈತತ್**
**ಸರ್ವೇನ್ದ್ರಿಯಾಣಾಂ ಜರಯನ್ತಿತೇಜಃ।**
**ಅಪಿ ಸರ್ವಂ ಜೀವಿತಮಲ್ಪಮೇವ**
**ತವೈವ ವಾಹಾಸ್ತವ ನೃತ್ಯಗೀತೇ ॥** (ಕಠ.1–1–26.)

ಭೋಗಭಾಗ್ಯಗಳೆಲ್ಲವೂ ಕೇವಲ ಅಲ್ಪಕಾಲ ಮಾತ್ರ ಇರುತ್ತವೆ. ಇವು ಸಮಸ್ತ ಇಂದ್ರಿಯಗಳ ತೇಜಸ್ಸನ್ನೂ ಹರಣಮಾಡುತ್ತವೆ. ದಿನೇ ದಿನೇ ಕ್ಷೀಣವಾಗಿ ಕೊಂಚ ಕಾಲದಲ್ಲಿಯೇ ಹೋಗಿಬಿಡುತ್ತವೆ. ಇವೆಲ್ಲವೂ ಒಂದು ದಿನ ಮೃತ್ಯುವಿನ ಬಾಯಿಗೆ ತುತ್ತಾಗಿ ನಾಶವಾಗುತ್ತವೆ.

ಶಬ್ದಸ್ಪರ್ಶಾದಿ ವಿಷಯಗಳನ್ನು ಭೋಗಿಸುವುದರಿಂದ ಏನಾಗುತ್ತದೆ ? ಎಂದರೆ, ಕಬ್ಬಿನಕೋಲನ್ನು ಗಾಣಕ್ಕೆ ಕೊಟ್ಟರೆ ಹೇಗೆ ಅದರ ರಸವೆಲ್ಲವೂ ಹೋಗಿ ಚರಟ ಮಾತ್ರ ಉಳಿಯುತ್ತದೆಯೋ ಮತ್ತು ಅದರ ಸಾರವೆಲ್ಲಾ ನಾಶವಾಗುತ್ತದೆಯೋ ಹಾಗೆ, ವಿಷಯಗಳನ್ನು ಭೋಗಿಸುವುದರಿಂದ ಸಮಸ್ತ ಇಂದ್ರಿಯಗಳಲ್ಲಿರುವ ಸಾರವೂ ಹೊರಟು ಹೋಗುತ್ತದೆ. ಅವುಗಳಲ್ಲಿರುವ ತೇಜಸ್ಸು ಕ್ಷೀಣವಾಗಿ ಹೋಗುತ್ತದೆ. ಭೋಗಗಳು ಮನುಷ್ಯನ ಧರ್ಮ, ವೀರ್ಯ, ಪ್ರಜ್ಞಾ, ತೇಜಸ್ಸು , ಯಶಸ್ಸುಗಳನ್ನು ನಾಶಪಡಿಸುತ್ತವೆ. ವಿವೇಕಶಕ್ತಿ, ವಿಚಾರಶಕ್ತಿ, ಜ್ಞಾಪಕಶಕ್ತಿ, ಸಹನಾಶಕ್ತಿ, ಶಮ ದಮಾದಿಗಳನ್ನೆಲ್ಲಾ ಇಲ್ಲದಂತಾಗಿ ಮಾಡುತ್ತವೆ. ಸುಖ, ಶಾಂತಿ, ಸಮಾಧಾನಗಳನ್ನೆಲ್ಲ

ಹಾಳುಮಾಡುತ್ತವೆ. ರಾಗದ್ವೇಷಾದಿಗಳನ್ನೂ, ಕಾಮಕ್ರೋಧಾದಿಗಳನ್ನೂ ಪ್ರಬಲವಾಗಿ ಮಾಡುತ್ತವೆ. ಮನುಷ್ಯನ ಸರ್ವಸ್ವವನ್ನೇ ನಾಶಪಡಿಸುತ್ತವೆ. ಸಮಸ್ತ ಅನರ್ಥ ಪರಂಪರೆಗಳಿಗೂ ವಿಷಯಭೋಗಗಳೇ ಕಾರಣವಾಗಿರುತ್ತವೆ.ಇದನ್ನೇ ಗೀತೆಯೂ ಸಹ ವಿವರಿಸುತ್ತದೆ.

**ವಿಷಯೇನ್ದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಮ್ ।**
**ಪರಿಣಾಮೇ ವಿಷಮಿವ......... ॥** (ಗೀ. 18–38)

ಬೆಸ್ತರವನು ಗಾಳಕ್ಕೆ ಸಿಕ್ಕಿಸಿರುವ ಮಾಂಸದ ತುಂಡನ್ನು ಮೀನು ನುಂಗುವಾಗ ಬಹಳಸುಲಭವಾಗಿ , ಆನಂದದಿಂದ, ಸುಖವಾಗಿ ನುಂಗಿಬಿಡುತ್ತದೆ. ನುಂಗುವಾಗ ಲೇನೋ ಸುಖವಾಗಿರುತ್ತದೆ ; ಆದರೆ ಅದು ಹೊರಗಡೆ ಬರುವಾಗ ಮಾತ್ರ ಹಾಗೆಯೇ ಬರುವುದಿಲ್ಲ. ಆ ಮೀನಿಗೆ ವಿಚಿತ್ರವಾದ ಹಿಂಸೆಯನ್ನು ಕೊಟ್ಟು ಅದರ ಪ್ರಾಣವನ್ನೇ ಹೀರಿಕೊಂಡು ಹೊರಗಡೆ ಬರುತ್ತದೆ. ಅದರಂತೆಯೇ ಇಂದ್ರಿಯಗಳ ಮತ್ತು ವಿಷಯಗಳ ಕೂಡುವಿಕೆಯಿಂದಾಗುವ ಭೋಗಗಳು ಮೊದಲು ಆ ಕ್ಷಣದಲ್ಲಿ ಅಮೃತದಂತೆ ತೋರುತ್ತದೆ, ಸುಖವಾಗಿರುತ್ತದೆ, ಬಹಳ ಚೆನ್ನಾಗಿರುತ್ತದೆ. ಆದರೆ ಕೊನೆಗೆ ಅದರ ಪರಿಣಾಮವೇನೆಂದರೆ ಆಸೆಯಿಂದ ಮಾಂಸವನ್ನು ತಿಂದು ಪ್ರಾಣವನ್ನು ಬಿಟ್ಟ ಮೀನಿನಂತೆಯೇ ಇವನ ಗತಿಯೂ ಸಹ ಆಗುತ್ತದೆ. ಭೋಗಗಳು ವಿಷದಂತೆ ಪರಿಣಾಮವಾಗುತ್ತವೆ. ಬಲ, ವೀರ್ಯ, ರೂಪ, ಪ್ರಜ್ಞಾ, ಮೇಧ, ಐಶ್ವರ್ಯ ಮತ್ತು ಉತ್ಸಾಹವನ್ನೂ ಸಮಸ್ತ ವಿಧದ ಶಕ್ತಿಯನ್ನೂ ನಾಶಪಡಿಸುತ್ತವೆ. ಅಧರ್ಮದ ಫಲವಾಗಿ ಕೊನೆಗೆ ನರಕಕ್ಕೆ ಸೆಳೆದುಕೊಂಡು ಹೋಗುತ್ತವೆ.

## 5. ಭೋಗವಸ್ತುಗಳೇ ತನ್ನನ್ನು ಭೋಗಿಸುತ್ತದೆ

**ಭೋಗಾ ನ ಭುಕ್ತಾ ವಯಮೇವ ಭುಕ್ತಾಃ** (ಸುಭಾಷಿತ)

ಭೋಗಗಳಲ್ಲಿರುವ ಒಂದು ವಿಶೇಷವೇನೆಂದರೆ ಇವನು ತಿಳಿದಿರುವಂತೆ ಭೋಗಗಳನ್ನು ಇವನು ಭೋಗಿಸುವುದಿಲ್ಲ. ಮತ್ತೇನೆಂದರೆ ಭೋಗಗಳೇ ಇವನನ್ನು ಭೋಗಿಸುತ್ತವೆ. ಇದು ಹೇಗೆಂದರೆ ಒಂದುಸಲ ವಿಷಯಗಳನ್ನು ಭೋಗಿಸಿದನಂತರ ಆ ಭೋಗವಸ್ತುಗಳು ಎದುರಿನಲ್ಲಿಯೇ ಇದ್ದರೂ, ಅವು ಕೆಡದೆ ಚೆನ್ನಾಗಿಯೇ ಇದ್ದರೂ ಸಹ ಅವುಗಳನ್ನು ಭೋಗಿಸಲು ಸಾಧ್ಯವಾಗುವುದಿಲ್ಲ. ಮೊದಲು ಯಾವುದು ಬೇಕೆನಿಸುತ್ತಿದ್ದಿತೋ, ಪ್ರೀತಿಗೆ ಪಾತ್ರವಾಗಿದ್ದಿತೋ ಅದೇ ಕೊನೆಗೆ ಬೇಡವೆನಿಸುತ್ತದೆ ;

ದ್ವೇಷಕ್ಕೆ ಪಾತ್ರವಾಗುತ್ತದೆ. ಅವುಗಳಿಂದ ಇವನೇ ಜಯಿಸಲ್ಪಡುತ್ತಾನೆ, ಸೋತುಹೋಗುತ್ತಾನೆ. ಉದಾಹರಣೆಗೆ ಒಳ್ಳೆಯ ನೋಟಗಳನ್ನು ಎಂದರೆ ಸಿನಿಮಾ ಸ್ತ್ರೀ ಮಕ್ಕಳು ಮೊದಲಾದ ಸುಂದರವಾದ ದೃಶ್ಯಗಳನ್ನು ಎಷ್ಟು ಚೆನ್ನಾಗಿದ್ದರೂ ಸಹ ಎಷ್ಟುಹೊತ್ತು ನೋಡಬಹುದು ? ಬಹಳ ಹೊತ್ತು ನೋಡಿದರೆ ಕೊನೆಗೆ ಸಾಕೆನಿಸುತ್ತದೆ. ಸಂಗೀತವು ಬಹಳ ಇಂಪಾಗಿದ್ದರೂ ಸಹ ಎಷ್ಟುಹೊತ್ತು ಕೇಳಬಹುದು ? ಕೆಲವು ಹೊತ್ತಿನನಂತರ ಬೇಡವೆನಿಸುತ್ತದೆ. ಒಳ್ಳೆ ರುಚಿಯಾದ ತನಗೆ ಇಷ್ಟಕರವಾದ ಪಕ್ವಾನ್ನವನ್ನು ಎಷ್ಟು ತಿನ್ನಬಹುದು? ಕೊನೆಗೆ ಅಸಹ್ಯವೆನಿಸುತ್ತದೆ. ಸುಗಂಧದ್ರವ್ಯಗಳನ್ನು ಎಷ್ಟುಹೊತ್ತು ಮೂಸಬಹುದು ? ಬಹಳ ಕಾಲವಾದರೆ ತಲೆನೋವು ಬರುತ್ತದೆ. ಇದರಂತೆಯೇ ಸ್ಪರ್ಶೇಂದ್ರಿಯಕ್ಕೆ ಕಾರಣವಾದ ವಿಷಯವೂ ಸಹ ಇದೆ. ಇಷ್ಟೆಲ್ಲಾ ವಿಚಾರಮಾಡಿ ನೋಡಿದರೆ ಭೋಗಗಳನ್ನು ತಾನು ಭೋಗಿಸುತ್ತಾನೆಯೋ ಅಥವಾ ಭೋಗವಸ್ತುಗಳೇ ತನ್ನನ್ನು ಭೋಗಿಸುತ್ತವೆಯೋ ? ಸೋಲುವವರು ಯಾರು ? ತಾನೆ ಅಲ್ಲವೇ? ಈ ಸಮಸ್ತ ಭೋಗಭಾಗ್ಯಗಳೂ ಇರುವುದು ಎಷ್ಟು ಕಾಲ ? ಕೇವಲ ಅಲ್ಪಕಾಲವೆ. ಜೀವನವೂ ಅಲ್ಪಕಾಲವೆ. ನಾಲ್ಕು ತಲೆಯ ಬ್ರಹ್ಮನ ಪರ್ಯಂತ ಸಮಸ್ತರ ಜೀವನವೂ ಕೇವಲ ಸ್ವಲ್ಪಕಾಲ ಮಾತ್ರ. ಕೊನೆಗೆ ಸಮಸ್ತವೂ ಒಂದು ದಿನ ಮೃತ್ಯುವಿನ ವಶವಾಗುತ್ತದೆ.

## 6. ವಿಷಯವಾಸನೆಯಿಂದಲೇ ಜನ್ಮ

**ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।**
**ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥**

ಬೆಂಕಿಗೆ ಆಹುತಿಯನ್ನು ಹಾಕಿದಂತೆಲ್ಲಾ ಅದು ಪ್ರಜ್ವಲಿತವಾಗಿ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ; ಶಾಂತವಾಗುವುದಿಲ್ಲ. ಅದರಂತೆಯೇ ವಿಷಯಗಳನ್ನು ಭೋಗಿಸಿ ಸುಖವನ್ನು ಪಡೆಯುತ್ತೇನೆ, ಶಾಂತಿಯನ್ನು ಹೊಂದುತ್ತೇನೆ, ತೃಪ್ತನಾಗುತ್ತೇನೆ ಎಂದರೆ ಸಾಧ್ಯವಾಗುವುದಿಲ್ಲ. ಭೋಗಿಸಿದ ಹಾಗೆಲ್ಲಾ ವಾಸನೆಯು, ಆಸಕ್ತಿಯು, ಅತೃಪ್ತಿಯು, ಅಶಾಂತಿಯು ಹೆಚ್ಚಾಗುತ್ತದೆ ಮತ್ತು ಬಲವಾಗುತ್ತದೆ. ಸ್ವಲ್ಪವೂ ತಗ್ಗುವುದಿಲ್ಲ. ಬರುಬರುತ್ತಾ ದೇಹದಲ್ಲಿ ಶಕ್ತಿಯು ತಗ್ಗುತ್ತದೆಯೇ ಹೊರತು ಹೆಚ್ಚಾಗುವುದಿಲ್ಲ. ಆದರೆ ವಿಷಯವಾಸನೆಯು ಮಾತ್ರ ದಿನೇ ದಿನೇ ಹೆಚ್ಚಾಗುತ್ತದೆಯೇ ಹೊರತು ಸ್ವಲ್ಪವೂ ತಗ್ಗುವುದಿಲ್ಲ. ವಿಷಯಗಳನ್ನು ಭೋಗಿಸಲು ಶಕ್ತಿ ಇರುವುದಿಲ್ಲ.

ಆದರೆ ಭೋಗಿಸಬೇಕೆಂಬ ಆಶೆಯು ಮಾತ್ರ ಪ್ರಬಲವಾಗಿರುತ್ತದೆ. ಒಬ್ಬ ಹುಡುಗನು ಮುದುಕನನ್ನು ನೋಡಿ ಅಜ್ಜಾ ಮದುವೆ ಮಾಡಿಕೊಳ್ಳುತ್ತೀಯ ? ಎಂದು ಕೇಳಿದನಂತೆ. ಅದಕ್ಕೆ ಆ ಮುದುಕನು ಈಗ ನನಗೆ ಯಾರು ಹೆಣ್ಣನ್ನು ಕೊಡುತ್ತಾರೆ ? ಎಂದು ಕೇಳಿದನಂತೆ. ಭೋಗದ ಪ್ರತಾಪವು ಎಷ್ಟಿದೆ ? ದೇಹವು ಮುದಿಯಾದರೂ ವಾಸನೆಯು ಮುದಿಯಾಗುವುದಿಲ್ಲ, ಇನ್ನೂ ಅದಕ್ಕೆ ಮಾತ್ರ ಪ್ರಾಯವೇ ಬರುತ್ತದೆ. ವಾಸನಾಶಕ್ತಿಯು ಹೆಚ್ಚಾಗುತ್ತದೆ, ಜೀರ್ಣಶಕ್ತಿಯು ಕಡಿಮೆಯಾಗುತ್ತದೆ. ಮುದುಕರಾಗಿದ್ದರೂ ಸಹ ರುಚಿ ರುಚಿಯಾದ ಬಗೆ ಬಗೆಯ ಆಹಾರವನ್ನು ತಿನ್ನಬೇಕೆನ್ನಿಸುತ್ತದೆ. ಆದರೆ ಜೀರ್ಣಿಸಿಕೊಳ್ಳುವ ಶಕ್ತಿಯು ಮಾತ್ರ ಇರುವುದಿಲ್ಲ. ಹುಟ್ಟಿದಲಾಗಾಯ್ತು ಎಷ್ಟು ಬಗೆಯ ಆಹಾರವನ್ನು ತಿಂದಿರುತ್ತಾರೋ ಹೇಳಲು ಸಾಧ್ಯವಿಲ್ಲ. ಇದುವರೆಗೂ ತಿಂದಿರುವುದನ್ನು ಒಂದುಕಡೆ ಸೇರಿಸಿದರೆ ಅನೇಕ ಸಂತರ್ಪಣೆಗಳನ್ನು ಮಾಡಬಹುದು. ಆದರೂ ವಾಸನೆಯು ತಗ್ಗಲಿಲ್ಲ. ಸಾಯುವ ಹಾಗಿದ್ದರೂ ಸಹ ಇನ್ನೂ ವಿಷಯಭೋಗಗಳಿಂದ (ಪ್ರಪಂಚದಲ್ಲಿ) ಸುಖಪಡಬೇಕೆಂಬ ಆಶೆಯು ಮಾತ್ರ ತಪ್ಪುವುದಿಲ್ಲ. ವಿಷಯ ವಾಸನೆಯಿಂದಲೇ ಒಂದು ದಿನ ಪ್ರಾಣವನ್ನು ಬಿಡುತ್ತಾನೆ. ಆ ವಾಸನೆಯಿಂದಲೇ ಪುನಃ ಹುಟ್ಟಬೇಕಾಗುತ್ತದೆ. ಹೀಗೆಯೇ ಜನನ ಮರಣ ಪ್ರವಾಹದಲ್ಲಿ ಸಿಲುಕಿ ಅನೇಕ ನೀಚಯೋನಿಗಳಲ್ಲಿ ಹುಟ್ಟಿ ಹುಟ್ಟಿ ಬಳಲಿ ಬೆಂಡಾಗಬೇಕಾಗುತ್ತದೆ.

''ಕಾಮ್ಯಾದಿದೋಷದೃಷ್ಟ್ಯಾದ್ಯಾಃ ಕಾಮಾದಿ ತ್ಯಾಗಹೇತವಃ'' (ಪಂ.) ಹೀಗೆ ನಾನಾರೀತಿಯಲ್ಲಿ ವಿಷಯಗಳಲ್ಲಿರುವ ದೋಷಗಳನ್ನೂ, ದುಃಖವನ್ನೂ ವಿಚಾರಮಾಡಿ ನೋಡಬೇಕು. ತಾನು ಪಂಚಭಕ್ಷ್ಯಪರಮಾನ್ನವನ್ನೇ ತಿಂದಿದ್ದರೂ ಸಹ ಅದು ವಾಂತಿಯಾಗಿ ಹೊರಗಡೆ ಬಂದರೆ ಅದನ್ನು ತಿನ್ನಬೇಕೆನ್ನಿಸುತ್ತದೆ ಏನು? ಇಲ್ಲ; ಏತಕ್ಕೆಂದರೆ ಅದು ಅಸಹ್ಯವಾಗಿ ತೋರುತ್ತದೆ. ಆದರೆ ತಿಳುವಳಿಕೆಯಿಲ್ಲದ ನಾಯಿಯು ಮಾತ್ರ ಅದನ್ನು ತಿನ್ನುತ್ತದೆ. ಹೇಗೆ ತಾನುಬಿಟ್ಟಂಥ ಮಲವನ್ನು ಸ್ಮರಿಸಲೂ ಸಹ ಅಸಹ್ಯವಾಗಿ ಎಂದೂ ಅದನ್ನು ಸ್ಮರಿಸುವುದಿಲ್ಲವೋ ಹಾಗೆ, ವಿಷಯ ಭೋಗಗಳಲ್ಲಿರುವ ದೋಷವನ್ನೂ, ದುಃಖವನ್ನೂ ಕಂಡುಕೊಂಡರೆ ತಿಳಿದುಕೊಂಡರೆ ಆಗ ಮನಸ್ಸು ಅವುಗಳನ್ನು ಸ್ಮರಿಸುವುದನ್ನೇ ಬಿಟ್ಟುಬಿಡುತ್ತದೆ.

## 7. ಯಾರಿಗೆ ನಿತ್ಯಸುಖವು ಸಿಕ್ಕುತ್ತದೆ ?

ಬಾಹ್ಯಸ್ಪರ್ಶೇಷ್ವಸಕ್ತಾತ್ಮಾ ವಿಂದತ್ಯಾತ್ಮನಿ ಯತ್ಸುಖಮ್ ।
ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯ್ಯಮಶ್ನುತೇ ॥ (ಗೀ॥ 5–21.)

ಯಾರು ಇಂದ್ರಿಯಗಳಿಗೆ ಗೋಚರವಾಗುವಂತಹ ಶಬ್ದಸ್ಪರ್ಶಾದಿ ವಿಷಯಗಳಲ್ಲಿ ರಮಿಸುವುದಿಲ್ಲವೋ, ಅವುಗಳನ್ನು ಪ್ರೇಮಿಸುವುದಿಲ್ಲವೋ ಅವುಗಳನ್ನು ಕಾಮಿಸುವುದಿಲ್ಲವೋ, ಅವುಗಳಲ್ಲಿ ಯಾರ ಮನಸ್ಸು ಆಸಕ್ತಿಯನ್ನಿಡುವುದಿಲ್ಲವೋ, ಯಾವ ಧೀರರು ವಿವೇಕವಿಚಾರಗಳಿಂದ ತಮ್ಮ ಮನಸ್ಸು ಬುದ್ಧಿಗಳನ್ನು ಹೊರಗಿನ ಶಬ್ದಸ್ಪರ್ಶಾದಿ ವಿಷಯಗಳಿಂದ ಹಿಂತಿರುಗಿಸಿಕೊಂಡು ತನ್ನೊಳಗಡೆಯೇ ಇರುವಂಥ ತನ್ನ ನಿಜಸ್ವರೂಪವೇ ಆದ ಆತ್ಮನಲ್ಲಿ ಪರಮಾನಂದಸ್ವರೂಪಿಯಾದ ಪರಮಾತ್ಮನಲ್ಲಿ ಅಥವಾ ಸಚ್ಚಿದಾನಂದಸ್ವರೂಪಿಯಾದ ಸದ್ಗುರುವಿನಲ್ಲಿ ಮನಸ್ಸು ಬುದ್ಧಿಗಳನ್ನು ಸ್ಥಿರವಾಗಿಡುತ್ತಾರೆಯೋ, ಅಲ್ಲಿಯೇ ನೆಲೆನಿಲ್ಲಿಸುತ್ತಾರೆಯೋ, ಆ ಸ್ವರೂಪದಲ್ಲೇ ಮನಸ್ಸು ಬುದ್ಧಿಗಳನ್ನು ಕರಗಿಸುತ್ತಾರೆಯೋ ಅಂಥವರಿಗೇ ವಿಷಯರಹಿತವಾದ , ನಾಶರಹಿತ ವಾದ, ಅಪಾರವಾದ, ನಿತ್ಯವಾದ, ಶಾಶ್ವತವಾದ, ಪರಿಪೂರ್ಣವಾದ ಸುಖವು ದೊರಕುತ್ತದೆ. ಇದೇ ವಿಷಯವನ್ನು ಉಪನಿಷತ್ತುಗಳು ಪುಷ್ಟೀಕರಿಸುತ್ತವೆ.

ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್
ಆವೃತ್ತಚಕ್ಷುರಮೃತತ್ವಮಿಚ್ಛನ್ (ಕಠ. 2–1–1)

ಹೇಗೆ ಕೆಲವರು ನದಿಯ ಪ್ರವಾಹಕ್ಕೆ ವಿರುದ್ಧವಾಗಿ ಈಜಿಕೊಂಡು ಹೋಗುತ್ತಾರೆಯೋ ಹಾಗೆ, ಸ್ವಭಾವತಃ ಇಂದ್ರಿಯಗಳ ಪ್ರವೃತ್ತಿಯು ಬಹಿರ್ಮುಖ ವಾಗಿದ್ದರೂ ಸಹ, ಅವು ಇವನನ್ನು ಹೊರಗಡೆಯೇ ಸೆಳೆಯುತ್ತಿದ್ದರೂ ಸಹ, ಯಾವ ಧೀರರು, ಬುದ್ಧಿವಂತರು, ವಿವೇಕಿಗಳು ತಮ್ಮ ಇಂದ್ರಿಯಗಳನ್ನು ವಿಷಯಗಳ ಸೆಳೆತದಿಂದ ಸಂಪೂರ್ಣವಾಗಿ ನಿಗ್ರಹಿಸಿ ಹಿಂತಿರುಗಿಸಿಕೊಂಡು ಅವುಗಳನ್ನು ಅಂತರ್ಮುಖವಾಗಿ ಮಾಡಿ, ಸಮಸ್ತ ಇಂದ್ರಿಯಗಳ ವ್ಯಾಪಾರವನ್ನೂ ನೋಡುತ್ತಿರುವಂಥ, ಎಲ್ಲದಕ್ಕಿಂತಲೂ ಒಳಗಿರುವಂಥ ಸಮಸ್ತಕ್ಕೂ ಆಧಾರವಾದ ಆತ್ಮಸ್ವರೂಪದಲ್ಲಿಯೇ ನೆಲೆನಿಲ್ಲುತ್ತಾರೆಯೋ ಅಂಥಹವರಿಗೇ ಅಮೃತತ್ವವು ದೊರೆಯುತ್ತದೆ.

ಹೊರಗಿನ ಶಬ್ದಸ್ಪರ್ಶಾದಿ ವಿಷಯಗಳನ್ನೇ ಯಾವಾಗಲೂ ಆಲೋಚಿಸು ವವನಿಗೆ ಚಿಂತಿಸುವವನಿಗೆ ಖಂಡಿತವಾಗಿಯೂ ಎಂದಿಗೂ ಆತ್ಮಸಾಕ್ಷಾತ್ಕಾರವಾಗು ವುದಿಲ್ಲ. ಅಮೃತತ್ವವನ್ನು, ಮರಣರಹಿತವಾದ ಸ್ಥಿತಿಯನ್ನು ನಿತ್ಯತ್ವವನ್ನು

ಅಪೇಕ್ಷಿಸುವವನು ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳ ಚಿಂತನೆಯನ್ನು, ಸ್ಮರಣೆಯನ್ನು ಸಂಪೂರ್ಣವಾಗಿ ಬಿಡಲೇಬೇಕು. ಸ್ವಾಭಾವಿಕವಾಗಿ ಹೊರಗಿನ ಅನಾತ್ಮವಸ್ತುಗಳನ್ನು ನೋಡುತ್ತಿರುವುದೇ ಆತ್ಮಸಾಕ್ಷಾತ್ಕಾರಕ್ಕೆ ಪ್ರತಿಬಂಧಕವಾದ ಅವಿದ್ಯೆಯಾಗಿರುತ್ತದೆ. ಇದರ ಜೊತೆಯಲ್ಲಿ ಅಜ್ಞಾನವನ್ನು ಪ್ರದರ್ಶನಪಡಿಸುವುದು ಮತ್ತೊಂದು ಇದೆ. ಅದು ಯಾವುದೆಂದರೆ ಈ ಜಗತ್ತಿನಲ್ಲಿ ತೋರುತ್ತಿರುವ ಮತ್ತು ತೋರದೆ ಇರುವ ಪರಲೋಕಗಳಲ್ಲಿಯ ಭೋಗಗಳಲ್ಲಿರುವ ತೃಷ್ಣಾ ಎಂದರೆ ವಾಸನೆ, ಆಸಕ್ತಿ, ವ್ಯಾಮೋಹವಿದೆಯೋ ಅದೇ ಅವಿದ್ಯೆಯಾಗಿ ಆತ್ಮದರ್ಶನವನ್ನು ಮಾಡದಂತೆ ಅಡ್ಡಿಪಡಿಸಿರುತ್ತದೆ. ಆದುದರಿಂದ ಯಾರು ಇವೆರಡುಕಡೆಯ ವಿಷಯಾಸಕ್ತಿಯನ್ನು ಬಿಟ್ಟಿರುತ್ತಾರೆಯೋ, ಅವುಗಳ ಚಿಂತನೆಯನ್ನು ಬಿಟ್ಟಿರುತ್ತಾರೆಯೋ ಯಾರು ತಮ್ಮ ಒಳಗಡೆಯೇ ನೋಡುತ್ತಾರೆಯೋ, ಆತ್ಮಸ್ವರೂಪದಲ್ಲಿಯೇ ಮನಸ್ಸು ಬುದ್ಧಿಗಳನ್ನಿಟ್ಟಿರುತ್ತಾರೆಯೋ ಅಂತಹವರಿಗೇ ನಿತ್ಯಸುಖವು ದೊರೆಯುತ್ತದೆ.

## 8. ನಿತ್ಯ ಸುಖವು ತನ್ನೊಳಗೇ ಇದೆ.

ಯಥಾರ್ಥವನ್ನು ಸ್ವಲ್ಪ ವಿಚಾರದೃಷ್ಟಿಯಿಂದ ನೋಡಿದರೆ ತನ್ನೊಳಗೇ ಪರಿಪೂರ್ಣವಾದ ನಿತ್ಯವಾದ ಅಕ್ಷಯವಾದ ಸುಖವು ತುಂಬಿದೆ. ಹೊರಗಡೆ ತೋರುವ ವಿಷಯಗಳಲ್ಲಾಗಲಿ ಅಥವಾ ಮತ್ತೆಲ್ಲಾದರೂ ಆಗಲಿ ಸುಖವಿಲ್ಲ. ಇದು ಹೇಗೆಂದರೆ ನಿನ್ನ ಅನುಭವವನ್ನೇ ಸ್ವಲ್ಪ ನೋಡೋಣ. ಈಗ ನಿನ್ನ ಅನುಭವದಲ್ಲಿ ಹೇಗಿದೆ ಎಂದರೆ ಭೋಗವಸ್ತುಗಳಿದ್ದರೇ ಸುಖ, ಇಲ್ಲದಿದ್ದರೆ ಸುಖವಿಲ್ಲವೆಂದು ತಿಳಿದುಕೊಂಡು ನಾನಾ ವಿಧವಾದ ವಸ್ತುಗಳನ್ನು ಕೂಡಿಹಾಕುತ್ತಿದ್ದೀಯೆ. ಅವುಗಳಿಂದಲೇ ಸುಖವಾಗುತ್ತದೆಂದು ತಿಳಿದಿರುತ್ತೀಯೆ. ಅವುಗಳಿಲ್ಲದಿದ್ದರೆ ನನಗೆ ಸುಖವಿಲ್ಲವೆಂದು ಹೇಳುತ್ತೀಯೆ. ಆದರೆ ಎಷ್ಟು ಭೋಗವಸ್ತುಗಳಿದ್ದರೂ ಸಹ ಆಗಿಂದಾಗ್ಗೆ ಸಾಕಾಗಿ ಬೇಸತ್ತು ಅವುಗಳನ್ನು ತಿರಸ್ಕರಿಸಿ ಮಲಗಿಕೊಂಡು ನಿದ್ರೆಯನ್ನು ಮಾಡುತ್ತೀಯೆ. ನಂತರ ಎದ್ದಮೇಲೆ ಸುಖವಾಗಿದ್ದೇನೆಂದು ಹೇಳುತ್ತೀಯೆ. ಆಗ ಸಮಸ್ತ ವಿಧವಾದ ಎಲ್ಲಾ ಆಯಾಸವೂ, ಬಳಲಿಕೆಯೂ, ಚಿಂತೆಯೂ ಸಂಪೂರ್ಣವಾಗಿ ಹೋಗಿತ್ತೆಂದು ಹೇಳುತ್ತೀಯೆ. ಆಯಾಸವು ಹೋಗಲು, ಚಿಂತೆಯು ದೂರವಾಗಲು, ಬಳಲಿಕೆಯಿಂದ ಬಿಡುಗಡೆಯಾಗಲು, ಲೇಶಮಾತ್ರವೂ ದುಃಖವಿಲ್ಲದೆ ಸುಖಪಡಲು ಆಗ ಅಲ್ಲಿ ಯಾವ ಭೋಗಪದಾರ್ಥಗಳಿದ್ದವು ? ಸ್ವಲ್ಪ ಹೇಳು ನೋಡೋಣ ? ಯಾವ ವಸ್ತುಗಳೂ ಇಲ್ಲದೆ ತನಿನಿದ್ರೆಯಲ್ಲಿ ಸುಖಪಡುತ್ತೀಯೆ ಮತ್ತು ದುಃಖವಾಗುವುದಿಲ್ಲ. ಎಚ್ಚರದಲ್ಲಿ ಅನೇಕತರಹದ ಭೋಗಭಾಗ್ಯಗಳೆಲ್ಲಾ ಇದ್ದರೂ ಸಹ ಸುಖವು ಸಿಕ್ಕುವುದಿಲ್ಲ, ದುಃಖವು

ತಪ್ಪುವುದಿಲ್ಲ. ಈ ವಿಧವಾಗಿ ವಿಚಾರವನ್ನು ಮಾಡಿ ನೋಡಿದರೆ ಯುಕ್ತಿಯಿಂದಲೂ ಅನುಭವದಿಂದಲೂ ತನ್ನೊಳಗಡೆಯೇ ಸುಖವಿದೆ ಹೊರಗಡೆ ಎಲ್ಲಿಯೂ ಇಲ್ಲವೆಂಬುದು ಸಿದ್ಧವಾಗುತ್ತದೆ. ''ಕಂಕಳೊಳಗೆ ಕೂಸನ್ನಿಟ್ಟುಕೊಂಡು ಊರೆಲ್ಲಾ ಹುಡುಕಿದರು'' ಎಂಬಂತೆ ನಿನ್ನೊಳಗಡೆಯೇ ಇರುವ ಸುಖವನ್ನು ಹೊರಗಡೆಯಲ್ಲೆಲ್ಲಾ ಹುಡುಕುತ್ತಿದ್ದೀಯೆ.

ಒಂದು ಮುದುಕಿಯು ರಾತ್ರೆಯ ಹೊತ್ತು ಹೊರಗಡೆ ರಸ್ತೆಯಲ್ಲೆಲ್ಲಾ ಹುಡುಕುತ್ತಿದ್ದಳು. ಆಗ ಒಬ್ಬನು 'ಅಜ್ಜಿ ಏನು ಹುಡುಕುತ್ತೀಯೆ'? ಎಂಬುದಾಗಿ ಕೇಳಿದನು. ಅದಕ್ಕೆ ಆ ಮುದುಕಿಯು 'ಸೂಜಿಯು ಕಳೆದುಹೋಗಿದೆ ಹುಡುಕುತ್ತಿದ್ದೇನೆ ' ಎಂಬುದಾಗಿ ಉತ್ತರ ಕೊಟ್ಟಳು. ಸೂಜಿಯು ಎಲ್ಲಿ ಕಳೆಯಿತೆಂದು ಕೇಳಲು ಮನೆಯಲ್ಲಿ ಎಂದಳು. ಮನೆಯಲ್ಲಿ ಕಳೆದುಕೊಂಡಿರುವ ಸೂಜಿಯನ್ನು ಹೊರಗಡೆ ಎಷ್ಟು ಹುಡುಕಿದರೆ ತಾನೆ ಸಿಕ್ಕುತ್ತದೆ ? ಇದು ಹೇಗೆ ಅಸಂಭವವೋ ಹಾಗೆ, ತನ್ನೊಳಗೇ ಇರುವಂಥ ಸುಖವನ್ನು ಹೊರಗಡೆ ಎಷ್ಟು ಹುಡುಕಿದರೆ ತಾನೆ ಸಿಕ್ಕುತ್ತದೆ ? ಎಷ್ಟು ಕಷ್ಟಪಟ್ಟು ಹುಡುಕಿದರೂ ಸಿಕ್ಕುವುದಿಲ್ಲ. ಕೇವಲ ಶ್ರಮವೇ ಸರಿ. ಆದುದರಿಂದ ವಿವೇಕಿಯಾದವನು ಹೊರಗಡೆ ಹುಡುಕುವುದನ್ನು ಬಿಟ್ಟು ತನ್ನೊಳಗಡೆಯೇ ಹುಡುಕುವುದನ್ನು ಕಲಿಯಬೇಕು.

ನಾಯಿಯು ಎಲುಬುಗಳನ್ನು ಜಗಿಯುತ್ತದೆ. ಅದು ತನ್ನ ದವಡೆಯಿಂದಲೇ ಬರುವ ರಕ್ತವನ್ನು ಎಲುಬಿನಲ್ಲಿಯೇ ರಕ್ತವು ಬಂದಿತೆಂದು ತಿಳಿದುಕೊಳ್ಳುತ್ತದೆ. ತನ್ನ ರಕ್ತವನ್ನೇ ತಾನು ಕುಡಿದು ಆನಂದಿಸುತ್ತದೆ. ಕೊನೆಗೆ ಎಲುಬಿನಿಂದಾದ ಗಾಯದಿಂದ ದುಃಖವಾಗಿ ಅರಚಿಕೊಳ್ಳುತ್ತದೆ. ಇದರಂತೆಯೇ ನಾಯಿಯ ಹಾಗಿರುವ ಪಾಮರನು, ವಿಷಯಲಂಪಟನು, ಭೋಗಲೋಲುಪನು ವಿಷಯರೂಪಿ ಎಲುಬುಗಳಲ್ಲಿ ಸುಖವಿದೆ ಎಂದು ತಿಳಿದುಕೊಂಡಿರುವ ಮೂರ್ಖನು ಇವುಗಳ ಭೋಗಕ್ಕಾಗಿ ಹೊಡೆದಾಡಿ ಕಷ್ಟಪಟ್ಟು ವಿಷಯಗಳನ್ನು ಭೋಗಪದಾರ್ಥಗಳನ್ನು ಸಂಪಾದಿಸಿ ಭೋಗಿಸುತ್ತಾನೆ. **'ಆತ್ಮಾಭಿಮುಖ ಧೀವೃತ್ತೌ ಸ್ವಾನಂದಃ ಪ್ರತಿಬಿಂಬತಿ'** ಭೋಗಕಾಲದಲ್ಲಿ ಮನಸ್ಸು ಏಕಾಗ್ರವಾಗಿ ಅಂತರ್ಮುಖವಾಗುವುದರಿಂದ ತನ್ನೊಳಗಿನಿಂದಲೇ ಆತ್ಮನ ಆನಂದವು ಹೊರಸೂಸುತ್ತದೆ. ಆಗ ತನ್ನ ಆನಂದವನ್ನೇ ತಾನು ಅನುಭವಿಸುತ್ತಾನೆ. ಈ ಮರ್ಮವನ್ನರಿಯದೆ ಹೇಗೆ ನಾಯಿಯು ಎಲುಬುಗಳಲ್ಲಿಯೇ ರಕ್ತವು ಬಂದಿತೆಂದು ತಿಳಿಯುತ್ತದೆಯೋ ಹಾಗೆ, ಸಾರಾಸಾರವಿವೇಕವಿಲ್ಲದ ವಿಷಯಾಸಕ್ತನು ವಿಷಯ ಗಳಿಂದಲೇ ತನಗೆ ಸುಖವು ಸಿಕ್ಕಿತೆಂದು ತಿಳಿಯುತ್ತಾನೆ. ಕೊನೆಯಲ್ಲಿ ಆ ನಾಯಿಯು ಹೇಗೆ ಎಲುಬುಗಳಿಂದಾದ ಗಾಯದಿಂದ ಅರಚುತ್ತದೆಯೋ ಹಾಗೆ, ಎಲುಬಿನಂತಿರುವ ವಿಷಯಗಳಿಂದ ನಿರಂತರದಲ್ಲೂ ದುಃಖವನ್ನೇ ಅನುಭವಿಸುತ್ತಾನೆ. ಇವನು ಜಗತ್ತಿನಲ್ಲಿ ವಿಷಯೋಪಭೋಗಗಳಿಂದ ಸುಖಪಡುವುದೂ ಒಂದೇ ಕ್ರಿಮಿಗಳು ಅಮೇಧ್ಯದಲ್ಲಿ ಸುಖಪಡುವುದೂ ಒಂದೇ. ಇದರಲ್ಲೇನೂ ಸಂಶಯವಿಲ್ಲ.

## 9. ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವ ಉಪಾಯ

**ಉಪಾಸನಾಮೂರ್ತಿಧ್ಯಾನೀ। ಅಥವಾ ಆತ್ಮಾನುಸಂಧಾನೀ।**
**ನಾಹೀ ತರೀ ಶ್ರವಣಮನನೀ। ನಿರಂತರ॥** (ದಾ. 14–7–16)

ಈ ಪ್ರಕಾರ ನಾನಾ ರೀತಿಯಲ್ಲಿ ಶಬ್ದಸ್ಪರ್ಶಾದಿ ವಿಷಯಗಳಿಂದಾಗುವ ದುಃಖವನ್ನೂ, ಅವುಗಳ ಕ್ಷಣಭಂಗುರತ್ವ, ಅನಿತ್ಯತ್ವ, ಕಲ್ಪಿತತ್ವವೇ – ಮೊದಲಾದ ಅವುಗಳಲ್ಲಿರುವ ದೋಷಗಳನ್ನೂ ಪದೇ ಪದೇ ವಿಚಾರಮಾಡಬೇಕು. ಹೀಗೆ ಮಾಡುವುದರಿಂದ ಅವುಗಳಲ್ಲಿರುವ ಆಸಕ್ತಿಯು ಪ್ರೇಮವು ಕಡಿಮೆಯಾಗುತ್ತದೆ. ವಿವೇಕಯುಕ್ತವಾದ ವಿಚಾರವು ತೀವ್ರವಾಗಿ ನಡೆಯುತ್ತಿದ್ದರೆ ಬರುಬರುತ್ತಾ ವಿಷಯಗಳಲ್ಲಿರುವ ಆಸಕ್ತಿಯು ಸಂಪೂರ್ಣವಾಗಿ ಹೊರಟುಹೋಗುತ್ತದೆ. ಈ ವಿಧದಲ್ಲಿ ವಿಚಾರಮಾಡಿ, 'ಹೇ ಮನಸ್ಸೇ, ಸುಮ್ಮನೆ ಹೊರಗಡೆ ಹೋಗಬೇಡ. ಅಲ್ಲಿ ಸುಖವಿಲ್ಲ ದುಃಖವೇ ತುಂಬಿದೆ. ಸ್ವಲ್ಪ ವಿಚಾರಮಾಡಿ ವಿವೇಕದಿಂದ ನೋಡು'. ಆತ್ಮಸ್ವರೂಪದಲ್ಲಿ ಪರಮಾತ್ಮನಲ್ಲಿ ಅಥವಾ ಸುದ್ಗುರುವಿನಲ್ಲಿ ದುಃಖವಿಲ್ಲದ ನಿತ್ಯಸುಖವಿದೆ. ಆದುದರಿಂದ ನಿರಂತರದಲ್ಲೂ ಆತ್ಮಾನುಸಂಧಾನವನ್ನೋ ಅಥವಾ ಸದ್ಗುರುವಿನ ಇಲ್ಲದಿದ್ದರೆ ಇಷ್ಟದೇವತಾಮೂರ್ತಿಯ ಧ್ಯಾನವನ್ನೋ ಮಾಡು' – ಎಂಬುದಾಗಿ ಮನಸ್ಸಿಗೆ ಬುದ್ಧಿ ಹೇಳಬೇಕು. ಈ ವಿಧದಲ್ಲಿ ಬುದ್ಧಿ ಹೇಳುವುದರಿಂದ ಮನಸ್ಸು ದಾರಿಗೆ ಬರುತ್ತದೆ. ಹೃದಯಕಮಲದಲ್ಲಿ ಸದ್ಗುರುವನ್ನು, ''ಮನಸ್ಸಿನ ಹರಿದಾಟವನ್ನು ತಪ್ಪಿಸಿ ವಿಷಯಗಳ ಚಿಂತೆಯನ್ನು ತೊಲಗಿಸಿ ಸದಾ ನಿನ್ನ ಸಚ್ಚಿದಾನಂದ ಸ್ವರೂಪವನ್ನೇ ಧ್ಯಾನಿಸುವಂತೆ ಅನುಗ್ರಹಿಸು'' – ಎಂಬುದಾಗಿ ಅನನ್ಯಮನಸ್ಸಿನಿಂದ ಪ್ರಾರ್ಥನೆಯನ್ನು ಮಾಡಬೇಕು. ಇದು ಎಲ್ಲದಕ್ಕಿಂತಲೂ ಹೆಚ್ಚಿನ ಉಪಾಯ. **''ಸುಪ್ತೇರುತ್ಥಾಯ ಸುಪ್ತ್ಯಂತಮ್ ಬ್ರಹ್ಮೈಕಂ ಪರಿಚಿಂತ್ಯತಾಂ''** ನಿದ್ರೆಯಿಂದ ಎದ್ದಲಾಗಾಯ್ತು ಪುನಃ ನಿದ್ರೆಬರುವವರೆಗೂ ಎಂದರೆ ಎಚ್ಚರವಾದಮೇಲೆ ಮಲಗುವವರೆಗೂ ಪರಮಾತ್ಮಸ್ವರೂಪವೊಂದನ್ನೇ ಚಿಂತಿಸಬೇಕು. **''ಆಸುಪ್ತೇರಾಮೃತೇಃ ಕಾಲಮ್ ನಯೇದ್ವೇದಾಂತಚಿಂತಯಾ''** ಹುಟ್ಟಿದಲಾಗಾಯ್ತು ಸಾಯುವವರೆಗೂ ಹಗಲಿರುಳೂ ಪರಮಾತ್ಮಚಿಂತನೆಯನ್ನು ಬಿಟ್ಟು ಉಳಿದ ಚಿಂತನೆಯನ್ನೇ ಮಾಡಬಾರದು ಎಂಬುದಾಗಿ ವೇದಗಳು ಸಾರುತ್ತಿವೆ. ಅಖಂಡವಾಗಿ ಸ್ವರೂಪಸ್ಥಿತಿಯಲ್ಲಿರಲು ಬಾರದಿದ್ದರೆ, ಆತ್ಮಾನುಸಂಧಾನ ತಪ್ಪಿದರೆ, ಶ್ರವಣ ಮನನ ಇಲ್ಲದ್ದಿದ್ದರೆ ಉಪಾಸನಾಮೂರ್ತಿಧ್ಯಾನವನ್ನಾದರೂ ಮಾಡಬೇಕು. ಒಂದು ತಪ್ಪಿದರೆ ಒಂದನ್ನು ನಿರಂತರದಲ್ಲೂ ಬಿಡದೆ ಮಾಡುತ್ತಿರಬೇಕು.

## 10. ಶ್ರವಣದ ಮಹತ್ವ

**ಐಕಾ ಪರಮಾರ್ಥಾಚೇ ಸಾಧನ। ಜೇಣೇ ಹೋಯೇ ಸಮಾಧಾನ ।**
**ತೇ ತೂ ಜಾಣ ಗಾ ಶ್ರವಣ । ನಿಶ್ಚಯೇಸೀ ॥** (ದಾ. 7–8–1)

ಪರಮಾರ್ಥದ ಮುಖ್ಯವಾದ ಸಾಧನ ಯಾವುದೆಂದರೆ ಅದು ಶ್ರವಣ. ಇದರಿಂದ ನಿಶ್ಚಯವಾಗಿಯೂ ನಿಜವಾದ ಸಮಾಧಾನವು ಪ್ರಾಪ್ತಿಯಾಗುತ್ತದೆ – ಎಂಬುದಾಗಿ ಸಮರ್ಥ ಸದ್ಗುರುಗಳು ಹೇಳಿರುತ್ತಾರೆ. ಸಮಸ್ತ ದುಃಖಗಳಿಂದ ಸಂಕಟಗಳಿಂದ ಬಿಡುಗಡೆ ಹೊಂದಬೇಕು, ನಿತ್ಯವಾದ ಸುಖಶಾಂತಿಗಳನ್ನು ಪಡೆಯಬೇಕು ; ಈ ಭವಬಂಧನದಿಂದ ಬಿಡುಗಡೆಯನ್ನು ಹೊಂದಿ ಮೋಕ್ಷವನ್ನು ಪಡೆಯಬೇಕು ಎನ್ನುವ ಇಚ್ಛೆಯುಳ್ಳ ಮುಮುಕ್ಷುವು ಮುಖ್ಯವಾಗಿ ಯಾವ ಸಾಧನೆಯನ್ನು ಮಾಡಬೇಕೆಂದರೆ ಅವನು ಪ್ರತಿನಿತ್ಯವೂ ತಪ್ಪದೆ ಬ್ರಹ್ಮನಿಷ್ಠರಾದ ಸದ್ಗುರುಗಳು ಹೇಳುವ ಆತ್ಮವಿಚಾರವನ್ನು ಶ್ರದ್ಧಾಭಕ್ತಿಯಿಂದ ಕೇಳಬೇಕು. ಹೀಗೆ ಕೇಳುವುದರಿಂದ ಏನು ಪ್ರಯೋಜನವಾಗುತ್ತದೆಂದರೆ ಖಂಡಿತವಾಗಿಯೂ ಪೂರ್ಣವಾದ ಸಮಾಧಾನವು ದೊರೆಯುತ್ತದೆ ; ಪರಮಶಾಂತಿಯು ಸಿಕ್ಕುತ್ತದೆ. ಈ ವಿಧದಲ್ಲಿ ಶ್ರವಣಮಾಡುವುದ ರಿಂದ ಮತ್ತೇನು ಪ್ರಯೋಜನವಾಗುವುದು–ಎಂಬುದನ್ನು ಸಮರ್ಥರು ತಮ್ಮ ದಾಸ ಬೋಧೆಯಲ್ಲಿ ಸವಿಸ್ತಾರವಾಗಿ ಹೇಳಿರುತ್ತಾರೆ. ಅದರಲ್ಲಿ ಕೆಲವನ್ನು ಮಾತ್ರ ಇಲ್ಲಿ ಹೇಳುತ್ತೇವೆ.

ಶ್ರವಣದಿಂದ ಗುರುದೇವರಲ್ಲಿ ಶ್ರದ್ಧಾಭಕ್ತಿಯು ಹುಟ್ಟುತ್ತದೆ. ವೇದಶಾಸ್ತ್ರಗಳಲ್ಲಿ ವಿಶ್ವಾಸವು ಹುಟ್ಟುತ್ತದೆ. ಶ್ರವಣಮಾಡುವುದರಿಂದ ವಿಷಯಗಳಲ್ಲಿರುವ ಆಸಕ್ತಿಯು ಹೋಗುತ್ತದೆ. ದರಿದ್ರರೂಪವಾದ ಆಶೆಯು ತೊಲಗುತ್ತದೆ. ಪರಮಭಾಗ್ಯವಾದ ವೈರಾಗ್ಯಭಾಗ್ಯವೂ ದೊರೆಯುತ್ತದೆ. ಶ್ರವಣದಿಂದ ಚಿತ್ತಶುದ್ಧಿಯಾಗುತ್ತದೆ. ಚಂಚಲವಾದ ಮನಸ್ಸು ನಿಶ್ಚಲವಾಗುತ್ತದೆ. ಕೊನೆಗೆ ಬ್ರಹ್ಮಸ್ವರೂಪವನ್ನೇ ಹೊಂದುತ್ತದೆ. ವಿವೇಕವಿಚಾರಗಳು ಸ್ಫುರಿಸುತ್ತವೆ. ಶ್ರವಣದಿಂದ ದೇಹದ ಮೇಲಿನ ಅಭಿಮಾನವು ಹೋಗುತ್ತದೆ. ದುಷ್ಟರ ಸಂಗವು ತಪ್ಪುತ್ತದೆ. ಕಾಮಕ್ರೋಧಗಳು ಮಾಯವಾಗುತ್ತವೆ. ಶ್ರವಣದಿಂದ ದೇಹ ಇಂದ್ರಿಯ ಪ್ರಾಣ ಮನಸ್ಸು ಬುದ್ಧಿಗಳು ಮತ್ತು ಅಹಂಕಾರ ಇವುಗಳು ತಾನಲ್ಲವೆಂದು ತಿಳಿಯುತ್ತದೆ. ಇವೆಲ್ಲವನ್ನೂ ನೋಡುವಂತಹ ಸಾಕ್ಷಿಯೇ ತಾನೆಂದು ನಿಶ್ಚಯವಾಗುತ್ತದೆ. **''ಶ್ರವಣಾ ಐಸೇ ಸಾರ ನಾಹೀ। ಶ್ರವಣೇ ಘಡೇ ಸರ್ವಕಾಹೀ। ಭವನದೀಚಾ ಪ್ರವಾಹೀ । ತರಣೋಪಾಯ ಶ್ರವಣೇ ॥''**

(ದಾ. 7–8–16) ಮುಮುಕ್ಷುವಾದವನಿಗೆ, ಸಾಧಕನಾದವನಿಗೆ ಶ್ರವಣಕ್ಕೆ ಸಮಾನವಾದ ಶ್ರೇಷ್ಠಸಾಧನೆಯು ಮತ್ತೊಂದಿಲ್ಲ. ಶ್ರವಣದಿಂದ ಸಮಸ್ತವೂ ನೆರವೇರುತ್ತದೆ. ಈ ಭವಸಮುದ್ರದಿಂದ ಬಿಡುಗಡೆಹೊಂದಲು ಶ್ರವಣವೇ ಬಹು ದೊಡ್ಡ ಸಾಧನೆ. ತನ್ನಲ್ಲಿರುವ ದುರ್ಗುಣಗಳೂ ಶ್ರವಣದಿಂದ ತೊಲಗುತ್ತವೆ. ಸಂಶಯಗಳು ಹೋಗುತ್ತವೆ. ನಿಶ್ಚಯವಾದ ಜ್ಞಾನವು ಪ್ರಾಪ್ತಿಯಾಗುತ್ತದೆ. ಶ್ರವಣದಿಂದ ಜೀವನು ಜೀವನ್ಮುಕ್ತನಾಗುತ್ತಾನೆ. ಪರಮಾತ್ಮನೇ ತಾನಾಗುತ್ತಾನೆ. ಆದ್ದರಿಂದ ಎಲ್ಲರೂ ಪ್ರತಿನಿತ್ಯವೂ ತಪ್ಪದೆ ಶ್ರವಣಮಾಡಬೇಕು. ಮನಸ್ಸು ಮಲಿನವಾಗುತ್ತಿರುತ್ತದೆ. ಅದು ಶ್ರವಣದಿಂದ ಶುದ್ಧವಾಗುತ್ತದೆ. ಕೇಳಿದ್ದನ್ನೇ ಕೇಳುವುದೇನು ? ಅವರು ಹೇಳುವುದೆಲ್ಲಾ ನನಗೆ ತಿಳಿದಿದೆ – ಎಂಬುದಾಗಿ ಅಲಕ್ಷ್ಯಮಾಡಬಾರದು. ಹೇಗೆ ನಿತ್ಯವೂ ಮಾಡಿದ್ದನ್ನೇ ಮಾಡುತ್ತೀಯೋ, ಊಟಮಾಡಿದ್ದನ್ನೇ ಊಟಮಾಡುತ್ತೀಯೋ ಹೇಗೆ ಇವುಗಳಿಗೆ ಬೇಸರಗೊಳ್ಳುವುದಿಲ್ಲವೋ ಹಾಗೆ, ಆತ್ಮತತ್ತ್ವವನ್ನು ಭಕ್ತಿ ಜ್ಞಾನ ವೈರಾಗ್ಯ ವಿಚಾರಗಳನ್ನು ಬೇಸರಪಡದೆ ಕೇಳಿದ್ದನ್ನಾದರೂ ಕೇಳಬೇಕು. ಹೀಗೆ ಕೇಳುವುದರಿಂದ ದಿನೇ ದಿನೇ ಹೆಚ್ಚು ಹೆಚ್ಚಾಗಿ ಮನಸ್ಸಿಗೆ ವಿವರವಾಗುತ್ತದೆ. ಇದಕ್ಕೆ ಬೇಸರಪಟ್ಟರೆ ಪೂರ್ಣಸ್ಥಿತಿಯು ದೊರೆಯುವುದು ಕಷ್ಟ. ಸದ್ಗುರುಗಳು, ಇಲ್ಲದಿದ್ದರೆ ಮಹಾತ್ಮರು, ಜ್ಞಾನಿಗಳು ಆತ್ಮವಿಚಾರವನ್ನು ಹೇಳುತ್ತಿದ್ದರೆ ತಪ್ಪದೆ ಹೋಗಿ ಕೇಳಬೇಕು. ಅನುಕೂಲವಿಲ್ಲವೆಂದು ಏನಾದರೂ ನೆಪಮಾಡಿಕೊಂಡು ಬಿಡಬಾರದು. ನಿನಗೆ ಏನಾದರೂ ಭಯಂಕರವಾದ ರೋಗವು ಬಂದರೆ ಹೇಗೆ ನೀನು ಸಮಸ್ತಕಾರ್ಯಗಳನ್ನೂ ಬಿಟ್ಟು ವೈದ್ಯರನ್ನು ಹುಡುಕಿಕೊಂಡು ಹೋಗುತ್ತೀಯೋ ಹಾಗೆ, ಕ್ಷಣಕ್ಷಣಕ್ಕೂ ದುಃಖವನ್ನು ಕೊಡುತ್ತಿರುವ ಅತ್ಯಂತ ಭಯಂಕರವಾದ ಈ ಭವರೋಗದಿಂದ ಬಿಡುಗಡೆಯನ್ನು ಹೊಂದುವುದಕ್ಕಾಗಿ ಇದಕ್ಕೆ ಅಡ್ಡಿಯಾಗಿ ಬಂದ ಸಮಸ್ತಕಾರ್ಯಗಳನ್ನೂ ವಿವೇಕವಿಚಾರಗಳಿಂದ ಬಿಟ್ಟು ಭವರೋಗವೈದ್ಯರಾದ ಮಹಾತ್ಮರನ್ನು ಹುಡುಕಿಕೊಂಡು ಹೋಗಬೇಕು. ಪ್ರತಿನಿತ್ಯವೂ ಸ್ವಲ್ಪಕಾಲವಾದರೂ ಬ್ರಹ್ಮನಿಷ್ಠರಾದ ಮಹನೀಯರಿಂದ ಆತ್ಮಾನಾತ್ಮವಿಚಾರಗಳನ್ನು ಕೇಳಬೇಕು. ಮನುಷ್ಯನಿಗೆ ಹೇಗೆ ಪ್ರತಿನಿತ್ಯವೂ ಹೊಟ್ಟೆಗೆ ಅನ್ನ, ಮೈಗೆ-ಬಟ್ಟೆಯು ಅತ್ಯಂತ ಅವಶ್ಯಕವಾಗಿ ಬೇಕೋ ಹಾಗೆ , ಮನಸ್ಸಿಗೆ ಆತ್ಮಬೋಧೆ ಅಧ್ಯಾತ್ಮಶ್ರವಣ ಮಹನೀಯರ ಉಪನ್ಯಾಸ ಎಂಬುವ ಜ್ಞಾನದ ಅನ್ನವು ಅತ್ಯಂತ ಅವಶ್ಯಕವಾಗಿ ಬೇಕು. ಒಂದುಪಕ್ಷ ಊಟವನ್ನು ಹೆಚ್ಚಾಗಿ ಮಾಡಿದರೆ ಅಜೀರ್ಣವಾಗಿ ತೊಂದರೆಯಾಗುತ್ತದೆ. ಅದರಂತೆ ಹೆಚ್ಚಾಗಿ ಶ್ರವಣಮಾಡಿದರೆ ಹಾಗೇನು ತೊಂದರೆಯಾಗುವುದಿಲ್ಲ. ಅದಕ್ಕೆ ಪ್ರತಿಯಾಗಿ ಸಮಸ್ತ ತೊಂದರೆಗಳೂ, ದುಃಖಗಳೂ, ಅಶಾಂತಿಯೂ ಹೋಗುತ್ತವೆ.

ಮನಸ್ಸಿಗೆ ಶಾಂತಿಯು ಸಿಕ್ಕುತ್ತದೆ. ಎಷ್ಟೆಷ್ಟು ಹೆಚ್ಚಾಗಿ ಮಹಾತ್ಮರ ಬೋಧೆಯನ್ನು ಕೇಳಿದರೆ ಅಷ್ಟಷ್ಟು ಒಳ್ಳೆಯದು. ಪರಿಶುದ್ಧವಾದ ಮತ್ತು ಏಕಾಗ್ರವಾದ ಮನಸ್ಸಿನಿಂದ ಶ್ರವಣಮಾಡಬೇಕು. ಈ ವಿಧವಾಗಿ ಶ್ರವಣಮಾಡುವುದರಿಂದ ರಾಗದ್ವೇಷಗಳು, ಕಾಮಕ್ರೋಧಗಳು, ಅವಿವೇಕ, ಅನಾಚಾರ, ದೇಹದಮೇಲಿನ ಅಭಿಮಾನ, ಜಗತ್ತಿನಲ್ಲಿರುವ ಆಸಕ್ತಿ– ಇವೆಲ್ಲವೂ ತೊಲಗುತ್ತವೆ ; ಆತ್ಮನಿಷ್ಠೆಯು ಪ್ರಾಪ್ತಿಯಾಗುತ್ತದೆ. ಆದುದರಿಂದ ಪ್ರತಿನಿತ್ಯವೂ ತಪ್ಪದೆ ಗುರುಬೋಧೆಯನ್ನು ಶ್ರವಣಮಾಡಬೇಕು. ಮುಮುಕ್ಷುಗಳಿಗೆ ಆತ್ಮವಿಚಾರವನ್ನು ಕೇಳುವುದು ಒಂದು ದೊಡ್ಡ ಸಾಧನೆ. ಕೆಲವರು ಕೇವಲ ಕೇಳಿದಮಾತ್ರಕ್ಕೆ ಏನು ಪ್ರಯೋಜನವೆಂಬುದಾಗಿ ಶ್ರವಣಮಾಡುವವರನ್ನು ಹೀಯಾಳಿಸುತ್ತಾರೆ. ಆದರೆ ಅವರಿಗೆ ಶ್ರವಣದ ಮಹತ್ವವೇ ತಿಳಿದಿರುವುದಿಲ್ಲ. ಮರಣ ಭಯದಿಂದ ಪೀಡಿತನಾದ ಪರೀಕ್ಷಿತಮಹಾರಾಜನು ಏಳು ದಿನಗಳು ಶುಕಮುನಿಗಳಿಂದ ಭಾಗವತವನ್ನು ಶ್ರವಣಮಾಡಿ ಮರಣಭಯದಿಂದ ಮುಕ್ತನಾದನು. ಖಟ್ವಾಂಗ ಮಹಾರಾಜನು ಕೇವಲ ಒಂದು ಮುಹೂರ್ತಕಾಲ ಆತ್ಮತತ್ತ್ವವನ್ನು ಶ್ರವಣ ಮಾಡಿದ್ದರಿಂದ ಮುಕ್ತನಾದನು. ಶೋಕಮೋಹಗಳಿಗೆ ಸಿಲುಕಿದ ಅರ್ಜುನನು ತನ್ನ ಗುರುವಾದ ಶ್ರೀಕೃಷ್ಣನಿಂದ ಭಗವದ್ಗೀತೆಯನ್ನು ಶ್ರವಣಮಾಡಿ ಶೋಕಮೋಹಗಳಿಗೆ ಕಾರಣವಾದ ಅಜ್ಞಾನದಿಂದ ಬಿಡುಗಡೆಹೊಂದಿ ಜ್ಞಾನವನ್ನು ಪಡೆದನು. ಸಮಸ್ತರೂ ಶ್ರವಣಮಾಡಿಯೇ ಮುಕ್ತರಾಗಿರುತ್ತಾರೆ. ಯಾವ ವಿಷಯವಾದರೂ ಕೇಳಿದರೆ ತಾನೆ ತಿಳಿಯುವುದು ? ಎಂದೂ ಕೇಳದಿರುವ ವಿಷಯವು ಹೇಗೆ ತಿಳಿಯುತ್ತದೆ ? ಭಕ್ತಿ ಎಂದರೇನು? ಜ್ಞಾನವೆಂದರೇನು? ವೈರಾಗ್ಯವೆಂದರೇನು ? ಸುಖವೆಂದರೇನು ? ದುಃಖವೆಂದರೇನು? ಬಂಧವೆಂದರೇನು? ಮೋಕ್ಷವೆಂದರೇನು? ಗುರುವೆಂದರೆ ಯಾರು ? ಶಿಷ್ಯನೆಂದರೆ ಯಾರು? ಸಾಧನೆ ಎಂದರೇನು? ಹೇಗೆ ಮಾಡಬೇಕು? ಇವೆಲ್ಲವೂ ಕೇಳಿದರೆ ತಾನೆ ತಿಳಿಯುವುದು. ಪ್ರಪಂಚವಾಗಲಿ ಪರಮಾರ್ಥವಾಗಲಿ ಕೇಳದಿದ್ದರೆ ತಿಳಿಯುವುದಿಲ್ಲ. ತಾತ್ಪರ್ಯವೇನೆಂದರೆ ಬಿಡದೆ ಶ್ರವಣವನ್ನು ಮಾಡಬೇಕು. ಯಾರು ಶ್ರವಣಕ್ಕೆ ಅಲಕ್ಷ್ಯಮಾಡುತ್ತಾರೆಯೋ ಅವರು ಹೇಗೆ ಪರಮಾರ್ಥವನ್ನು ಸಾಧಿಸುತ್ತಾರೆ ? ಆದ್ದರಿಂದ ಶ್ರವಣವೇ ಮೋಕ್ಷಕ್ಕೆ ಸಾಧನ.

ಶ್ರವಣವೆಂದರೆ ಯಾವುದನ್ನಾದರೂ ಕೇಳಬಾರದು. ಏತಕ್ಕೆಂದರೆ ತರ್ಕ, ನ್ಯಾಯ, ಮೀಮಾಂಸ, ವ್ಯಾಕರಣ, ಗಣಿತ, ಕವಿತ್ವ, ಕಥೆ, ಕಾದಂಬರಿ – ಮೊದಲಾದ ಅನೇಕ ವಿಧವಾದ ಗ್ರಂಥಗಳಿವೆ. ಅವುಗಳನ್ನೆಲ್ಲಾ ಮುಮುಕ್ಷುಗಳಾದವರು ಕೇಳಬಾರದು. ಹಾಗಾದರೆ ಯಾವುದನ್ನು ಶ್ರವಣಮಾಡಬೇಕು?

## 11. ಯಾವುದನ್ನು ಶ್ರವಣಮಾಡಬೇಕು ?

"ಶ್ರವಣೇನ ಯಸ್ಯ ಗಲತಿ ದ್ವೈತಾಂಧಕಾರೋದಯಃ" । (ಭಾರತ)

ಯಾವ ಶಾಸ್ತ್ರಗಳನ್ನು ಯಾವ ಗ್ರಂಥಗಳನ್ನು ಶ್ರವಣಮಾಡುವುದರಿಂದ ಅಜ್ಞಾನಗ್ರಂಥಿಗಳು ಹರಿಯುತ್ತವೆಯೋ ಅದೇ ಗ್ರಂಥವು. ಯಾವುದನ್ನು ಕೇಳುವುದರಿಂದ ನಾನು ನೀನೆಂಬ ಭೇದಬುದ್ಧಿಯು ನಾಶವಾಗುತ್ತದೆಯೋ, ಯಾವುದರಿಂದ "ಆತ್ಮೈವೇದಂ ಸರ್ವಂ" "ಬ್ರಹ್ಮೈವೇದಂ ಸರ್ವಂ" ಇದೆಲ್ಲವೂ ಆತ್ಮಸ್ವರೂಪವೇ ಆಗಿದೆ, ಇದೆಲ್ಲವೂ ಬ್ರಹ್ಮಸ್ವರೂಪವೇ ಆಗಿದೆ ಎನ್ನುವುದು ತಿಳಿಯುತ್ತದೆಯೋ, ಯಾವುದರಿಂದ ಸಂಪೂರ್ಣವಾಗಿ ದ್ವೈತಭಾವವೆಂಬ ಅಂಧಕಾರವು ನಾಶವಾಗುತ್ತದೆಯೋ, ಯಾವುದನ್ನು ಶ್ರವಣಮಾಡುವುದರಿಂದ ಶೋಕಮೋಹಗಳು ತೊಲಗುತ್ತವೆಯೋ, ರಾಗದ್ವೇಷಗಳು ಅಳಿಯುತ್ತವೆಯೋ ಅದೇ ಶಾಸ್ತ್ರವು. ಅದೇ ಗ್ರಂಥವು. ಅದನ್ನೇ ಕೇಳಬೇಕು. ಅದನ್ನೇ ಹೇಳಬೇಕು. ಅದನ್ನೇ ಓದಬೇಕು. ಸತ್ಯ ಯಾವುದು ? ಅಸತ್ಯ ಯಾವುದು ? ಸುಖವೆಂದರೇನು ? ದುಃಖವೆಂದರೇನು? ಆತ್ಮವೆಂದರೇನು? ಅನಾತ್ಮವೆಂದರೇನು? ನಾನು ಯಾರು? ನನ್ನ ಸ್ವರೂಪವೇನು? ಬಂಧವೆಂದರೇನು? ಮೋಕ್ಷವೆಂದರೇನು? ಅಜ್ಞಾನವೆಂದರೇನು? ಜ್ಞಾನವೆಂದರೇನು ? – ಈ ವಿಷಯಗಳನ್ನು ಯಾವಗ್ರಂಥಗಳಲ್ಲಿ ಹೇಳಿದೆಯೋ ಅವುಗಳನ್ನೇ ಮುಮುಕ್ಷುಗಳಾದವರು ಶ್ರವಣಮಾಡಬೇಕು. ಯಾವಗ್ರಂಥಗಳಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಹೇಳಿಲ್ಲವೋ ಅವು ಗ್ರಂಥಗಳೇ ಅಲ್ಲ. ಮತ್ತೇನೆಂದರೆ ಅವು ಗಟ್ಟಿಯಾಗಿ ಭವಪಾಶಗಳಿಂದ ಕಟ್ಟಿಹಾಕುವಂತಹ ಗ್ರಂಥಿಗಳು (ಕಗ್ಗಂಟುಗಳು), ಮನರಂಜನೆಯನ್ನು ಮಾಡಿ ಫಲದಾಶೆಯನ್ನು ತೋರಿಸಿ ಮನಸ್ಸನ್ನು ವಿಷಯಗಳ ಕಡೆಗೆ ಪ್ರವೃತ್ತಿಯನ್ನು ಮಾಡುವಂತಹ ಕಥೆಕಾದಂಬರಿಗಳನ್ನು ಖಂಡಿತವಾಗಿಯೂ ಕೇಳಬಾರದು, ಓದಬಾರದು. ಏಕೆಂದರೆ ನಾವು ಯಾವ ವಿಚಾರಗಳನ್ನು ಕೇಳುತ್ತೇವೆಯೋ ಯಾವ ವಿಚಾರಗಳನ್ನು ಓದುತ್ತೇವೆಯೋ ಅದೇ ರೂಪವನ್ನೇ ಮನಸ್ಸು ಹೊಂದುತ್ತದೆ. ಯಾವ ವಿಚಾರಗಳನ್ನು ಕೇಳುವದರಿಂದ ಯಾವ ಪುಸ್ತಕಗಳನ್ನು ಓದುವುದರಿಂದ ಮನಸ್ಸು ವಿಕಾರವಾಗಿ ವಿಷಯಾಕಾರವನ್ನು ಹೊಂದುತ್ತದೆಯೋ ಜಗದಾಕಾರವನ್ನು ತಾಳುತ್ತದೆಯೋ, ಆಶೆಯನ್ನು ಹೆಚ್ಚು ಮಾಡುತ್ತದೆಯೋ , ಕಾಮಕ್ರೋಧಗಳಿಗೆ ವಶವಾಗುತ್ತದೆಯೋ, ದೇಹದಲ್ಲಿ ಅಭಿಮಾನವನ್ನು ತಂದುಕೊಡುತ್ತದೆಯೋ ಅಂತಹ ವಿಚಾರಗಳನ್ನು ಖಂಡಿತವಾಗಿಯೂ ಕೇಳಬಾರದು. ಇವು ತತ್ಕಾಲದಲ್ಲಿ ಮನರಂಜನೆಯನ್ನು ಮಾಡಿ ಕೊನೆಗೆ ದುಃಖಕ್ಕೆ ಅಧೋಗತಿಗೆ ಸಮಸ್ತ

ಅನರ್ಥಕ್ಕೆ ಕಾರಣವಾಗುತ್ತವೆ. ಮುಮುಕ್ಷುಗಳು ಇವುಗಳಿಂದ ದೂರವಿರಬೇಕು. ಯಾವ ವಿಚಾರಗಳನ್ನು ಕೇಳುವುದರಿಂದ ಮನಸ್ಸಿನಲ್ಲಿರುವ ಆಶಾಪಾಶಗಳು ಕಡಿಮೆಯಾಗುತ್ತವೆಯೋ, ಕಾಮಕ್ರೋಧಗಳು ಮಾಯವಾಗುತ್ತವೆಯೋ, ಯಾವುದರಿಂದ ಮನಸ್ಸು ನಿರ್ವಿಕಾರವಾಗಿ ಆತ್ಮಾಕಾರವಾಗುತ್ತದೆಯೋ ಅಂತಹ ವಿಚಾರಗಳನ್ನೇ ಕೇಳಬೇಕು. ಯಾವುದನ್ನು ಕೇಳುವುದರಿಂದ ಜಗತ್ತಿನಲ್ಲಿ ಸಂಸಾರದಲ್ಲಿರುವ ಸತ್ಯತ್ವಬುದ್ಧಿಯು ಹೋಗುತ್ತದೆಯೋ , ದೇಹಬುದ್ಧಿಯು ನಾಶವಾಗುತ್ತದೆಯೋ ಜಗತ್ತು ಇಲ್ಲ, ಸಂಸಾರವಿಲ್ಲ, ದೇಹಾದಿಗಳಿಲ್ಲ, ನಾನು ವಿಕಾರವಿಲ್ಲದ ಸುಖರೂಪನಾದ ಆತ್ಮಚೈತನ್ಯವೇ ಆಗಿದ್ದೇನೆ ಎನ್ನುವುದು ಅನುಭವಕ್ಕೆ ಬರುತ್ತದೆಯೋ ಅಂತಹ ವಿಚಾರಗಳನ್ನೇ ಕೇಳಬೇಕು. ಅಂತಹ ಪುಸ್ತಕಗಳನ್ನೇ ಓದಬೇಕು – ಎಂಬುದಾಗಿ ಸಮರ್ಥ ಸದ್ಗುರುಗಳು ಹೇಳಿರುತ್ತಾರೆ.

ರಾಜಹಂಸದ ಮುಂದೆ ಹಾಲಿನ ಹೊರತು ನೀರನ್ನಿಟ್ಟರೆ ಹೇಗೆ ಉಪಯೋಗ ವಿಲ್ಲವೋ, ಹಸಿದವನಿಗೆ ಅನ್ನದ ಹೊರತು ಇತರವಾದ ಧನವಸ್ತ್ರಾದಿಗಳನ್ನು ಕೊಟ್ಟರೆ ಹೇಗೆ ತೃಪ್ತಿಯಾಗುವುದಿಲ್ಲವೋ ಬಾಯಾರಿಕೆಯಾದವನಿಗೆ ನೀರಿನ ಹೊರತು ಇತರ ಯಾವ ವಿಧವಾದ ಭೋಗವಸ್ತುಗಳನ್ನು ಕೊಟ್ಟರೂ ಹೇಗೆ ಸಮಾಧಾನವಾಗುವು ದಿಲ್ಲವೋ, ರೋಗದಿಂದ ನರಳುವವನಿಗೆ ಆರೋಗ್ಯದ ಹೊರತು ಮತ್ತಾವುದೂ ಹೇಗೆ ಬೇಕಾಗುವುದಿಲ್ಲವೋ, ಇದರಂತೆಯೇ ಸಮಸ್ತ ದುಃಖಗಳಿಂದ, ನಾನಾ ವಿಧವಾದ ಸಂಕಟಗಳಿಂದ ಸಮಸ್ತ ಅನರ್ಥಪರಂಪರೆಗಳಿಂದ ಹುಟ್ಟುಸಾವುಗಳಿಂದ ಬಿಡುಗಡೆಯನ್ನು ಹೊಂದಬೇಕು, ಆತ್ಮಜ್ಞಾನವನ್ನು ಪಡೆಯಬೇಕು, ಮೋಕ್ಷವನ್ನೇ ಪಡೆಯಬೇಕು, ಪರಮಾನಂದವನ್ನೇ ಸಂಪಾದಿಸಬೇಕು, ನಿತ್ಯಸುಖವನ್ನೇ ಗಳಿಸಬೇಕು ಎನ್ನುವ ಇಚ್ಛೆಯುಳ್ಳ ಮುಮುಕ್ಷುಗಳು ಸಾಧಕರು ಅದ್ವೈತಗ್ರಂಥಗಳನ್ನೇ ಕೇಳಬೇಕು. ಇತರ ಗ್ರಂಥಗಳನ್ನು ಕೇಳಬಾರದು. ''**ಜೇಥೇ ಸಂಶಯ ತುಟತಿ । ಹೋಯೇ ಅಶಂಕಾನಿವೃತ್ತಿ । ಅದ್ವೈತಗ್ರಂಥ ಪರಮಾರ್ಥಿ । ಶ್ರವಣ ಕರಾವೇ ॥** (ದಾ.7–9–5) ಯಾವುದನ್ನು ಕೇಳುವುದರಿಂದ ಮನಸ್ಸಿನ ಸಮಸ್ತ ಸಂಶಯಗಳೂ ಇಲ್ಲದಂತಾಗುತ್ತವೆಯೋ , ದೇಹಬುದ್ಧಿಯು ನಾಶವಾಗುತ್ತದೆಯೋ, ಅಜ್ಞಾನವು ಇಲ್ಲದಂತಾಗುತ್ತದೆಯೋ, ಪರಮಶಾಂತಿಯು ದೊರೆಯುತ್ತದೆಯೋ ಅಂತಹ ಅದ್ವೈತ ಗ್ರಂಥವನ್ನೇ ಪರಮಾರ್ಥಿ ಎಂದರೆ ಮುಮುಕ್ಷುವಾದವನು ಶ್ರವಣಮಾಡಬೇಕು – ಎಂಬುದಾಗಿ ಸಮರ್ಥರೇ ಹೇಳಿರುತ್ತಾರೆ. ಹಸಿವಿನಿಂದ ಕಂಗೆಟ್ಟು ಬಳಲಿದವನಿಗೆ ಊಟಮಾಡಿದ ಕೂಡಲೇ ಹೇಗೆ ಆ ಹಸಿವು, ಅದರ ಬಳಲಿಕೆಯೂ ಹೋಗಿ

ತೃಪ್ತಿಯಾಗುವುದು ಅನುಭವವೋ ಹಾಗೆ, ಸಂಸಾರತಾಪದಿಂದ ಬಳಲಿಬೆಂಡಾದವನು ಸದ್ಗುರುವಿನಿಂದ ಆತ್ಮತತ್ತ್ವವನ್ನು ಶ್ರವಣಮಾಡಿ ಸರಿಯಾಗಿ ತಿಳಿದುಕೊಂಡರೆ ಆ ಕ್ಷಣದಲ್ಲಿಯೇ ಸಂಸಾರತಾಪವೆಲ್ಲಾ ಮಾಯವಾಗಿ ನಿತ್ಯಸಮಾಧಾನವು, ಶಾಶ್ವತವಾದ ಸುಖವು ಅನುಭವಕ್ಕೆ ಬರುತ್ತದೆ. ಹೇಗೆ ದೀಪವನ್ನು ಹಚ್ಚಿದ ಕೂಡಲೇ ಕತ್ತಲೆಯು ಹೋಗಿಬಿಡುತ್ತದೆಯೋ ಹಾಗೆ, ಆತ್ಮಜ್ಞಾನವನ್ನು ಪಡೆದಕೂಡಲೇ ಸಮಸ್ತದುಃಖಗಳೂ ಹೋಗಿಬಿಡುತ್ತವೆ. ಇದು ಬರಿಯ ಬಾಯಿಮಾತಲ್ಲ, ಅನುಭವಸಿದ್ಧವಾದದ್ದು; ಸತ್ಯವಾದದ್ದು.

## 12. ಮನನದ ಮಹತ್ವ

ಉತ್ತಮ ಅಧಿಕಾರಿಗಳಿಗೆ ಶ್ರವಣದಿಂದಲೇ ಸಂಶಯಗಳು ಹೋಗಿಬಿಡುತ್ತವೆ. ಮಧ್ಯಮ ಅಧಿಕಾರಿಗಳಿಗೆ ಸಂಶಯಗಳು ಸಂಪೂರ್ಣವಾಗಿ ಹೋಗುವುದಿಲ್ಲ. ಸಾಮಾನ್ಯವಾಗಿ ಬಹಳ ಜನರಿಗೆ ಮನನಮಾಡುವುದರಿಂದಲೇ ಸಂಶಯಗಳು ನಿವಾರಣೆಯಾಗುತ್ತವೆ. ಈ ದಿನ ಶ್ರವಣಮಾಡಿದ್ದು ನಾಳೆಗೆ ಅದೇ ಮನನವಾಗುತ್ತದೆ. ಅದನ್ನೇ ಮತ್ತೊಂದು ದಿನ ಕೇಳಿದರೆ ಆಗ ಅದೇ ನಿದಿಧ್ಯಾಸನವಾಗುತ್ತದೆ. ಶ್ರವಣದ ಜೊತೆಯಲ್ಲಿ ಮನನವನ್ನೂ ಮಾಡಬೇಕು. ಶ್ರವಣಕ್ಕಿಂತಲೂ ಮನನವು ವಿಶೇಷ ಮಹತ್ವವುಳ್ಳದ್ದು. ಮನನಮಾಡುವುದರಿಂದ ಜ್ಞಾನವು ನಿಸ್ಸಂಶಯವಾಗುತ್ತದೆ. ಶೀಘ್ರವಾಗಿ ನಿಶ್ಚಯವಾಗುತ್ತದೆ. ಮನನವೆಂದರೆ ಸದ್ಗುರುವಿನಿಂದ ಕೇಳಿದ್ದನ್ನು ಶ್ರುತಿ ಯುಕ್ತಿಗಳಿಂದ ತನ್ನ ಅನುಭವಕ್ಕೆ ತಂದುಕೊಳ್ಳುವುದು. ಯಾರಾದರೂ ನಿನ್ನ ವಿಷಯವಾಗಿ ಏನಾದರೂ ಹೇಳಿದರೆ ಹೇಗೆ ಆ ಮಾತುಗಳನ್ನು ಪದೇ ಪದೇ ವಿಚಾರಮಾಡುತ್ತೀಯೋ ಅದನ್ನೇ ಚಿಂತಿಸುತ್ತೀಯೋ ಅದರಂತೆಯೇ ಶ್ರವಣಮಾಡಿದಂಥ ಆತ್ಮಸ್ವರೂಪವನ್ನು ಪದೇ ಪದೇ ವಿಚಾರಮಾಡಬೇಕು; ಅದನ್ನೇ ಚಿಂತಿಸಬೇಕು. ಅನಾತ್ಮಭಾವನೆಗಳನ್ನು ತೆಗೆದುಹಾಕಿ ಸದಾ ಆತ್ಮಭಾವನೆಯನ್ನು ದೃಢಪಡಿಸಬೇಕು. ತಾನಲ್ಲದ ದೇಹಾದಿಗಳೇ ತಾನೆಂಬ ಅನಾತ್ಮಭಾವನೆಯಿಂದಲೇ, ಜಗತ್ತಿನಲ್ಲಿರುವ ಸತ್ಯತ್ವಬುದ್ಧಿಯಿಂದಲೇ ಕಾಮ ಕ್ರೋಧಗಳೂ ರಾಗದ್ವೇಷಗಳೂ ಹುಟ್ಟುತ್ತವೆ. ಇದರಿಂದಲೇ ಶೋಕಮೋಹಗಳು ತಲೆದೋರುತ್ತವೆ. ಇದರಿಂದಲೇ ಬಂಧನವಾಗುತ್ತದೆ. ಆದುದರಿಂದ ಶ್ರವಣಕ್ಕಿಂತಲೂ ಹೆಚ್ಚಾಗಿ ಮನನವನ್ನು ಮಾಡಬೇಕು. ಅನವರತವೂ ಆತ್ಮಸ್ವರೂಪವೇ ತಾನೆಂದೂ ದೇಹಾದಿಗಳು ತಾನಲ್ಲವೆಂದೂ ಆತ್ಮಸ್ವರೂಪಕ್ಕಿಂತಲೂ ಬೇರೆಯಾಗಿ

ತೋರುವುದು ಯಾವುದೂ ಇಲ್ಲವೆಂದೂ ಮನನಮಾಡುವುದರಿಂದ, ಈ ರೀತಿಯಲ್ಲಿ ಚಿಂತಿಸುವುದರಿಂದ ಮನಸ್ಸು ನಿರ್ವಿಕಾರವಾಗುತ್ತದೆ. ಆಗ ಸಮಾಧಾನವು ಶಾಂತಿಯು ಸಿಕ್ಕುತ್ತದೆ. ಮನನದ ಕೊನೆಯೇ ನಿದಿಧ್ಯಾಸವಾಗಿ ಆತ್ಮಸಾಕ್ಷಾತ್ಕಾರವಾಗುತ್ತದೆ. ಆದುದರಿಂದ ಗುರುಮುಖದಿಂದ ಕೇಳಿದ ವಿಚಾರಗಳನ್ನು ಹಾಗೆಯೇ ಅಲ್ಲಿಯೇ ಒಂದು ಕಿವಿಯಿಂದ ಕೇಳಿ ಮತ್ತೊಂದು ಕಿವಿಯಿಂದ ಬಿಡಬಾರದು. ಹೀಗೆ ಮಾಡಿದರೆ ಎಂದೂ ಅವನಿಗೆ ದೇಹಬುದ್ಧಿಯು ಹೋಗುವುದಿಲ್ಲ. ಆತ್ಮನಿಷ್ಠೆಯು ಬರುವುದಿಲ್ಲ. ಸುಖಶಾಂತಿಗಳು ಸಿಕ್ಕುವುದಿಲ್ಲ. ಹೀಗೆಮಾಡದೆ ಕೇಳಿದ ವಿಚಾರಗಳನ್ನು ತಪ್ಪದೆ ಮನನಮಾಡಬೇಕು ; ವಿಚಾರಮಾಡಬೇಕು. ಹೀಗೆಮಾಡಿ ತನ್ನ ನಿಜಸ್ವರೂಪದಲ್ಲೇ ನೆಲೆನಿಲ್ಲಬೇಕು. ಮನಸ್ಸನ್ನು ಅದರಲ್ಲೇ ಕರಗಿಸಬೇಕು. ಆತ್ಮಸ್ವರೂಪವೇ ತಾನಾಗಬೇಕು. ಇದೇ ಮನನದ ಪರಾಕಾಷ್ಠತೆ.

## 13.ಗುರುಧ್ಯಾನದ ಮಹತ್ವ

ವಿಚಾರಗಳು ಸ್ಫುರಿಸದಿದ್ದರೆ ಮನನಮಾಡಲು ತಿಳಿಯದಿದ್ದರೆ ಆಗ ತನಗೆ ಜ್ಞಾನಬೋಧೆಯನ್ನು ಮಾಡಿದಂತಹ ತನ್ನ ಉಪಾಸ್ಯದೇವತೆಯಾದ ಸದ್ಗುರು ಮೂರ್ತಿಯನ್ನು ಧ್ಯಾನಮಾಡಬೇಕು. ವ್ಯವಹಾರದಲ್ಲಿ ಹೇಗೆ ನಾವು ನಮಗೆ ಪರಿಚಯರಾದವರನ್ನು ಆಪ್ತರನ್ನು ಸ್ಮರಿಸಿಕೊಂಡರೆ ಆಗ ಅವರು ಹೇಳಿದ ವಿಚಾರಗಳೆಲ್ಲಾ ಜ್ಞಾಪಕಕ್ಕೆ ಬರುತ್ತದೆಯೋ ಅದೇ ರೀತಿಯಲ್ಲಿ ಸದ್ಗುರುವನ್ನು ಧ್ಯಾನಮಾಡುವುದರಿಂದ ಅವನು ಬೋಧೆಮಾಡಿದ ವಿಚಾರಗಳು ಸ್ಮರಣೆಗೆ ಬರುತ್ತವೆ. ಬುದ್ಧಿಯಲ್ಲಿ ಸ್ಫುರಿಸುತ್ತವೆ. ಕೊಳವೆಯಲ್ಲಿ ಕೊಳೆ ಬಹಳವಾಗಿ ಸೇರಿದ್ದರೆ ಹೇಗೆ ನಲ್ಲಿಯಲ್ಲಿ ನೀರು ಬರುವುದಿಲ್ಲವೋ ಹಾಗೆ, ಅಂತಃಕರಣವು ಅಶುದ್ಧವಾಗಿದ್ದರೆ ವಿಚಾರಗಳು ಬರುವುದಿಲ್ಲ; ಸ್ಫುರಿಸುವುದಿಲ್ಲ. ''ಸತ್ತ್ವಾತ್ಸಂಜಾಯತೇ ಜ್ಞಾನಂ'' (ಗೀ.14-17) ಶುದ್ಧವಾದ ಅಂತಃಕರಣ ದಲ್ಲಿಯೇ ಆತ್ಮಾನಾತ್ಮವಿಚಾರಗಳು ಸ್ಫುರಿಸುತ್ತವೆ. ಪೈಪನ್ನು ಹೇಗೆ ಶುದ್ಧಪಡಿಸಿ ಕೊಳೆಯನ್ನು ತೆಗೆದಕೂಡಲೇ ನೀರು ವೇಗವಾಗಿ ಬರುತ್ತದೆಯೋ ಹಾಗೆಯೇ, ಸುದ್ಗುರುವು ಪರಿಶುದ್ಧಸ್ವರೂಪನಾದ್ದರಿಂದ ಅವನನ್ನು ಧ್ಯಾನಮಾಡುವುದರಿಂದ ಮನಸ್ಸು ಶುದ್ಧವಾಗಿ ಅವನು ಬೋಧಿಸಿದ ಜ್ಞಾನವು, ವಿಚಾರಗಳು ಸ್ಮರಣೆಗೆ ಬರುತ್ತವೆ. ಆಗ ಮನಸ್ಸಿನಲ್ಲಿ ವಿಕಾರಗಳು ಮಾಯವಾಗುತ್ತವೆ. ಆನಂದವು ಸಿಕ್ಕುತ್ತದೆ. ಆದ್ದರಿಂದ ಸದ್ಗುರುವನ್ನು ಧ್ಯಾನಮಾಡಬೇಕು.

ಉಪಾಸನಾಮೂರ್ತಿಧ್ಯಾನವನ್ನಾಗಲಿ ಅಥವಾ ಆತ್ಮಾನುಸಂಧಾನ, ಇಲ್ಲದ್ದಿದರೆ ಶ್ರವಣ ಮನನ, ಒಂದು ತಪ್ಪಿದರೆ ಮತ್ತೊಂದನ್ನು ಎಡಬಿಡದೆ ಅಖಂಡವಾಗಿ ಮಾಡುತ್ತಾ ಬಂದರೆ ಆಗ ಮನಸ್ಸು ಎಲ್ಲಿಗೂ ಹೋಗುವುದಿಲ್ಲ. ಮೂಕನಂತೆಯೂ ಕಾಲಿಲ್ಲದವನಂತೆಯೂ ಸುಮ್ಮನೆ ಪರಮಾತ್ಮನಲ್ಲಿಯೇ ನಿಶ್ಚಲವಾಗಿ ನಿಲ್ಲುತ್ತದೆ.

### ಸೂಚನೆ

ಆತ್ಮಾನುಸಂಧಾನವನ್ನಾಗಲೀ ಉಪಸನಾಮೂರ್ತಿಯ ಧ್ಯಾನವನ್ನಾಗಲೀ ಅಥವಾ ಶ್ರವಣಮನನವನ್ನಾಗಲೀ ಮಾಡುವುದಕ್ಕೆ ಅಂತಃಕರಣದಲ್ಲಿ ಒಂದು ವಿಧವಾದ ಯೋಗ್ಯತೆಯು (ಸಾಮರ್ಥ್ಯವು) ಇರಬೇಕಾಗುತ್ತದೆ. ಇಲ್ಲದಿದ್ದರೆ ಇವುಗಳು ಸಾಧ್ಯವಾಗುವುದಿಲ್ಲ. ಆದುದರಿಂದ ಅಂತಃಕರಣದಲ್ಲಿ ಇವುಗಳನ್ನು ಮಾಡಲು ಯೋಗ್ಯತೆಯು ಬರುವುದಕ್ಕಾಗಿ ಸುಲಭವಾದ ಕೆಲವು ಉಪಾಯಗಳನ್ನು ಹುಡುಕಬೇಕು. ಅವುಗಳಲ್ಲಿ ಕೆಲವನ್ನು ಈ ಕೆಳಗೆ ವಿವರಿಸಿದೆ.

## 14. ನಿತ್ಯ ಸುಖವನ್ನು ಪಡೆಯಲು ಕೆಲವು ಉಪಾಯಗಳು

ಈ ಕೆಳಗೆ ಹೇಳಿರುವುದು ಬಂಧನಕ್ಕೂ ದುಃಖಕ್ಕೂ ಕಾರಣವಾದುದರಿಂದ ಇವುಗಳನ್ನು ಖಂಡಿತವಾಗಿ ಬಿಡಬೇಕು.

ಅಹಂಕಾರ (ನಾನು), ಮಮಕಾರ (ನನ್ನದು), ದಾಂಭಿಕತನ, ದರ್ಪ (ಸೊಕ್ಕು), ಅಭಿಮಾನ, ಕಾಮ, ಕ್ರೋಧ – ಇವುಗಳನ್ನು ಬಿಡಬೇಕು. ಶಾಸ್ತ್ರದ ಕಟ್ಟಲೆಯನ್ನು ಮೀರಿ ಮನಸ್ಸಿಗೆ ಬಂದಂತೆ ವ್ಯವಹರಿಸುವುದು, ಆಚಾರವಿಲ್ಲದಿರುವುದು, ಅಶುಚಿಯಾಗಿರುವುದು, ಯಾವಾಗಲೂ ಇಂಥವರ ಸಹವಾಸ ಮಾಡುವುದು –ಇವುಗಳನ್ನು ಬಿಡಬೇಕು. ತನ್ನ ಮನಸ್ಸಿನಲ್ಲಿ ಹುಟ್ಟುವ ಭೋಗವಸ್ತುಗಳನ್ನು ಪಡೆದು ಅವುಗಳಿಂದ ಸುಖಪಡಬೇಕು ; ಇದೇ ಪುರುಷಾರ್ಥ, ಇದೇ ನನ್ನ ಕರ್ತವ್ಯವೆಂದು ತಿಳಿದುಕೊಂಡು ಅದಕ್ಕಾಗಿಯೇ ಸತತವೂ ಪ್ರಯತ್ನಮಾಡುವುದು ; ಅದಕ್ಕಾಗಿ ವಿವೇಕಶೂನ್ಯನಾಗಿ ಪಾಪಕರ್ಮಗಳನ್ನಾದರೂ ಮಾಡುವುದು ; ಅದಕ್ಕೆ ಯಾರಾದರೂ ಅಡ್ಡಿಯಾದರೆ ಅವರನ್ನು ದ್ವೇಷಿಸುವುದು, ಅಷ್ಟೇ ಅಲ್ಲದೆ ಅವರಿಗೆ ಮಾಡಬಾರದ್ದನ್ನೂ ಸಹ ಮಾಡಿ ತನ್ನ ಇಚ್ಛಿತ ಭೋಗವಸ್ತುಗಳನ್ನು ಪಡೆದೇತೀರುವೆನೆಂದು ಸಂಕಲ್ಪಮಾಡುವುದು – ಇವುಗಳನ್ನು ಬಿಡಬೇಕು. ಧನವನ್ನು ಗಳಿಸುವುದೇ ಮುಖ್ಯವೆಂದು ತಿಳಿದು ಅದಕ್ಕಾಗಿ ಹಗಲಿರುಳೂ ಕತ್ತೆಯಂತೆ ದುಡಿಯುವುದು ; ಅದಕ್ಕಾಗಿ ಹಿಂಸೆ, ಮೋಸ, ದ್ರೋಹ, ವಂಚನೆ, ಅನ್ಯಾಯಗಳನ್ನು ಮಾಡುವುದು –ಇವುಗಳನ್ನು ಬಿಡಬೇಕು. ನನ್ನ ಸಮಾನರು

ಯಾರಿದ್ದಾರೆಂದು ಹೆಮ್ಮೆಪಡುವುದು ; ನನಗೆ ಶಕ್ತಿಯಿದೆ, ಐಶ್ವರ್ಯವಿದೆ, ಅಧಿಕಾರವಿದೆ, ವಿದ್ಯೆಯಿದೆ, ರೂಪವಿದೆ, ಯೌವನವಿದೆ – ಎಂಬುದಾಗಿ ತಿಳಿದುಕೊಂಡು ಇವುಗಳಿಂದ ಮದಾಂಧನಾಗಿ ವಿವೇಕವಿಲ್ಲದೆ ವ್ಯವಹರಿಸುವುದನ್ನು ಬಿಟ್ಟುಬಿಡಬೇಕು. ವ್ಯರ್ಥವಾದ ಕೆಲಸಗಳನ್ನು ಬಿಡಬೇಕು. ಯಾವಾಗಲೂ ಪಾಮರರ , ವಿಷಯೀಜನರ ಸಂಗದಲ್ಲಿ ಪ್ರೀತಿ ಇಡದೆ ಆದಷ್ಟು ಅಂಥವರ ಗುಂಪಿನಿಂದ ದೂರವಿರಬೇಕು. ಭೋಗಲೋಲುಪನಾಗಬಾರದು. ವಿಷಯಭೋಗಗಳನ್ನು ಬಿಡಬೇಕು. ಇತರರ ಮನಸ್ಸು ನೋಯುವಂತೆ ಮಾತನಾಡುವುದು, ಸುಳ್ಳನ್ನು ಹೇಳುವುದು, ಅನವಶ್ಯಕವಾದ ಮಾತುಗಳನ್ನಾಡುವುದು – ಇವುಗಳನ್ನು ಬಿಡಬೇಕು. ಯಾರನ್ನೂ ದ್ವೇಷಮಾಡಬಾರದು ; ಯಾರಿಗೂ ಮನಸ್ಸಿನಿಂದಲೂ ಕೆಡಕನ್ನು ಬಯಸಬಾರದು. ಕ್ರೂರತನವನ್ನು ಬಿಡಬೇಕು. ಯಾವಾಗಲೂ ದುಷ್ಟಭಾವನೆಗಳನ್ನು ಎಂದರೆ ಮನಸ್ಸನ್ನು ವಿಕಾರಗೊಳಿಸುವ ಭಾವನೆಗಳನ್ನು ಮಾಡಬಾರದು. ಅನವರತವೂ ಕೊನೆಗಾಣದಂತಹ ಪ್ರಪಂಚದ ಚಿಂತೆಯನ್ನು ಮಾಡುವುದು ; ಲೆಕ್ಕವಿಲ್ಲದಷ್ಟು ಆಶೆಗಳೆಂಬ ಹಗ್ಗಗಳಿಂದ ಕಟ್ಟಿಕೊಂಡಿರುವುದು ; ಕಾಮಕ್ರೋಧಗಳಲ್ಲಿ ಮುಳುಗಿರುವುದು – ಇವುಗಳನ್ನು ಬಿಟ್ಟು ಬಿಡಬೇಕು. ನಾನು ದೊಡ್ಡವನು, ಶ್ರೇಷ್ಠನು, ಪೂಜ್ಯನು – ಎಂಬುದಾಗಿ ಅಭಿಮಾನಪಡಬಾರದು. ಮಾನಮರ್ಯಾದೆಯನ್ನು ಪಡೆಯಬೇಕು, ನಾನು ಹೆಚ್ಚಿನವನೆನಿಸಿಕೊಳ್ಳಬೇಕು – ಎನ್ನುವ ಅಪೇಕ್ಷೆಯನ್ನು ಬಿಡಬೇಕು.

ಈ ಕೆಳಗಡೆ ಹೇಳಿರುವುದು ದುಃಖರಹಿತವಾದ ಸುಖಶಾಂತಿಯನ್ನು ಪಡೆಯಲು ಕಾರಣವಾದುದರಿಂದ ಇವುಗಳನ್ನು ಅವಶ್ಯವಾಗಿ ಮಾಡಬೇಕು.

ಪ್ರತಿನಿತ್ಯವೂ ದೇವರ ಮತ್ತು ಗುರುವಿನ ಪೂಜೆಯನ್ನು ಮಾಡಬೇಕು. ನಂತರ ಮನಃಪೂರ್ವಕವಾಗಿ ಭಕ್ತಿಯಿಂದ ಪ್ರಾರ್ಥನೆಯನ್ನು ಮಾಡಬೇಕು. ಸತ್ಪುರುಷರು, ಜ್ಞಾನಿಗಳು, ಬ್ರಾಹ್ಮಣರು – ಇವರನ್ನು ಪೂಜಿಸಬೇಕು. ವಿಘ್ನಗಳಿಗೆ ಹೆದರಿ ಎದೆಗುಂದದೆ ಧೈರ್ಯದಿಂದ ಪರಮಾತ್ಮನ ಕಡೆ ಮುನ್ನುಗ್ಗಲು ಪ್ರಯತ್ನವನ್ನು ಮಾಡಬೇಕು. ತನ್ನ ಶಕ್ತ್ಯನುಸಾರವಾಗಿ ಯೋಗ್ಯರಾದವರಿಗೆ ದಾನಧರ್ಮವನ್ನು ಮಾಡಬೇಕು. ಸದ್ಗುರು ಮತ್ತು ಮಹಾತ್ಮರ ಸೇವೆಯನ್ನು ಮಾಡಬೇಕು. ಸಾಧ್ಯವಾದಷ್ಟು ಪ್ರಯತ್ನಮಾಡಿ ಸತ್ಸಂಗವನ್ನು ಹೆಚ್ಚಾಗಿ ಮಾಡಬೇಕು. ಇದು ಜ್ಞಾನಕ್ಕೆ ಬಹಳ ಹತ್ತಿರದ ಸಾಧನೆಯಾಗಿರುತ್ತದೆ. ಶಕ್ಯವಿದ್ದಷ್ಟು ಯಾವಾಗಲೂ ವಿಷಯೀಜನಗಳ ಗಲಾಟೆ ಇಲ್ಲದಿರುವ ಪವಿತ್ರವಾದ ಏಕಾಂತಸ್ಥಳದಲ್ಲಿರುವ ಅಭ್ಯಾಸಮಾಡಬೇಕು. ಇದರಿಂದ ಮನಸ್ಸು

ವಿಷಯಗಳಿಂದ ಬಿಡುಗಡೆಹೊಂದಿ ಪರಮಾತ್ಮನ ಕಡೆ ತಿರುಗಲು ಸಹಾಯವಾಗುತ್ತದೆ. ಕಪಟವನ್ನು ಬಿಟ್ಟು ಸರಳತನದಿಂದಿರಬೇಕು. ಬ್ರಹ್ಮಚರ್ಯೆಯನ್ನು ಪಾಲಿಸಬೇಕು. ದೇಹ, ಇಂದ್ರಿಯ, ಮನಸ್ಸುಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಸತ್ಯವನ್ನೇ ನುಡಿಯಬೇಕು. ಭಗವಂತನ ಸ್ತೋತ್ರಗಳನ್ನು ಹೇಳಬೇಕು. ಅವನ ಭಜನೆಯನ್ನು ಮಾಡಬೇಕು. ಭಕ್ತಿಜ್ಞಾನವೈರಾಗ್ಯಗಳಿಂದ ಕೂಡಿದ ಗ್ರಂಥಗಳನ್ನು ಓದಬೇಕು. ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಸ್ವೇಚ್ಛೆಯಾಗಿ ಬಿಡದೆ ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕು. ಒಳ್ಳೆಯ ಭಾವನೆಗಳನ್ನೇ ಮಾಡಬೇಕು. ಕಾಮಕ್ರೋಧಗಳನ್ನು ನಿಗ್ರಹಿಸಬೇಕು. ಯಾವಾಗಲೂ ವಿಷಯಗಳ ಕಡೆ ಓಡುತ್ತಿರುವ ಮನಸ್ಸನ್ನು ಸತತವಾಗಿ ಪ್ರಯತ್ನಮಾಡಿ ಪರಮಾತ್ಮನ ಕಡೆ ಹಿಂತಿರುಗಿಸಬೇಕು. ಯಾವಾಗಲೂ ಪರಮಾತ್ಮನ ಯಾವದಾದರೊಂದು ನಾಮವನ್ನು ಸ್ಮರಿಸುತ್ತಿರಬೇಕು. ವಿಷಯಭೋಗಗಳಲ್ಲಿ ವೈರಾಗ್ಯವನ್ನು ಪಡೆಯಬೇಕು. ದುಃಖದಿಂದಿರುವ ಜೀವಿಗಳಲ್ಲಿ ದಯೆಯನ್ನು ತೋರಿಸಬೇಕು. ತನ್ನ ಕೈಲಾದಮಟ್ಟಿಗೆ ಅವರಿಗೆ ಸಹಾಯವನ್ನು ಮಾಡಬೇಕು. ಸಮಸ್ತರನ್ನೂ ತನ್ನಂತೆಯೇ ಕಾಣಬೇಕು. ಎಲ್ಲರನ್ನೂ ಪ್ರೇಮದಿಂದ ನೋಡಬೇಕು.ಇತರರು ಮಾಡಿದ ತಪ್ಪುಗಳನ್ನು ಎತ್ತಿ ಎಣಿಸದೆ ಅವುಗಳನ್ನು ಉದಾರವಾದ ಮನಸ್ಸಿನಿಂದ ಕ್ಷಮಿಸಬೇಕು. ಪರಮಾತ್ಮನು ತನಗೆ ಕೊಟ್ಟದ್ದರಲ್ಲಿ ತೃಪ್ತಿಯನ್ನು ಹೊಂದಬೇಕು. ತನ್ನಿಂದ ಇತರರ ಮನಸ್ಸಿಗೆ ನೋವಾಗದಂತೆಯೂ , ಇತರರ ವರ್ತನೆಯಿಂದ ತನ್ನ ಮನಸ್ಸು ವಿಕಾರಗೊಳ್ಳದಂತೆಯೂ ನೋಡಿಕೊಳ್ಳಬೇಕು. ಪ್ರಪಂಚದ ವಿಷಯದಲ್ಲಿ ಉದಾಸೀನನಾಗಿರಬೇಕು. ಸುಖ ಬಂದಾಗಲೂ ದುಃಖ ಬಂದಾಗಲೂ ಎರಡನ್ನೂ ಸಮಾನವಾಗಿ ಕಾಣಬೇಕು. ಮಾನವನ್ನೂ, ಅಪಮಾನವನ್ನೂ , ನಿಂದೆಯನ್ನೂ, ಸ್ತೋತ್ರವನ್ನೂ ಸಮವಾಗಿ ಕಾಣಬೇಕು. ಆದಷ್ಟು ಮೌನದಿಂದಿರುವ ಅಭ್ಯಾಸವನ್ನು ಮಾಡಬೇಕು. ಏನಾದರೂ ಆಗಲಿ ಮೋಕ್ಷಕ್ಕೆ ಬೇಕಾದ ಸಾಧನಗಳನ್ನು ಮಾಡಿ ಜ್ಞಾನವನ್ನು ಪಡದೇತೀರುವೆನೆಂಬ ನಿಶ್ಚಯವನ್ನು ಮಾಡಿಕೊಳ್ಳಬೇಕು. ಹುಟ್ಟು, ಸಾವು, ಮುಪ್ಪು, ರೋಗ –ಇವುಗಳಿಂದಾಗುವ ದುಃಖವನ್ನು ಮನಸ್ಸಿಗೆ ತಂದುಕೊಳ್ಳಬೇಕು. ತನಗೆ ಇಷ್ಟವಾದದ್ದು ಪ್ರಾಪ್ತವಾದರೂ ಅಥವಾ ತನಗೆ ಬೇಡವಾದದ್ದು ಬಂದೊದಗಿದರೂ ಎರಡರಲ್ಲೂ ಮನಸ್ಸು ಏರುಪೇರು ಹೊಂದದಹಾಗೆ ನೋಡಿಕೊಳ್ಳಬೇಕು. ಜಗತ್ತಿನಲ್ಲಿ ಪರಮಾತ್ಮನಿಗಿಂತಲೂ ಹೆಚ್ಚಿನವರು ಯಾರೂ ಇಲ್ಲ. ಅವನೇ ನನಗೆ ಗತಿ ಎಂಬುದಾಗಿ ದೃಢವಾಗಿ ನಂಬಿ ಅವನನ್ನೇ ಯಾವಾಗಲೂ ಧ್ಯಾನಿಸಬೇಕು. ಆತ್ಮಾನಾತ್ಮ ವಿಚಾರವನ್ನು ಮಾಡಬೇಕು.

ಹೀಗೆ ಮಾಡುವುದರಿಂದ ಅಂತಃಕರಣವು ಶುದ್ಧವಾಗಿ ಅದರಲ್ಲಿ ಒಂದು ವಿಧವಾದ ಸಾಮರ್ಥ್ಯವು ಬರುತ್ತದೆ. ಆಗ ತನ್ನ ನಿಜಸ್ವರೂಪವೇ ಆದ ಆತ್ಮನನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ; ಆತ್ಮನಲ್ಲೇ ನೆಲೆನಿಲ್ಲುವ ಯೋಗ್ಯತೆಯು ಬರುತ್ತದೆ; ಆತ್ಮನೇ ಆಗಿ ಉಳಿಯಲು ಬರುತ್ತದೆ.

### ಸೂಚನೆ

ಇದುವರೆಗೂ ಒಂದನೇ ಮತ್ತು ಎರಡನೇ ಪ್ರಕರಣಗಳಲ್ಲಿ ಹೇಳಿರುವಂತೆ ಸಾಧನೆಗಳನ್ನು ಮಾಡಿ ಅಂತಃಕರಣಶುದ್ಧಿ ಪಡೆದವರೇ ಸಾಧಕರಾಗುತ್ತಾರೆ. ಅವರೇ ಯಥಾರ್ಥವಾದ ಪೂರ್ಣವಾದ ಜ್ಞಾನವನ್ನು ಪಡೆದು ಸಮಸ್ತದುಃಖಗಳಿಂದ ಬಿಡುಗಡೆಯನ್ನು ಹೊಂದಿ ನಿಜವಾದ ಸುಖಶಾಂತಿಗಳನ್ನು ಅನುಭವಿಸುತ್ತಾರೆ. ಈ ರೀತಿ ಮಾಡಿ ಚಿತ್ತಶುದ್ಧಿಯನ್ನು ಪಡೆದ ಸಾಧಕರು ಹೇಗಿರುತ್ತಾರೆಂಬುದನ್ನು ವಿವರಿಸೋಣ.

## 15. ಸಾಧಕನೆಂದರೆ ಯಾರು?

ತನ್ನಲ್ಲಿರುವ ಸಮಸ್ತ ದುರ್ಗುಣಗಳನ್ನು ತ್ಯಾಗಮಾಡಿ ಸತ್ಪುರುಷರ ಸಹವಾಸವನ್ನು ಮಾಡಿದವನಿಗೆ ಸಾಧಕನೆನ್ನುತ್ತಾರೆ. ಸದ್ಗುರುವಿಗೆ ಶರಣು ಹೋಗಿ ಅವರಿಂದ ಆತ್ಮಜ್ಞಾನವನ್ನು ಪಡೆದುಕೊಂಡು ಆ ಜ್ಞಾನವನ್ನು ದೃಢಪಡಿಸುವವನಿಗೆ ಸಾಧಕನೆನ್ನುತ್ತಾರೆ. ಯಾವಾಗಲೂ ಅದ್ವೈತತತ್ತ್ವವನ್ನು ಕೇಳಬೇಕೆಂಬ ಇಚ್ಛೆಯಿಂದ ಪ್ರತಿನಿತ್ಯವೂ ಅತ್ಯಂತ ಆದರದಿಂದ ಆತ್ಮವಿಚಾರವನ್ನು ಶ್ರವಣಮಾಡುತ್ತಾ ಅದನ್ನು ಮನನಮಾಡುವವನೇ ಸಾಧಕನು. ಆತ್ಮಾನಾತ್ಮವಿವೇಕವನ್ನು ಮಾಡಿ ಸಮಸ್ತ ಸಂಶಯಗಳನ್ನೂ ನಾಶಪಡಿಸಿ ಆತ್ಮನಿಶ್ಚಯವನ್ನು ಮಾಡುವವನೇ ಸಾಧಕನು. ದೇಹಬುದ್ಧಿಯನ್ನು ಹೋಗಲಾಡಿಸಿ ಆತ್ಮಬುದ್ಧಿಯನ್ನು ದೃಢಪಡಿಸುವವನೇ ಸಾಧಕನು. ಶ್ರವಣಮನನವನ್ನು ಬೇಸರವಿಲ್ಲದೆ ಪದೇ ಪದೇ ಪ್ರೇಮದಿಂದ ಮಾಡಿದ್ದನ್ನೇ ಮಾಡುವವನೇ ಸಾಧಕನು. ಯಾವಾಗಲೂ ಮನಸ್ಸನ್ನು ಸ್ವರೂಪಾಕಾರ ಮಾಡುವವನೂ, ದುಷ್ಟಕರ್ಮಗಳನ್ನೂ ದುರಾಚಾರಗಳನ್ನೂ ಬಿಟ್ಟು ಸತ್ಕರ್ಮಗಳನ್ನೂ ಸದಾಚಾರಗಳನ್ನೂ ಪಾಲಿಸುವವನೂ, ದಿನೇ ದಿನೇ ತನ್ನಲ್ಲಿರುವ ದುಷ್ಟಗುಣಗಳನ್ನು ತ್ಯಾಗಮಾಡಿ ಉತ್ತಮಗುಣಗಳನ್ನು ಅಭ್ಯಾಸಮಾಡುವವನೂ, ದೇಹಾಭಿಮಾನವನ್ನು ನಾಶಪಡಿಸವವನೂ, ವಿಷಯವ್ಯಾಮೋಹವನ್ನು ಹೋಗಲಾಡಿಸುವವನೂ, ಎಲ್ಲರನ್ನೂ ಪ್ರೇಮದಿಂದ ಕಾಣುವವನೂ – ಈ ಗುಣಗಳುಳ್ಳವನೇ ಸಾಧಕನು. ನಿರಂತರದಲ್ಲೂ

ಸ್ವಸ್ವರೂಪಾನುಸಂಧಾನವನ್ನು ಮಾಡುತ್ತಾ ಪದೇ ಪದೇ ದೇಹ, ಜೀವ , ಸ್ತ್ರೀ, ಪುರುಷ, ಸಂಸಾರ, ಜಗತ್ತು ಇವೇ ಮೊದಲಾದ ಅನಾತ್ಮಭಾವನೆಗಳನ್ನು ಹೋಗಲಾಡಿಸಿ ಆತ್ಮಭಾವನೆಯನ್ನು ಮಾಡುವವನೇ ಸಾಧಕನು. ದೇಹ ಇಂದ್ರಿಯ ಪ್ರಾಣ ಮನ ಬುದ್ಧಿಗಳು ನಾನಲ್ಲ; ಇವೆಲ್ಲವನ್ನೂ ಅರಿಯುವಂತಹ ಶುದ್ಧವಾದ ಅರಿವೇ (ಜ್ಞಾನವೇ) ನಾನು ;ಇವೆಲ್ಲವನ್ನೂ ನೋಡುವಂತಹ ಸಾಕ್ಷಿಯೇ ನಾನು ; ಇವೆಲ್ಲವನ್ನೂ ಬೆಳಗುವಂತಹ ಚೈತನ್ಯಸ್ವರೂಪವೇ ನಾನು – ಎಂಬುದಾಗಿ ಸತತವಾಗಿ ವಿಚಾರ ಮಾಡಿ ತನ್ನ ನಿಜಸ್ವರೂಪದಲ್ಲಿ ನೆಲೆನಿಲ್ಲುವವನೇ ಸಾಧಕನು.

ಪ್ರತ್ಯಕ್ಷವಾಗಿ ತೋರುವ ಜಗತ್ತನ್ನು ವಿವೇಕವಿಚಾರಗಳಿಂದ ಇದು ತೋರಿದರೂ ಸಹ ಇಲ್ಲವೆಂದೂ , ಕೇವಲ ಕಲ್ಪನೆಯಿಂದ ಹೀಗೆ ತೋರುತ್ತಿದೆಯೆಂದೂ ಇದೆಲ್ಲವೂ ಪರಮಾತ್ಮಸ್ವರೂಪವೇ ಆಗಿದೆ ಎಂದೂ ತಿಳಿಯುವವನೇ ಸಾಧಕನು. ಎಚ್ಚರಕ್ಕೂ ಕನಸಿಗೂ ಏನೂ ವ್ಯತ್ಯಾಸವಿಲ್ಲ. ರಾತ್ರಿ ಕಂಡ ಕನಸಿನಂತೆ ಇದೊಂದು ಹಗಲುಗನಸೆಂದು ತಿಳಿಯುವವನೇ ಸಾಧಕನು. ಕನಸಿನಲ್ಲಿ ತೋರಿದುದೆಲ್ಲವೂ ಹೇಗೆ ತನ್ನ ಸ್ವರೂಪವೇ ಆಗಿದ್ದಿತೋ ಅಲ್ಲಿ ತನಗಿಂತಲೂ ಭಿನ್ನವಾಗಿ ಮತ್ತೊಂದಿರಲಿಲ್ಲವೋ ಹಾಗೆ, ಎಚ್ಚರದಲ್ಲಿ ತೋರುವುದೆಲ್ಲವೂ ತನ್ನ ಆತ್ಮಸ್ವರೂಪವೇ ಆಗಿದೆ ; ಇಲ್ಲಿ ಆತ್ಮನಿಗಿಂತಲೂ ಭಿನ್ನವಾಗಿ ಮತ್ತೊಂದಿಲ್ಲವೇ ಇಲ್ಲವೆಂದು ತಿಳಿಯುವವನೇ ಸಾಧಕನು. ಯಾವನು ತೋರುವ ಸಮಸ್ತಪ್ರಪಂಚವನ್ನೂ ಕನಸಿನಂತೆ ಕಾಣುತ್ತಾನೆಯೋ ಅವನೇ ಸಾಧಕನು. ನಿದ್ರೆಗೆ ವಶನಾಗಿ ಕನಸನ್ನು ಕಂಡು ದುಃಖಪಡುತ್ತಿದ್ದವನು ಎಚ್ಚರವಾದ ಮೇಲೆ ಹೇಗೆ ಆ ಕನಸಿನ ಭಯದಿಂದ ಬಿಡುಗಡೆಯನ್ನು ಹೊಂದುತ್ತಾನೆಯೋ ಹಾಗೆ, ಯಾವನು ಅವಿವೇಕಕ್ಕೆ ವಶವಾಗಿ ಕಾಣುತ್ತಿರುವ ಅಜ್ಞಾನವೆಂಬ ಕನಸಿನಿಂದ ಬಿಡುಗಡೆಯನ್ನು ಹೊಂದಿ ಆತ್ಮಜ್ಞಾನವೆಂಬ ಎಚ್ಚರಿಕೆಯನ್ನು ಪಡೆದು, ಮಾಯಾಮಾತ್ರವಾದ, ಕೇವಲ ಕಲ್ಪಿತವಾದ ಈ ಸಂಸಾರದುಃಖದಿಂದ ಬಿಡುಗಡೆಹೊಂದಿ ತನ್ನ ನಿಜಸ್ವರೂಪದಲ್ಲಿ ನಿರ್ಭಯನಾಗಿರಲು ಪ್ರಯತ್ನಿಸುತ್ತಾನೆಯೋ ಅವನೇ ಸಾಧಕನು.

ಯಾರು ಪ್ರತ್ಯಕ್ಷವಾಗಿ ತೋರುವ ಮಾಯಾಕಾರ್ಯವಾದ ಈ ಸಮಸ್ತವನ್ನೂ ಅಲಕ್ಷಿಸಿ, ಅಲಕ್ಷ್ಯವಾದ ತೋರದಿರುವ ಸದ್ವಸ್ತುವನ್ನು ಚೈತನ್ಯವನ್ನು ಲಕ್ಷಿಸುವನೋ (ನೋಡುವನೋ) ಅವನೇ ಸಾಧಕನು. ಯಾವುದನ್ನು ಸಾಧಿಸುವುದಕ್ಕೆ ಬರುವುದಿಲ್ಲವೋ, ಯಾವುದನ್ನು ಲಕ್ಷಿಸುವುದಕ್ಕೆ ಬರುವುದಿಲ್ಲವೋ, ಅಂತಹ ಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳುವವನೇ ಸಾಧಕನು. ಪರಿಪೂರ್ಣನಾದ,

ಜ್ಞಾನಸ್ವರೂಪನಾದ, ಶುದ್ಧಚೈತನ್ಯನಾದ ನನ್ನಲ್ಲಿ ಎಂದೂ ಜಗತ್ತು ಇಲ್ಲವೇ ಇಲ್ಲವೆಂದು ದೃಢಪಡಿಸುವವನೇ ಸಾಧಕನು. ಸಂಸಾರವು, ಹುಟ್ಟುಸಾವುಗಳು, ನಿಂದಾಸ್ತುತಿಗಳು, ಕಾಮಕ್ರೋಧಗಳು, ರಾಗದ್ವೇಷಗಳು ಜ್ಞಾನಸ್ವರೂಪನಾದ ನನ್ನಲ್ಲಿ ಎಂದೆಂದಿಗೂ ಇಲ್ಲವೇ ಇಲ್ಲವೆಂದು ತಿಳಿದುಕೊಂಡು ಅವುಗಳಿಗೆ ವಶನಾಗದೆ ವಿವೇಕದಿಂದ ತನ್ನ ನಿಜಸ್ವರೂಪದಲ್ಲಿ ನಿಲ್ಲುವವನೇ ಸಾಧಕನು. ಸಮಸ್ತ ಜೀವರಾಶಿಗಳಲ್ಲಿ ತನ್ನನ್ನೂ ತನ್ನಲ್ಲಿ ಸಮಸ್ತ ಜೀವರಾಶಿಗಳನ್ನೂ ಕಾಣುವವನೇ ಸಾಧಕನು. ಎಲ್ಲವನ್ನೂ ಆತ್ಮರೂಪದಿಂದ ಕಾಣುವವನೇ ಸಾಧಕನು. ಆತ್ಮಸ್ವರೂಪವೇ ಆಗಿ ಉಳಿಯುವವನೇ ಸಾಧಕನು. ಜ್ಞಾನಿಗೆ ಸಹಜವಾದದ್ದನ್ನು ಸಾಧಕರು ಅಭ್ಯಾಸವನ್ನು ಮಾಡಬೇಕು. ಇದು ಸಹಜವಾದಾಗ ಸಾಧಕನೇ ಜ್ಞಾನಿ ಎನಿಸಿಕೊಳ್ಳುತ್ತಾನೆ.

✤✤✤✤

ಶ್ರೀರಾಮಸಮರ್ಥ। ಶ್ರೀಗುರುಭ್ಯೋ ನಮಃ॥

# ಆತ್ಮಜ್ಞಾನ

(3ನೇ ಪ್ರಕರಣ – ಜ್ಞಾನಭಾಗ)

## 1. ಆತ್ಮಜ್ಞಾನದಿಂದಲೇ ಮೋಕ್ಷ

**ತಮೇವ ವಿದಿತ್ವಾ ಅತಿಮೃತ್ಯುಮೇತಿ।**
**ನಾನ್ಯಃ ಪಂಥಾ ವಿದ್ಯತೇಽಯನಾಯ॥** (ಶ್ವೇ. 3–8)

**''ಜ್ಞಾನಾದೇವ ತು ಕೈವಲ್ಯಂ ನಾನ್ಯಃ ಪಂಥಾ ವಿದ್ಯತೇಽಯನಾಯ''** ಆತ್ಮಸ್ವರೂಪವನ್ನೇ ಅರಿತಾಗಲೇ ಜನ್ಮಮರಣಗಳು ಬಿಡುಗಡೆಯಾಗುತ್ತವೆ. ಜ್ಞಾನದಿಂದಲೇ (ಕೈವಲ್ಯವು) ಮೋಕ್ಷವು ಸಿಕ್ಕುತ್ತದೆ. ಇದನ್ನು ಬಿಟ್ಟು ಬೇರೆ ದಾರಿಯೇ ಇಲ್ಲವೆಂದು ಶ್ರುತಿಗಳು ಸಾರುತ್ತಿವೆ.

ಈ ವಿಷಯದಲ್ಲಿ ಛಾಂದೋಗ್ಯ ಉಪನಿಷತ್ತಿನಲ್ಲಿ ನಾರದ ಮಹರ್ಷಿಗಳ ಕಥೆಯು ಹೀಗಿದೆ. ನಾರದರು ದೇವರ್ಷಿಗಳೂ, ಮಾಡತಕ್ಕದ್ದನ್ನೆಲ್ಲಾ ಮಾಡಿದವರೂ, ಸಮಸ್ತ ವಿದ್ಯೆಗಳನ್ನೂ ಕಲಿತವರೂ ಆಗಿದ್ದರೂ ಸಹ ಆತ್ಮಜ್ಞಾನ ಒಂದಿಲ್ಲದ್ದರಿಂದ ಎಂದರೆ ಇವೆಲ್ಲವನ್ನೂ ಅರಿಯುವಂತಹ ತಾನು ಯಾರು ಎನ್ನುವ ಜ್ಞಾನವೊಂದಿಲ್ಲದ್ದರಿಂದ ಅವರು ಶಾಂತಿ ಇಲ್ಲದೆ ಶೋಕಪಡುತ್ತಿದ್ದರು. ಅಂತಹ ಮಹನೀಯರ ಸ್ಥಿತಿಯೇ ಹೀಗಿರುವಾಗ ಎಲ್ಲಿಯೋ ಸ್ವಲ್ಪ ಪುಣ್ಯವನ್ನು ಮಾಡಿ, ಕೆಲವು ವಿದ್ಯೆಯನ್ನು ಕಲಿತು, ಕ್ಷುಲ್ಲಕವಾದ ಭೋಗವಸ್ತುಗಳನ್ನು ಪಡೆದು ಸುಖಿಸುವೆನೆಂಬುವ ಹೀನಮಾನವನು ದುಃಖವನ್ನನುಭವಿಸುವುದು ಹೆಚ್ಚೇನು? ದೇವರ್ಷಿ ನಾರದರಿಗೆ ಏನು ಬೇಕಾದರೂ ಪಡೆಯಲು ಬೇಕಾದ ಜ್ಞಾನವೂ, ಅದನ್ನು ಪಡೆಯುವ ಸಾಮರ್ಥ್ಯವೂ, ಅದಕ್ಕೆ ಬೇಕಾದ ಸಾಧನಗಳೂ – ಇವೆಲ್ಲವೂ ಇದ್ದವು. ಇಷ್ಟಿದ್ದರೂ ಸಹ ಅವರಿಗೆ ಶೋಕವು ತಪ್ಪಲಿಲ್ಲ, ಪರಮಶಾಂತಿಯು ದೊರೆಯಲಿಲ್ಲ. ಆದುದರಿಂದ ಅವರು ಈ ಶೋಕದಿಂದ ಮುಕ್ತನಾಗಬೇಕು; ಎಲ್ಲಕ್ಕೂ ಹೆಚ್ಚಿನದಾದ ಚಿರಶಾಂತಿಯನ್ನು ಪಡೆಯಬೇಕು ಎಂಬುವ ಇಚ್ಛೆಯಿಂದ ತಾವು ಬ್ರಹ್ಮಮಾನಸಪುತ್ರರಾದರೂ ತಮ್ಮ ಕುಲದ, ವಿದ್ಯೆಯ, ತಪಸ್ಸಿನ,

ಶಕ್ತಿಯ, ನಡತೆಯ, ಸಾಧನೆಗಳ ಎಲ್ಲ ಅಭಿಮಾನವನ್ನೂ ಬಿಟ್ಟು ಸಾಮಾನ್ಯ ಜನರಂತೆ ಸನತ್ಕುಮಾರರ ಬಳಿಗೆ ಅವರ ಶಿಷ್ಯರಾಗಿ ಶರಣುಬಂದರು. ಅವರು ಬ್ರಹ್ಮನಿಷ್ಠರಾದ ಸನತ್ಕುಮಾರರಿಗೆ ಕೇಳಿಕೊಂಡರೇನೆಂದರೆ, ''ಭಗವಂತನೇ, ನಾನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳನ್ನು ಕಲಿತಿದ್ದೇನೆ; ಐದನೆಯದಾದ ಇತಿಹಾಸಪುರಾಣಗಳನ್ನು ತಿಳಿದುಕೊಂಡಿದ್ದೇನೆ. ದೇವವಿದ್ಯೆ, ಬ್ರಹ್ಮವಿದ್ಯೆ, ಭೂತವಿದ್ಯೆ, ನಕ್ಷತ್ರವಿದ್ಯೆ ಇವುಗಳನ್ನು ಅಭ್ಯಾಸಮಾಡಿದ್ದೇನೆ. ವ್ಯಾಕರಣಶಾಸ್ತ್ರ, ಗಣಿತಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರ, ಜ್ಯೋತಿಷ್ಯಶಾಸ್ತ್ರಗಳನ್ನು ಕಲಿತಿದ್ದೇನೆ. ಗಾರುಡವಿದ್ಯೆ, ಶಿಲ್ಪವಿದ್ಯೆಗಳು ಗೊತ್ತಿವೆ. ನೃತ್ಯ , ಗೀತೆ , ವಾದ್ಯವೇ ಮೊದಲಾದವುಗಳೆಲ್ಲಾ ಬರುತ್ತವೆ. ಸ್ವಾಮಿ ಇಷ್ಟಾದರೂ ಸಹ ನಾನು ಮಂತ್ರವಿದ್ಯೆಯನ್ನು ಬಲ್ಲೆನೇ ಹೊರತು ಆತ್ಮವಿದ್ಯೆಯನ್ನು ಅರಿಯೆ. ಹೇ ಭಗವಾನ್ **''ತರತಿ ಶೋಕಮಾತ್ಮವಿತ್''** (ಛಾಂ. 7–1–2) ಆತ್ಮನನ್ನು ಅರಿತವರು ಸಮಸ್ತ ಶೋಕದಿಂದ ಬಿಡುಗಡೆ ಹೊಂದಿ ನಿತ್ಯಸುಖವನ್ನು ಪಡೆಯುತ್ತಾರೆಂಬುದಾಗಿ ತಮ್ಮಂಥ ಮಹಾತ್ಮರಿಂದ ನಾನು ಕೇಳಿರುತ್ತೇನೆ. ನಾನು ಆತ್ಮನನ್ನರಿಯದಿದ್ದರಿಂದ ಶೋಕಸಮುದ್ರದಲ್ಲಿ ಮುಳುಗಿರುತ್ತೇನೆ. ನನ್ನನ್ನು ತಾವು ಆತ್ಮಜ್ಞಾನವೆಂಬ ದೋಣಿಯಿಂದ ಶೋಕಸಮುದ್ರವನ್ನು ದಾಟಿಸಿ ಕೃತಾರ್ಥನನ್ನಾಗಿ ಮಾಡಬೇಕು'' ಎಂಬುದಾಗಿ ಪ್ರಾರ್ಥಿಸಿಕೊಂಡಿರುತ್ತಾರೆ. ಆಗ ಸನತ್ಕುಮಾರನು ನಾರದರ ನಯ, ವಿನಯ, ಜ್ಞಾನವನ್ನು ಪಡೆಯಬೇಕೆನ್ನುವ ತೀವ್ರವಾದ ಇಚ್ಛೆ ಇವುಗಳನ್ನು ನೋಡಿ ಪ್ರೇಮದಿಂದ ಅವರಿಗೆ ಆತ್ಮಜ್ಞಾನವನ್ನು ಉಪದೇಶಮಾಡಿದರು. ಅದರಿಂದ ನಾರದರು ಧನ್ಯರಾದರು.

ಮೇಲಿನ ಕಥೆಯ ಸಾರಾಂಶವೇನೆಂದರೆ ಮಾನವನು ಆತ್ಮಜ್ಞಾನ ಒಂದನ್ನು ಬಿಟ್ಟು ಯಾವ ವಿದ್ಯೆಗಳನ್ನು ಕಲಿತರೂ, ಏನು ಮಾಡಿದರೂ ಏನು ಪಡೆದರೂ ಎಂದರೆ ನಾನು ಯಾರು ಎನ್ನುವುದನ್ನು ತಿಳಿಯದೆ ಲೋಕದಲ್ಲಿರುವ ಎಲ್ಲಾ ಜ್ಞಾನವನ್ನು ತಿಳಿದು ಕೊಂಡರೂ , ಘೋರವಾದ ತಪಸ್ಸನ್ನಾಚರಿಸಿದರೂ, ಅದ್ಭುತವಾದ ಕಾರ್ಯವನ್ನು ಮಾಡಿದರೂ, ಜಗತ್ತಿನಲ್ಲಿರುವ ಸಮಸ್ತವಸ್ತುಗಳನ್ನೂ ತಾನು ಪಡೆದುಕೊಂಡು ಅವುಗಳನ್ನು ಭೋಗಿಸಿದರೂ ಏನುಮಾಡಿದರೂ ಭಯಶೋಕಗಳು ತಪ್ಪುವುದಿಲ್ಲ; ನಿತ್ಯಸುಖವು ದೊರೆಯುವುದಿಲ್ಲ. ಶ್ರೀರಾಮಗೀತೆಯಲ್ಲಿ **''ಅಜ್ಞಾನಮೇವಾಸ್ಯ ಹಿ ಮೂಲಕಾರಣಮ್''** ಸಮಸ್ತ ಅನರ್ಥಪರಂಪರೆಗಳಿಗೆ, ಎಲ್ಲಾ ವಿಧವಾದ ದುಃಖಗಳಿಗೆ, ಈ ಸಂಸಾರಕ್ಕೆ ಅಜ್ಞಾನವೇ ಮೂಲಕಾರಣವಾಗಿದೆ. ಆದುದರಿಂದ ಅದನ್ನೇ ನಾಶಪಡಿಸಬೇಕು– ಎಂಬುದಾಗಿ ಹೇಳಿದೆ.

ಇದನ್ನೇ ಭಗವದ್ಗೀತೆಯಲ್ಲಿಯೂ ಪ್ರತಿಪಾದಿಸಿರುತ್ತದೆ. ಅದರಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ. **''ಅಜ್ಞಾನೇನಾವೃತಂ ಜ್ಞಾನಂ ತೇನ ಮುಹ್ಯಂತಿ ಜಂತವಃ''** (ಗೀ.5–15) ಅಜ್ಞಾನದಿಂದ ಜ್ಞಾನವು ಮುಚ್ಚಲ್ಪಟ್ಟಿದೆ. ಅದರಿಂದ ಜೀವರು ಭ್ರಮಿಸಿ ಮೋಹಗೊಂಡು ದುಃಖವನ್ನನುಭವಿಸುತ್ತಿದ್ದಾರೆ. **''ಯಜ್ಜ್ಞಾತ್ವಾ ನ ಪುನರ್ಮೋಹ–ಮೇವಮ್ ಯಾಸ್ಯಸಿ ಪಾಂಡವ''** (ಗೀ.4–35) ಅನುಭವಪೂರ್ವಕವಾದ ಜ್ಞಾನವನ್ನು ಪಡೆದುಕೊಂಡರೆ ಅಶುಭವಾದ ಎಂದರೆ ಅಮಂಗಲಕರವಾದ, ದುಃಖರೂಪವಾದ ಸಂಸಾರಬಂಧದಿಂದ ಮುಕ್ತನಾಗುವೆ. **ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ''** (ಗೀ. 13–12) ಯಾವುದನ್ನು ತಿಳಿದುಕೊಂಡರೆ ನೀನು ಅಮರನಾಗುವೆಯೋ ಅಮೃತಸ್ವರೂಪವಾದ ಮೋಕ್ಷವನ್ನು ಪಡೆಯುವೆಯೋ ಅಂಥ ಪರಮಾರ್ಥಸ್ವರೂಪವನ್ನು ಹೇಳುತ್ತೇನೆ. **''ಅಪಿ ಚೇದಸಿ ಪಾಪೇಭ್ಯಃ ಸರ್ವೇಭ್ಯಃ ಪಾಪಕೃತ್ತಮಃ । ಸರ್ವಂ ಜ್ಞಾನಪ್ಲವೇನೈವ ವೃಜಿನಂ ಸಂತರಿಷ್ಯಸಿ ॥ ''** (ಗೀ. 4–36) ದುಃಖವೆಲ್ಲಾ ಪಾಪದಫಲ. ನೀನು ಎಷ್ಟೇ ಪಾಪವನ್ನು ಮಾಡಿರು, ಜ್ಞಾನವೆನ್ನುವ ನಾವೆಯನ್ನು ಆಶ್ರಯಿಸಿದರೆ ಆ ಪಾಪದ ಸಮುದ್ರವನ್ನೇ ದುಃಖದ ಸಮುದ್ರವನ್ನೇ ದಾಟಿಬಿಡುವೆ. **''ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ''** (ಗೀ. 4–37) ಬೆಂಕಿಯು ಕಟ್ಟಿಗೆಯ ರಾಶಿಯನ್ನೆಲ್ಲಾ ಸುಟ್ಟು ಬೂದಿಮಾಡುವಂತೆ ಜ್ಞಾನವು ಸಮಸ್ತಕರ್ಮಗಳನ್ನೂ ಸುಟ್ಟುಬಿಡುತ್ತದೆ. ಆದುದರಿಂದ **''ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ''** (ಗೀ. 4–38) ಜ್ಞಾನಕ್ಕೆ ಸಮಾನವಾದ, ಪವಿತ್ರವಾದ, ಪಾವನವಾದ, ಶುದ್ಧಿಗೊಳಿಸುವ ವಸ್ತುವು ಈ ಲೋಕದಲ್ಲಿ ಇನ್ನೊಂದಿಲ್ಲ. **''ಜ್ಞಾನಂ ಲಬ್ಧ್ವಾ ಪರಾಂ ಶಾಂತಿಮಚಿರೇಣಾಧಿಗಚ್ಛತಿ''** (ಗೀ. 4–39) ಜ್ಞಾನವನ್ನು ಪಡೆದರೆ ಮೋಕ್ಷವೆಂಬ ಹೆಚ್ಚಿನದಾದ ಪರಮಶಾಂತಿಯನ್ನು ಕೂಡಲೇ ಪಡೆಯುತ್ತಾನೆ. **''ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ''** (ಗೀ. 5–29) ಎಲ್ಲಾ ಜೀವರುಗಳ ಹೃದಯದಲ್ಲಿದ್ದುಕೊಂಡು ಅವರ ಎಲ್ಲಾ ಕರ್ಮಫಲಕ್ಕೆ ಅಧ್ಯಕ್ಷನಾಗಿ ಸಮಸ್ತ ಕಲ್ಪನೆಗಳಿಗೆ ಸಾಕ್ಷಿಯಾಗಿರುವ ಪರಮಾತ್ಮನಾದ ನನ್ನನ್ನು ತಮ್ಮ ಆತ್ಮರೂಪದಿಂದ ಅರಿತುಕೊಂಡರೆ ಸರ್ವಸಂಸಾರಬಂಧದಿಂದ ಬಿಡುಗಡೆಹೊಂದಿ ನಿತ್ಯಶಾಂತಿಯನ್ನು ಪಡೆಯುತ್ತಾರೆ. ಶ್ರೀಮತ್ ಶಂಕರಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ **''ಗೀತಾಶಾಸ್ತ್ರೇ ಕೇವಲಾದೇವ ತತ್ತ್ವಜ್ಞಾನಾತ್ ಮೋಕ್ಷಪ್ರಾಪ್ತಿಃ.....ಇತಿ ನಿಶ್ಚಿತೋಽರ್ಥಃ''** (ಭಾಷ್ಯ –17.) ಬರಿಯ ತತ್ತ್ವಜ್ಞಾನವೊಂದರಿಂದಲೇ ಮೋಕ್ಷವು ಪ್ರಾಪ್ತಿಯಾಗುವುದು ಎಂಬುದಾಗಿ ಗೀತಾಶಾಸ್ತ್ರದಲ್ಲಿ ನಿಶ್ಚಯವಾಗಿ ಹೇಳಿದೆ. **''ಕೇವಲಾದೇವ ಜ್ಞಾನಾತ್**

**ಮೋಕ್ಷಃ ಇತ್ಯೇಷೋಽರ್ಥೋ ನಿಶ್ಚಿತೋ ಗೀತಾಸು ಸರ್ವೋಪನಿಷತ್ಸು ಚ''** ಬರಿಯ ಜ್ಞಾನದಿಂದಲೇ ಮೋಕ್ಷವಾಗುವುದು ಎಂಬುದೇ ಗೀತೆಗಳಲ್ಲಿಯೂ ಎಲ್ಲಾ ಉಪನಿಷತ್ತುಗಳಲ್ಲಿಯೂ ನಿಶ್ಚಯವಾಗಿ ಹೇಳಿರುವುದು ಎಂಬುದಾಗಿ ಹೇಳಿರುತ್ತಾರೆ.

**''ಮಿಥ್ಯಾಜ್ಞಾನನಿಮಿತ್ತಶ್ಚ ಬಂಧೋ ನ ಸಮ್ಯಗ್ಜ್ಞಾನಾದೃತೇ ವಿಸ್ರಂಸಿತು–ಮರ್ಹತಿ ||''** (ಸೂ.ಭಾ. 4–2–8)

ತಪ್ಪುತಿಳಿವಳಿಕೆಯಿಂದಾಗಿರುವ ಬಂಧನವು ಸರಿಯಾದ ತಿಳಿವಳಿಕೆಯಾಗದ ಹೊರತು ಹೋಗುವುದಿಲ್ಲ. ಇದಕ್ಕೆ ಉದಾಹರಣೆ:

ಕನಸಿನಲ್ಲಿ ಏನೇನೋ ಕಂಡು ಭಯದಿಂದ ಅರಚಿಕೊಳ್ಳುತ್ತಿದ್ದರೆ ಅವನಿಗೆ ಆ ಕನಸಿನಿಂದ ಎಚ್ಚರವಾಗುವುದನ್ನು ಬಿಟ್ಟು ಮತ್ತೇನನ್ನು ಮಾಡಿದರೂ ಹೇಗೆ ಆ ಭಯವು, ದುಃಖವು ಹೋಗುವುದಿಲ್ಲವೋ, ಹಾಗೆ **''ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ''** (ಮಾಂ. ಕಾ. 1–16) ಅಜ್ಞಾನನಿದ್ರೆಯಲ್ಲಿ ಸಂಸಾರವೆಂಬ, ನಾನಾತ್ವವೆಂಬ ಕನಸನ್ನು ಕಂಡು ಶೋಕಮೋಹಗಳಿಂದ ಪರಿಪರಿವಿಧದಲ್ಲಿ ದುಃಖವನ್ನನುಭವಿಸುತ್ತಿರುವ ಜೀವನಿಗೆ ತನ್ನ ನಿಜಸ್ವರೂಪದ ಜ್ಞಾನವೆಂಬ ಎಚ್ಚರವನ್ನು ಹೊಂದದೆ ಮತ್ತೇನು ಮಾಡಿದರೂ ಶೋಕಮೋಹಗಳು ತಪ್ಪುವುದಿಲ್ಲ. ಸುಖ ಶಾಂತಿಗಳು ಸಿಕ್ಕುವುದಿಲ್ಲ.

ಒಂದು ಹಳ್ಳಿಯಲ್ಲಿ ಒಬ್ಬ ಮುದುಕಿ ಇದ್ದಳು. ಅವಳಿಗೆ ಮಕ್ಕಳು ಮೊಮ್ಮಕ್ಕಳು ಎಲ್ಲಾ ಇದ್ದರು. ಅವಳ ಹಿತ್ತಲಲ್ಲಿ ಒಂದು ಹಳೆಯ ಹಗ್ಗದ ತುಂಡು ಬಿದ್ದಿತ್ತು. ಒಂದು ದಿನ ಅವಳು ಮಬ್ಬುಗತ್ತಲೆಯಲ್ಲಿ ಹಿತ್ತಲುಕಡೆ ಹೋದಾಗ ಅವಳಿಗೆ ಹಾವಿದ್ದಂತೆ ತೋರಿತು. ಅದನ್ನು ಕಂಡು ಅವಳು ಆ ಹಾವನ್ನು ಹೊಡೆಯಲು ತನ್ನ ಮಗನಿಗೆ ಹೇಳಿದಳು. ಅವನಿಗೆ ಹಾವು ಕಾಣಿಸಲಿಲ್ಲ. ಮುದುಕಿಗೆ ಮಾತ್ರ ಪದೇ ಪದೇ ಹಾವು ಕಾಣಿಸುತ್ತಲೇ ಇದ್ದಿತು. ಅದಕ್ಕೆ ಭಯಗೊಂಡು ಅವಳು ನಮ್ಮ ಮನೆಯಲ್ಲಿ ನಾಗರಕಾಟವಿರಬಹುದೆಂದೂ ಅದಕ್ಕೆ ತಕ್ಕ ಪರಿಹಾರ ಮಾಡೆಂದೂ ತನ್ನ ಮಗನಿಗೆ ಹೇಳಿದಳು. ಅವನು ಜೋಯಿಸರ ಹತ್ತಿರ ಹೋಗಿ ಕೇಳಿದಾಗ ಅವರು 'ನಿಮ್ಮ ಮನೆಯಲ್ಲಿ ನಾಗರಕಾಟವಿರುವುದು ನಿಜ' ಎಂದು ಹೇಳಿದರು. ಅದಕ್ಕಾಗಿ ಅವರು ಅವನಿಂದ ನಾಗರಪ್ರತಿಷ್ಠೆಮಾಡಿಸಿ ಇನ್ನು ಮೇಲೆ ನಿಮ್ಮ ಮನೆಯಲ್ಲಿ ನಾಗರಕಾಟ ಹೋಗುತ್ತದೆ ಎಂದು ಹೇಳಿದರು. ಆದರೂ ಮುದುಕಿಗೆ ಮಾತ್ರ ಹಾವು ಕಾಣಿಸುವುದು ತಪ್ಪಲಿಲ್ಲ.

ನಂತರ ಮಂತ್ರಗಾರನನ್ನು ಕೇಳಲು ಅವರು ಮಂತ್ರಹಾಕಿದರು. ಯಂತ್ರಗಾರರಿಂದ ಯಂತ್ರ ಕಟ್ಟಿಸಿದ್ದಾಯಿತು. ಏನು ಮಾಡಿದರೂ ಹಾವು ಕಾಣಿಸುವುದು ಬಿಡಲಿಲ್ಲ. ಹಣ ಖರ್ಚಾಗುವುದು ಮತ್ತು ಕಷ್ಟ ತಪ್ಪಲಿಲ್ಲ. ಎಲ್ಲರೂ ಚಿಂತೆಗೊಳಗಾಗಿದ್ದರು. ಆಗ ಕೆಲವರು ದೊಣ್ಣೆಗಳನ್ನು ಹಿಡಿದುಕೊಂಡು ದೀಪವನ್ನು ತೆಗೆದುಕೊಂಡು ಆ ಮುದುಕಿಯನ್ನು ಕೇಳಿ ಹಾವಿರುವ ಸ್ಥಳಕ್ಕೆ ಹೊರಟರು. ಆ ಹಾವಿನ ಸ್ಥಳಕ್ಕೆ ದೀಪವನ್ನು ತೆಗೆದುಕೊಂಡು ಹೋದಾಗ ಅಲ್ಲಿ ಒಂದು ಹಗ್ಗದ ತುಂಡು ಮಾತ್ರ ಇದ್ದಿತು. ಅದನ್ನು ಕಂಡು ಎಲ್ಲರೂ ತಮ್ಮ ಅಜ್ಞಾನಕ್ಕೆ ತಾವೇ ನಕ್ಕರು.

ಕಾಲತ್ರಯೇ ಯಥಾ ಸರ್ಪೋ ರಜ್ಜೌ ನಾಸ್ತಿ ತಥಾ ಮಯಿ।
ಅಹಂಕಾರಾದಿದೇಹಾಂತಂ ಜಗನ್ನಾಸ್ತ್ಯಹಮದ್ವಯಃ॥

ತೋರುವ ಹಾವು ಮೂರು ಕಾಲದಲ್ಲೂ ಹೇಗೆ ಹಗ್ಗದಲ್ಲಿ ಇಲ್ಲವೇ ಇಲ್ಲವೋ, ಹಾಗೆ ಅಹಂಕಾರ ಮೊದಲುಗೊಂಡು ಎಂದರೆ ನಾನು ಎನ್ನಿಸುವುದರ ಮೊದಲುಗೊಂಡು ಬುದ್ಧಿ ಮನಸ್ಸು ಇಂದ್ರಿಯ ಮೊದಲಾಗಿ ದೇಹದವರೆಗೆ ತೋರುವ ಸಮಸ್ತಜಗತ್ತು ಆತ್ಮಸ್ವರೂಪನಾದ ತನ್ನಲ್ಲಿ ಎಂದೆಂದಿಗೂ ಇಲ್ಲವೇ ಇಲ್ಲ. ಇದನ್ನು ತಿಳಿಯದೆ ಆ ಮುದುಕಿಯು ಹಗ್ಗವನ್ನೇ ಹಾವೆಂದು ಭ್ರಮೆಯಿಂದ ತಿಳಿದುಕೊಂಡಂತೆ, ಯಾವ ಬಂಧನಕ್ಕೂ ಸಿಕ್ಕದ ಪರಮಾತ್ಮಸ್ವರೂಪವೇ ತಾನಾಗಿದ್ದರೂ ಸಹ ನಾನು ಜೀವ ನಾನು ದೇಹವೆಂದು ಭ್ರಮೆಯಿಂದ ತಿಳಿದುಕೊಂಡು ಅಜ್ಞನು ದುಃಖಪಡುತ್ತಿದ್ದಾನೆ. ಆ ಹಾವು ಹೋಗಲೆಂದು ಅವರು ಹೇಗೆ ಜಪ, ತಪ, ಮಂತ್ರ, ಯಂತ್ರ, ನಾಗರಪ್ರತಿಷ್ಠೆ, ಮೊದಲಾದವುಗಳನ್ನು ಮಾಡಿದರೋ, ಹಾಗೆ ಈ ಜೀವನು ತಾನು ಮುಕ್ತನಾಗಬೇಕೆಂದು ಬಯಸಿ ಯೋಗ ಯಾಗಗಳನ್ನೂ ವ್ರತ ದಾನ ಧರ್ಮ ಉಪವಾಸ ವನವಾಸಗಳನ್ನೂ ಧ್ಯಾನ ಧಾರಣ ಸಮಾಧಿ ಮೊದಲಾದ ಘೋರತರವಾದ ತಪಸ್ಸುಗಳನ್ನೂ ಮಾಡುತ್ತಿದ್ದಾನೆ.

ಜವ ನಾಹೀ ಜ್ಞಾನಪ್ರಾಪ್ತೀ। ತವ ಚುಕೇನಾ ಯಾತಾಯಾತೀ।
ಗುರುಕೃಪೇವಿಣ ಅಧೋಗತೀ। ಗರ್ಭವಾಸ ಚುಕೇನಾ॥

ಧ್ಯಾನ ಧಾರಣಾ ಮುದ್ರಾ ಆಸನ। ಭಕ್ತೀ ಭಾವ ಆಣೀ ಭಜನ।
ಸಕಳ ಹಿ ಪೋಲ ಬ್ರಹ್ಮಜ್ಞಾನ। ಜವ ತೇ ಪ್ರಾಪ್ತ ನಾಹೀ॥

(ದಾ.5–1–35, 36)

ಹಗ್ಗದ ಜ್ಞಾನವಿಲ್ಲದೆ ಅವರು ಏನು ಮಾಡಿದರೂ ಹೇಗೆ ಆ ಹಾವು ಹೋಗಲಿಲ್ಲವೋ, ಹಾಗೆ ತನ್ನ ನಿಜಸ್ವರೂಪವನ್ನು ಸದ್ಗುರುವಿನಿಂದ ತಿಳಿಯದೆ ಏನು ಮಾಡಿದರೂ ಬಂಧನವು ಹೋಗುವುದಿಲ್ಲ ; ದುಃಖಪರಂಪರೆಗಳು ತಪ್ಪುವುದಿಲ್ಲ; ಜನನಮರಣವು ನೀಗುವುದಿಲ್ಲ. ತನ್ನ ಸ್ವರೂಪಜ್ಞಾನವನ್ನು ಪಡೆಯಲು ಪ್ರಯತ್ನ ಮಾಡದೆ ಇವನು ಮಾಡಿದ ಧ್ಯಾನ ಧಾರಣ ಭಕ್ತಿ ಭಜನೆ ಮೊದಲಾದವುಗಳೆಲ್ಲಾ ವ್ಯರ್ಥವಾಗುತ್ತವೆ.

**ಜ್ಞಾನವಿರಹಿತ ಜೇ ಜೇ ಕೇಲೇ । ತೇ ತೇ ಜನ್ಮಾಸಿ ಮೂಳಜಾಲೇ ।**
**ಮ್ಹಣೋನಿ ಸದ್ಗುರುಚೇ ಪಾಉಲೇ । ಸದೃಢ ಧರಾವಿ ॥** (ದಾ.5–1–22)

ಜ್ಞಾನವಿಲ್ಲದೆ ಇವನು ಏನೇನು ಮಾಡಿದರೂ ಅದೆಲ್ಲವೂ ಮತ್ತೆ ಜನ್ಮ ತೆಗೆದುಕೊಳ್ಳುವುದಕ್ಕೇ ಕಾರಣವಾಗುತ್ತದೆ. ಹಾಗಾದರೆ ಏನು ಮಾಡಬೇಕೆಂದರೆ ಹೇಗೆ ಅವರು ದೀಪವನ್ನು ಹಿಡಿದು ನೋಡಿದಾಗಲೇ ಅವರಿಗೆ ಆ ಹಾವಿನ ಭಯವು ತಪ್ಪಿತೋ, ಹಾಗೆ ಸದ್ಗುರುವಿಗೆ ಶರಣು ಹೋಗಿ ಅವನಿಂದ ತನ್ನ ಯಥಾರ್ಥವಾದ ಸ್ವರೂಪವನ್ನು ತಿಳಿದಾಗಲೇ ಜ್ಞಾನದೀಪದಿಂದಲೇ ಅಜ್ಞಾನದಿಂದಾದ ಸಮಸ್ತ ಬಂಧನವೂ ತೊಲಗಿ ಮೋಕ್ಷವಾಗುತ್ತದೆ. ಪರಮಾತ್ಮನು ಇದನ್ನೇ ಭವದ್ಗೀತೆಯಲ್ಲಿ ಈ ವಿಧವಾಗಿ ಹೇಳಿರುತ್ತಾನೆ. **''ತೇಷಾಮೇವಾನುಕಂಪಾರ್ಥಮಹಮಜ್ಞಾನಜಂ ತಮಃ। ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ'' ॥** (ಗೀ. 10–11) ''ಅವರ ಮೇಲಿನ ಕನಿಕರದಿಂದ ನಾನು ಅವರ ಹೃದಯದಲ್ಲಿದ್ದು ಜ್ಞಾನವೆಂಬ ದೀಪವನ್ನು ಹಚ್ಚಿ ಅವರ ಅಜ್ಞಾನವೆಂಬ ಕತ್ತಲೆಯನ್ನು ನಾಶಮಾಡುತ್ತೇನೆ.'' ಈ ಎಲ್ಲಾ ಕಾರಣಗಳಿಂದ ಆತ್ಮಜ್ಞಾನದಿಂದಲೇ ಮೋಕ್ಷವಾಗುವದೆಂಬುದು ಸಿದ್ಧವಾಗುತ್ತದೆ.

## 2. ಅಜ್ಞಾನವೆಂದರೇನು?

**ಸಂಸಾರಃ ಪರಮಾರ್ಥೋಽಯಂ ಸಂಲಗ್ನಃ ಸ್ವಾತ್ಮವಸ್ತುನಿ ।**
**ಇತಿ ಭ್ರಾಂತಿರವಿದ್ಯಾಸ್ಯಾತ್ ......** (ಪಂ.)

ಅಜ್ಞಾನವೆಂದರೆ ಜ್ಞಾನದ ಅಭಾವವಲ್ಲ ; ಮಿಥ್ಯಾಜ್ಞಾನ. ಇಂದ್ರಿಯಗಳಿಗೆ ಗೋಚರವಾಗುವ ಜಗತ್ತು(ಸಂಸಾರ) ಸತ್ಯವಾಗಿಯೂ ಇದೆ ; ಇದು ನನಗೆ ಸಂಬಂಧಿಸಿದೆ ; ಇದರಲ್ಲಿ ನನ್ನಂತೆಯೇ ಅನೇಕ ಜೀವರಿದ್ದಾರೆ ; ಇದರಲ್ಲಿ ಕೆಲವರು ನಮ್ಮವರು

ಮತ್ತೆ ಕೆಲವರು ಬೇರೆಯವರು ; ಕೆಲವರು ನನಗೆ ಸುಖವನ್ನು ಕೊಡುತ್ತಾರೆ ; ಮತ್ತೆ ಕೆಲವರು ದುಃಖವನ್ನು ಕೊಡುತ್ತಾರೆ ; ಇಲ್ಲಿ ಅನೇಕವಿಷಯ (ಪದಾರ್ಥ)ಗಳಿವೆ ; ಇವುಗಳಿಂದ ನಾನು ಸುಖಪಡಬೇಕು – ಎನ್ನುವ ಈ ತಿಳಿವಳಿಕೆಯೇ ಅಜ್ಞಾನ. ತಾನಲ್ಲದ ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಮುಂತಾದವುಗಳಿಂದ ಕೂಡಿದ ಜೀವನೇ ತಾನೆಂದು ತಿಳಿಯುವುದೂ, ದೇಹಕ್ಕಿರುವ ಕುಲಗೋತ್ರಗಳೂ, ಗಂಡ ಹೆಂಡತಿ ಮಕ್ಕಳು ಎನ್ನುವ ಸಂಬಂಧವೂ ತನಗೇ ಇದೆಯೆಂದು ತಿಳಿಯುವುದೂ, ದೇಹಕ್ಕಾಗುವ ವಿಕಾರಗಳನ್ನೂ ಮಾನಾಪಮಾನಗಳನ್ನೂ ಮನಸ್ಸಿಗಾಗುವ ಸುಖದುಃಖಾದಿ ವೇದನೆಗಳನ್ನೂ ತನಗೇ ಆಗುತ್ತದೆ ಎಂದು ತಿಳಿಯುವುದೂ – ಇದೆಲ್ಲಾ ಅಜ್ಞಾನ . ನಾನು ಸ್ತ್ರೀ, ನಾನು ಪುರುಷ , ನಾನು ಬಾಲಕ, ನಾನು ಯುವಕ, ನಾನು ಮುದುಕ ಎಂದು ತಿಳಿಯುವುದೂ, ನಾನು ಇಂಥ ದೇಶದಲ್ಲಿ ಇಂತಹ ಕಾಲದಲ್ಲಿ ಇಂಥ ಕುಲದಲ್ಲಿ ಹುಟ್ಟಿರುತ್ತೇನೆ, ಒಂದು ದಿನ ಸತ್ತು ಹೋಗುತ್ತೇನೆ ಎಂದು ತಿಳಿಯುವುದೂ, ನಾನು ಶ್ರೀಮಂತ ನಾನು ಬಡವ, ನಾನು ವಿದ್ಯಾವಂತ ನಾನು ಅವಿದ್ಯಾವಂತ ಎಂದು ತಿಳಿಯುವುದೂ–ಇವೆಲ್ಲಾ ಅಜ್ಞಾನ. ನಾನೇ ಮಾಡುವವನು ನಾನು ಅನುಭವಿಸುವವನು ಎಂದು ತಿಳಿಯುವುದೂ , ಇದೆಲ್ಲವೂ ನನ್ನದೆಂದು ತಿಳಿಯುವುದೂ, ನಾನೇ ಹುಟ್ಟುವವನು ನಾನೇ ಸಾಯುವವನು ಎಂದು ತಿಳಿಯುವುದೂ –ಇದೆಲ್ಲವನ್ನೂ ಅಜ್ಞಾನವೆನ್ನುತ್ತಾರೆ. ಇದರ ತಾತ್ಪರ್ಯವೇನೆಂದರೆ ಆತ್ಮ ಮತ್ತು ಅನಾತ್ಮ ಇವೆರಡನ್ನೂ ಕಲಬೆರಕೆ ಮಾಡಿಕೊಂಡು ಒಂದನ್ನು ಇನ್ನೊಂದೆಂದು ತಿಳಿಯುತ್ತಿದ್ದಾರೆ. ಆತ್ಮನು ಜ್ಞಾನಸ್ವರೂಪನು, ಸತ್ಯವಾಗಿರುವವನು ; ಅನಾತ್ಮವು ಜಡವಾಗಿದೆ, ಕಲ್ಪಿತವಾಗಿದೆ ಮತ್ತು ಆತ್ಮನಿಗೆ ತೋರುತ್ತದೆ. ಸತ್ಯವಾಗಿರುವ ಆತ್ಮಸ್ವರೂಪವನ್ನೂ ಸುಳ್ಳಾಗಿರುವ ಅನಾತ್ಮವನ್ನೂ ಒಂದನ್ನು ಇನ್ನೊಂದಾಗಿ ತಿಳಿದಿರುತ್ತಾರೆ. ಆತ್ಮನ ಧರ್ಮಗಳನ್ನು ಅನಾತ್ಮಕ್ಕೆ ಸೇರಿದವೆಂದೂ ಅನಾತ್ಮದ ಧರ್ಮಗಳನ್ನು ಆತ್ಮನಿಗೆ ಸೇರಿದವೆಂದೂ ತಿಳಿಯುತ್ತಿದ್ದಾರೆ. ಚೈತನ್ಯಸ್ವರೂಪನಾದ ಆತ್ಮನಲ್ಲಿ ಎಂದೂ ದೇಹಾದಿಗಳಿಲ್ಲ , ಸಂಸಾರವಿಲ್ಲ, ಜಗತ್ತಿಲ್ಲ, ಅವಸ್ಥೆಗಳಿಲ್ಲ . ಇಲ್ಲದಿದ್ದ ಇವುಗಳನ್ನು ಇದೆ ಎಂದು ತಿಳಿಯುತ್ತಾರೆ. ಇದು ತಪ್ಪು ತಿಳಿವಳಿಕೆಯು. ಇದಕ್ಕೇ ಅವಿದ್ಯೆ ಎನ್ನುತ್ತಾರೆ ; ಅಜ್ಞಾನ ಎನ್ನುತ್ತಾರೆ.

## 3. ಅಜ್ಞಾನದ ಫಲವೇನು?

ಅಜ್ಞಾನದ ಫಲವೇನೆಂದರೆ, ತಾನು ಆತ್ಮಸ್ವರೂಪನಾಗಿ ನಾಮರೂಪರಹಿತ ನಾಗಿ ನಿರ್ವಿಕಾರನಾಗಿ ನಿರ್ವಿಕಲ್ಪನಾಗಿ ಆನಂದಘನಸ್ವರೂಪನಾಗಿ ಎಲ್ಲೆಲ್ಲಿಯೂ

ಪರಿಪೂರ್ಣನಾಗಿ ತುಂಬಿದ್ದರೂ ಸಹ, ತಾನು ನಾಮರೂಪಗಳಿಂದ ಕೂಡಿದವನೆಂದೂ ಕೇವಲ ಈ ದೇಹದಲ್ಲಿ ಮಾತ್ರ ಇರುವವನೆಂದೂ ವಿಕಾರವುಳ್ಳವನೆಂದೂ ಕಲ್ಪನೆಗಳುಳ್ಳವನೆಂದೂ ತನಗೆ ಸುಖವಾಗಬೇಕೆಂದೂ ತಿಳಿಸುತ್ತದೆ. ತನಗೆ ಜನ್ಮ ಮರಣಗಳೂ ಮತ್ತು ಯಾವ ಅವಸ್ಥೆಗಳೂ ಇಲ್ಲದಿದ್ದರೂ ಸಹ ಜನ್ಮಮರಣಗಳು ಇರುವಂತೆಯೂ ತನಗೆ ಬಾಲ್ಯ ಯೌವನಗಳು ಮತ್ತು ಎಚ್ಚರ ಕನಸುಗಳೇ ಮೊದಲಾದ ಅವಸ್ಥೆಗಳು ಇರುವವೆಂದೂ ತಿಳಿಸುತ್ತದೆ. ಆತ್ಮನಿಗಿಂತ ಬೇರೆಯಾಗಿ ಮತ್ತೊಂದು ವಸ್ತುವು ಇಲ್ಲದಿದ್ದರೂ ಸಹ ಅನೇಕ ವಸ್ತುಗಳು ಇರುವಂತೆ ತೋರಿಸುತ್ತದೆ. ಆಮೇಲೆ ತನಗಿಂತ ಬೇರೆಯಾಗಿರುವ ವಿಷಯಗಳಲ್ಲಿ ಕಾಮಕ್ರೋಧಗಳನ್ನೂ ರಾಗದ್ವೇಷ ಗಳನ್ನೂ ಹುಟ್ಟಿಸುತ್ತದೆ. ಇದರ ಪರಿಣಾಮವಾಗಿ ಇವನು ಕಾಮದ ವಶನಾಗಿ ತನಗೆ ಬೇಕಾದದ್ದನ್ನು ಪಡೆಯುವುದಕ್ಕೂ ಬೇಡವಾದದ್ದನ್ನು ಬಿಡುವುದಕ್ಕೂ ಪಾಪಪುಣ್ಯ ಕರ್ಮಗಳನ್ನು ಮಾಡುತ್ತಾನೆ. ಈ ಕರ್ಮಗಳ ಫಲವಾಗಿ ಸ್ವರ್ಗನರಕಗಳನ್ನು ಹೊಂದುತ್ತಾ ಜನನಮರಣಗಳಲ್ಲಿ ಸಿಕ್ಕಿಕೊಂಡು ಸುಖದುಃಖಗಳನ್ನನುಭವಿಸುತ್ತಾ ಪರಿಪರಿ ವಿಧದಲ್ಲಿ ಬಳಲುತ್ತಿದ್ದಾನೆ. ಇದೆಲ್ಲವೂ ಅಜ್ಞಾನದ ಫಲವು. ಇದಕ್ಕೇ ಸಂಸಾರವೆನ್ನುತ್ತಾರೆ. ಇದಕ್ಕೇ ಬಂಧವೆನ್ನುತ್ತಾರೆ. ಇದು ಬೃಹದಾರಣ್ಯಕಭಾಷ್ಯ 4–3–20ರಲ್ಲಿ ವಿವರವಾಗಿದೆ.

## 4. ಮೋಕ್ಷವೆಂದರೇನು?

ಮೋಕ್ಷ ಎನ್ನುವ ಶಬ್ದವನ್ನು ವ್ಯವಹಾರದಲ್ಲಿ ಅನೇಕರು ಅನೇಕಸಲ ಉಪಯೋಗಿಸುತ್ತಿರುವುದು ತೋರುತ್ತಿದೆ. ನಾನು ಈ ರೋಗದಿಂದ ಮುಕ್ತನಾಗಬೇಕು, ನಾನು ಈ ಋಣದಿಂದ ಮುಕ್ತನಾಗಬೇಕು ಮುಂತಾಗಿ ಹೇಳುತ್ತಿರುತ್ತಾರೆ. ಇದರಿಂದ ಮೋಕ್ಷ, ಮುಕ್ತ, ಇವುಗಳ ಅರ್ಥ ಬಿಡುಗಡೆ ಎಂದಾಗುತ್ತದೆ. ಯಾವುದರಿಂದ ಬಿಡುಗಡೆ ಹೊಂದಬೇಕು? ಸಮಸ್ತದುಃಖಗಳಿಂದ, ಅಶಾಂತಿಯಿಂದ, ಚಿಂತೆಗಳಿಂದ, ಇವಕ್ಕೆ ಮೂಲವಾದ ಜನ್ಮಮರಣಗಳಿಂದ, ಬಾಲ್ಯ ಯೌವನ ವೃದ್ಧಾಪ್ಯಗಳಿಂದ, ರೋಗಾದಿಗಳಿಂದ, ಕಾಮಕ್ರೋಧಗಳಿಂದ, ಅಹಂಕಾರ ಮಮಕಾರಗಳಿಂದ, ದೇಹಾಭಿಮಾನದಿಂದ ವಿದ್ಯೆ ಧನಸಂಪತ್ತು ಯೌವನ ಅಧಿಕಾರ ರೂಪ – ಇವುಗಳ ಮದದಿಂದ, ದುಷ್ಕರ್ಮಗಳಿಂದ, ಪಾಪಬುದ್ಧಿಯಿಂದ, ದೇಹಬುದ್ಧಿಯಿಂದ, ಇವಕ್ಕೆ ಕಾರಣವಾದ ಅವಿವೇಕದಿಂದ ಸಮಸ್ತ ಅನರ್ಥ ಪರಂಪರೆಗಳಿಂದ ಇವೆಲ್ಲಕ್ಕೂ ಮೂಲಕಾರಣವಾದ ಅಜ್ಞಾನದಿಂದ ಅವಿದ್ಯೆಯಿಂದ – ಇವುಗಳ ಸೆಳೆತದಿಂದ,

ಇವುಗಳ ಹೊಡೆತಕ್ಕೆ ಸಿಕ್ಕಿಕೊಂಡು ಹಗಲಿರುಳೂ ಹುಚ್ಚನಂತೆ ಭ್ರಮಿಸಿ ಕೊರಗಿ ಸಾಯುವುದರಿಂದ ಬಿಡುಗಡೆಹೊಂದಿ ಜ್ಞಾನದಿಂದ ಪರಮಶಾಂತಿಯನ್ನು, ವಿವೇಕ ವೈರಾಗ್ಯಗಳನ್ನು , ಆತ್ಮನಿಷ್ಠೆಯನ್ನು ಪಡೆಯುವುದೇ ಮೋಕ್ಷ. ಅಜ್ಞಾನದಿಂದ ಬೇರೆಬೇರೆಯಾಗಿ, ವಿಕಾರಾದಿಗಳಿಂದ ತೋರುತ್ತಿರುವ ಜಗತ್ತನ್ನು ಜ್ಞಾನದಿಂದ ನಿರ್ವಿಕಾರವಾದ ಪ್ರಶಾಂತವಾದ ಪರಿಪೂರ್ಣವಾದ ಪರಮಾನಂದಸ್ವರೂಪವಾದ ಪರಮಾತ್ಮಸ್ವರೂಪವಾಗಿ ಕಾಣುವುದೇ ಮೋಕ್ಷ.

## 5. ಜ್ಞಾನವೆಂದರೇನು?

''ತದ್ವಿವೇಕೇನ ವಸ್ತುಸ್ವರೂಪಾವಧಾರಣಂ ವಿದ್ಯಾಮಾಹುಃ '' (ಅಧ್ಯಾಸಭಾಷ್ಯ); ಜ್ಞಾನವೆಂದರೆ ವಿವೇಕದಿಂದ ಇದ್ದದ್ದನ್ನು ಇದ್ದಂತೆ ತಿಳಿಯುವುದೇ ಹೊರತು ಹೊಸದಾಗಿ ಮತ್ತೇನಾದರೂ ಆಗುವುದಲ್ಲ. ಅಜ್ಞಾನದಿಂದ ತೋರುವ ನಾನಾ ಭೇದಗಳೂ ವಿಕಾರಗಳೂ ಉಳ್ಳ ಈ ಸಂಸಾರವು ಈ ಜಗತ್ತು ಸತ್ಯವಾಗಿ ಇಲ್ಲವೇ ಇಲ್ಲವೆಂದು ತಿಳಿಯುವುದೇ ಜ್ಞಾನವು. ಅಸತ್ಯವಾದ ಕಣ್ಣಿಗೆ ತೋರುವ ಜಗತ್ತೂ ಅಸತ್ಯವಾದದ್ದೇ. ಸುಳ್ಳುಮನಸ್ಸಿಗೆ ಅನ್ನಿಸುವುದೆಲ್ಲವೂ ಸುಳ್ಳೇ. ಇವೆಲ್ಲವೂ ಮಾಯಾಮಾತ್ರ, ಕನಸಿನಂತೆ ಹುಸಿತೋರಿಕೆ ಮಾತ್ರ. ಎಂದರೆ ಕೇವಲ ಕಲ್ಪಿತವಾಗಿದೆ. ತೋರುವಂತೆ ಅನ್ನಿಸುವುದಾವುದೂ ತಾನಲ್ಲ. ತನಗೆ ಇದರ ಸಂಬಂಧವು ಲೇಶಮಾತ್ರವೂ ಇಲ್ಲವೇ ಇಲ್ಲ. ದೇಹ ಇಂದ್ರಿಯ ಮನಸ್ಸು ಬುದ್ಧಿ ಅಹಂಕಾರ (ನಾನು ಅನ್ನಿಸುವುದು) ಇವುಗಳನ್ನೂ ಇವುಗಳ ಕಾರ್ಯಗಳನ್ನೂ ನೋಡುವಂತಹ ಸಾಕ್ಷಿಸ್ವರೂಪವೇ ತಾನು.. ಈ ಎಲ್ಲದಕ್ಕೂ ಆಧಾರವಾದ, ಎಚ್ಚರಕನಸುನಿದ್ರೆಗಳನ್ನು ಅರಿಯುವಂತಹ ಕೇವಲ ಶುದ್ಧವಾದ ಜ್ಞಾನಸ್ವರೂಪವೇ (ಅರಿವೇ) ತಾನು – ಎಂಬುದಾಗಿ ತಿಳಿಯುವುದೇ ಜ್ಞಾನ. ತನ್ನಲ್ಲಿ ದೇಹೇಂದ್ರಿಯಾದಿ ಸಮಸ್ತದೃಶ್ಯವೂ ಇಲ್ಲವೇ ಇಲ್ಲ; ತನ್ನ ಆತ್ಮಸ್ವರೂಪವೇ ಈ ವಿಧವಾಗಿ ನಾನಾ ರೀತಿಯಾಗಿ ತೋರುತ್ತಿದೆ ; ಈ ಸಮಸ್ತವೂ ತಾನೇ ಆಗಿದ್ದೇನೆ ಎಂಬುದಾಗಿ ತಿಳಿಯುವುದೇ ಜ್ಞಾನವು. ಎಲ್ಲಿ ಹುಟ್ಟುವುದು ಬೆಳೆಯುವುದು ಸಾಯುವುದು ಇಲ್ಲವೇ ಇಲ್ಲವೋ, ಎಲ್ಲಿ ನಾನು ನೀನೆಂಬ ಸ್ಫೂರ್ತಿಯು ಇಲ್ಲವೇ ಇಲ್ಲವೋ ಅಂತಹ ಸದ್ರೂಪವೇ (ಇರುವಿಕೆಯೇ) ತಾನೆಂದು ತಿಳಿದು ಅದೇ ತಾನಾಗಿ ಉಳಿಯುವುದೇ ಜ್ಞಾನವು. ಇದನ್ನು ಬಿಟ್ಟು ಉಳಿದದ್ದೆಲ್ಲವೂ ಅಜ್ಞಾನವು. ಜನಗಳು ಯಾವು ಯಾವುದಕ್ಕೋ ಜ್ಞಾನವೆಂಬುದಾಗಿ ತಿಳಿಯುತ್ತಾರೆ. ಅಜ್ಞಾನಕ್ಕೆ ಜ್ಞಾನವೆಂದೂ ಜ್ಞಾನಕ್ಕೆ

ಅಜ್ಞಾನವೆಂದೂ ತಿಳಿಯುತ್ತಾರೆ. ಈ ವಿಷಯದಲ್ಲಿ ಸದ್ಗುರುಗಳಾದ ಸಮರ್ಥರು ಈ ರೀತಿ ಹೇಳಿರುತ್ತಾರೆ. ಜ್ಞಾನವೆಂದ ಕೂಡಲೇ ಜನರು ಏನೇನೋ ವಿಪರೀತವಾಗಿ ತಿಳಿದು ಕೊಳ್ಳುತ್ತಾರೆ. ಹಿಂದೆ ನಡೆದ ವಿಷಯಗಳನ್ನೂ ಮುಂದೆ ಆಗುವುದನ್ನೂ ಹೇಳಿದರೆ ಅದಕ್ಕೆ ಜ್ಞಾನವೆನ್ನುತ್ತಾರೆ. ಇದು ಜ್ಞಾನವಲ್ಲ. "**ಆದಿಕರೂನಿ ಚೌಸಷ್ಟಿ ಕಳಾ । ಯಾಹಿ ವೇಗಳ್ಯಾ ನಾನಾ ಕಳಾ । ಚೌದಾ ವಿದ್ಯಾಸಿದ್ಧಿ ಸಕಳಾ । ಹೇ ಜ್ಞಾನನವ್ಹೆ ॥ ಅಸೋ ಸಕಳ ಕಳಾಪ್ರವೀಣ । ವಿದ್ಯಾಮಾತ್ರ ಪರಿಪೂರ್ಣ । ತರೀ ತೇ ಕೌಶಲ್ಯತಾ ಪರೀ ಜ್ಞಾನ । ಮ್ಹಣೋ ಚಿ ನಯೇ ॥ ಹೇ ಜ್ಞಾನ ಹೋಯೇ ಸೇ ಭಾಸೇ । ಪರಂತು ಮುಖ್ಯ ಜ್ಞಾನ ತೇ ಆನಾರಿಸೇ । ಜೇಥೇ ಪ್ರಕೃತೀ ಚೇಪಿಸೇ । ಸಮೂಳ ವಾವ ॥**" (ದಾ. 5–5–31, 32, 33,) ಅರವತ್ತುನಾಲ್ಕು ಕಲೆಗಳನ್ನು ಮೊದಲು ಮಾಡಿಕೊಂಡು ಜಗತ್ತಿನಲ್ಲಿರುವ ಸಮಸ್ತಕಲೆಗಳೂ, ಹದಿನಾಲ್ಕು ವಿದ್ಯೆಗಳೂ, ಸಮಸ್ತಸಿದ್ಧಿಗಳೂ – ಇವು ಯಾವುವೂ ಜ್ಞಾನವಲ್ಲ. ಯಾರು ಎಷ್ಟು ಕಲಾಪರಿಪೂರ್ಣರಾಗಿ ವಿದ್ಯಾಪ್ರವೀಣರಾಗಿದ್ದರೂ ಸಹ ಅದು ಕೇವಲ ಬುದ್ಧಿಯ ಕೌಶಲ್ಯವೇ ಹೊರತು ಅದಕ್ಕೆ ಜ್ಞಾನವೆಂದು ಹೇಳಬಾರದು. ಇವೆಲ್ಲವೂ ಜ್ಞಾನವೆಂದೇ ತೋರುತ್ತದೆ. ಆದರೆ ಇದು ಜ್ಞಾನವಲ್ಲ. ಮುಖ್ಯವಾದ ಜ್ಞಾನವು ಬೇರೆ ಇದೆ. ಇದರಿಂದ ಸುಖಶಾಂತಿಗಳು ದೊರೆಯುವುದಿಲ್ಲ, ಮೋಕ್ಷವಾಗುವುದಿಲ್ಲ. ಇವೆಲ್ಲಾ ಮಾಯೆಯಕಾರ್ಯ. ಎಲ್ಲಿ ಸಂಪೂರ್ಣವಾಗಿ ತನ್ನ ಕಾರ್ಯದ ಸಮೇತವಾಗಿ ಮಾಯೆಯೇ ಇಲ್ಲವೋ, ಎಲ್ಲಿ ಅವಿದ್ಯೆಯು ಸಮೂಲವಾಗಿ ಅಳಿಯುವುದೋ ಅದೇ ಜ್ಞಾನವು. ಜ್ಞಾನವೆಂದರೇನೆಂಬುದನ್ನು ಇನ್ನುಮುಂದೆ ವಿವರವಾಗಿ ವಿಚಾರಮಾಡೋಣ.

## 6. ಯಾರಿಗೂ ಬಂಧವಿಲ್ಲ

**ಶಿಷ್ಯ :** – ಗುರುದೇವ, ನಾನು ನನ್ನ ನಿಜವಾದ ಸ್ವರೂಪವನ್ನು ತಿಳಿಯದೆ ದುಃಖದಿಂದ ಬಳಲುತ್ತಾ ಇದ್ದೇನೆ. ದೇಹವೇ ನಾನೆಂಬ ಭಾವನೆಯು ಇನ್ನೂ ಹೋಗಲಿಲ್ಲ. ಎಷ್ಟು ಶ್ರವಣಮಾಡಿದರೂ ನಿಷ್ಫಲವಾಗುತ್ತಿದೆ. ಮನನವಾಗುವುದಿಲ್ಲ. ನನ್ನ ಸತ್ಯಸ್ವರೂಪವನ್ನು ತಿಳುಹಿಸಿ ನನ್ನನ್ನು ಮುಕ್ತನನ್ನಾಗಿ ಮಾಡಬೇಕು ಸ್ವಾಮಿ.

**ಗುರು :**– ನೀನು ನಿನ್ನ ನಿಜವಾದ ಸ್ವರೂಪವನ್ನು ತಿಳಿಯದೆ ಬಳಲುತ್ತಿರುವಂತೆ ನಿನಗೆ ತೋರಿದರೂ ಸಹ, ವಿಚಾರಮಾಡಿ ನೋಡಿದರೆ ನಿಜವಾಗಿ ಎಂದೂ ನೀನು ಬಳಲುತ್ತಿಲ್ಲ. ಅಷ್ಟೇ ಅಲ್ಲದೆ ಬಳಲುವುದು ನಿನ್ನ ಸ್ವರೂಪದಲ್ಲಿ ಇಲ್ಲವೇ ಇಲ್ಲ.

ಪ್ರತ್ಯಕ್ಷವಾಗಿ ದುಃಖವನ್ನು ಅನುಭವಿಸುತ್ತಿರುವುದನ್ನು ಸುಳ್ಳೆಂದು ತಿಳಿಯುವುದು ಹೇಗೆಂದರೆ ಮನೆಯೊಳಗೆ ಬಾಗಿಲನ್ನು ಹಾಕಿಕೊಂಡು ಹಾಸಿಗೆಯ ಮೇಲೆ ಮಲಗಿರುವ ನೀನು ಎಲ್ಲಿಯೋ ಹೋಗಿ ಕಾಡಿನಲ್ಲಿ ಹುಲಿಯ ಕೈಗೆ ಸಿಕ್ಕಿದಂತಾಗಿ ಬಹಳವಾಗಿ ದುಃಖ ಪಡುತ್ತಿದ್ದೆಯಲ್ಲಾ, ಸ್ವಪ್ನಕಾಲಕ್ಕೆ ಅದು ಸತ್ಯವೆಂದು ತೋರಿದರೂ ಸಹ ಎಚ್ಚರವಾದ ಮೇಲೆ ಹಾಸಿಗೆಯ ಮೇಲೆ ಸುಖವಾಗಿರುವುದನ್ನು ಕಂಡು ಆಶ್ಚರ್ಯಚಕಿತನಾಗಿ ಹೇಗೆ ಸ್ವಪ್ನದಲ್ಲಿ ಕಂಡದ್ದೆಲ್ಲವೂ ಸುಳ್ಳೆಂದು ತಿಳಿಯುವೆಯೋ, ಹಾಗೆ ನೀನು ಸುಖ ದುಃಖಗಳನ್ನನುಭವಿಸುವುದೂ ಸಹ ವಿಚಾರಮಾಡಿ ನೋಡಿದರೆ ಸುಳ್ಳೇ ಆಗಿರುತ್ತದೆ. ಒಂದು ಪಕ್ಷ ನಿನಗೆ ದುಃಖವಾಗುವುದು ನಿಜವಾಗಿದ್ದರೆ ಗಾಢನಿದ್ರೆಯಲ್ಲಿ ಏತಕ್ಕೆ ನಿನಗೆ ದುಃಖವಾಗುವುದಿಲ್ಲ? ನಿನ್ನ ಅನುಭವವನ್ನೇ ನೀನು ನೋಡಿಕೋ.

ಇನ್ನು ದೇಹವೇ ನಾನೆಂಬ ಭಾವನೆಯು ಹೋಗಲಿಲ್ಲವೆಂದು ತಿಳಿದುಕೊಂಡಿರುತ್ತೀಯೆ. ಒಬ್ಬ ಶ್ರೀಮಂತನು ಹುಚ್ಚು ಹಿಡಿದು ನಾನು ಮಹಾದರಿದ್ರನಿದ್ದೇನೆಂದು ಎಷ್ಟು ಭಾವಿಸಿದರೂ, ಎಷ್ಟು ಜನರು ಅವನಿಗೆ ನೀನು ಬಹಳ ಬಡವನೆಂದು ಹೇಳಿದರೂ ಸಹ ಅವನು ಎಂದಿಗಾದರೂ ದರಿದ್ರನಾಗುತ್ತಾನೆಯೆ ? ಇಲ್ಲ. ಅವನು ತಾನು ದರಿದ್ರನೆಂದು ತಿಳಿದಾಗ್ಯೂ ಸಹ ಅವನು ಹೇಗೆ ಶ್ರೀಮಂತನೋ,ಹಾಗೆ ನೀನು ದೇಹವೇ ನಾನೆಂದು ತಿಳಿದಾಗ್ಯೂ ಸಹ ನೀನು ಎಂದೂ ದೇಹವಾಗಲು ಶಕ್ಯವಿಲ್ಲ. ಅಷ್ಟೇ ಅಲ್ಲದೆ ಎಂದೆಂದಿಗೂ ಯಾವ ದುಃಖಕ್ಕೂ ಯಾವ ಬಂಧನಕ್ಕೂ ಸಿಕ್ಕದಂತಹ ಆನಂದ ಸ್ವರೂಪನೂ ನಿತ್ಯಮುಕ್ತನೂ ನೀನಾಗಿರುತ್ತೀಯೆ. ನೀನು ತಿಳಿದಿರುವಂತೆ ಒಂದು ಪಕ್ಷಕ್ಕೆ ದೇಹವೇ ನೀನಾಗಿದ್ದರೆ, ಯಾವ ಸದ್ಗುರುವಿಗೂ ದೇಹರಹಿತವಾದ ಆತ್ಮ ಸಾಕ್ಷಾತ್ಕಾರವನ್ನು ಮಾಡಿಸಿಕೊಡಲು ಸಾಧ್ಯವಾಗದು. ಕೆಲವರು ದೇಹವನ್ನೂ ಇಂದ್ರಿಯಗಳನ್ನೂ ಮನಸ್ಸು ಬುದ್ಧಿಗಳನ್ನೂ ಅಹಂಕಾರವನ್ನೂ ಆತ್ಮವೆಂದು ಭಾವಿಸುತ್ತಾರೆ. ಮತ್ತೆ ಕೆಲವರು ಆತ್ಮಸ್ವರೂಪದ ನಿರ್ವಿಕಾರತ್ವ ಅಜರತ್ವ ಅಮರತ್ವಾದಿ ಲಕ್ಷಣಗಳು ದೇಹಾದಿಗಳಲ್ಲಿ ತೋರಬೇಕೆಂದು ಪ್ರಯತ್ನಿಸುತ್ತಾರೆ. ಆದರೆ ಅದು ಎಂದಿಗೂ ಸಾಧ್ಯವಾಗುವುದಿಲ್ಲ. ಏತಕ್ಕೆಂದರೆ

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ।**
**ಉದಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥**

(ಗೀ.2–17)

ಅಸತ್ತು (ಇಲ್ಲದ್ದು) ಎಂದೂ ಇದ್ದದ್ದಾಗುವುದಿಲ್ಲ. ಸತ್ತು (ಇದ್ದದ್ದು) ಎಂದೂ ಇಲ್ಲದಂತಾಗುವುದಿಲ್ಲ. ಇದನ್ನು ಜ್ಞಾನಿಗಳೇ ಬಲ್ಲರು. ಯಾವುದು ಅಜ್ಞಾನದಿಂದ

ಬೇರೆಬೇರೆಯಾಗಿ ತೋರುತ್ತಿದೆಯೋ ವಿಚಾರಮಾಡಿ ನೋಡಿದರೆ ಇಲ್ಲವೇ ಇಲ್ಲವೋ ಕೇವಲ ಕಲ್ಪಿತವಾಗಿದೆಯೋ ಅದು ಅಸತ್ತು, ಮಣ್ಣು ಗಡಿಗೆಯಂತೆ ತೋರುತ್ತದೆ ವಿಚಾರಮಾಡಿ ನೋಡಿದರೆ ಅದು ಮಣ್ಣಿಗಿಂತ ಬೇರೆಯಾಗಿ ಇಲ್ಲವೇ ಇಲ್ಲ. ಮೊದಲು ಮಣ್ಣೇ ಇದ್ದಿತು. ಕೊನೆಗೂ ಮಣ್ಣೇ ಇರುವುದು. ಮಧ್ಯದಲ್ಲಿ ಮಾತ್ರ ಗಡಿಗೆಯಾದಂತೆ ತೋರಿತು ಅಷ್ಟೇ. ಅದರಂತೆ ತೋರುವ ನಾಮರೂಪಗಳು ಮೊದಲೂ ಇರಲಿಲ್ಲ. ಕೊನೆಗೂ ಇರುವುದಿಲ್ಲ. ಮಧ್ಯದಲ್ಲಿ ಮಾತ್ರ ಸ್ವಲ್ಪಕಾಲ ತೋರುತ್ತವೆ. ಸಿನಿಮಾದಲ್ಲಿ ತೋರುವ ಹುಲಿಯು ಇಲ್ಲದಿದ್ದರೂ ಸಹ ಇದ್ದಂತೆ ತೋರುತ್ತದೆ. ಅದರಂತೆ ನಾಮ ರೂಪಗಳಿಂದ ತೋರುವ ಪ್ರಪಂಚವು, ದೇಹಾದಿಗಳು ವಿಚಾರಮಾಡಿ ನೋಡಿದರೆ ವಾಸ್ತವವಾಗಿ ಇಲ್ಲವೇ ಇಲ್ಲ. ಎಂದೆಂದಿಗೂ ಎಲ್ಲೆಲ್ಲೂ ಪರಿಪೂರ್ಣವಾಗಿ ಅದ್ವಯ ವಾಗಿ ತುಂಬಿರುವುದೇ ಸತ್ಯವಸ್ತುವು. ಇದು ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ಇದು ಅಸತ್ಯವಾಗುವುದಿಲ್ಲ. ಹಾಲೂ ನೀರೂ ಕೂಡಿದ್ದರೆ ನೋಡಿದಕೂಡಲೇ ಹಾಲಿನಂತೆಯೇ ತೋರುತ್ತದೆಯೇ ಹೊರತು ನೀರು ತೋರುವುದಿಲ್ಲ. ಆದರೆ ರಾಜಹಂಸವು ಮಾತ್ರ ಹಾಲನ್ನು ಮತ್ತು ನೀರನ್ನು ಬೇರೆ ಬೇರೆ ಮಾಡಿ ಹಾಲನ್ನು ಮಾತ್ರ ಕುಡಿಯುತ್ತದೆ. ಆದರಂತೆಯೇ ಸತ್ಯವಾದ ಆತ್ಮಸ್ವರೂಪವೂ ಮತ್ತು ಇದರೊಂದಿಗೆ ಮಿಥ್ಯೆಯಾದ ನಾಮರೂಪಗಳಿಂದ ಕೂಡಿದ ದೇಹೇಂದ್ರಿಯಾದಿಗಳೂ ಮತ್ತು ಜಗತ್ತೂ ಕೂಡಿಕೊಂಡು, ಅಸಾರವಾದ ಸತ್ಯವಲ್ಲದ ಜಗತ್ತುಮಾತ್ರ ತೋರುತ್ತಿದೆಯೇ ಹೊರತು ಸಾರವಾದ ಸತ್ಯವಾದ ಆತ್ಮಸ್ವರೂಪವು ತೋರುವುದಿಲ್ಲ. ಪರಮಹಂಸರಾದ ಜ್ಞಾನಿಗಳು ಮಾತ್ರ ಇದನ್ನು ಬೇರೆ ಬೇರೆ ಮಾಡಿ, ತೆಂಗಿನಕಾಯಿಯಲ್ಲಿರುವ ಸಾರವಾದ ತಿರುಳನ್ನು ತೆಗೆದುಕೊಂಡು ಅಸಾರವಾದ ಸಿಪ್ಪೆಯನ್ನು ಬಿಸಾಡುವಂತೆ, ಸಾರವಾದ ಆತ್ಮಸ್ವರೂಪವನ್ನು ಗ್ರಹಿಸಿ ಅಸಾರವಾದ ಅನಾತ್ಮವಾದ ನಾಮರೂಪಗಳನ್ನು ಬಿಟ್ಟು ಬಿಡುತ್ತಾರೆ. ವಾಸ್ತವವಾಗಿ ಆತ್ಮನಲ್ಲಿ ಎಂದೂ ದೇಹಾದಿಗಳಿಲ್ಲ, ಸಂಸಾರವಿಲ್ಲ, ಜಗತ್ತಿಲ್ಲ, ಅವಸ್ಥೆಗಳಿಲ್ಲ. ಇಲ್ಲದ ಇವುಗಳನ್ನು ಇವೆಯೆಂದು ತಿಳಿದುಕೊಂಡು ಇವುಗಳನ್ನು ಆತ್ಮನಂತೆ ಮಾಡಬೇಕೆನ್ನುತ್ತಾರೆ. ಇದು ಸಾಧ್ಯವಿಲ್ಲ.

**ಕೋಣಾಸೀ ಚ ನಾಹೀ ಬಂಧನ। ಭ್ರಾಂತಿಸ್ತವ ಭುಲಲೇ ಜನ।**
**ದೃಢ ಘೇತಲಾ ದೇಹಾಭಿಮಾನ। ಮ್ಹಣೋನಿಯಾ॥ (ದಾ. 5–6–57)**

ಸತ್ಯವಾಗಿ ಯಾರಿಗೂ ಬಂಧನವೇ ಆಗಿರುವುದಿಲ್ಲ. ತಪ್ಪುತಿಳುವಳಿಕೆಯಿಂದ ಎಂದರೆ ದೇಹಾಭಿಮಾನವನ್ನು ಬಲಪಡಿಸಿರುವುದರಿಂದ ಬಂಧನವಾದಂತೆ ತೋರುತ್ತಿದೆ – ಎಂಬುದಾಗಿ ಸಮರ್ಥರು ಹೇಳಿರುತ್ತಾರೆ.

ಒಂದು ಹುಲಿಮರಿಯನ್ನು ಒಬ್ಬ ಕುರುಬನು ತಂದು ತನ್ನ ಕುರಿಗಳ ಜೊತೆಯಲ್ಲಿ ಸಾಕುತ್ತಿದ್ದನು. ಅದು ಸಹ ಕುರಿಗಳ ಸಹವಾಸದಿಂದ ತಾನು ಕುರಿ ಎಂದೇ ತಿಳಿದು ಕೊಂಡು ಅವುಗಳಂತೆಯೇ ವರ್ತಿಸುತ್ತಿದ್ದಿತು. ಕುರಿಗಳ ಜೊತೆಯಲ್ಲಿ ಹೋಗುವುದು ಬರುವುದು ಮಾಡುತ್ತಿತ್ತು. ಹೀಗಿರುವಾಗ ಒಂದು ದಿನ ಅಡವಿಯಲ್ಲಿ ಒಂದು ದೊಡ್ಡ ಹುಲಿಯು ಗರ್ಜಿಸಿತು. ಅದನ್ನು ಕೇಳಿ ಎಲ್ಲಾ ಕುರಿಗಳೂ ಓಡಲು ಪ್ರಾರಂಭಿಸಿದವು. ಅದರ ಜೊತೆಯಲ್ಲಿ ಆ ಹುಲಿಯಮರಿಯೂ ಓಡಲು ಪ್ರಾರಂಭಿಸಿತು. ಆಗ ಅದನ್ನು ನೋಡಿದ ದೊಡ್ಡಹುಲಿಯು ನಕ್ಕು ಜೋರಾಗಿ ಕೂಗುತ್ತಾ ಆ ಹುಲಿಮರಿಯು ಇದ್ದಕಡೆಗೆ ಓಡಿ ಬಂದಿತು. ಅದನ್ನು ನೋಡಿ ಆ ಮರಿಯು ಮಹಾರಾಯ ನನ್ನನ್ನು ತಿನ್ನಬೇಡವೆಂದು ಬೇಡಿಕೊಂಡಿತು. ಅದಕ್ಕೆ ಆ ಹುಲಿಯು ನೀನು ಸಹ ನನ್ನ ಹಾಗೆ ಹುಲಿಯೇ ಆಗಿರುತ್ತೀಯೆ; ನೀನು ಕುರಿಯಲ್ಲ. ಏತಕ್ಕೆ ಹೀಗೆ ಹೆದರುತ್ತೀಯೆ ಹೇದರ ಬೇಡ – ಎಂದು ಹೇಳಿ ಅದನ್ನು ಕರೆದುಕೊಂಡು ಹೋಗಿ ಒಂದು ಕೆರೆಯ ದಂಡೆಯ ಮೇಲೆ ನಿಂತುಕೊಂಡು ನೀರಿನಲ್ಲಿ ನೋಡು ನಿನಗೂ ಸಹ ನನ್ನ ಹಾಗೆಯೇ ಪಟ್ಟೆಗಳಿವೆ, ಉಗುರುಗಳಿವೆ, ಮೀಸೆಗಳಿವೆ – ಎಂದು ತೋರಿಸಿತು. ಆಗ ಆ ಹುಲಿಮರಿಯು ತನ್ನಲ್ಲಿಯೂ ಸಹ ಹುಲಿಯ ಲಕ್ಷಣಗಳಿರುವುದನ್ನು ಕಂಡು ಅಂದಿನಿಂದ ನಾನು ಕುರಿಯಲ್ಲ ಹುಲಿಯೇ ಸರಿ ಎಂಬುದಾಗಿ ತಿಳಿದುಕೊಂಡು ನಿರ್ಭಯವಾಗಿ ಸಂಚರಿಸಲು ಪ್ರಾರಂಭಿಸಿತು.

ಆ ಹುಲಿಯು ತಾನು ತಿಳಿದಂತೆ ಎಂದಾದರೂ ಕುರಿಯಾಗಿದ್ದಿತೆ ? ಇಲ್ಲ. ಅದರಂತೆಯೇ ಈ ಮಾನವನೂ ಸಹ ದೇಹೇಂದ್ರಿಯಾದಿಗಳ ಸಹವಾಸವನ್ನು ಮಾಡಿ ನಾನು ಜೀವ, ನಾನು ದೇಹ, ನಾನು ಸ್ತ್ರೀ, ನಾನು ಪುರುಷ ಎಂಬುದಾಗಿ ವಿಪರೀತವಾಗಿ ತಿಳಿದುಕೊಂಡು ದುಃಖಿಸುತ್ತಿದ್ದಾನೆ. ಇಂಥವನನ್ನು ನೋಡಿ ಸದ್ಗುರುವು ನಕ್ಕು, ಆ ದೊಡ್ಡ ಹುಲಿಯು ತಾನು ಕುರಿ ಎಂದು ತಿಳಿದುಕೊಂಡ ಹುಲಿಯಮರಿಗೆ ಹೇಳಿದಂತೆ, ನಾನು ಜೀವನೆಂದು ತಿಳಿದುಕೊಂಡಿರುವ ಪರಮಾತ್ಮನನ್ನು ಕುರಿತು ಏತಕ್ಕೆ ನೀನು ದುಃಖಿಸುತ್ತೀಯೆ? ''ತತ್ತ್ವಮಸಿ'' ನೀನು ಪರಮಾತ್ಮನೇ ಆಗಿರುತ್ತೀಯೇ ಎಂದು ಹೇಳುತ್ತಾನೆ.

ಶುದ್ಧವಾದ ಬೆಳ್ಳಗಿರುವ ಸ್ಫಟಿಕಮಣಿಯೇ ಬಣ್ಣದ ವಸ್ತುಗಳ ಸಂಬಂಧದಿಂದ ಬಣ್ಣಗಳಿಂದ ಕೂಡಿದಂತೆ ತೋರುತ್ತದೆ. ಹಾಗೆ ತೋರಿದ ಮಾತ್ರಕ್ಕೆ ಆ ಸ್ಫಟಿಕವು ಬಣ್ಣವನ್ನು ಹೊಂದಿರುತ್ತದೆಯೇ ? ಎಂದೂ ಇಲ್ಲ. ಹೇಗೆ ಬಣ್ಣ ಬಣ್ಣಗಳಿಂದ ತೋರಿದರೂ ಸಹ ಆ ಸ್ಫಟಿಕವು ಎಂದೂ ಬಣ್ಣವನ್ನು ಹೊಂದದೆ ತಾನು ಶುದ್ಧವಾಗಿ ಬೆಳ್ಳಗೇ ಇರುತ್ತದೆಯೋ , ಹಾಗೆ ನಿತ್ಯಶುದ್ಧನೂ ನಿತ್ಯಮುಕ್ತನೂ ನಿರ್ವಿಕಾರನೂ

ಅಸಂಗನೂ ಆದ ನೀನು ದೇಹ ಇಂದ್ರಿಯ ಪ್ರಾಣ ಮನಸ್ಸು ಬುದ್ಧಿಗಳ ಸಂಬಂಧದಿಂದ ಸ್ತ್ರೀ ಪುರುಷನಾಗಿಯೂ ಹುಟ್ಟು ಸಾವುಗಳುಳ್ಳವನಾಗಿಯೂ ಸುಖಿ ದುಃಖಿಯಾಗಿಯೂ ಸಂಸಾರಿಯಾಗಿಯೂ ಬದ್ಧನಾಗಿಯೂ ತೋರುತ್ತೀಯೆ. ಹೀಗೆ ತೋರಿದರೂ ಸಹ ನಿನ್ನಲ್ಲಿ ಈ ಯಾವ ವಿಕಾರಗಳೂ ಇರುವುದಿಲ್ಲ. ಹೇಗೆ ಸ್ಫಟಿಕವು ಬಣ್ಣದ ವಸ್ತುಗಳ ಸಂಗದಿಂದ ಬಣ್ಣವನ್ನು ಹೊಂದದೆ ತಾನು ಶುದ್ಧವಾಗಿರುತ್ತದೆಯೋ ಹಾಗೆ, ನೀನು ಈ ದೇಹಾದಿಗಳ ಸಂಬಂಧದಿಂದ ಇವುಗಳ ಧರ್ಮಗಳಾದ ಸುಖದುಃಖ ಹುಟ್ಟುಸಾವುಗಳು ಇವು ಯಾವನ್ನೂ ಹೊಂದದೆ ಶುದ್ಧವಾಗಿಯೇ ನಿತ್ಯಮುಕ್ತನಾಗಿಯೇ ಇರುತ್ತೀಯೆ.

ನಾಟಕದಲ್ಲಿ ಆ ಕಂಪನಿಯ ಯಜಮಾನನು ಭಿಕ್ಷುಕನ ಪಾತ್ರವನ್ನು ಧರಿಸಿರುತ್ತಾನೆ. ಅಷ್ಟುಮಾತ್ರದಿಂದ ಅವನು ಭಿಕ್ಷುಕನಾಗುತ್ತಾನೆಯೇ ? ಇಲ್ಲ . ನೋಡಲು ಭಿಕ್ಷುಕನಂತೆ ತೋರಿದರೂ ಸಹ ಹೇಗೆ ಅವನು ಎಂದೂ ಭಿಕ್ಷುಕನಾಗದೆ ಯಜಮಾನನೇ ಆಗಿರುತ್ತಾನೆಯೋ ,ಆ ಪೋಷಾಕುಗಳಿಂದ ಹಾಗೆ ತೋರಿದನೋ, ಹಾಗೆ ಸಮಸ್ತ ಬ್ರಹ್ಮಾಂಡಗಳಿಗೂ ಆಧಾರನಾದ ಎಲ್ಲದಕ್ಕೂ ಮೂಲನಾದ ಸರ್ವತ್ರ ವ್ಯಾಪಕನಾದ ಗುಣರಹಿತನಾದ ನೀನು ಈ ದೇಹಾದಿಗಳೆಂಬ ಪೋಷಾಕುಗಳನ್ನು ಧರಿಸಿಕೊಂಡು ದೇಹದಂತೆಯೂ ಜೀವನಂತೆಯೂ ಸ್ತ್ರೀಪುರುಷರಂತೆಯೂ ತೋರುತ್ತೀಯೆ. ಹೀಗೆ ತೋರಿದರೂ ಸಹ ಎಂದೂ ನೀನು ದೇಹಾದಿಗಳಾಗಿಲ್ಲ, ಆಗಲೂ ಸಾಧ್ಯವಿಲ್ಲ. ಹೇಗೆ ನಾಟಕಕಂಪನಿಯ ಯಜಮಾನನು ಆ ಭಿಕ್ಷುಕನ ಪೋಷಾಕುಗಳಿಂದ ತನ್ನ ಯಜಮಾನತ್ವವನ್ನು ಕಳೆದುಕೊಳ್ಳದೆ ಭಿಕ್ಷುಕನಾಗದೆ ತಾನು ಯಜಮಾನನಾಗಿಯೇ ಇದ್ದಾನೆಯೋ ಹಾಗೆ ನೀನು ಈ ದೇಹೇಂದ್ರಿಯಾದಿಗಳೆಂಬ ಪೋಷಾಕುಗಳಿಂದ ನಿನ್ನ ಸಚ್ಚಿದಾನಂದಸ್ವರೂಪವನ್ನು ಕಳೆದುಕೊಳ್ಳದೆ ದೇಹಾದಿಗಳಾಗದೆ ಅವುಗಳಿಂದ ವಿಕಾರವನ್ನು ಹೊಂದದೆ ಗುಣರಹಿತನಾಗಿ ಪರಿಪೂರ್ಣನಾಗಿ ಸರ್ವತ್ರ ವ್ಯಾಪಕನಾಗಿ ನಿರಾಕಾರನಾಗಿ ಪರಮಾನಂದರೂಪನಾಗಿಯೇ ಇರುತ್ತೀಯೆ.

ದೇಹವಿದ್ದರೆ ತಾನೆ ದೇಹವೇ ನಾನೆಂಬ ಭಾವನೆಯು ಹೋಗಬೇಕಾದದ್ದು? ಮನಸ್ಸಿದ್ದರೆ ತಾನೆ ದುಃಖದಿಂದ ಬಿಡುಗಡೆ ಹೊಂದಬೇಕಾದದ್ದು? ಮೊದಲು ನೀನು ತಿಳಿದಿರುವಂತೆ ದೇಹ ಮತ್ತುಮನಸ್ಸು ನಿಜವಾಗಿಯೂ ಇವೆಯೋ ? ಅಥವಾ ಇದ್ದಂತೆ ತೋರಿ ಸುಳ್ಳಾಗಿವೆಯೋ ? ಇದನ್ನು ಸ್ವಲ್ಪ ವಿಚಾರಮಾಡಿ ನೋಡೋಣ. ದೇಹವಾಗಲೀ, ಜಗತ್ತಾಗಲೀ ಇದೆ ಎನ್ನುವುದಕ್ಕೆ ಏನು ಪ್ರಮಾಣ ? ನಾವು ಕಣ್ಣಿನಿಂದ ನೋಡುತ್ತೇವೆ, ಕಿವಿಯಿಂದ ಕೇಳುತ್ತೇವೆ, ಮೂಗಿನಿಂದ ಮೂಸಿನೋಡುತ್ತೇವೆ, ಕೈಯಿಂದ ಮುಟ್ಟಿನೋಡುತ್ತೇವೆ. ಈ ರೀತಿ ಇಂದ್ರಿಯಗಳಿಗೆ ಗೋಚರವಾಗುವುದರಿಂದ

ದೇಹ ಮತ್ತು ಇದಕ್ಕೆ ಸಂಬಂಧಪಟ್ಟ ಜಗತ್ತು ಸಂಸಾರ ಇದೆ ಎಂದು ಒಪ್ಪುತ್ತೇವೆ. ಇಂದ್ರಿಯಗಳಿಗೆ ಗೋಚರವಾಗದೆ ಪ್ರಪಂಚವಿದೆ ಎಂದರೆ ಯಾರೂ ಒಪ್ಪುವುದಿಲ್ಲ. ಈ ದೇಹಾದಿ ಪ್ರಪಂಚವಿದೆ ಎನ್ನುವುದಕ್ಕೆ ಪ್ರಮಾಣವಾದ ಇಂದ್ರಿಯಗಳು ನಿಜವಾಗಿ ಇವೆ ಎನ್ನುವುದಕ್ಕೆ ಏನು ಪ್ರಮಾಣ ? ನಮ್ಮ ಮನಸ್ಸಿಗೆ ಇಂದ್ರಿಯಗಳು ಗೋಚರವಾಗುತ್ತವೆ. ಆದುದರಿಂದ ಇಂದ್ರಿಯಗಳಿವೆ ಎಂದು ಒಪ್ಪುತ್ತೇವೆ. ಮನಸ್ಸು ಎಲ್ಲಿಯಾದರೂ ಒಂದು ವಿಷಯದಲ್ಲಿ ಮಗ್ನವಾಗಿದ್ದರೆ ಆಗ ಇಂದ್ರಿಯ ಮತ್ತು ಅದಕ್ಕೆ ಸಂಬಂಧಪಟ್ಟ ವಸ್ತುಗಳು ಗೋಚರವಾಗುವುದಿಲ್ಲ. ಉದಾಹರಣೆಗೆ ನಾವು ಯಾವುದಾದರೊಂದು ಚಿಂತೆಯಲ್ಲಿ ಮಗ್ನರಾಗಿದ್ದಾಗ ನಮ್ಮ ಎದುರಿಗೆ ಯಾರಾದರು ಬಂದರೆ ಆಗ ನಮಗೆ ಅವರು ಕಾಣಿಸುವುದಿಲ್ಲ. ಹಾಗೆಯೇ ನಮ್ಮ ಮನಸ್ಸು ಬೇರೆಕಡೆ ಹೋದಾಗ ಎದುರಿಗಿದ್ದವರು ಏನು ಹೇಳಿದರೂ ನಮಗೆ ತಿಳಿಯುವುದಿಲ್ಲ. ಇದರಂತೆಯೇ ಸಮಸ್ತ ಇಂದ್ರಿಯಗಳೂ ಸಹ ಇವೆ. ಮನಸ್ಸನ್ನವಲಂಬಿಸಿಕೊಂಡೇ ಇಂದ್ರಿಯಗಳೂ, ದೇಹವೂ, ಜಗತ್ತೂ ಇವೆ. ಮನಸ್ಸನ್ನು ಬಿಟ್ಟರೆ ಇವು ಯಾವೂ ಇರುವುದಿಲ್ಲ. ಇವೆಲ್ಲಕ್ಕೂ ಪ್ರಮಾಣವಾದ ಮನಸ್ಸು ಬುದ್ಧಿಯನ್ನು ಬಿಟ್ಟು ಇರುವುದಿಲ್ಲ. ಬುದ್ಧಿಯು ನಾನು ಅನ್ನಿಸುವುದನ್ನು (ಅಹಂಕಾರವನ್ನು) ಬಿಟ್ಟು ಇರುವುದಿಲ್ಲ. ಈಗ ಈ ದೇಹ ಇಂದ್ರಿಯ ಮನಸ್ಸು ಬುದ್ಧಿಗಳಿಗೆ ಮೂಲವಾದ ನಾನು (ಅಹಂಕಾರ) ನಿಜವಾಗಿಯೂ ಇದೆಯೋ ? ವಿಚಾರ ಮಾಡಿ ನೋಡಿದರೆ ಇದು ನಮ್ಮ ಗಾಢನಿದ್ರೆಯಲ್ಲಿ ಇಲ್ಲವೇ ಇಲ್ಲ ಎಂದ ಮೇಲೆ ನಾನು ಅನ್ನಿಸುವುದು ಹೇಗೆ ಸತ್ಯವಾಗುತ್ತದೆ ? ಇದು ಸತ್ಯವಾಗಿ ಇಲ್ಲವೇ ಇಲ್ಲ ; ಇದ್ದಂತೆ ತೋರುತ್ತದೆ ಅಷ್ಟೆ. ಯಾವಾಗ ನಾನು ಎನ್ನಿಸುವುದೇ ಸುಳ್ಳಾಯಿತೋ, ಇನ್ನು ಸುಳ್ಳಾದ ನನಗೆ ತೋರುವ ಬುದ್ಧಿ ಅದಕ್ಕೆ ತೋರುವ ಮನಸ್ಸು ಮನಸ್ಸಿಗೆ ಗೋಚರವಾಗುವ ಇಂದ್ರಿಯಗಳು, ದೇಹ, ಜಗತ್ತು, ಸಂಸಾರ – ಇವುಗಳು ಹೇಗೆ ನಿಜವಾಗುತ್ತವೆ? ಇವು ಯಾವವೂ ಗಾಢನಿದ್ರೆಯಲ್ಲಿ ಇಲ್ಲವೇ ಇಲ್ಲ. ಆದುದರಿಂದ ವಿಚಾರಮಾಡಿ ನೋಡಿದರೆ ಇವೆಲ್ಲವೂ ಬರೀ ಸುಳ್ಳಿನ ಕಂತೆಯಾಯಿತು. ಬಂಧನವೆಂಬುದು, ದುಃಖವೆಂಬುದು ಕೇವಲ ಒಂದು ಭಾವನೆ ಕಲ್ಪನೆ ಮಾತ್ರವಾಯಿತು.

ಇನ್ನೊಂದು ರೀತಿಯಿಂದ ವಿಚಾರಮಾಡಿ ನೋಡೋಣ. ನಾವು ಜಗತ್ತನ್ನು ಇಂದ್ರಿಯಗಳ ಮೂಲಕ ನೋಡುತ್ತೇವೆ. ಇಂದ್ರಿಯಗಳನ್ನು ಮನಸ್ಸಿನ ಮೂಲಕ ನೋಡುತ್ತೇವೆ. ಮನಸ್ಸನ್ನು ಬುದ್ಧಿಯ ಮೂಲಕ ನೋಡುತ್ತೇವೆ. ಬುದ್ಧಿಯನ್ನು ನಾನು ಅನ್ನಿಸುವುದರ ಮೂಲಕ ನೋಡುತ್ತೇವೆ. ನಾನು ಅನ್ನಿಸುವುದನ್ನು ಯಾವುದರ ಮೂಲಕ ನೋಡುತ್ತೇವೆ ? ಇದನ್ನು ಯಾವುದರ ಮೂಲಕವೂ ನೋಡದೆ ಆತ್ಮನೇ ನೇರವಾಗಿ ನೋಡುತ್ತಾನೆ. ನಾನು ಅನ್ನಿಸುವುದನ್ನು (ಅಹಂಕಾರವನ್ನು) ಯಾವುದು ಮತ್ತೊಂದರ

ಅಪೇಕ್ಷೆಯಿಲ್ಲದೆ ತಾನೇ ನೇರವಾಗಿ ನೋಡುತ್ತದೆಯೋ ಅದೇ ನಮ್ಮೆಲ್ಲರ ನಿಜವಾದ ಸ್ವರೂಪವು. ಇದೆಲ್ಲವನ್ನೂ ನೋಡುತ್ತಿರುವ ನಮ್ಮ ನಿಜಸ್ವರೂಪಕ್ಕೆ, ಸಾಕ್ಷಿಗೆ, ಆತ್ಮನಿಗೆ, ಜ್ಞಾನಕ್ಕೆ ಎಂದಾದರು ಬಂಧವಾಗಿದೆಯೆ ? ದುಃಖವಾಗಿದೆಯೆ ? ಆ ಸ್ವರೂಪದಲ್ಲಿ ಮತ್ತೊಂದು ಇಲ್ಲವೇ ಇಲ್ಲ, ಮತ್ತೊಂದಿದ್ದರೇ ತಾನೆ ದುಃಖ, ಬಂಧನ ? ಯಾವಾಗ ಎಲ್ಲಿ ಮತ್ತೊಂದೇ ಇಲ್ಲವೋ ಆಗ ಬಂಧನವೆಲ್ಲಿ? ದುಃಖವೆಲ್ಲಿ? ಇಲ್ಲವೇ ಇಲ್ಲ. ಹೇಗೆ ಒಂದು ಬಂಗಾರವೇ ಅನೇಕ ವಿಧವಾದ ಆಭರಣಗಳಾಗಿ ತೋರುತ್ತದೆಯೋ, ಹಾಗೆ ನಮ್ಮ ಆತ್ಮಸ್ವರೂಪವೇ ಅಹಂಕಾರವಾಗಿಯೂ ಬುದ್ಧಿಯಾಗಿಯೂ ಮನಸ್ಸಾಗಿಯೂ, ಇಂದ್ರಿಯಗಳಾಗಿಯೂ ದೇಹವಾಗಿಯೂ ಜಗತ್ತಾಗಿಯೂ ತೋರುತ್ತಿದೆ. ಬಂಗಾರವನ್ನು ಬಿಟ್ಟು ಹೇಗೆ ಆಭರಣಗಳು ಇರಲಾರವೋ ,ಹಾಗೆ ನಮ್ಮ ಆತ್ಮಸ್ವರೂಪವನ್ನು ಬಿಟ್ಟು ಇವು ಯಾವವೂ ಎಂದೂ ಇರಲಾರವು. ಈ ವಿಚಾರದಿಂದ ದೇಹಾದಿಗಳು ಇಲ್ಲವೇ ಇಲ್ಲವೆಂದೂ, ಯಾರಿಗೂ ಬಂಧನವಾಗಿಲ್ಲವೆಂದೂ, ಯಾರಿಗೂ ದುಃಖವಿಲ್ಲವೆಂದೂ ಸಿದ್ಧವಾಯಿತು.

## 7. ಜ್ಞಾನಿಯ ತಿಳಿವಳಿಕೆ

**"ತ್ರಿಷ್ವಪಿ ಕಾಲೇಷ್ವಕರ್ತೃತ್ವಾಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ, ನೇತಃ ಪೂರ್ವಮಪಿ ಕರ್ತಾ ಭೋಕ್ತಾ ವಾಽಹಮಾಸಂ ನೇದಾನೀಮ್, ನಾಪಿ ಭವಿಷ್ಯತ್ಕಾಲೇ ಇತಿ ಬ್ರಹ್ಮವಿದವಗಚ್ಛತಿ." (ಸೂ.ಭಾ. 4–1–13)**

ಹುಚ್ಚು ಹಿಡಿದು ನಾನು ಬಡವನೆಂದು ತಿಳಿದುಕೊಂಡ ಶ್ರೀಮಂತನು ಹುಚ್ಚು ಬಿಟ್ಟನಂತರ ನಾನು ಹೊಸದಾಗಿ ಶ್ರೀಮಂತನಾದೆನು; ಇದುವರೆಗೂ ಬಡವನಾಗಿದ್ದೆ ಎಂದು ಎಂದಿಗಾದರೂ ತಿಳಿಯುತ್ತಾನೆಯೋ ? ಇಲ್ಲ. ಮೊದಲೇ ನಾನು ಶ್ರೀಮಂತನಿದ್ದೆ, ಅದನ್ನು ನಾನು ಮರೆತಿದ್ದೆ, ಈಗ ತಿಳಿದುಕೊಂಡೆನೆಂದು ಹೇಗೆ ತಿಳಿಯುತ್ತಾನೆಯೋ, ಹಾಗೆ ಜ್ಞಾನವಾದ ಮೇಲೆ ಜ್ಞಾನಿಯ ತಿಳಿವಳಿಕೆ ಹೇಗಿರುತ್ತದೆಂದರೆ : ಈ ಹಿಂದಾಗಲೀ ಈಗಲಾಗಲೀ ಅಥವಾ ಮುಂದಕ್ಕಾಗಲೀ ಈ ಮೂರುಕಾಲದಲ್ಲೂ ಸಹ ಅಕರ್ತೃ ಅಭೋಕ್ತೃ ಎಂದರೆ ಏನನ್ನೂ ಮಾಡದೆ ಏನನ್ನೂ ಅನುಭವಿಸದೆ ಇರುವಂಥ ಪರಬ್ರಹ್ಮಸ್ವರೂಪವೇ ನಾನಾಗಿದ್ದೇನೆ ; ಈ ಹಿಂದಕ್ಕೂ ಕೂಡ ನಾನು ಕರ್ತೃವಾಗಲೀ ಭೋಕ್ತೃವಾಗಲೀ ಎಂದರೆ , ಮಾಡುವವನೂ,ಅನುಭವಿಸುವವನೂ ಆಗಿರಲಿಲ್ಲ ; ಈಗಲೂ ಇಲ್ಲ ; ಇನ್ನು ಮುಂದಕ್ಕೂ ಆಗುವುದಿಲ್ಲ. ಎಂದರೆ ಎಂದೆಂದಿಗೂ ದೇಹಾದಿಗಳ ಸಂಬಂಧವಿಲ್ಲದ ನಿತ್ಯಮುಕ್ತಸ್ವರೂಪನಾದ ಪರಮಾತ್ಮನೇ ನಾನಿದ್ದೇ

ನೆಂದು ನಿಶ್ಚಯವಾಗಿ ತಿಳಿದಿರುತ್ತಾನೆ. ''ಏವಮೇವ ಚ ಮೋಕ್ಷ ಉಪಪದ್ಯತೇ'' ಈ ವಿಧವಾದ ತಿಳಿವಳಿಕೆಯಿಂದಲೇ ಮೋಕ್ಷವಾಗುತ್ತದೆ. ಬೇರೆ ಯಾವುದರಿಂದಲೂ ಮೋಕ್ಷವಾಗುವುದಿಲ್ಲ. ''ಅನ್ಯಥಾ ಹ್ಯನಾದಿಕಾಲ ಪ್ರವೃತ್ತಾನಾಂ ಕರ್ಮಣಾಂ ಕ್ಷಯಾಭಾವೇ ಮೋಕ್ಷಾಭಾವಃ ಸ್ಯಾತ್'' ಒಂದುವೇಳೆ ಹೀಗಲ್ಲದೆ ತುದಿಮೊದಲಿಲ್ಲದೆ ಗಂಟು ಬಿದ್ದಿರುವ ಸಮಸ್ತಕರ್ಮಗಳೂ ನಾಶವಾಗದೆ ಮೋಕ್ಷವಾಗುವುದಿಲ್ಲವೆಂದು ಹೇಳುವುದಾದರೆ,

''ನ ಚ ದೇಶಕಾಲನಿಮಿತ್ತಾಪೇಕ್ಷೋ ಮೋಕ್ಷಃ ಕರ್ಮಫಲವದ್ಭವಿತು-ಮರ್ಹತಿ। ಅನಿತ್ಯತ್ವಪ್ರಸಂಗಾತ್। ಪರೋಕ್ಷತ್ವಾನುಪಪತ್ತೇಶ್ಚ ಜ್ಞಾನಫಲಸ್ಯ। ''
(ಸೂ. ಭಾ. 4–1–13)

ಕರ್ಮಗಳ ಫಲದಂತೆ ಮೋಕ್ಷವೆಂಬುದು ಇಂತಹ ದೇಶದಲ್ಲಿ ಇಂತಹ ಕಾಲದಲ್ಲಿ ಇಂತಹ ನಿಮಿತ್ತದಿಂದ ಆಗುವುದೆನ್ನುವುದಾದರೆ ಅದು ಸರಿಯಲ್ಲ. ಏಕೆಂದರೆ ಒಂದು ನಿಮಿತ್ತದಿಂದ ಆದದ್ದು ಮತ್ತೊಂದು ನಿಮಿತ್ತದಿಂದ ಹೋಗುತ್ತದೆ. ಆಗ ಮೋಕ್ಷವು ಸಹ ಅನಿತ್ಯವಾಗಬೇಕಾಗುತ್ತದೆ. ಹಾಗಾದರೆ ಜ್ಞಾನದ ಫಲವಾದ ಮೋಕ್ಷವು ಯಾವಾಗಲೋ ಎಲ್ಲಿಯೋ ಪರೋಕ್ಷವಾಗಿ ಆಗುವುದೆಂದು ಹೇಳಬೇಕಾಗುತ್ತದೆ. ಅದು ಸರಿಯಲ್ಲ. ಮೋಕ್ಷವೆಂಬುದು ನಿತ್ಯಸಿದ್ಧವಾಗಿದೆ.

ಈ ರೀತಿಯಾಗಿ ನಿತ್ಯಸಿದ್ಧವಾಗಿರುವ ಮೋಕ್ಷವು ಜ್ಞಾನದ ವಿನಃ ಮತ್ತೊಂದರಿಂದ ಪ್ರಾಪ್ತವಾಗುವುದು ಸಾಧ್ಯವಿಲ್ಲ. ಆದುದರಿಂದ ಈಗ ಮೋಕ್ಷಕ್ಕೆ ನೇರವಾದ ಸಾಧನೆಯಾದ ಜ್ಞಾನದ ಸ್ವರೂಪವೇನೆಂಬುದನ್ನು ತಿಳಿದುಕೊಳ್ಳುವದು ಅಗತ್ಯ. ಜ್ಞಾನವೆಂದರೆ ತನ್ನ ಸ್ವರೂಪವಾವುದೆಂಬುದನ್ನು ವಿಚಾರಿಸಿ ಪೂರ್ಣವಾದ ವಿಚಾರದೃಷ್ಟಿಯಿಂದ ತನ್ನ ಸ್ವರೂಪದ ನಿಶ್ಚಯಮಾಡಿಕೊಂಡು ಅದರಲ್ಲಿಯೇ ನೆಲೆನಿಲ್ಲುವುದನ್ನೇ ಪರಿಪೂರ್ಣಜ್ಞಾನನಿಷ್ಠೆ ಎನ್ನುತ್ತಾರೆ. ಇದೇ ಜ್ಞಾನದ ಸ್ವರೂಪ, ಇದಕ್ಕಾಗಿಯೇ ಮುಮುಕ್ಷುವಾದವನು ವಿಚಾರಮಾಡಬೇಕಾದದ್ದು. ಸಾಮಾನ್ಯವಾಗಿ ಜಗತ್ತಿನಲ್ಲಿ ಎಲ್ಲರೂ 'ನಾನು' 'ತಾನು' ಎಂಬ ಶಬ್ದಗಳನ್ನು ವ್ಯವಹಾರಗಳಲ್ಲಿ ಬಳಸುತ್ತಲೇ ಇರುತ್ತಾರೆ. ಆದರೆ ಇವುಗಳ ನಿಜವಾದ ಸ್ವರೂಪವೇನೆಂಬುದನ್ನು ಬಹಳ ಜನರು ವಿಚಾರವನ್ನು ಮಾಡದೆ ಕೇವಲ ತಾವು ಮಾಡಿಕೊಂಡಿರುವ ಗ್ರಹಿಕೆಗಳನ್ನೇ ಎಂದರೆ ತಮ್ಮ ಮನಸ್ಸಿಗೆ ತೋಚಿದ್ದನ್ನೇ ಪಟ್ಟುಹಿಡಿದು 'ನಾನು' 'ತಾನು' ಎಂದು ತಿಳಿದುಕೊಂಡಿರುತ್ತಾರೆ. ಆದರೆ ನಿಜವಾದ ''ನಾನು'' ''ತಾನು'' ಎಂಬುದರ ಸ್ವರೂಪವೇನೆಂಬುದನ್ನು ಈಗ ವಿಶದವಾಗಿ ವಿಚಾರಮಾಡಿ ನೋಡೋಣ.

## 8. ಈ ದೇಹವು ನಾನಲ್ಲ

ಪಿತೃಭುಕ್ತಾನ್ನಜಾದ್ವೀರ್ಯಾಜ್ಜಾತೋಽನ್ನೇನೈವ ವರ್ಧತೇ ।
ದೇಹಸ್ಸೋಽನ್ನಮಯೋಽನಾತ್ಮಾ ಪ್ರಾಕ್ಕೂರ್ಧ್ವಂ ತದಭಾವತಃ ॥ (ಪಂ.)

ತಂದೆತಾಯಿಗಳು ತಿಂದ ಅನ್ನದಿಂದ ಉತ್ಪನ್ನವಾದ ವೀರ್ಯದಿಂದ ಈ ದೇಹವು ಹುಟ್ಟಿ ಅನ್ನದಿಂದಲೇ ಬೆಳೆಯುತ್ತದೆ. ಎಂದಮೇಲೆ ಈ ದೇಹವು ಅನ್ನದ ವಿಕಾರವಾಗಿದೆ. ಆದುದರಿಂದ ಈ ದೇಹವು ತಾನಲ್ಲ. ಲೋಕದಲ್ಲಿ ಗಾರುಡಿಯವನು ತನ್ನ ವಿದ್ಯೆಯಿಂದ ಏನೂ ಇಲ್ಲದ ಸ್ಥಳದಲ್ಲಿ ಒಂದು ವೃಕ್ಷವನ್ನು ಸೃಷ್ಟಿಸಿ ಆಗಲೇ ಅದರಲ್ಲಿ ಫಲವನ್ನೂ ಸಹ ತೋರಿಸುತ್ತಾನೆ. ಆದರೆ ಅದು ಉತ್ತರಕ್ಷಣದಲ್ಲಿಯೇ ನಾಶವಾಗುವುದರಿಂದ ಅದಕ್ಕೆ ಇಂದ್ರಜಾಲವೆಂದು ಹೇಳುತ್ತಾರೆ. ಹಾಗೆಯೇ ಇಲ್ಲಿಯೂ ಸಹ ಮೊದಲು ಏನೂ ಇಲ್ಲದೆ ಒಂದು ಹನಿ ವೀರ್ಯದಿಂದಲೇ ಇಷ್ಟು ದೊಡ್ಡ ಶರೀರವಾಗಿ ತೋರಿ ಕೊನೆಗೆ ನಾಶವಾಗಿ ಹೋಗುತ್ತದೆ. ಎಂದಮೇಲೆ ಇದಕ್ಕಿಂತಲೂ ವಿಚಿತ್ರವಾದ ಇಂದ್ರಜಾಲವು ಯಾವುದಿದೆ ? ಯಥಾರ್ಥವಾಗಿ ಈ ದೇಹದಲ್ಲಿ ಏನಿದೆ ಎಂದು ವಿಚಾರಮಾಡಿ ನೋಡಿದರೆ,

ಹೂಡಿದೆಲು, ಮರ ಮುಟ್ಟು ಮಾಂಸದ ।
ಗೋಡೆ ಚರ್ಮದ ಹೊದಿಕೆ ।
ನರವಿನ ಕೂಡೆ ಹಿಂಡಿಗೆ ಬಿಗಿದ ಮನೆಯೊಳಗಾತ್ಮ । ನಿರುತಿರಲು ॥
ಬೀಡು ತೊಲಗಿದ ಬಳಿಕಲಾ ।
ಸುಡುಗಾಡಿನಲಿ ಬೆಂದುರಿವ ಕೊಳ್ಳಿಯ ।
ನೋಡಿ ನಂಬಿರಬಹುದೆ..... ..... ..... ..... ॥
ಎಂಟುಗೇಣಿನ ದೇಹ ರೋಮಗ ।
ಳೆಂಟು ಕೋಟಿಯು ಕೀಲ್ಗಳರವ ।
ತ್ತೆಂಟ ಮಾಂಸಗಳಿಂದ ಮಾಡಿದ ಮನೆಯ ಮನವರಿದು ॥
ನೆಂಟ ನೀನಿರ್ದಗಲಿದೊಡೆ ವಣ ।
ಹೆಂಟೆಯಲಿ ಮುಚ್ಚುವರು ದೇಹದ ।
ಲುಂಟೆ ವರ ಪುರುಷಾರ್ಥ..... ...... ...... ..... ॥

ಎಲುಬು ರಕ್ತವು ಮಾಂಸ ಮೇಲೆ ಚರ್ಮದ ಹೊದಿಗೆ ಒಳಗೆ ಮಲಮೂತ್ರಾದಿ ಕ್ರಿಮಿಗಳಿಹವು । ಹಲವು ವ್ಯಾಧಿಯ ಬೀಡು ಪಂಚಭೂತದ ನಾಡು ಎಲಬು ದೇಹವ ನಂಬಿ ಕೆಡಬೇಡ ಮನುಜಾ ॥ (ಕನಕದಾಸರು)

ಈ ದೇಹವೆಂದರೆ ಜೀವನು ವಾಸಮಾಡಲು ಯೋಗ್ಯವಾದ ಒಂದು ಮನೆ. ಮನೆಯು ಎಂದಾದರೂ ತಾನಾಗಲು ಶಕ್ಯವೆ ? ತಾನು ವಾಸವಾಗಿರುವ ಮನೆಗೆ ತಾನೆಂದರೆ ಅವನನ್ನು ಹೇಗೆ ಮೂರ್ಖನೆನ್ನುತ್ತಾರೆಯೋ ಹಾಗೆ, ಈ ಜೀವನು ವಾಸವಾಗಿರುವ ಈ ದೇಹಕ್ಕೇ ತಾನೆಂದರೆ ಜ್ಞಾನಿಗಳು ಅವನಿಗೆ ಮೂರ್ಖನೆನ್ನುತ್ತಾರೆ. ಈ ದೇಹವೆಂದರೆ ಪಂಚಭೂತಗಳಿಂದ ಕಟ್ಟಿದ ಒಂದು ಮನೆ. ಈ ಮನೆಯು ಹೇಗಿದೆ ಎಂದರೆ ಎಲಬುಗಳೇ ಈ ಮನೆಗೆ ಕಂಬ ತೊಲೆಗಳಂತಿವೆ, ಮಾಂಸದ ಗೋಡೆಯನ್ನು ಹಾಕಿ ನರಗಳಿಂದ ಕಟ್ಟಿದ್ದಾನೆ. ಇದಕ್ಕೆ ಗಿಲಾವು ಮತ್ತು ಹೊದಿಕೆ ಎಂದರೆ ಚರ್ಮ. ಈ ಮನೆಯೊಳಗಿರುವ ಜೀವನು ಹೊರಟು ಹೋದನೆಂದರೆ ಇದನ್ನು ಸುಟ್ಟು ಹಾಕುತ್ತಾರೆ. ಕೊನೆಗೆ ಇದು ಬೂದಿಯಾಗುತ್ತದೆ. ಇಂತಹ ದೇಹಕ್ಕೆ ನಾನೆನ್ನುವುದು ಎಷ್ಟು ಭ್ರಮೆ !

ಈ ದೇಹದಲ್ಲಿರುವುದಾದರೂ ಏನು ? ಎಲಬು, ರಕ್ತ, ಮಾಂಸ, ಮಜ್ಜಾ ಮೇಧಸ್ಸು, ಮಲಮೂತ್ರ, ಕ್ರಿಮಿಕೀಟಗಳು ತುಂಬಿವೆ. ಇದರಲ್ಲಿ ಪವಿತ್ರವಾದ ವಸ್ತು ಯಾವುದಿದೆ ? ಯಾವುದೂ ಇಲ್ಲ. ಇದರದಲ್ಲಿರುವದೆಲ್ಲಾ ಅಪವಿತ್ರವಾದ, ಅಮಂಗಲ ಕರವಾದ ಹೊಲಸೇ. ರೋಮರೋಮಗಳಿಂದಲೂ ನವದ್ವಾರಗಳಿಂದಲೂ ಹೊಲಸು ಹೊರಕ್ಕೆ ಬರುತ್ತಲೇ ಇರುತ್ತದೆ. ತಾನು ತನ್ನದು ಎಂದು ತಿಳಿದಿರುವ ತನ್ನ ದೇಹದಿಂದಲೇ ಹೊರಕ್ಕೆ ಬಂದ ಹೊಲಸನ್ನು ಕಂಡರೆ ಹೇಸಿಕೊಳ್ಳುತ್ತೀಯೆ. ಮೂಗು ಮುಚ್ಚಿ ಕೊಳ್ಳುತ್ತೀಯೆ. ಅದನ್ನು ನೋಡಲು ಸಹ ಅಸಹ್ಯವಾಗುತ್ತದೆ. ಹೀಗಿರುವಾಗ ಕೇವಲ ಹೇಸಿಗೆಯ, ಹೊಲಸಿನ ಮುದ್ದೆಯಾದ ಈ ದೇಹಕ್ಕೆ ನಾನೆನ್ನುವುದು ಎಂತಹ ನಾಚಿಕೆಗೇಡುತನ. ನೋಡುವುದಕ್ಕೂ ಮುಟ್ಟುವುದಕ್ಕೂ, ಅಸಹ್ಯಕರವಾದ ಅಮೇಧ್ಯ (ಹೇಸಿಗೆ) ದಿಂದಲೇ ತುಂಬಿರುವ ಈ ಹೊಲಸಿನ ದೇಹವನ್ನು ತಾನು ಸದಾ ಸರ್ವದಾ ಹೊತ್ತುಕೊಂಡಿರುವುದಲ್ಲದೆ ಜನ್ಮಜನ್ಮಾಂತರಗಳಿಂದಲೂ ಸ್ವಲ್ಪವೂ ನಾಚಿಕೆಯಿಲ್ಲದೆ ಈ ಮಲಭಾಂಢವನ್ನೇ ನಾನೆಂದು ತಿಳಿದುಕೊಂಡು ಮೋಹಿಸಿದ್ದೀಯಲ್ಲ ! ಇದಕ್ಕಿಂತಲೂ ಮೂರ್ಖತನವೂ ಮತ್ತೊಂದೇನಿದೆ ?

ಮನುಷ್ಯನು ಹರುಕು ಬಟ್ಟೆಯನ್ನು ತೆಗೆದುಹಾಕಿ ಹೊಸಬಟ್ಟೆಯನ್ನು ಧರಿಸುವಂತೆ ಜೀವನು ಹಳೆಯ ಶರೀರವನ್ನು ಬಿಟ್ಟು ಹೊಸಶರೀರವನ್ನು ಧರಿಸುತ್ತಾನೆ. ಇದಕ್ಕೆ ಹುಟ್ಟುವುದು ಸಾಯುವುದು ಎನ್ನುತ್ತಾರೆ. ಒಂದು ಪಕ್ಷ ದೇಹವೇ ನಾನಾಗಿದ್ದರೆ ನಾನು ಹೋಗುವಾಗ ಈ ದೇಹವನ್ನೂ ಸಹ ತೆಗೆದುಕೊಂಡು ಹೋಗಬೇಕು. ಹಾಗೆ ದೇಹವನ್ನು ತೆಗೆದುಕೊಂಡು ಹೋಗುವುದಿಲ್ಲ, ಇದನ್ನು ಇಲ್ಲಿಯೇ ಬಿಟ್ಟುಹೋಗುತ್ತೇನೆ. ಆದುದರಿಂದ ತೋರುವ ಈ ದೇಹವು ನಾನಲ್ಲ. ಒಂದು ಮನೆಯಲ್ಲಿ ನಾನಿದ್ದರೆ ಮನೆಯು ನನ್ನದು ಎಂದೇ ಕರೆಯುವೆ. ಹಾಗೆಂದರೆ ಮನೆಯು ನಾನಲ್ಲವೆಂದು

ಸಿದ್ಧವಾಗುತ್ತದೆ. ಅದರಂತೆಯೇ ನನ್ನ ದೇಹ ಎಂದು ಹೇಳುವ ನಾನೂ ಸಹ ದೇಹವಲ್ಲವೆಂಬುದು ಸ್ಪಷ್ಟವಾಗುತ್ತದೆ.

ಈ ದೇಹವು ಪಂಚಭೂತಗಳಿಂದ ಸೃಷ್ಟಿಯಾಗಿರುತ್ತದೆ. ಇಟ್ಟಿಗೆ, ಮಣ್ಣು, ಮರ, ಕಬ್ಬಿಣ, ಸುಣ್ಣ, ಇವುಗಳನ್ನು ಸೇರಿಸಿ ಕಟ್ಟಿರುವುದಕ್ಕೇ ಮನೆ ಎನ್ನುತ್ತಾರೆ. ಇವುಗಳನ್ನು ಬೇರೆ ಬೇರೆ ತೆಗೆದಿಟ್ಟರೆ ಯಾವುದಕ್ಕೆ ಮನೆ ಎನ್ನುವುದು ? ಇವುಗಳ ಗುಂಪನ್ನು ಬಿಟ್ಟು ಮನೆ ಎನ್ನುವುದು ಸ್ವತಂತ್ರವಾಗಿ ಎಲ್ಲಿದೆ ? ಎಲ್ಲಿಯೂ ಇಲ್ಲವೇ ಇಲ್ಲ. ಇದರಂತೆಯೇ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ, ಇವುಗಳನ್ನು ಒಂದು ವಿಧವಾಗಿ ಸೇರಿಸಿರುವುದೇ ದೇಹವು. ಈ ದೇಹದಲ್ಲಿರುವ ಪಂಚಭೂತಗಳನ್ನು ಬೇರೆ ಬೇರೆ ಮಾಡಿದರೆ ಯಾವುದಕ್ಕೆ ದೇಹವೆನ್ನುವುದು ? ಇವುಗಳ ಗುಂಪನ್ನು ಬಿಟ್ಟು ದೇಹವು ಸ್ವತಂತ್ರವಾಗಿ ಎಲ್ಲಿದೆ ? ಎಲ್ಲಿಯೂ ಇಲ್ಲವೇ ಇಲ್ಲ. ವಾಯುತತ್ವವು ಈ ದೇಹವನ್ನು ಬಿಟ್ಟು ಹೊರಗಡೆ ಹೋದರೆ ಪ್ರಾಣವು ಹೋಯಿತೆಂದು ಹೇಳುತ್ತಾರೆ. ಅಗ್ನಿಯ ಅಂಶವು ಹೋದರೆ ದೇಹವು ತಣ್ಣಗಾಗುತ್ತದೆ. ಜಲದ ಅಂಶವು ಹೋದರೆ ಕಟ್ಟಿಗೆಯಂತಾಗುತ್ತದೆ. ಕೊನೆಗೆ ಉಳಿದದ್ದು ಪೃಥ್ವಿಯ ಅಂಶ, ಮಣ್ಣು ಮಣ್ಣಿಗೆ ಸೇರಿ ಹೋಗುತ್ತದೆ. ಹೀಗಿರುವಾಗ ದೇಹವು ಎಲ್ಲಿದೆ ? ಪಂಚಭೂತಗಳಾದರೂ ಸ್ವತಂತ್ರವಾಗಿವೆಯೋ ಎಂದರೆ ಪೃಥ್ವಿಯು ಜಲವನ್ನು ಬಿಟ್ಟು ಇಲ್ಲವೇ ಇಲ್ಲ. ಇದರಂತೆಯೇ ಜಲವು ಅಗ್ನಿಯನ್ನು ಬಿಟ್ಟಿಲ್ಲ. ಅಗ್ನಿಯು ವಾಯುವನ್ನು ಬಿಟ್ಟಿಲ್ಲ. ವಾಯುವು ಆಕಾಶವನ್ನು ಬಿಟ್ಟಿಲ್ಲ. ಆಕಾಶವು ಆತ್ಮನನ್ನು ಬಿಟ್ಟು ಇಲ್ಲವೇ ಇಲ್ಲ. ಈ ವಿಚಾರದಿಂದ ಇದೆಲ್ಲವೂ ಆತ್ಮನಲ್ಲಿ ಕೇವಲ ಕಲ್ಪಿತವಾಗಿರುತ್ತವೆ ಎಂಬುದು ಸಿದ್ಧವಾಯಿತು.

ಈ ದೇಹವೇ ನಾನಾಗಿದ್ದರೆ ದೇಹವು ಹುಟ್ಟುವುದಕ್ಕಿಂತಲೂ ಮೊದಲು ಇದ್ದಿತೇನು? ಇರಲಿಲ್ಲ. ಸತ್ತಮೇಲೆ ಇರುತ್ತದೆಯೇನು ? ಇರುವುದಿಲ್ಲ. ಆದರೆ ಈ ದೇಹದಲ್ಲಿರುವ ನಾನು ಮಾತ್ರ ಮೊದಲೂ ಇದ್ದೆ. ಈಗಲೂ ಇದ್ದೇನೆ. ಕೊನೆಗೂ ಇರುತ್ತೇನೆ. ಮೊದಲು ಕೊನೆಗೂ ಇಲ್ಲದೆ ಈಗ ಮಾತ್ರ ಅದೂ ಒಂದೇ ಸಮನೆ ಇರದೆ ಬಾಲ್ಯದಲ್ಲಿ ಒಂದುತರ, ಕೌಮಾರದಲ್ಲಿ ಮತ್ತೊಂದುತರ, ಯೌವನದಲ್ಲಿ ಇನ್ನೊಂದುತರ, ಮುಪ್ಪಿನಲ್ಲಿಮಗದೊಂದುತರ, ಈ ರೀತಿ ತರತರವಾಗಿ ಕ್ಷಣಕ್ಷಣಕ್ಕೂ ವಿಕಾರವಾಗಿ ತೋರುವ ದೇಹವು ಇದೆ ಎಂದರೆ ಇದು ಸತ್ಯವಾಗುವುದಿಲ್ಲ. ಇದನ್ನು ಜ್ಞಾನಿಗಳು ಒಪ್ಪುವುದಿಲ್ಲ. ಈ ದೇಹವು ಹಿಂದೆ ಇಲ್ಲದೆ ಈಗ ಮಾತ್ರ ತೋರುವದೆಂಬುದೂ ಮತ್ತು ನಾನು ಈ ದೇಹವನ್ನು ಬಿಟ್ಟನಂತರ ಇದು ನನಗೆ ಇರುವುದಿಲ್ಲವೆಂಬುದೂ ಅನುಭವಸಿದ್ಧವಾದದು. ಯಾವುದು ಮೊದಲೂ ಮತ್ತು ಕೊನೆಯಲ್ಲಿಯೂ ಇರುವುದಿಲ್ಲವೋ ಅದು ಸದ್ಯಕ್ಕೆ ತೋರುತ್ತಿದ್ದರೂ ಸಹ ಇಲ್ಲವೆಂದೇ

ತಿಳಿಯಬೇಕು. ಹೇಗೆಂದರೆ ಒಬ್ಬ ಮಾಂತ್ರಿಕನು ಕೆಲವು ಕಾಗದಗಳನ್ನು ತೆಗೆದುಕೊಂಡು ಅವನ್ನು ನೋಟುಗಳನ್ನಾಗಿ ಮಾಡಿ ತೋರಿಸುತ್ತಾನೆ. ಈ ಸಮಯದಲ್ಲಿ ಅವು ನೋಡುವುದಕ್ಕೆ ನೋಟುಗಳಂತೆಯೇ ತೋರುತ್ತಿದ್ದರೂ ಸಹ ಹೇಗೆ ಅವನ್ನು ನೋಟುಗಳಲ್ಲವೆಂದೂ ಮತ್ತು ಅವು ಕಾಗದಗಳೇ ಎಂದೂ ಎಷ್ಟು ನಿಶ್ಚಯವಾಗಿ ನಾನು ತಿಳಿಯುತ್ತೇನೆಯೋ ಹಾಗೆಯೇ, ಈ ದೇಹವು ತೋರಿದರೂ ಸಹ ಇಲ್ಲವೆಂದೇ ತಿಳಿಯಬೇಕು. ಪ್ರತ್ಯಕ್ಷವಾಗಿ ತೋರುವುದನ್ನು ಇಲ್ಲವೆಂದು ಹೇಳುವುದು ಹೇಗೆ ? ಎಂದರೆ ಕನಸಿನಲ್ಲಿಯೂ ಸಹ ಹೀಗೆಯೇ ತೋರುತ್ತಿದ್ದಿತಲ್ಲಾ. ಅದು ನಿಜವೇನು? ಇಲ್ಲ. ಅದರಂತೆಯೇ ಇದೂ ಸಹ ಇದೆ. ಸಿನಿಮಾದಲ್ಲಿ ದೊಡ್ಡಹುಲಿ ಕಂಡರೂ ಸಹ ಅಲ್ಲಿ ಹುಲಿ ಇಲ್ಲವೆಂದೂ ಕೇವಲ ಬಟ್ಟೆಯೇ ಇದೆಯೆಂದೂ ತಿಳಿಯುವೆಯಲ್ಲವೆ? ಏಕೆಂದರೆ ಸಿನಿಮಾ ತೋರುವುದಕ್ಕೆ ಮೊದಲೂ ಮತ್ತು ಕೊನೆಯಲ್ಲೂ ಹುಲಿ ತೋರುವುದಿಲ್ಲ. ಅದರಂತೆಯೇ ಈ ದೇಹವು ಮೊದಲೂ ಮತ್ತು ಕೊನೆಯಲ್ಲೂ ಇರುವುದಿಲ್ಲ. ಆದುದರಿಂದ ಮಧ್ಯದಲ್ಲಿ ತೋರಿದರೂ ಸಹ ಇಲ್ಲವೆಂದೇ ತಿಳಿಯಬೇಕು. ದೇಹವು ತಾನಲ್ಲವೆಂಬುದನ್ನು ಮತ್ತೊಂದು ರೀತಿಯಿಂದ ನೋಡೋಣ.

''ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ'' (ಬೃ. 4–5–6) ಲೋಕದಲ್ಲಿ ಮನುಷ್ಯನು ಸಮಸ್ತ ಭೋಗಭಾಗ್ಯಗಳನ್ನೂ ಬಯಸುವುದು, ಅವುಗಳನ್ನು ಪ್ರೇಮಿಸುವುದು ಏತಕ್ಕೆಂದರೆ ಅವುಗಳಿಂದ ತನಗೆ ಸುಖವಾಗಬೇಕೆಂದೇ ಹೊರತು ಅವುಗಳಿಗೆ ತಾನು ಸುಖವನ್ನು ಕೊಡಬೇಕೆಂದಲ್ಲ, ಹಾಗೆ ತಾನು ಪ್ರೇಮಿಸಿದ ಕಾಮಿಸಿದ ವಸ್ತುವಿನಿಂದ ತನಗೆ ಸುಖವಾಗದಿದ್ದರೆ ಅವುಗಳನ್ನು ದ್ವೇಷಿಸುತ್ತಾನೆ. ಅಷ್ಟೇ ಅಲ್ಲದೆ ಅವುಗಳನ್ನು ಬಿಟ್ಟು ಬಿಡುತ್ತಾನೆ. ಇದನ್ನು ಇನ್ನಷ್ಟು ವಿವರಿಸೋಣ.

**ವಿತ್ತಾತ್ಪುತ್ರಃ ಪ್ರಿಯಃ ಪುತ್ರಃ ಪಿಂಡಃ ಪಿಣ್ಡಾತ್ತಥೇನ್ದ್ರಿಯಮ್ । ಇಂದ್ರಿಯಾಚ್ಚ ಪ್ರಿಯಃ ಪ್ರಾಣಃ ಪ್ರಾಣಾದಾತ್ಮಾ ಪ್ರಿಯಃ ಪರಃ॥** ಪಂ. ॥ ಲೋಕದಲ್ಲಿ ಮನುಷ್ಯನಿಗೆ ಧನದ ಮೇಲೆ ಎಂದರೆ ಸಿರಿಸಂಪತ್ತಿನ ಮೇಲೆ ಪ್ರೇಮವಿರುತ್ತದೆ. ಅದಕ್ಕಾಗಿಯೇ ನಾನಾರೀತಿಯಿಂದ ಕಷ್ಟಪಟ್ಟು ಅಸಂಖ್ಯಾತ ದುಃಖಗಳನ್ನು ಸಹಿಸಿಕೊಂಡು ಸತತವಾಗಿಯೂ ದುಡಿಯುತ್ತಿರುವುದು. ಈ ರೀತಿ ಕಷ್ಟಪಟ್ಟು ದುಡಿದು ಸಂಪಾದಿಸಿದ ಐಶ್ವರ್ಯ (ಧನ) ಕ್ಕಿಂತಲೂ ಹೆಚ್ಚಾಗಿ ಮಕ್ಕಳಮೇಲೆ ಮೋಹವಿರುತ್ತದೆ. ಮಕ್ಕಳ ಮೇಲಿನ ಮಮತೆಯಿಂದ ಅವರಿಗೇನಾದರೂ ಆಪತ್ತು ಒದಗಿದರೆ ಆಗ ಅವರ ಕ್ಷೇಮಕ್ಕಾಗಿ ತನ್ನ ಸಮಸ್ತ ಐಶ್ವರ್ಯವನ್ನೂ ಖರ್ಚು ಮಾಡಲು ಸಿದ್ಧನಾಗುತ್ತಾನೆ. ಮಕ್ಕಳಿಗಿಂತಲೂ ತನ್ನ ಹೇಹದಮೇಲೆ ಅಧಿಕವಾದ ಪ್ರೇಮವಿರುತ್ತದೆ. ತನ್ನ ದೇಹಕ್ಕೆ ಅಪಾಯವಾಗುವ ಪ್ರಸಂಗಬಂದರೆ ಮಕ್ಕಳನ್ನೂ ಬಿಟ್ಟುಬಿಡುತ್ತಾನೆ. ಅವರಿಂದ ತನಗೆ ಸುಖವಾಗದೆ ಕಷ್ಟ

ದುಃಖಗಳು ಬಂದೊದಗಿದರೆ ಆಗ ಮಕ್ಕಳನ್ನೂ ತೊರೆಯುತ್ತಾನೆ. ಈಗ ಎಷ್ಟೋ ಜನರು ಗಂಡಹೆಂಡರು, ತಂದೆಮಕ್ಕಳು, ತಾಯಿಮಕ್ಕಳು, ಅಣ್ಣತಮ್ಮಂದಿರು, ಒಬ್ಬರನ್ನೊಬ್ಬರು ಬಿಟ್ಟು ದೂರವಾಗಿ ಬೇರೆಯಿರುವುದು ಪ್ರತ್ಯಕ್ಷವಾಗಿರುತ್ತದೆ. ಇನ್ನು ತನ್ನ ದೇಹಕ್ಕಿಂತಲೂ ತನ್ನ ಇಂದ್ರಿಯಗಳ ಮೇಲೆ ಅಧಿಕವಾದ ಪ್ರೇಮವಿರುತ್ತದೆ. ಹೇಗೆಂದರೆ ದೇಹಕ್ಕೇನಾದರೂ ಹೊಡೆತಬೀಳುವ ಅಥವಾ ಅಪಾಯವಾಗುವ ಪ್ರಸಂಗಬಂದರೆ ಇಂದ್ರಿಯಗಳಿಗೆ ಅಪಾಯವಾಗದಂತೆ ನೋಡಿಕೊಳ್ಳುತ್ತಾನೆ. ಇಂದ್ರಿಯಗಳಿಗಿಂತಲೂ ಪ್ರಾಣದ ಮೇಲೆ ಹೆಚ್ಚು ಪ್ರೇಮವಿರುತ್ತದೆ. ಕಣ್ಣು, ಕೈ, ಕಾಲು ಮೊದಲಾದ ಇಂದ್ರಿಯಗಳಿಗೇನಾದರೂ ರೋಗವು ಬಂದಾಗ ವೈದ್ಯನು ಅವನ್ನು ಶಸ್ತ್ರಚಿಕಿತ್ಸೆಮಾಡಿ ತೆಗೆದುಹಾಕಿದರೇ ಪ್ರಾಣವು ಉಳಿಯುತ್ತದೆ, ಇಲ್ಲದಿದ್ದರೆ ಇಲ್ಲವೆಂದು ಹೇಳಿದರೆ ಆಗ ಇಂದ್ರಿಯಗಳನ್ನು ಕಳೆದುಕೊಂಡಾದರೂ ಪ್ರಾಣವನ್ನುಳಿಸಿಕೊಳ್ಳುತ್ತಾನೆ. ಎಷ್ಟೋ ಜನರು ಕಣ್ಣುಕೈ ಕಾಲುಗಳನ್ನು ಕಳೆದುಕೊಂಡು ಜೀವಿಸಿದ್ದಾರೆ. ಇಷ್ಟು ಪ್ರೀತಿಗೆ ಪಾತ್ರವಾದ ಪ್ರಾಣಕ್ಕಿಂತಲೂ ತನ್ನ ಮೇಲೆ ಅತಿಶಯವಾದ ಪ್ರೇಮವಿರುತ್ತದೆ. ಇದು ಹೇಗೆಂದರೆ ಬಹಳ ಅಪಮಾನವಾದಾಗ ಅಥವಾ ಭಯಂಕರವಾದ ರೋಗದಿಂದ ನರಳುವಾಗ ಜೀವಿಸಿರುವುದಕ್ಕಿಂತಲೂ ಪ್ರಾಣವು ಹೋದರೆ ಒಳ್ಳೆಯದೆಂದು ಹೇಳುತ್ತಾರೆ. ಏತಕ್ಕೆಂದರೆ ಪ್ರಾಣವು ಹೋದರೆ ತಾನು ಸುಖವಾಗಿರುತ್ತೇನೆಂದು ತಿಳಿಯುತ್ತಾರೆ. ಎಷ್ಟೋ ಜನರು ಪ್ರಾಣವನ್ನು ಬಿಟ್ಟಿರುವುದೂ ಉಂಟು. ಈ ಎಲ್ಲಾ ವಿಚಾರಗಳಿಂದ ತಾನು ಈ ದೇಹ, ಇಂದ್ರಿಯ, ಪ್ರಾಣ ಇವುಗಳಿಗಿಂತ ಬೇರೆ ಇದ್ದೇನೆಂದೂ ಸುಖರೂಪನೆಂದೂ ತಿಳಿಯತ್ತದೆ. ಇವೆಲ್ಲಕ್ಕಿಂತಲೂ ಭಿನ್ನನಾಗಿ ಸುಖರೂಪನಾಗಿ ಇರುವ ನಾನು ಯಾರು ? ಅಂತಹ ನಾನು ಹೇಗಿದ್ದೇನೆ ? ಎನ್ನುವುದನ್ನು ವಿಚಾರಮಾಡಿ ತಿಳಿಯಬೇಕು. ಹೀಗಿದ್ದಮೇಲೆ ದೇಹವೇ ತಾನೆನ್ನುವುದು ಶುದ್ಧ ತಪ್ಪು.

ಈಗ ಈ ದೇಹಕ್ಕೇ ನಾನೆನ್ನುತ್ತೀಯೆ. ಈ ದೇಹಕ್ಕೇನಾದರೂ ಸುಖವಾಗಲೀ, ಕಷ್ಟವಾಗಲೀ ಆದರೆ ನನಗೇ ಆಯಿತೆಂದು ತಿಳಿಯತ್ತೀಯೆ. ಹೀಗೆ ತಿಳಿದುಕೊಂಡು ಏನಾದರೂ ಮಾಡಿ ಈ ದೇಹಕ್ಕೆ ಸುಖಪಡಿಸಬೇಕೆಂದು ನಾನಾರೀತಿಯಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೀಯೆ. ಯಾರಾದರೂ ಏನಾದರೂ ಈ ದೇಹಕ್ಕೆ ನಿಂದೆಮಾಡಿದರೆ ನನಗೇ ನಿಂದೆಮಾಡಿದರೆಂದು ತಿಳಿದುಕೊಂಡು ಅವರಮೇಲೆ ಕೋಪಿಸಿಕೊಳ್ಳುತ್ತೀಯೆ. ಹೊಗಳಿದರೆ ಆನಂದಿಸುತ್ತೀಯೆ. ಈಗ ದೇಹದ ಮೇಲಿರುವಷ್ಟು ಪ್ರೇಮವು ಯಾರ ಮೇಲೂ ಇರುವುದಿಲ್ಲ. ದೇಹವೆಂದರೇ ನಾನು, ನಾನೆಂದರೇ ದೇಹ ಎಂಬುದಾಗಿ ತಿಳಿದಿರುತ್ತೀಯೆ. ವಿಚಾರಮಾಡಿ ಗಾಢನಿದ್ರೆಯ ಅನುಭವದಿಂದ ನೋಡಿದರೆ ಈ

ದೇಹವು ನಾನಲ್ಲವೆಂದೂ, ಇದು ನನಗೆ ಸಂಬಂಧವಿಲ್ಲವೆಂದೂ, ಇದು ಕೇವಲ ಭ್ರಮೆಯೆಂದೂ ನಿಶ್ಚಯವಾಗುತ್ತದೆ. ಇದು ಹೇಗೆಂಬುದನ್ನು ವಿಚಾರಮಾಡಿ ನೋಡೋಣ.

ಇಷ್ಟು ಪ್ರೀತಿಗೆ ಪಾತ್ರವಾದ ಈ ದೇಹವು ಗಾಢನಿದ್ರೆಯಲ್ಲಿ ತೋರುವುದೇ ಇಲ್ಲ. ಆಗ ಈ ದೇಹಕ್ಕೆ ಸಂಬಂಧಪಟ್ಟ ಯಾವ ವಿಧವಾದ ಸುಖದುಃಖಾದಿ ಭೋಗಗಳೂ ನನಗೆ ಆಗುವುದಿಲ್ಲ. ಇದಕ್ಕೇನಾದರೂ ರೋಗದ ಬಾಧೆಯಿದ್ದರೆ, ಮೈಮೇಲೆ ಹುಣ್ಣಾಗಿ ಅದರ ನೋವಿದ್ದರೆ ಆಗ ಅವುಗಳ ಬಾಧೆಯೂ ನನಗೆ ತೋರುವುದೇ ಇಲ್ಲ. ಆಗ ಇದಕ್ಕೆ ಯಾರು ಎಷ್ಟು ನಿಂದೆಮಾಡಿದರೂ ನನಗೆ ತಿಳಿಯುವುದಿಲ್ಲ. ಕಳ್ಳರು ಬಂದು ಕಳ್ಳತನಮಾಡಿಕೊಂಡು ಹೋದರೂ ತಿಳಿಯುವುದಿಲ್ಲ. ಮೈಮೇಲೆ ಹಾವು ಚೇಳು ಮೊದಲಾದ ಜಂತುಗಳು ಹರಿದು ಹೋದರೂ ತಿಳಿಯುವುದಿಲ್ಲ. ಕೆಲವರಿಗಂತೂ ದೇಹವನ್ನೇ ಬೇರೆಕಡೆಗೆ ತೆಗೆದುಕೊಂಡು ಹೋದರೂ ತಿಳಿಯುವುದಿಲ್ಲ. ಸ್ವಲ್ಪವೂ ಅರಿವಿಲ್ಲದೆ ಹೋದಂತೆ ಇರುತ್ತದೆ. ಆ ಸಮಯದಲ್ಲಿ ನನಗೊಂದು ದೇಹವಿದೆ ನಾನು ಮಲಗಿದ್ದೇನೆ ಎನ್ನುವ ಸ್ಮೃತಿಯೇ ಇರುವುದಿಲ್ಲ. ಆಗ ಆ ಶರೀರಸಂಬಂಧದ ಸುಖದುಃಖಗಳೂ ಮಾನಾಪಮಾನಗಳೂ ಶೀತೋಷ್ಣಾದಿಗಳೂ ಏಕೆ ನನಗೆ ಆಗುವುದಿಲ್ಲ? ಇದನ್ನು ಚೆನ್ನಾಗಿ ಅನುಭವದ ಕಣ್ಣಿನಿಂದ ವಿಚಾರಿಸಿ ನೋಡಿದರೆ ತಾನು ಈ ದೇಹದ ಸಂಪೂರ್ಣ ಸಂಬಂಧವಿಲ್ಲದೆ ಇದಕ್ಕೆ ಬೇರೆಯಾಗಿ ಇರುವೆನೆಂಬುದು ಸರ್ವರಿಗೂ ಹೊಳೆಯುವುದು. ಈ ಅನುಭವದಿಂದಲೂ ಈ ದೇಹವೇ ತಾನೆಂಬ ಭಾವನೆಯು ತಪ್ಪಾಗಿರುವದೆಂದೂ ಸ್ಪಷ್ಟವಾಗುತ್ತದೆ.

ಇನ್ನು ಈಗಿನ ಈ ದೇಹವೇ ನಾನೆಂದು ನಾವು ತಿಳಿದಿರುವುದು ತಾತ್ಕಾಲಿಕಗ್ರಹಿಕೆ ಮಾತ್ರವೇ ಹೊರತು ಯಥಾರ್ಥವಲ್ಲವೆಂಬುದನ್ನು ಸ್ವಪ್ನದ ಅನುಭವದಿಂದಲೂ ನಿಶ್ಚಯಿಸಿಕೊಳ್ಳಬಹುದು. ಸ್ವಪ್ನದಲ್ಲಿಯೂ ಈ ದೇಹದಂತೆಯೇ ಅಲ್ಲಿ ಮತ್ತೊಂದು ದೇಹವು ತೋರುತ್ತದೆ. ಆಗ ಅದನ್ನೇ ''ನಾನು'' ಎಂಬುದಾಗಿ ತಿಳಿದುಕೊಂಡಿರುತ್ತೇನೆ. ಈಗ ಈ ದೇಹದ ಮೇಲಿರುವಷ್ಟೇ ಅಭಿಮಾನವು (ಪ್ರೀತಿಯು) ಆಗ ಆ ದೇಹದ ಮೇಲಿರುತ್ತದೆ. ಆಗ ಅದಕ್ಕಾಗುವ ಸುಖದುಃಖಗಳೇ ನನಗಾಗುತ್ತವೆ ಎಂಬುದಾಗಿ ತಿಳಿಯುತ್ತೇನೆ. ಈಗ ಇಲ್ಲಿ ಶ್ರೀಮಂತನಾಗಿದ್ದವನು ಆಗ ಅಲ್ಲಿ ದರಿದ್ರನಾಗಿಯೂ, ಈಗ ಇಲ್ಲಿ ದರಿದ್ರನಾಗಿರುವವನು ಆಗ ಅಲ್ಲಿ ಶ್ರೀಮಂತನಾಗಿಯೂ ತೋರುವುದುಂಟು. ಈಗ ಇಲ್ಲಿ ಹಸಿದವನು ಆಗ ಅಲ್ಲಿ ಹೊಟ್ಟೆತುಂಬ ಊಟಮಾಡಿದಂತೆಯೂ, ಇಲ್ಲಿ

ಉಂಡವನು ಅಲ್ಲಿ ಹಸಿವಿನಿಂದ ಬಳಲುವಂತೆಯೂ ತೋರುವ ಸಂಭವವುಂಟು. ಅತ್ಯಂತ ಪ್ರೀತಿಗೆ ಪಾತ್ರವಾದ ಈ ಎಚ್ಚರದ ದೇಹವು ಕನಸಿನಲ್ಲಿ ಏತಕ್ಕೋ ತೋರುವುದೇ ಇಲ್ಲವಲ್ಲಾ! ವಿಚಾರಮಾಡಿ ನೋಡಿದರೆ ಇದೊಂದು ಆಶ್ಚರ್ಯಕರ ವಾಗಿದೆ! ಕನಸಿನ ಕಾಲಕ್ಕೆ ತೋರದೆ, ಕೇವಲ ಎಚ್ಚರದಲ್ಲಿ ಮಾತ್ರ ತೋರುವ, ಈಗ ಮಾತ್ರ ಪ್ರೀತಿಗೆ ಪಾತ್ರವಾದ ಈ ದೇಹವು ನಾನು ಹೇಗಾಗುತ್ತೇನೆ? ಈಗ ತೋರುವ ಈ ದೇಹವೇ ನಾನಾಗಿದ್ದರೆ ಸ್ವಪ್ನಕಾಲಕ್ಕೆ ಇನ್ನೊಂದು ದೇಹವನ್ನು ನಾನೆಂದು ತಿಳಿದುಕೊಂಡದ್ದೇಕೆ? ಆದುದರಿಂದ ಈಗ ಈ ದೇಹವೇ ನಾನೆಂದು ತಿಳಿದು ಕೊಂಡಿರುವುದು ಸ್ವಪ್ನದಂತೆ ಕೇವಲ ಭ್ರಮೆ ಮಾತ್ರವೇ ಎಂಬುದು ಖಂಡಿತ. ಏತಕ್ಕೆಂದರೆ ಈ ದೇಹವು ನಾಶವಾಗುವುದು ಸಿದ್ಧಾಂತ. ಆದರೆ ನಾನು ಮಾತ್ರ ನಾಶವಾಗುವವನಲ್ಲ. ಈ ಶರೀರವು ಕನಸಿನಲ್ಲಿರುವುದಿಲ್ಲ. ನಾನು ಮಾತ್ರ ಕನಸಿನಲ್ಲಿ ಈ ದೇಹವನ್ನು ಬಿಟ್ಟಿರುತ್ತೇನೆ. ಈ ಎಲ್ಲಾ ವಿಚಾರಗಳಿಂದ ಈ ಶರೀರವು ನಾನಲ್ಲವೆಂದೂ, ಇದು ಇಲ್ಲವೇ ಇಲ್ಲವೆಂದೂ ಸಿದ್ಧವಾಗುತ್ತದೆ. ಇದರಿಂದೇನಾ ಯಿತೆಂದರೆ, ಈ ಶರೀರವೇ ನಾನಲ್ಲವೆಂದಮೇಲೆ ಇದು ತೋರುವುದು ಕೂಡಾ ಕನಸಿನಂತೆ ಸುಳ್ಳಾಯಿತು. ಶರೀರವೇ ಸುಳ್ಳೆಂದಮೇಲೆ ಇಂತಹ ಸುಳ್ಳಾದ ದೇಹದಿಂದಲೇ ತೋರುತ್ತಿರುವ ಸಂಸಾರವಾಗಲೀ ಜಗತ್ತಾಗಲೀ ಹೇಗೆ ಸತ್ಯವಾಗುತ್ತದೆ? ಎಂದರೆ ಈ ಸಮಸ್ತ ಜಗತ್ತೂ ಸ್ವಪ್ನದ ಜಗತ್ತಿನಂತೆ ಇಲ್ಲದ್ದೆಂದೇ ಸಿದ್ಧಾಂತವಾಯಿತು.

ದೇಹವು ಜಡವಾಗಿಯೂ ಇದರಲ್ಲಿರುವ ಜೀವನು ಚೈತನ್ಯನಾಗಿಯೂ ಇರುವುದು ಲೋಕದಲ್ಲಿ ಎಲ್ಲರ ಅನುಭವದಲ್ಲಿಯೂ ಇದೆ. ''ಈ ದೇಹವು ನಾನಲ್ಲ'' ಎಂದು ನಾವು ವಿಚಾರದಿಂದ ನಿಶ್ಚಯಿಸಿದರೆ ಈಗ ಇದನ್ನರಿಯುವ, ಇದರಲ್ಲಿರುವ, ಇದರ ಸಂಬಂಧವುಳ್ಳ **''ನಾನು''** ಎಂದೆನಿಸುವ ಸುಖದುಃಖಗಳನ್ನನುಭವಿಸುವ ಸ್ವರೂಪವಾಗಿರುವ **''ಜೀವತ್ವವೇ''** ನಮ್ಮ ಸ್ವರೂಪವೆಂದು ಏತಕ್ಕೆ ತಿಳಿದುಕೊಳ್ಳ ಬಾರದು? ಎಂಬ ಪ್ರಶ್ನೆ ಬರಲಾಗಿ ಈಗ ಈ ಜೀವತ್ವದ ವಿಷಯವಾಗಿಯೂ ಚೆನ್ನಾಗಿ ವಿಚಾರಿಸಬೇಕಾಗಿದೆ. ನಮ್ಮ ವಿಚಾರವು ಸಂಪೂರ್ಣವಾಗುವವರೆಗೂ ನಾವೂ ಮಧ್ಯದಲ್ಲಿಯೇ ಯಾವ ಕಾರಣದಿಂದಲೂ ನಿಲ್ಲಬಾರದು. ಬಾವಿ ತೋಡುವುದಕ್ಕೆ ಆರಂಭಿಸಿದ ಮೇಲೆ ನೀರು ಸಿಕ್ಕುವವರೆಗೂ ಬಿಡದೆ ಒಂದೇ ಸಮನೆ ಅಗೆಯುವುದೇ ಹೇಗೆ ಮುಖ್ಯವೋ, ಹಾಗೆ ವಿಚಾರವು ಪರಿಪೂರ್ಣವಾಗಿ ನಮ್ಮ ಗುರಿಯಾದ ಆತ್ಮ ಪ್ರಾಪ್ತಿಯಾಗುವವರೆಗೂ ನಿಲ್ಲದೆ ವಿಚಾರವನ್ನು ಮುಂದುವರಿಸಲೇಬೇಕು. ಆದುದರಿಂದ ಈಗ ''ಜೀವತ್ವ'' ದ ವಿಷಯವಾಗಿ ವಿಚಾರಮಾಡೋಣ.

## 9. ಜೀವನು ತಾನಲ್ಲ, ಜೀವತ್ವವು ಮಿಥ್ಯೆ

ಅಧಿಷ್ಠಾನಂ ಚಿದಾಭಾಸೋ ಬುದ್ಧಿರೇತತ್ತ್ರಯಂ ಯದಾ ।
ಅಜ್ಞಾನಾದೇಕವದ್ಭಾತಿ ಜೀವ ಇತ್ಯುಚ್ಯತೇ ತದಾ ॥

ಜೀವನ ಸ್ವರೂಪವು ಎಂತಹದೆಂದರೆ, ದೇಹೇಂದ್ರಿಯ ಪ್ರಾಣ ಮನ ಬುದ್ಧಿಗಳಿಗೆ, ಇದರಂತೆಯೇ ಎಚ್ಚರ ಕನಸು ನಿದ್ರೆಗಳಿಗೆ ಮತ್ತು ತೋರುವ ಸಮಸ್ತ ಪ್ರಪಂಚಕ್ಕೆ ಆಧಾರವಾಗಿರುವ ಆತ್ಮಚೈತನ್ಯ, ಅಂತಃಕರಣ, ಇದರಲ್ಲಿ ಬಿದ್ದ ಆತ್ಮನ ಪ್ರತಿಬಿಂಬ – ಈ ಮೂರು ಅಜ್ಞಾನದಿಂದ ಒಂದಾಗಿ ಯಾವಾಗ ತೋರುವುದೋ ಆಗ ಅದಕ್ಕೆ ಜೀವನೆನ್ನುತ್ತಾರೆ.

ಜೀವನಿಗೇ ಪ್ರಮಾತೃವೆಂದೂ, ನಾನು ಎಂದೂ, ಚಿದಾಭಾಸನೆಂದೂ ಅಹಂಕಾರವೆಂದೂ ಶಾಸ್ತ್ರಗಳಲ್ಲಿ ಹೇಳುತ್ತಾರೆ. ಚಿದಾಭಾಸನೆಂದರೆ ಚೈತನ್ಯದಂತೆ ಕಾಣಿಸುತ್ತದೆ. ಆದರೆ ಅದು ಚೈತನ್ಯವಲ್ಲ. ಹೇಗೆಂದರೆ ಕನ್ನಡಿಯಲ್ಲಿ ತೋರುವ ತನ್ನ ಪ್ರತಿಬಿಂಬದಂತೆ ಅಂತಃಕರಣದಲ್ಲಿ ಬಿದ್ದ ತನ್ನ (ಆತ್ಮನ) ಪ್ರತಿಬಿಂಬವೇ ನಾನು ನಾನೆಂದು ಅನ್ನಿಸುವುದು. ಹೇಗೆ ಕನ್ನಡಿಯಲ್ಲಿ ಬಿದ್ದ ತನ್ನ ಪ್ರತಿಬಿಂಬವು ತನ್ನಂತೆಯೇ ತೋರಿದರೂ ಸಹ ಅದು ತಾನಾಗುವುದಿಲ್ಲವೋ, ಹಾಗೆ ಅಂತಃಕರಣರೂಪಿ ಕನ್ನಡಿಯಲ್ಲಿ ಬಿದ್ದ ಆತ್ಮನ (ತನ್ನ) ಪ್ರತಿಬಿಂಬವಾದ ಈ ನಾನು ನಾನೆನ್ನಿಸದು. ತನ್ನಂತೆಯೇ ತೋರಿದರೂ ಸಹ ಇದು ತಾನಲ್ಲ. ಇದು ಸುಳ್ಳು ನಾನು. ಇದು ತನ್ನ ನೆರಳು. ತನ್ನ ನೆರಳು ತಾನೆಂದಾದರೂ ಆಗಬಹುದೇ ? ಏತಕ್ಕೆಂದರೆ ಇದೇ ತಾನಾಗಿದ್ದರೆ ಇದು ಯಾವಾಗಲೂ ಇರಬೇಕಾಗಿತ್ತು. ಆದರೆ ಈ ನಾನೆನಿಸುವುದು ಎಚ್ಚರದಲ್ಲೊಂದು ತರವಾಗಿ ತೋರುತ್ತದೆ ; ಕನಸಿನಲ್ಲಿ ಮತ್ತೊಂದು ತರವಾಗಿ ತೋರುತ್ತದೆ ; ಗಾಢನಿದ್ರೆಯಲ್ಲಂತೂ ಸಂಪೂರ್ಣವಾಗಿ ತೋರುವುದೇ ಇಲ್ಲ. ಆದುದರಿಂದ ನಾನು ನಾನೆಂದು ಅನ್ನಿಸುವ ಜೀವನು ತಾನಲ್ಲ; ಇದು ಮಿಥ್ಯೆಯಾದದ್ದು.

ಹೇಗೆ ಕನ್ನಡಿಯಲ್ಲಿ ತೋರುವ ಮುಖವು ಅದಕ್ಕೆ ಆಧಾರವಾದ ಬಿಂಬವಾದ ತನ್ನನ್ನು ಬಿಟ್ಟು ಇರಲಾರದೋ, ಅದು ಸ್ವತಂತ್ರವಾಗಿ ಇಲ್ಲವೇ ಇಲ್ಲವೋ, ಬರಿಯ ತೋರಿಕೆಯಮಾತ್ರವೋ, ಹಾಗೆ ಅಂತಃಕರಣದಲ್ಲಿ ತೋರುವ ಈ ನಾನು (ಜೀವ) ಇದಕ್ಕೆ ಆಧಾರವಾದ ಬಿಂಬಭೂತವಾದ ತನ್ನನ್ನು (ಆತ್ಮನನ್ನು) ಬಿಟ್ಟು ಇರಲಾರದು ; ಇದು ಸ್ವತಂತ್ರವಾಗಿ ಇಲ್ಲವೇ ಇಲ್ಲ ; ಇದು ಬರಿಯ ಅನ್ನಿಸುವಿಕೆ (ಆಭಾಸ) ಮಾತ್ರ. ಕನ್ನಡಿಯಲ್ಲಿಯ ಮುಖವು ಎಲ್ಲಿದೆ ? ಹೇಗಿದೆ ಎಂಬುದಾಗಿ ವಿಚಾರಮಾಡಿ ನೋಡಿದರೆ

ಹೇಗೆ ಅದು ಇಲ್ಲವೇ ಇಲ್ಲವೋ, ಹಾಗೆ **"ಮೀ ಕೋಣ ಐಸಾ ಹೇತ। ಧರೂನ ಪಾಹಾತ ದೇಹಾತೀತ। ಅವಲೋಕಿತಾ ನೇಮಸ್ತ। ಸ್ವರೂಪ ಚಿ ಹೋಯೇ"** (ದಾ. 5–6–21) ಈ ನಾನು ಎಲ್ಲಿದೆ ? ಹೇಗಿದೆ ? ನಾನು ಯಾರು ? ಎಂಬುದಾಗಿ ವಿಚಾರಮಾಡಿ ಇದರ ಸ್ವರೂಪವನ್ನು ನೋಡಿದರೆ, ಆಗ ಇದು ಆತ್ಮನಲ್ಲಿ ಒಂದಾಗುತ್ತದೆ; ಆತ್ಮನೇ ಆಗಿಬಿಡುತ್ತದೆ ; ಇದು ಬೇರೆಯಾಗಿ ಉಳಿಯುವುದೇ ಇಲ್ಲ ; ಇದಕ್ಕೆ ಅಸ್ತಿತ್ವವೇ ಇಲ್ಲದಂತಾಗುತ್ತದೆ – ಎಂದಮೇಲೆ ಜೀವನು ನಿಜವಾಗಿ ಎಲ್ಲಿದ್ದಾನೆ?

ಹೇಗೆ ತನಗೆ ತೋರುವ ವಸ್ತುವು ತನಗಿಂತ ಭಿನ್ನವಾಗಿರುವುದರಿಂದಲೂ ತನಗೆ ದೃಶ್ಯವಾಗಿರುವುದರಿಂದಲೂ ಅದು ತಾನಾಗುವುದಿಲ್ಲವೋ, ಹಾಗೆ ಈ ನಾನು (ಜೀವತ್ವ) ಎನ್ನುವುದನ್ನೂ ಸಹ ತಾನು ಅರಿಯುತ್ತೇನೆ. ಹೇಗೆಂದರೆ ನಾನು ಎಂದು ಉಚ್ಚಾರಮಾಡುವಾಗ, ನಾನು ಇಂತಹವನು ಎಂದು ಹೇಳುವಾಗ ತಿಳಿದು ಹೇಳುತ್ತೇನೆಯೋ? ತಿಳಿಯದೆ ಹೇಳುತ್ತೇನೆಯೋ ? ಎಂದರೆ ತಿಳಿದೇ ಹೇಳುತ್ತೇನೆ. ಅದು ತಿಳಿದ ಮೇಲೆ ತನಗೆ ದೃಶ್ಯವಾಯಿತು. ತನಗಿಂತಲೂ ಬೇರೆಯಾಯಿತು . ಎಂದಮೇಲೆ ತನಗೆ ತಿಳಿಯುವ, ತನಗೆ ದೃಶ್ಯವಾದ "ನಾನು" ತಾನು ಹೇಗಾಗುತ್ತದೆ ? 'ಇದು ನನಗೆ ತಿಳಿಯಿತು', 'ಇದು ನನಗೆ ತಿಳಿಯಲಿಲ್ಲ' ಎಂಬುದಾಗಿ ಹೇಳುವಾಗ ಈ ತಿಳಿಯಿತು ತಿಳಿಯಲಿಲ್ಲ ಎನ್ನುವ ಇವೆರಡನ್ನೂ ತಿಳಿದು ಹೇಳುತ್ತೇನೆಯೋ ತಿಳಿಯದೆ ಹೇಳುತ್ತೇನೆಯೋ ? ಎಂದರೆ ತಿಳಿದೇ ಹೇಳುತ್ತೇನೆ. ಎಂದಮೇಲೆ ತಿಳಿಯಿತು ತಿಳಿಯಲಿಲ್ಲ ಎಂದು ಅನ್ನಿಸುವ ಈ "ನಾನು' ತಾನು ಹೇಗಾಗುತ್ತದೆ ? ಈ ತಿಳಿಯಿತು ತಿಳಿಯಲಿಲ್ಲ ಎನ್ನುವ ಇವೆರಡನ್ನೂ ಯಾವುದು ತಿಳಿಯುತ್ತದೆಯೋ ಆ ಸ್ವರೂಪದಲ್ಲಿ (ಆತ್ಮನಲ್ಲಿ ಅಥವಾ ತನ್ನಲ್ಲಿ) ಈ "ನಾನು" ಇದೆಯೋ ? ಎಂದರೆ ಅಲ್ಲಿ ಇದು ಇಲ್ಲವೇ ಇಲ್ಲ. ನಾವು ಯಾವಾಗಲೂ ಹೊರಗಡೆಯೇ ನಮಗಿಂತಲೂ ಭಿನ್ನವಾದ ವಸ್ತುಗಳನ್ನೇ ನೋಡುತ್ತೇವೇ ಹೊರತು, ಇವುಗಳನ್ನು ನೋಡುವ ತನ್ನನ್ನು ಒಳಗಡೆ ತಿರುಗಿ ನೋಡುವುದೇ ಇಲ್ಲ. ತನ್ನೊಳಗೆ ತನ್ನನ್ನು ನೋಡುವುದೆಂದರೆ ಬಹಳ ಜನರಿಗೆ ಅರ್ಥವೇ ಆಗುವುದಿಲ್ಲ. ಇದು ಗೊತ್ತೇ ಇಲ್ಲ. ಈಗ ಸ್ವಲ್ಪ ಹೊರಗಡೆ ನೋಡುವುದನ್ನು ನಿಲ್ಲಿಸಿ, ಹಿಂತಿರುಗಿ ಇವುಗಳನ್ನೆಲ್ಲಾ ನೋಡುವಂತಹ ತನ್ನನ್ನು ನೋಡಲು ಪ್ರಯತ್ನಮಾಡಬೇಕು. ಹೇಗೆ ಬಟ್ಟೆಯಲ್ಲಿರುವ ನೂಲನ್ನು ನೋಡಿದಾಗ ನೂಲಿಗಿಂತ ಬಟ್ಟೆಯು ಬೇರೆಯಾಗಿ ಉಳಿಯುವುದಿಲ್ಲವೋ , ಹಾಗೆ ಈ ನಾನಿನ (ಅನ್ನಿಸುವಿಕೆಯ ಅಥವಾ ಸ್ಫೂರ್ತಿಯ) ಹಿಂದಕ್ಕೆ ಹೋಗಿ ಇದನ್ನು ಅರಿಯುವ ಬರಿ ಅರಿವಿನಲ್ಲಿ(ಆತ್ಮನಲ್ಲಿ) ನಿಂತು ನೋಡಿದರೆ ಆಗ ಈ ನಾನು ತೋರುವುದೇ ಇಲ್ಲ. ಇದು ಇಲ್ಲವಾಗಿಬಿಡುತ್ತದೆ. ಇದು ಬರಿಯ ಮಾತಲ್ಲ ; ಅನುಭವ. ಈ ದೃಷ್ಟಿಯಿಂದ

ನೋಡಿದರೆ ಇದು ಸರ್ವರಿಗೂ ಅನುಭವಕ್ಕೆ ಬರುತ್ತದೆ ಎಂದಮೇಲೆ ಈ ನಾನು ತಾನು ಹೇಗಾಗುತ್ತದೆ ? ಇಲ್ಲವೇ ಇಲ್ಲ.

ನಾಟಕದಲ್ಲಿ ನಟನು ಹೇಗೆ ಅನೇಕವಿಧವಾದ ಬೇರೆಬೇರೆಯ ಪಾತ್ರಗಳನ್ನು ಧರಿಸುತ್ತಾನೆಯೋ, ಹಾಗೆ ಈ ನಾನು ಅನ್ನಿಸುವುದು ಈ ಭವರಂಗದಲ್ಲಿ ಅನೇಕ ವಿಧವಾದ ಪಾತ್ರಗಳನ್ನು ಧರಿಸುತ್ತದೆ. ಇದು ಪಾತ್ರಗಳನ್ನು ಬಿಟ್ಟು ಇರುವುದೇ ಇಲ್ಲ. ಹಾಗೆ ಇರಲು ಇದಕ್ಕೆ ಸಾಧ್ಯವೇ ಇಲ್ಲ. ಇದು ಒಂದು ಸಲ ನಾನು ಸುಖಿ ಎನ್ನುತ್ತದೆ, ಮತ್ತೊಂದು ಸಲ ನಾನು ದುಃಖಿ ಎನ್ನುತ್ತದೆ. ಒಂದು ಸಲ ನಾನು ಪುಣ್ಯಾತ್ಮನೆನ್ನುತ್ತದೆ. ಮತ್ತೊಂದು ಸಲ ನಾನು ಪಾಪಿಷ್ಟನೆನ್ನುತ್ತದೆ. ಒಂದು ಸಲ ನಾನು ವಿವೇಕಿ ಎನ್ನುತ್ತದೆ. ಮತ್ತೊಂದು ಸಲ ನಾನು ಅವಿವೇಕಿ ಎನ್ನುತ್ತದೆ. ಒಂದು ಸಲ ನಾನು ಕೋಪಿಷ್ಠನೆನ್ನುತ್ತದೆ. ಮತ್ತೊಂದು ಸಲ ನಾನು ಶಾಂತನೆನ್ನುತ್ತದೆ. ಒಂದು ಸಲ ನಾನು ಜ್ಞಾನಿ ಎನ್ನುತ್ತದೆ. ಮತ್ತೊಂದು ಸಲ ನಾನು ಅಜ್ಞಾನಿ ಎನ್ನುತ್ತದೆ. ಒಂದು ಸಲ ನಾನು ಶ್ರೀಮಂತನೆನ್ನುತ್ತದೆ. ಮತ್ತೊಂದು ಸಲ ನಾನು ದರಿದ್ರನೆನ್ನುತ್ತದೆ. ಒಂದು ಸಲ ನಾನು ಕಾಮುಕನೆನ್ನುತ್ತದೆ. ಮತ್ತೊಂದು ಸಲ ನಾನು ನಿಷ್ಕಾಮನೆನ್ನುತ್ತದೆ. ಒಂದು ಸಲ ನಾನು ಮಾಡುವವನು (ಕರ್ತ) ಎನ್ನುತ್ತದೆ. ಮತ್ತೊಂದು ಸಲ ನಾನು ಮಾಡುವವನಲ್ಲ (ಅಕರ್ತ) ಎನ್ನುತ್ತದೆ. ಹೀಗೆಯೇ ಇದು ಒಂದು ದಿನದಲ್ಲಿ ಏಕೆ ಒಂದು ಘಂಟೆಯಲ್ಲಿ ಇನ್ನೂ ಎಷ್ಟೋ ವಿಧದ ಪಾತ್ರಗಳನ್ನು ಧರಿಸುತ್ತದೆ. ಹೀಗೆ ಘಳಿಗೆಗೊಂದು ಸಲ ಬೇರೆ ಬೇರೆಯಾಗಿ ತೋರುವ ಈ ''ನಾನು'' ''ತಾನು'' ಹೇಗಾಗುತ್ತದೆ ? ಹೀಗೆ ಬೇರೆಬೇರೆಯಾಗಿ ತೋರುವ ಈ ನಾನನ್ನೂ ಸಹ ತಾನು ಅರಿಯುವುದಿಲ್ಲವೆ ? ಇವೆಲ್ಲವನ್ನೂ ಅರಿಯುವಂತಹ ತನ್ನಲ್ಲಿ ನಾನು ಅನ್ನಿಸುವುದು (ಅಹಂಸ್ಫೂರ್ತಿಯು) ಇದೆಯೆ ? ಇಲ್ಲವೇ ಇಲ್ಲ. ಸಮುದ್ರದಲ್ಲಿ ತರಂಗಗಳು ಒಂದಾದ ಮೇಲೊಂದು ಬರುವವು. ಆದರೆ ಈ ತರಂಗಗಳು ಸಮುದ್ರವಾಗುವುದಿಲ್ಲ. ಆ ತರಂಗಗಳಿಗೆ ಆಧಾರವಾಗಿ, ಅದರಂತೆ ಬಾರದೆ ಹೋಗದೆ ಇರುವುದೇ ಸಮುದ್ರವು. ಇದು ಹೇಗೋ, ಹಾಗೆ ಸಚ್ಚಿದಾನಂದ ಸಮುದ್ರನಾದ ತನ್ನಲ್ಲಿ ಅಲೆಗಳಂತೆ ಈ ನಾನು ಘಳಿಗೆಗೊಂದುಸಲ, ಘಳಿಗೆಗೊಂದು ತೆರನಾಗಿ ಬಂದು ಹೋಗುತ್ತದೆ. ಹೇಗೆ ತರಂಗಗಳು ಸಮುದ್ರವಾಗುವುದಿಲ್ಲವೋ, ಹಾಗೆ ಈ ನಾನು ನಾನೆನಿಸುವುದು ತಾನಲ್ಲ. ಹೇಗೆ ಆ ತರಂಗಗಳಿಗೆ ಆಧಾರವಾಗಿ, ಬಾರದೆ ಹೋಗದೆ ಇರುವುದೇ ಸಮುದ್ರವೋ, ಹಾಗೆ ಅನೇಕ ವಿಧವಾಗಿ ಬರುತ್ತಿರುವ ಈ ನಾನಿಗೆ ಆಧಾರವಾಗಿ ಬದಲಾಣೆಯಾಗದೆ, ಬಾರದೆ, ಹೋಗದೆ, ತೋರದೆ, ಅಡಗದೆ, ಇದಕ್ಕೆಲ್ಲಾ ಆಧಾರವಾಗಿ ಯಾವುದಿದೆಯೋ ಅದೇ ತಾನು. ಈ ನಾನನ್ನು ಯಾವುದು

ಅರಿಯುತ್ತಿದೆಯೋ ಯಾವುದನ್ನು ಈ ನಾನು ಅರಿಯಲಾರದೋ ಅದೇ ತಾನು. ಅಂತಹ ತನ್ನಲ್ಲಿ (ಆತ್ಮನಲ್ಲಿ) ನಾನು ಎನ್ನಿಸುವ ಸ್ಫೂರ್ತಿಯೂ ಇಲ್ಲವೇ ಇಲ್ಲ. ಈ ಎಲ್ಲಾ ಕಾರಣಗಳಿಂದ ಜೀವನು ತಾನಲ್ಲ, ಜೀವತ್ವವು ಮಿಥ್ಯೆ.

ಇದುವರೆಗೂ ವಿವರಿಸಿರುವುದರಲ್ಲಿ ''ನಾನು'' ಎಂಬ ಅನ್ನಿಸುವಿಕೆಯು ತನಗೆ ದೃಶ್ಯವಾಗಿರುವುದು. ಆದುದರಿಂದ ಅದು ತಾನಲ್ಲ ಎಂಬುದನ್ನು ತಿಳಿಸಿದ್ದಾಗಿದೆ. ಈಗ ಇದನ್ನರಿಯುವ ''ತಾನು'' ಎಂಬ ಸ್ವರೂಪ ಒಂದು, ''ನಾನು'' ಎಂಬುದು ಇನ್ನೊಂದು. ಹೀಗೆ ಎರಡಾಯಿತಲ್ಲಾ? ತನಗಿಂತಲೂ ಭಿನ್ನವಾದ ಮತ್ತೊಂದಿದೆಯಲ್ಲಾ? ಒಂದೇ ಆಗಿರುವ (ಏಕಮೇವಾದ್ವಿತೀಯಮ್) ಆತ್ಮನನ್ನೇ ಎಂದರೆ ತನ್ನನ್ನೇ ''ನಾನು'' ಎಂಬುದಾಗಿ ಅಜ್ಞಾನದಿಂದ ಬೇರೆಯಾಗಿ ನೋಡುವುದೇ ''ಜೀವತ್ವ'' ಎಂದೆನಿಸುತ್ತದೆ. ಹೇಗೆ ಒಂದು ನೀರನ್ನೇ ಸಮುದ್ರವೆಂದೂ ಅಲೆ ಎಂದೂ ಬೇರೆಯಾಗಿ ತಿಳಿಯುತ್ತೇವೆಯೋ, ಹಾಗೆ ಅಖಂಡವಾಗಿ ಪರಿಪೂರ್ಣನಾಗಿರುವ ತನ್ನನ್ನೇ (ಆತ್ಮನನ್ನೇ) ''ನಾನು'' ಎಂಬುದಾಗಿ ವ್ಯವಹರಿಸುತ್ತಿದ್ದೇವೆ.

**ಋಷಿಯೆ ಕೇಳವಿಕಾರಿಯಾತ್ಮನು ; ।**
**ಘಸಣೆಯವಗಿನ್ನಿಲ್ಲ; ಜೀವನು ।**
**ಹುಸಿಯೆನಿಪನದರಿಂದಲವಗದು ಮುನ್ನಲೇ ಇಲ್ಲ ; ।**
**ಎಸೆವಹಂಕೃತಿ ಘಟದವೋಲು ಜಡ ।**
**ವುಸರಬಾರದದಕ್ಕೆ ಕಷ್ಟವ ;**
**ವಿಷಮವಹ ಸಂಸಾರವಿದರೊಳಗಾರಿಗಹುದೆಂದ ? ॥ (ಅ.)**

ವಿಚಾರಮಾಡಿನೋಡಿದರೆ ಆತ್ಮಚೈತನ್ಯವು ಕೂಟಸ್ಥವು. ಎಂದರೆ ನಿರ್ವಿಕಾರವು, ನಿಷ್ಕ್ರಿಯವು, ಪರಿಪೂರ್ಣವು ಆಗಿರುತ್ತದೆ. ಆದುದರಿಂದ ಆತ್ಮಕ್ಕೆ ಯಾವ ವಿಧವಾದ ಸಂಸಾರತಾಪಗಳೂ ಇರುವುದಿಲ್ಲ. ಇನ್ನು ಜೀವನೆಂದರೆ ತನ್ನ ಪ್ರತಿಬಿಂಬ ಎಂದರೆ ತನ್ನ ನೆರಳಿದ್ದಂತೆ. ಇದು ಸತ್ಯವಾಗಿ ಸ್ವತಂತ್ರವಾಗಿ ಇದ್ದದ್ದಲ್ಲ. ಆದುದರಿಂದ ಜೀವನು ಸುಳ್ಳು. ಸುಳ್ಳಾದ ಜೀವನಿಗೆ ಸಂಸಾರವೆಲ್ಲಿದೆ ? ಇಲ್ಲವೇ ಇಲ್ಲ. ಇದೆ ಎಂದರೆ ತಪ್ಪು. ಇನ್ನು ಇದಕ್ಕೆ ಕಾರಣವಾದ ಅಂತಃಕರಣಕ್ಕಾದರೂ ಈ ಸಂಸಾರವಿದೆ ಎಂದರೆ, ಅದು ವಿಕಾರವುಳ್ಳದ್ದು ಮತ್ತು ಚೈತನ್ಯವಲ್ಲ. ಮಣ್ಣಿನಂತೆ ಜಡವಾದದ್ದು. ಜಡಕ್ಕೆ ಸುಖ ದುಃಖಗಳೆಲ್ಲಿಯಾದರೂ ಆಗುವುದು ಸಂಭವವೇ ? ಆದ್ದರಿಂದ ಅದಕ್ಕೂ

ಸಂಸಾರವಿಲ್ಲ. ಹಾಗಾದರೆ ಈ ಸಂಸಾರವು ಯಾರಿಗಿದೆ ? ಎಂದರೆ ಯಾರಿಗೂ ಇರುವುದಿಲ್ಲ. ಇದೆಲ್ಲವೂ ಕೇವಲ ಭ್ರಮೆಮಾತ್ರವೇ ಸರಿ.

**ಭ್ರಮೇಣಾಹಂ ಭ್ರಮೇಣ ತ್ವಂ। ಭ್ರಮೇಣೋಪಾಸಕಾ ಜನಾಃ।**
**ಭ್ರಮೇಣೇಶ್ವರಭಾವತ್ವಂ । ಭ್ರಮಮೂಲಮಿದಂ ಜಗತ್ ॥**

ನಾನು ಅನಿಸುವುದು ಭ್ರಮೆ ; ನೀನು ಅನಿಸುವುದು ಭ್ರಮೆ. ಭ್ರಮೆರೂಪವಾದ ನಾನು ಎನಿಸುವುದರ ಮೂಲಕ ಮಾಡುವ ಉಪಾಸನೆಗಳೂ, ಇದರಿಂದ ಉತ್ಪನ್ನವಾದ ಈಶ್ವರಭಾವನೆಯೂ ಜೀವಭಾವನೆಯೂ ಭ್ರಮೆಯೇ ಸರಿ. ಜಗತ್ತೊಂದು ಇದೆ ಎನಿಸುವುದೂ ಇದರಲ್ಲಿ ಅನೇಕ ಜೀವರಿದ್ದಾರೆ ಎಂದೆನಿಸುವುದೂ ಭ್ರಮೆಯೇ ಸರಿ. ಈ ಸಮಸ್ತ ಜಗತ್ತೂ ಭ್ರಮೆಯಿಂದಲೇ ತೋರುತ್ತಿದೆ. ಈ ಸಂಸಾರವೂ, ಸುಖದುಃಖಗಳೂ, ಹುಟ್ಟುಸಾವುಗಳೂ, ಸ್ತ್ರೀಪುರುಷ ಭಾವನೆಗಳೂ, ಪಾಪಪುಣ್ಯ ಬಡತನ ಸಿರಿತನಗಳೂ, ಮಾನಾಪಮಾನಗಳೂ ಮತ್ತು ಇನ್ನೂ ಏನೇನಿದೆಯೋ ಅದೆಲ್ಲವೂ ಭ್ರಮೆಯೇ ಸರಿ.

**ಮೀ ಲಟಿಕಾ ಮಾಝೀ ಬೋಲಣೇ ಲಟಿಕೇ। ಮೀ ಲಟಿಕಾ ಮಾಝೀ ಚಾಲಣೇ ಲಟಿಕೆ। ಮೀ ಮಾಝೀ ಅವಘೇ ಚಿ ಲಟಿಕೇ। ಕಲ್ಪನಿಕ ॥**

(ದಾ. 9–2–37)

ನಾನು ಎಂದು ಅನ್ನಿಸುವುದು ಸುಳ್ಳು ; ನಾನು ಹೇಳುವುದು ಸುಳ್ಳು ; ನಾನು ಕೇಳುವುದು ಸುಳ್ಳು ; ನಾನು ನಡೆಯುವುದು ಸುಳ್ಳು ; ನಾನು ನನ್ನದು ಎಂದು ಅನ್ನಿಸುವುದೆಲ್ಲಾ ಸುಳ್ಳು. ಸುಳ್ಳೇ ಆಗಿದೆ. ಎಲ್ಲವೂ ಸುಳ್ಳಿನ ಕಂತೆಯಾಗಿದೆ. ಎಲ್ಲಾ ಕೇವಲ ಕಲ್ಪನಾಮಾತ್ರವೇ ಹೊರತು ಸತ್ಯವಾಗಿ ಇಲ್ಲವೇ ಇಲ್ಲವೆಂದು ಸದ್ಗುರು ಸಮರ್ಥರು ಹೇಳುತ್ತಾರೆ.

**ಯೇಕ ಪರಬ್ರಹ್ಮ ಸಂಚಲೇ। ಕದಾಪೀ ನಾಹೀ ವಿಕಾರಲೇ।**
**ತ್ಯಾವೇಗಳೇ ಭಾಸಲೇ। ತೇ ಭ್ರಮರೂಪ ॥** (ದಾ. 10–6–9)

ಪರಮಾತ್ಮಸ್ವರೂಪ ಒಂದೇ ಎಲ್ಲಾ ಕಡೆಯಲ್ಲೂ ತುಂಬಿದೆ. ಅದು ಎಂದೂ ವಿಕಾರವಾಗಲಿಲ್ಲ ; ಬದಲಾಗಲಿಲ್ಲ; ಅದಕ್ಕಿಂತಲೂ ಬೇರೆಯಾಗಿ ತೋರುವುದೆಲ್ಲಾ ಭ್ರಮೆಯೇ ಸರಿ. "ಮನೋರಾಜ್ಯಾದ್ವಿಶೇಷಃ ಕಃ ಕ್ಷಣಧ್ವಂಸಿನಿ ಲೌಕಿಕೇ" (ಪಂ.) ಒಂದು ಕ್ಷಣಕ್ಕೆ ತೋರಿ ಮತ್ತೊಂದು ಕ್ಷಣಕ್ಕೆ ಅಡಗುತ್ತಿರುವ ಜಗತ್ತು, ಸಂಸಾರವು, ವಿಷಯಗಳು ಮೊದಲಾದ ಸಮಸ್ತವೂ ಮನೋರಾಜ್ಯಕ್ಕಿಂತಲೂ ಹೆಚ್ಚಿಗೆ ಏನಿದೆ ? ಇದೆಲ್ಲವೂ ಹೇಗಿದೆ ಎಂದರೆ –

ಕೇಳು ಬಂಜೆಗೆ ಮಕ್ಕಳಿಪ್ಪ ।
ತ್ತೇಳು ಮಂದಿಗಳೆಂದು ತಿಳಿಯಲು ।
ಕಾಳಲಾ ಸಂಸಾರವಕಟಾ । ಗಗನಲತೆಯಲ್ಲಿ ॥
ಹೇಳಲರಿಯದ ಕುಸುಮದಂದದಿ ।
ಲೀಲೆ ದಿಟವಿದು ; ಶಶವಿಷಾಣದ ।
ವೋಲು ಭಾವಿಸೆ ಮಿಥ್ಯೆ ; ವಾದಿಗಭೇದ್ಯವಹುದೆಂದ ॥ (ಅ.)

ಬಂಜೆಗೆ ಇಪ್ಪತ್ತೇಳು ಜನ ಮಕ್ಕಳಿದ್ದರು ; ಅವರು ಬಹಳ ಚತುರರು; ಅವರಿಗೆ ಮಕ್ಕಳು ಮೊಮ್ಮಕ್ಕಳುಗಳಾದರು ; ಅವರೆಲ್ಲಾ ಸುಖದಿಂದಿದ್ದಾರೆ. ಎಂಬುದಾಗಿ ಹೇಳಿದರೆ ಅದು ಎಷ್ಟು ಅಸಂಭವವೋ ಹಾಗೆ, ನಾನು ದೇಹವಾಗಿದ್ದೇನೆ, ನಾನು ಜೀವನಾಗಿದ್ದೇನೆ, ಜಗತ್ತಿದೆ, ಸಂಸಾರವಿದೆ ಎನ್ನುವುದೂ ಸಹ ಅಷ್ಟೇ ಅಸಂಭವ ; ಎಂದರೆ ಇದಾವುದೂ ಇಲ್ಲವೇ ಇಲ್ಲ. ಇದೆಲ್ಲಾ ಆಕಾಶಪುಷ್ಪದಂತೆಯೂ ಮೊಲದ ಕೊಂಬಿನಂತೆಯೂ ಮಾತು ಮಾತ್ರ.

ಇದುವರೆಗಿನ ವಿಚಾರದಿಂದ ತೋರುವ ಈ ದೇಹವೂ ಮತ್ತು ನಾನು ನಾನೆಂದು ಅನ್ನಿಸುವ ಜೀವತ್ವವೂ ತಾನಲ್ಲ. ಇವೆಲ್ಲವೂ ಮಿಥ್ಯೆಯಾಗಿದೆ ಎಂದರೆ ಕೇವಲ ಹುಸಿತೋರಿಕೆ ಮಾತ್ರ. ತಾನು ಇವೆಲ್ಲಕ್ಕಿಂತಲೂ ಬೇರೆಯಾಗಿದ್ದೇನೆ ಎಂಬುದು ಸಿದ್ಧವಾಯಿತು. ಇನ್ನು ಮುಂದೆ ಇವೆಲ್ಲಕ್ಕಿಂತಲೂ ಬೇರೆಯಾಗಿರುವ ತಾನು ಹೇಗಿದ್ದೇನೆ? ಮತ್ತು ತಾನು ಎಂಬುವುದರ ಸ್ವರೂಪವೇನು? ಎನ್ನುವುದನ್ನು ಸ್ವಲ್ಪ ವಿಚಾರಮಾಡಿ ನೋಡೋಣ.

## 10. ಆತ್ಮಸ್ವರೂಪವೇ ತಾನು.

ತನ್ನ ನಿಜವಾದ ಸ್ವರೂಪವು ಯಾವುದು? ಅದು ಹೇಗಿದೆ ? ಎಂದರೆ ಇದನ್ನು ಸ್ವಲ್ಪದರಲ್ಲಿಯೇ ಸುಲಭವಾಗಿ ಹೇಳಬೇಕೆಂದರೆ ದೇಹಾದಿಗಳಿಗೆಲ್ಲಾ ಆಧಾರವಾಗಿ, ಇವೆಲ್ಲವುಗಳ ವಿಕಾರವನ್ನೂ ನೋಡುತ್ತಾ ಯಾವುದು ತಾನು ಮಾತ್ರ ವಿಕಾರವಾಗದೆ ತನಗೆ ಮತ್ತೊಂದು ಆಧಾರವಿಲ್ಲದೆ, ಮತ್ತೊಂದನ್ನಪೇಕ್ಷಿಸದೆ ತಾನೇ ತಾನಾಗಿದೆಯೋ ಅಂತಹ ಕೇವಲ ಸಾಕ್ಷಿಯೇ ತಾನು. ಶುದ್ಧವಾದ ಬರಿಯ ಅರಿವೇ ತಾನು. ಇದನ್ನು ಈಗ ಅನುಭವಶ್ರುತಿಯುಕ್ತಿಗಳಿಂದ ವಿವರವಾಗಿ ವಿಚಾರಮಾಡಿ ನೋಡೋಣ.

ಯಾವ ರೀತಿಯಲ್ಲಿ ಮನುಷ್ಯನು ಉಡುಪನ್ನೂ (ಡ್ರೆಸ್) ಆಭರಣಗಳನ್ನೂ ಧರಿಸುತ್ತಾನೆಯೋ ಹಾಗೆ, ಆತ್ಮಸ್ವರೂಪನಾದ ನಾನು ಎಚ್ಚರವೆಂಬ ಅವಸ್ಥೆಯಲ್ಲಿ ಈ

ದೇಹವೆಂಬ ಉಡುಪನ್ನೂ ಈ ಇಂದ್ರಿಯ ಮನಸ್ಸು ಬುದ್ಧಿಗಳೆಂಬ ಆಭರಣಗಳನ್ನೂ ಧರಿಸಿರುತ್ತಾನೆ. ಕನಸಿನಲ್ಲಿ ಮತ್ತೊಂದುಬಗೆಯ ದೇಹ ಇಂದ್ರಿಯ ಮನಸ್ಸು ಬುದ್ಧಿಗಳೆಂಬ ಉಡುಪನ್ನೂ ಆಭರಣಗಳನ್ನೂ ಧರಿಸಿರುತ್ತಾನೆ. ಗಾಢನಿದ್ರೆಯಲ್ಲಿ ಇವೆಲ್ಲವನ್ನೂ ತೆಗೆದುಹಾಕಿ ತಾನೇ ತಾನಾಗಿರುತ್ತಾನೆ. ಹೇಗೆ ಉಡುಪನ್ನೂ ಆಭರಣಗಳನ್ನೂ ಧರಿಸುವುದರಿಂದ ಮನುಷ್ಯನ ನಿಜರೂಪವು ಬದಲಾಯಿಸುವುದಿಲ್ಲವೋ ಹಾಗೇ, ದೇಹೇಂದ್ರಿಯಮನೋಬುದ್ಧಿಗಳಿಂದ ಕೂಡಿದಾಗ್ಯೂ ಸಹ ಆತ್ಮನ (ತನ್ನ) ಸ್ವರೂಪವು ಬದಲಾಯಿಸುವುದಿಲ್ಲ. ಹೇಗೆ ಉಡುಪನ್ನೂ ಆಭರಣಗಳನ್ನೂ ಧರಿಸಿರುವುದೇ ಮನುಷ್ಯನ ನಿಜಸ್ವರೂಪವಲ್ಲವೋ ಹಾಗೆ, ದೇಹೇಂದ್ರಿಯಮನೋಬುದ್ಧಿಗಳಿಂದ ಕೂಡಿರುವುದೂ ಸಹ ತನ್ನ ನಿಜಸ್ವರೂಪವಲ್ಲ. ಇವೆಲ್ಲವನ್ನೂ ಬಿಟ್ಟಿರುವುದೇ ತನ್ನ ನಿಜಸ್ವರೂಪವು. ಗಾಢನಿದ್ರೆಯಲ್ಲಿ ಇವುಗಳ್ಯಾವವೂ ಇಲ್ಲದೇ ತಾನೇ ತಾನಾಗಿರುತ್ತಾನೆ.

ಅದರಂತೆ ಇನ್ನೂ ಸ್ವಲ್ಪ ಮುಂದುವರೆದು ವಿಚಾರಮಾಡಿ ನೋಡಿದರೆ ಆಧ್ಯಾತ್ಮಿಕ ಆಧಿದೈವಿಕ ಆಧಿಭೌತಿಕಾದಿಗಳಿಂದ ಕೂಡಿರುವ , ನಾಮರೂಪಾತ್ಮಕವಾದ, ನಾನಾ ವೈಚಿತ್ರ್ಯದ ಸ್ವರೂಪವಾದ ಈ ಪ್ರಪಂಚವನ್ನೊಳಗೊಂಡ ಜಾಗ್ರತ್ (ಎಚ್ಚರ) ಅವಸ್ಥೆಯನ್ನೇ ತಾನು (ಆತ್ಮ) ಒಂದು ಉಡುಪ(ಡ್ರೆಸ್)ನ್ನಾಗಿ ಧರಿಸಿರುತ್ತೇನೆ. ನಂತರ ಜಾಗ್ರದವಸ್ಥೆಯೆಂಬುವ ಈ ಉಡುಪನ್ನು ಲೀಲಾಜಾಲದಿಂದ ತೆಗೆದುಹಾಕಿ ಸ್ವಪ್ನಾವಸ್ಥೆ ಯೆನ್ನುವ ಮತ್ತೊಂದು ಉಡುಪನ್ನು ಧರಿಸುತ್ತೇನೆ. ಕೊನೆಗೆ ಯಾವ ಉಡುಪುಗಳೂ ಬೇಡವೆಂದು ಇದನ್ನೂ ತೆಗೆದುಹಾಕುತ್ತೇನೆ. ಜಾಗ್ರತ್ಸ್ವಪ್ನಗಳೆಂಬುವ ಈ ಎರಡು ಉಡುಪನ್ನೂ ಬಿಟ್ಟು ನಾನೇ ನಾನಾಗಿರುತ್ತೇನೆ. ಅದೇ ನಿದ್ರೆಯು. ಇದನ್ನೇ ಮಾಂಡೂಕ್ಯ ಶ್ರುತಿಯು ಆತ್ಮನಿಗೆ ಈ ಜಾಗ್ರದವಸ್ಥೆ ಮತ್ತು ಸ್ವಪ್ನಾವಸ್ಥೆಗಳು ಉಪಾಧಿಯಾಗಿವೆ. ಈ ಉಪಾಧಿಗಳನ್ನು ನಿದ್ರೆಯಲ್ಲಿ ಬಿಟ್ಟಿರುತ್ತಾನೆಂದು ಹೇಳಿದೆ. ಈ ವಿಚಾರದಿಂದ ಜಾಗ್ರತ್ಸ್ವಪ್ನಾದಿ ಅವಸ್ಥೆಗಳು ತನಗಿಂತ ಭಿನ್ನವಾಗಿವೆ ಮತ್ತು ಇವುಗಳು, ಇವುಗಳಲ್ಲಿ ನಡೆಯುವ ಸಮಸ್ತ ವ್ಯವಹಾರಗಳೂ ತನಗೆ ಸಂಬಂಧವಿಲ್ಲವೆಂದೂ ಸಿದ್ಧವಾಗುತ್ತದೆ. ಅಷ್ಟೇ ಅಲ್ಲ, ಇವು ತನ್ನಲ್ಲಿ ಇಲ್ಲವೇ ಇಲ್ಲವೆಂದೂ ನಿಶ್ಚಯವಾಗುತ್ತದೆ. ಅವಿದ್ಯೆಯಿಂದ ಆತ್ಮಸ್ವರೂಪವೇ ಎಚ್ಚರವಾಗಿಯೂ ಕನಸಾಗಿಯೂ ನಿದ್ರೆಯಾಗಿಯೂ ತೋರುತ್ತಿದೆ. ವಾಸ್ತವವಾಗಿ ಆತ್ಮನಲ್ಲಿ ಯಾವ ಅವಸ್ಥೆಯೂ ಇರುವುದೇ ಇಲ್ಲ. ಇದು ಹೇಗೆಂಬುದನ್ನು ಮತ್ತೂ ಸ್ವಲ್ಪ ವಿವರಿಸಿ ನೋಡೋಣ.

ಗಾಢನಿದ್ರೆಯೊಳೀ ಶರೀರವು ।
ಕೂಡಿಕೊಂಡ ಮನೇಂದ್ರಿಯಂಗಳು ।
ಗಾಢವಾಗಿಹ "ನಾನು ನನ್ನದು" ಎಂಬ ಭಾವನೆಯು ॥
ಮೂಢದೃಶ್ಯಗಳರಿವಳಿದು ತಾ ।
ನೋಡಲಿವರಿಂ ತಿಳಿಯಲಾಗದ ।
ರೂಢಿಗೊಂಡೆಂದೆಂದುಮಿಹ ನಾನೊಬ್ಬನುಳಿಯುವೆನೂ ॥

ಗಾಢನಿದ್ರೆಯಲ್ಲಿ ಈ ಶರೀರವೂ, ಇಂದ್ರಿಯ ಮನಸ್ಸು ಬುದ್ಧಿಗಳೂ, ನಾನು ನನ್ನದು ಎನ್ನುವ ಭಾವನೆಗಳೂ, ಈ ಜಗತ್ತಿನ ನೋಟವೂ –ಇವುಗಳು ಯಾವವೂ ಇರುವುದಿಲ್ಲ, ಇವುಗಳಾವುದರಿಂದಲೂ ತಿಳಿಯುವುದಕ್ಕೆ ಬಾರದಿರುವಂತಹ ತಾನೊಬ್ಬನೇ ಉಳಿಯುತ್ತಾನೆ. ಅದೇ ತನ್ನ ನಿಜಸ್ವರೂಪವು. ಅದಕ್ಕೇ ಆತ್ಮಸ್ವರೂಪ ವೆನ್ನುತ್ತಾರೆ. ಆ ಸ್ವರೂಪದಲ್ಲಿ ಕಲ್ಪನೆಯಿಲ್ಲ. ನಾಮರೂಪಗಳಿಲ್ಲ ಜನ್ಮಮರಣಗಳಿಲ್ಲ, ಸುಖದುಃಖಗಳಿಲ್ಲ , ಯಾವ ವಿಕಾರವೂ ಇರುವುದಿಲ್ಲ. ಆ ಸ್ವರೂಪದಲ್ಲಿ ಯಾವ ಸಂಸಾರಧರ್ಮಗಳೂ ಇರುವುದಿಲ್ಲ ಅದೇ ಸತ್ಯಸ್ವರೂಪವು, ಅದೇ ಪೂರ್ಣವಾದದ್ದು ಅದೇ ಚೈತನ್ಯ , ಅದೇ ನೀನಾಗಿದ್ದೀಯೆ. ಇದನ್ನು ಶ್ರುತಿಗಳೂ ಸಹ ಹೀಗೆ ಹೇಳುತ್ತಿವೆ. **"ಯತ್ರೈತತ್ ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ ತದಾ ಸಂಪನ್ನೋ ಭವತಿ ಸ್ವಮಪೀತೋ ಭವತಿ"** (ಛಾ. 6–8–1) ಯಾವಾಗ ಪುರುಷನು (ಜೀವನು) ನಿದ್ರಿಸುತ್ತಾನೆಯೋ ಆಗ ಅವನು ಪರಮಾತ್ಮಸ್ವರೂಪದಲ್ಲಿ ಒಂದಾಗುತ್ತಾನೆ. ಹೇಗೆ ಕನ್ನಡಿಯನ್ನು ತೆಗೆದುಹಾಕಲು ಅದರಲ್ಲಿದ್ದ ಮನುಷ್ಯನ ಪ್ರತಿಬಿಂಬವು ಮನುಷ್ಯನನ್ನೇ ಸೇರಿಕೊಳ್ಳುವುದೋ, ಹಾಗೆ ಇಂದ್ರಿಯ ವಿಷಯಗಳನ್ನು ಬಿಟ್ಟು ಹಿಂತಿರುಗಿದಾಗ ಮನಸ್ಸೇ ಇಲ್ಲವಾಗಲು ಮನಸ್ಸಿನಲ್ಲಿ ಪ್ರತಿಬಿಂಬಿಸಿರುವ ಜೀವರೂಪವು ಹೋಗಿ ಪರಮಾರ್ಥವಾದ ತನ್ನದೇ ಆದ ಸದ್ರೂಪದಲ್ಲಿ ಒಂದಾಗುತ್ತಾನೆ. ತನ್ನ ನಿಜರೂಪವನ್ನು ಪಡೆಯುತ್ತಾನೆ. **"ಸರ್ವಸಂಸಾರಧರ್ಮವಿಲಕ್ಷಣಂ ಸರ್ವ ಕ್ರಿಯಾಕಾರಕಫಲಾಯಾಸಶೂನ್ಯಂ ಸ್ವಮಾತ್ಮಾನಂ ಪ್ರವಿಶತಿ"** (ಬೃ.4–3–19, ಭಾ. 201) ನಿದ್ರೆಯಲ್ಲಿ ಯಾವ ಸಂಸಾರಧರ್ಮಗಳೂ ಇಲ್ಲದ ಮತ್ತು ಕ್ರಿಯೆ, ಅದನ್ನು ಮಾಡಿ ಅದರಿಂದಾಗುವ ಒಳ್ಳೆಯ ಕೆಟ್ಟ ಫಲವನ್ನನುಭವಿಸುವ ಆಯಾಸವೂ ಇಲ್ಲದ ತನ್ನ ಸ್ವರೂಪವನ್ನು ಸೇರಿಕೊಳ್ಳುತ್ತಾನೆ. **"ಏವಮಯಂ ಸ್ವಾಭಾವಿಕೇ ಸ್ವೇ ಆತ್ಮನಿ ಸರ್ವಸಂಸಾರಧರ್ಮಾತೀತೋ ವರ್ತತೇ ಸ್ವಾಪಕಾಲೇ ಇತಿ"** (ಬೃ. 2–1–19, ಭಾ. 301) ಹೀಗೆ ಇವನು ಸುಷುಪ್ತಿಕಾಲದಲ್ಲಿ ಎಲ್ಲಾ ಸಂಸಾರಧರ್ಮಗಳನ್ನೂ ದಾಟಿ

ಸ್ವಾಭಾವಿಕವಾದ ತನ್ನ ಸ್ವರೂಪದಲ್ಲಿ ಇರುತ್ತಾನೆ. **''ಸಂಪ್ರಸಾದಶಬ್ದೋದಿತೋ ಜೀವೋ ...... ಸುಷುಪ್ತಾವಸ್ಥಾಯಾಂ ಪರಂ ಜ್ಯೋತಿರಾಕಾಶಶಬ್ದಿತಂ ಪರಂ ಬ್ರಹ್ಮೋಪಸಂಪದ್ಯ ವಿಶೇಷವಿಜ್ಞಾನವತ್ತ್ವಂ ಚ ಪರಿತ್ಯಜ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ''** (ಸೂ. ಭಾ. 1–3–20) ಸಂಪ್ರಸಾದನೆಂದು ಕರೆಯಿಸಿಕೊಳ್ಳುವ ಜೀವನು..... ಸುಷುಪ್ತಾವಸ್ಥೆಯಲ್ಲಿ ಪರಮಪ್ರಕಾಶರೂಪವಾದ ಆಕಾಶವೆಂಬ ಹೆಸರಿನ ಪರಬ್ರಹ್ಮವನ್ನು ಸೇರಿ ವಿಶೇಷಜ್ಞಾನ ವನ್ನು ಬಿಟ್ಟು ತನ್ನ ನಿಜರೂಪವನ್ನು ಪಡೆದುಕೊಳ್ಳುತ್ತಾನೆ. **''ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ ಕಂಚನ ಸ್ವಪ್ನಂ ಪಶ್ಯತಿ''** (ಬೃ. 4–3–19) ಎಲ್ಲಿ ನಿದ್ರಿಸಿದವನು ಯಾವ ಕಾಮನೆಗಳನ್ನೂ ಕಾಮಿಸುವುದಿಲ್ಲವೋ ಎಂದರೆ ಯಾವ ವಿಧವಾದ ಇಚ್ಛೆಗಳೂ ಇರುವುದಿಲ್ಲವೋ ಯಾವ ಕನಸನ್ನೂ ಕಾಣುವುದಿಲ್ಲವೋ ಎಂದು ಹೇಳಿರುವುದು ಅದೇ ಇವನ ರೂಪವು. **''ಸೋಽಸ್ಯ ಪರಮೋ ಲೋಕಃ''** (ಬೃ. 4–3–20) ಅದು ಇವನ ಪರಮಲೋಕವು ಎಂದರೆ ಅದು ಇವನ ನಿಜ ಸ್ವರೂಪವು ಎಂದರ್ಥ. **''ತದ್ವಾ ಅಸ್ಯೈತದತಿಚ್ಛನ್ದಾ ಅಪಹತಪಾಪ್ಮಾಽಭಯಗ್ಂ ರೂಪಮ್। ತದ್ಯಥಾ ಪ್ರಿಯಯಾ ಸ್ತ್ರಿಯಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾನ್ತರಮೇವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾನ್ತರಂ ತದ್ವಾ ಅಸ್ಯೈತದಾಪ್ತಕಾಮಮಾತ್ಮ ಕಾಮಮಕಾಮಗ್ಂ ರೂಪಗ್ಂ ಶೋಕಾನ್ತರಮ್''** (ಬೃ.4–3–21) ಇವನಿಗೆ ಅದೇ ಕಾಮವಿಲ್ಲದ, ಪಾಪವಿಲ್ಲದ, ಭಯವಿಲ್ಲದ ರೂಪವು. ಅದು ಹೇಗೆಂದರೆ ಪ್ರಿಯಳಾದ ಸ್ತ್ರೀಯೊಡನೆ ಆಲಿಂಗಿತನಾಗಿರುವವನು ಆಗ ಹೇಗೆ ಹೊರಗಿನದಾಗಲೀ ಒಳಗಿನದಾಗಲೀ ಯಾವುದನ್ನೂ ಲೇಶಮಾತ್ರವೂ ಅರಿಯುವುದಿಲ್ಲವೋ, ಹಾಗೆಯೇ ಈ ಪುರುಷನು ಪ್ರಾಜ್ಞನಾದ ಆತ್ಮನಿಂದ ಆಲಿಂಗಿತನಾಗಿ ಹೊರಗಿನದೇನನ್ನೂ ಅರಿಯುವುದಿಲ್ಲ, ಒಳಗಿನ ಯಾವುದನ್ನೂ ಅರಿಯುವುದಿಲ್ಲ, ಅದೇ ಇವನಿಗೆ ಆಪ್ತಕಾಮವೂ ಆತ್ಮಕಾಮವೂ ಕಾಮವಿಲ್ಲದ್ದೂ ಶೋಕವಿಲ್ಲದ್ದೂ ಆದ ರೂಪವು.

ಈ ಉಪನಿಷತ್ ಮಂತ್ರಕ್ಕೆ ಶ್ರೀಮತ್ ಶಂಕರಾಚಾರ್ಯರು ಈ ರೀತಿ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಕಾಮವಿದ್ದರೆ ಪಾಪಪುಣ್ಯಕರ್ಮಗಳನ್ನು ಮಾಡಿ ಧರ್ಮಾಧರ್ಮಗಳನ್ನೂ ಅದರಿಂದ ಸುಖದುಃಖಗಳನ್ನೂ ಪಡೆಯುತ್ತಾನೆ. ಇದೆಲ್ಲವೂ ಅವಿದ್ಯೆಯಿಂದಲೇ ಆಗುತ್ತವೆ. ಭಯವೆಂಬುದು ಅವಿದ್ಯೆಯಿಂದಲೇ ಆಗುತ್ತದೆ. ಅದು ಅವಿದ್ಯೆಯ ಕಾರ್ಯ. **''ಅವಿದ್ಯಯಾ ಭಯಂ ಮನ್ಯತೇ''** (ಬೃ.4–3–20)

ಅವಿದ್ಯೆಯಿಂದಲೇ ಭಯವನ್ನು ಭಾವಿಸಿಕೊಳ್ಳುತ್ತಾನೆ ಎಂಬುದಾಗಿ ಹೇಳಿದೆ. ಇಲ್ಲಿ ಭಯವೆಂಬ ಕಾರ್ಯದ ಮೂಲಕ ಕಾರಣವಾದ ಅವಿದ್ಯೆಯನ್ನು ಅಲ್ಲಗಳೆದದ್ದು. ಅಭಯರೂಪವು ಎಂದರೆ ಅವಿದ್ಯಾರಹಿತವಾದದ್ದು ಎಂದರ್ಥ. ಆ ಸ್ವರೂಪವು ಯಾವ ಸಂಸಾರಧರ್ಮವೂ ಇಲ್ಲದ್ದು. ಆದುದರಿಂದ ಅದು ಅಭಯಸ್ವರೂಪವು. ಅದು ಕೇವಲ ತನ್ನ ನಿಜಸ್ವರೂಪವೇ ಆಗಿದೆ. ಅದಕ್ಕೇ ಆತ್ಮಸ್ವರೂಪವೆನ್ನುತ್ತಾರೆ. ಆ ಆತ್ಮನು ಸ್ವಯಂಚೈತನ್ಯನೂ ಜ್ಯೋತಿಸ್ವರೂಪನೂ ಆಗಿರುತ್ತಾನೆ. ಹಾಗಾದರೆ ಏತಕ್ಕೆ ಅಲ್ಲಿ ನಾನು ಇಂಥವನು ಎಂದು ತಿಳಿಯುವುದಿಲ್ಲ? ಎಂದರೆ ಇದಕ್ಕೆ ಕಾರಣವನ್ನು ಹೇಳುತ್ತಾರೆ. ಏಕತ್ವವೇ ಅರಿಯದಿರುವುದಕ್ಕೆ ಕಾರಣ. ಅಲ್ಲಿ ಜೀವನು ಕೇವಲ ಜ್ಞಾನಸ್ವರೂಪನಾದ ಆತ್ಮನಿಂದ ಚೆನ್ನಾಗಿ ಆಲಿಂಗಿತನಾಗಿರುವುದರಿಂದ ಯಾವುದನ್ನೂ ಅರಿಯುವುದಿಲ್ಲ. ಅರಿಯುವುದಿಲ್ಲವೆಂದರೆ ಅರಿಯುವ ಸಾಮರ್ಥ್ಯವಿಲ್ಲದ್ದರಿಂದಲ್ಲ. ಅರಿವಿನ ಸ್ವರೂಪವೇ ಆಗಿರುತ್ತಾನೆ. ಹೀಗಿದ್ದೂ ಸಹ ಅರಿಯದಿರಲು ಕಾರಣವೇನೆಂದರೆ, ಅರಿಯಲು ಅಲ್ಲಿ ತನಗಿಂತಲೂ ಬೇರೆಯಾದ ವಸ್ತುವಿಲ್ಲ. ಯಾವಾಗಲೂ ಅರಿಯುವುದಕ್ಕೆ ತನಗಿಂತ ಬೇರೆಯಾದ ಮತ್ತೊಂದಿರಬೇಕು. ಆಗಲೇ ಅರಿಯುವುದೆಂಬುದು ಸಂಭವಿಸುತ್ತದೆ. ತನಗಿಂತಲೂ ಬೇರೆಯಾಗಿರುವುದು ಮತ್ತು ಅರಿಯುವುದು ಇದೆಲ್ಲಾ ಅವಿದ್ಯೆಯಿಂದಲೇ ಸಂಭವಿಸುತ್ತದೆ. ಅಲ್ಲಿ ಅವಿದ್ಯೆಯಿಲ್ಲ ; ಅಲ್ಲಿ ಎರಡನೆಯದಿಲ್ಲ. ತಾನೊಬ್ಬನೇ ಜ್ಞಾನರೂಪನಾಗಿರುತ್ತಾನೆ. ಆದುದರಿಂದ ಸ್ವಯಂಜ್ಯೋತಿಸ್ವರೂಪನಾದ ಈ ಆತ್ಮನ ಈ ರೂಪವು ಆಪ್ತಕಾಮವೂ, ಆತ್ಮಕಾಮವೂ ಆಗಿದೆ. ಹೀಗೆಂದರೆ ಇಲ್ಲಿ ಎಲ್ಲಾ ಕಾಮಗಳೂ ಆತ್ಮನೇ ಆಗಿರುತ್ತದೆ. ಕಾಮಿಸುವ ವಿಷಯವೇ ಇಲ್ಲಿ ಇರುವುದಿಲ್ಲ. ವಿಷಯಗಳಿದ್ದರೇ ದುಃಖವು ಸಂಭವಿಸುತ್ತದೆ. ಆದುದರಿಂದ ಇದು ದುಃಖರಹಿತವಾದ ಸ್ವರೂಪವೆಂದು ಹೇಳಲ್ಪಟ್ಟಿದೆ. ಇದೇ ತನ್ನ ನಿಜರೂಪವು.

ಈ ದೇಹಾದಿಗಳು ನಾನಲ್ಲದ ಮಾತ್ರಕ್ಕೆ ಪರಮಾತ್ಮನೇ ನಾನು ಹೇಗಾಗುತ್ತೇನೆ? ಗಾಢನಿದ್ರೆಯಲ್ಲಿ ದೇಹಾದಿಗಳಿಲ್ಲದಿದ್ದರಿಂದ ಆ ನನ್ನ ನಿಜವಾದ ಸ್ವರೂಪವು ಪರಮಾತ್ಮನೇ ಎಂಬುದು ಹೇಗೆ? ಮತ್ತು ಗಾಢನಿದ್ರೆಯಲ್ಲಿ ಮಾತ್ರ ನನ್ನ ಸ್ವರೂಪವು ನಿರಾಕಾರವಾಗಿ ನಿರ್ವಿಕಾರವಾಗಿ ನಿಷ್ಕ್ರಿಯವಾಗಿ ಅಸಂಗವಾಗಿ ನಿತ್ಯಮುಕ್ತವಾಗಿ ಇದೆ. ಈಗ ಹಾಗಿಲ್ಲವಲ್ಲ? ಎಂದರೆ ಇದು ಸರಿಯಲ್ಲ. ತನ್ನ ನಿಜವಾದ ಸ್ವರೂಪವು ಪರಮಾತ್ಮನೇ ಆಗಿದ್ದರೂ ಅವಿದ್ಯೆಯಿಂದ ದೇಹಾದಿಗಳಲ್ಲಿ ಭ್ರಮೆಗೊಂಡು ತನ್ನ ನಿಜಸ್ವರೂಪವನ್ನು ಮರೆತು ದೇಹಾದಿಗಳೇ ತಾನೆಂದು ಭ್ರಮೆಯುಂಟಾಗಿದೆ. ತನ್ನ

ಸ್ವರೂಪವು ಎಂದೆಂದಿಗೂ ಈ ವಿಕಾರಾತ್ಮಕವಾದ ವಸ್ತುಗಳನ್ನೂ ಅವಸ್ಥೆಗಳನ್ನೂ ಬೆಳಗುತ್ತಾ, ತಾನು ಮಾತ್ರ ಯಾವ ಅವಸ್ಥೆಗೂ ಸಿಕ್ಕುವುದೇ ಇಲ್ಲ. ದ್ವೈತವು ಇದೆ ಎನ್ನುವುದೇ ಅವಿದ್ಯೆ, ಅವಿದ್ಯೆಯಿಂದಲೇ ಅವಸ್ಥೆಗಳು ತೋರುತ್ತಿವೆ. ಇದನ್ನು ವಿವರಿಸಿ ನೋಡೋಣ. ಮೊದಲು ಪರಮಾತ್ಮಸ್ವರೂಪವು ಹೇಗಿದೆ? ಎನ್ನುವುದನ್ನು ವಿಚಾರಿಸಿನೋಡಿ ನಂತರ ಪರಮಾತ್ಮನೇ ನಾನೆನ್ನುವುದನ್ನು ಪರಿಶೀಲಿಸೋಣ.

## 11. ಪರಮಾತ್ಮನ ಸ್ವರೂಪವು ಹೇಗಿದೆ ?

ಸತ್ಯಂ ಜ್ಞಾನಮನಂತಂ ಬ್ರಹ್ಮ ॥ (ತೈ. 2–1–1)

ವೇದದಲ್ಲಿ ಪರಮಾತ್ಮನಿಗೆ ಬ್ರಹ್ಮ ಎಂದು ಹೇಳಿದೆ. ಬ್ರಹ್ಮ ಎಂಬುದರ ಅರ್ಥ ಅತ್ಯಂತ ದೊಡ್ಡದಾಗಿರುವುದು ಎಂದಾಗುತ್ತದೆ. ಪರಮಾತ್ಮನು ಎಲ್ಲದಕ್ಕಿಂತಲೂ ಬಹಳ ದೊಡ್ಡವನಾಗಿದ್ದರಿಂದ ಅವನನ್ನು ಬ್ರಹ್ಮ ಎಂದು ಶ್ರುತಿಯಲ್ಲಿ ಹೇಳಿದೆ. ಬ್ರಹ್ಮವು ಹೇಗಿದೆ ಎಂದರೆ ಸತ್ಯವೂ, ಜ್ಞಾನವೂ, ಅನಂತವೂ, ಈ ಮೂರು ಲಕ್ಷಣವುಳ್ಳದ್ದು, ಬ್ರಹ್ಮ ಎಂದು ಹೇಳಿದೆ. ಸತ್ಯ ಎಂದರೆ ಯಾವರೂಪದಿಂದ ಇರುವದೆಂದು ಯಾವದು ಗೊತ್ತಾಗಿದ್ದು ಆ ರೂಪವನ್ನು ಬಿಟ್ಟು ಹೋಗದೆ ಇರುವುದೋ ಅದು ಸತ್ಯವು. ಇದರ ರೂಪವು ಇಂತಹದೆಂದು ನಿಶ್ಚಯವಾದ ಬಳಿಕ ಆ ರೂಪವನ್ನು ಬದಲಾಯಿಸಿಕೊಳ್ಳದೇ ಇರುವುದೇ ಸತ್ಯವಸ್ತು, ಅದೇ ಬ್ರಹ್ಮ; ಅದೇ ಪರಮಾತ್ಮ. ಸತ್ಯವೆಂದರೆ ವ್ಯವಹಾರದಲ್ಲಿ ಮಾತ್ರ ಸತ್ಯವೆಂದು ತೋರುವುದಲ್ಲ; ಎಂದೆಂದಿಗೂ ಸತ್ಯವೇ ಆಗಿರುವುದು. ಯಾವರೂಪದಿಂದ ಕೂಡಿರುವದೆಂದು ಯಾವದು ಗೊತ್ತಾಗಿದ್ದು ಆ ರೂಪವನ್ನು ಬಿಟ್ಟು ಹೋಗುವುದೋ ಎಂದರೆ ಬದಲಾಯಿಸುವುದೋ ಅದು ಅಸತ್ಯವು, ಅನೃತವು. ಆದ್ದರಿಂದ ಕಾರ್ಯವು ಎಂದರೆ ಉತ್ಪನ್ನವಾದುದು ಅಸತ್ಯವು. ಏಕೆಂದರೆ ಉತ್ಪನ್ನವಾದದ್ದು ವಿಕಾರವಾಗುತ್ತದೆ, ಬದಲಾಯಿಸುತ್ತದೆ, ಬದಲಾಯಿಸುವುದು ಬ್ರಹ್ಮವಲ್ಲ. ಈ ಎಲ್ಲಾ ಕಾರಣಗಳಿಂದ ಎಂದೆಂದಿಗೂ ಹುಟ್ಟದೇ ಇರುವುದೇ ಬ್ರಹ್ಮವು. ಅದು ಹೇಗಿದೆ ? ಬಟ್ಟೆಯಲ್ಲೆಲ್ಲಾ ನೂಲು ಇರುವಂತೆ, ಆಭರಣಗಳಲ್ಲೆಲ್ಲಾ ಬಂಗಾರವು ಇರುವಂತೆ, ಎಲ್ಲದರಲ್ಲೂ "ಇದೆ" ಎಂಬುದು ಒಂದೇ ಸಮನಾಗಿದೆ. ನೂಲನ್ನ ಬಿಟ್ಟು ಬಟ್ಟೆ ಇಲ್ಲದಂತೆ, ಬಂಗಾರವನ್ನು ಬಿಟ್ಟು ಆಭರಣಗಳಿಲ್ಲದಂತೆ "ಇದೆ" ಎಂಬುದನ್ನು ಬಿಟ್ಟು ಯಾವದೂ ಇಲ್ಲವೇ ಇಲ್ಲ. ಹೀಗೆ ಎಲ್ಲದರಲ್ಲೂ ಇರುವ ಇರುವಿಕೆಯೇ ಬ್ರಹ್ಮ ಅಥವಾ ಪರಮಾತ್ಮ

ಹೀಗೆ ಎಲ್ಲದರಲ್ಲೂ ಇರುವ ಇರುವಿಕೆಯೇ ಬ್ರಹ್ಮ, ಅದನ್ನು ಬಿಟ್ಟು ಯಾವದೂ ಇರಲಾರದು ಎಂದದ್ದರಿಂದ ಬ್ರಹ್ಮವು ಎಲ್ಲದಕ್ಕೂ ಕಾರಣವಾಯಿತು. ಮಣ್ಣಿನಿಂದಾಗಿರುವ ಕೊಡಕ್ಕೆ ಮಣ್ಣು ಕಾರಣವಾಗಿದೆ. ಆದರೆ ಮಣ್ಣು ಜಡವಾಗಿದೆ. ಅದರಂತೆ ಬ್ರಹ್ಮದಿಂದಾದ ಜಗತ್ತಿಗೆ ಬ್ರಹ್ಮವೇ ಕಾರಣವಾದರೂ ಅದು ಇನ್ನಿತರ ಕಾರ್ಯಕಾರಣಗಳಂತೆ ಜಡವಲ್ಲ. ಆದ್ದರಿಂದ ಇದನ್ನು ತಿಳಿಸಲು ಜ್ಞಾನವು ಬ್ರಹ್ಮವು ಎಂದು ಹೇಳಿದೆ. ಜ್ಞಾನವು ಬ್ರಹ್ಮ ಎಂದರೆ ವಸ್ತುಗಳನ್ನು ಅರಿಯುವಂತಹ ಅಂತಃಕರಣದಲ್ಲಿಯ ಬಿಡಿಬಿಡಿಯಾದ ಅರಿವಲ್ಲ. ಏಕೆಂದರೆ ಬ್ರಹ್ಮವು ಸತ್ಯವೆಂದಿದೆ ಮತ್ತು ಅನಂತವೆಂದಿದೆ. ಅಂತಃಕರಣದಲ್ಲಿ ತೋರುವ ಈ ಜ್ಞಾನಕ್ಕೆ ಅಂತ್ಯವಿದೆ, ಕೊನೆಯಿದೆ, ಇದರಲ್ಲಿ ಅರಿಯುವದೆಂಬ ಕ್ರಿಯೆಯು ಇದೆ. ಇದು ತನಗೆ ದೃಶ್ಯವೂ ಆಗಿದೆ. ಆದ್ದರಿಂದ ಬ್ರಹ್ಮವು ಜ್ಞಾತೃವೆಂದಾದರೆ ಅದು ಅನಂತವೆಂಬುದು ಹೊಂದುವುದಿಲ್ಲ ಮತ್ತು ಜ್ಞಾನಕರ್ತೃತ್ವವೇ ಮುಂತಾದ ವಿಶೇಷಗಳುಳ್ಳದ್ದಾದರೆ ಅದು ಬರಿಯ ಸತ್ತೇ ಎಂಬುದೂ ಹೊಂದುವುದಿಲ್ಲ. ಆದ್ದರಿಂದ ಸತ್ಯ, ಅನಂತ – ಎಂಬುವ ಈ ಎರಡು ಶಬ್ದಗಳೊಡನೆ ಬ್ರಹ್ಮಕ್ಕೆ ವಿಶೇಷಣವಾಗಿ ಜ್ಞಾನಶಬ್ದವನ್ನು ಪ್ರಯೋಗಮಾಡಿರುವುದು (ಬ್ರಹ್ಮವು ಯಾವಾಗಲೂ ಇರುವಂಥಾದ್ದು. ಅದಕ್ಕೆ ಅಂತ್ಯವಿಲ್ಲ. ಅದರಲ್ಲಿ ಕ್ರಿಯೆ ಇರುವುದಿಲ್ಲ). ಈ ಎಲ್ಲಾ ಕಾರಣಗಳಿಂದ ಜ್ಞಾನವು ಬ್ರಹ್ಮ ಎಂದರೆ ಅದು ಕೇವಲ ಜ್ಞಪ್ತಿ, ಬರಿ ಅರಿವು ಮಾತ್ರ. (ಅಂತಃಕರಣದಲ್ಲಿಯ ಬಿಡಿಬಿಡಿ ಅರಿವನ್ನೆಲ್ಲಾ ಅರಿಯುವಂತಹ ಕೇವಲ ಜ್ಞಾನವೇ ಬ್ರಹ್ಮವು.) ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ ಆಗಿರುವದೆಂದು ಹೇಳಿದೆ. ಇದುವರೆಗೆ ಬ್ರಹ್ಮದ ಸತ್ಯಸ್ವರೂಪ ಮತ್ತು ಜ್ಞಾನಸ್ವರೂಪ ಇವುಗಳನ್ನು ವಿವರಿಸಿದ್ದಾಯಿತು. ಈಗ ಬ್ರಹ್ಮದ ಅನಂತತ್ವವನ್ನು ವಿವೇಚಿಸಿ ನೋಡೋಣ. ಅನಂತತ್ವವು ದೇಶದಿಂದ, ಕಾಲದಿಂದ, ವಸ್ತುವಿನಿಂದ ಎಂದು ಮೂರುವಿಧವಾಗಿರುತ್ತದೆ. ಇವುಗಳನ್ನು ವಿವರಿಸಿ ನೋಡೋಣ. ಆಕಾಶವು ದೇಶದಿಂದ ಅನಂತವಾಗಿರುತ್ತದೆ. ಏಕೆಂದರೆ ದೇಶದಿಂದ ಅದಕ್ಕೆ ಇಷ್ಟೆಂದು ಅಳತೆ ಇರುವುದಿಲ್ಲ. ಸಮಸ್ತ ದೇಶದಲ್ಲೂ ಆಕಾಶವಿದೆ. ಆಕಾಶವಿಲ್ಲದ ದೇಶವೇ ಇಲ್ಲ. ಆದರೆ ಆಕಾಶಕ್ಕೆ ಕಾಲದಿಂದಲೂ ವಸ್ತುವಿನಿಂದಲೂ ಆನಂತ್ಯವಿರುವುದಿಲ್ಲ. ಕಾರಣವೇನೆಂದರೆ ಅದು ಕಾರ್ಯವಾಗಿರುತ್ತದೆ. ಎಂದರೆ ಹುಟ್ಟಿರುತ್ತದೆ. ಹುಟ್ಟಿರುವಂತಹದು ಒಂದು ಕಾಲದಲ್ಲಿ ಕೊನೆಗಾಣುತ್ತದೆ. ಆಕಾಶವು ಹುಟ್ಟಿರುವುದರಿಂದ ಒಂದು ಕಾಲದಲ್ಲಿ ಅಂತ್ಯವಾಗುತ್ತದೆ. ಹೀಗಿರುವುದರಿಂದ ಆಕಾಶಕ್ಕೆ ಕಾಲದಿಂದ ಆನಂತ್ಯವಿಲ್ಲ. ಹೀಗೆ ಆಕಾಶದಂತೆ ಬ್ರಹ್ಮವು ಕಾಲದಿಂದ ಅಂತ್ಯವುಳ್ಳದ್ದಾಗಿರುವದಿಲ್ಲ. ಏಕೆಂದರೆ ಅದು ಕಾರ್ಯವಲ್ಲ. ಹುಟ್ಟಿದ್ದಕ್ಕೇ

ಅಂತ್ಯವಿರುವುದು. ಬ್ರಹ್ಮವು ಹುಟ್ಟಿಯೇ ಇಲ್ಲವಾದ್ದರಿಂದ ಅದಕ್ಕೆ ಕಾಲದಿಂದಲೂ ಆನಂತ್ಯವಿದೆ. ಇನ್ನು ಬ್ರಹ್ಮಕ್ಕೆ ವಸ್ತುವಿನಿಂದಲೂ ಆನಂತ್ಯವಿದೆ ಎಂಬುದು ಹೇಗೆ ? ಎಂದು ಕೇಳಿದರೆ ತನಗಿಂತಲೂ ಬೇರೆಯಾದ ಮತ್ತೊಂದು ವಸ್ತುವಿದ್ದರೆ ಆಗಮಾತ್ರ ಆ ವಸ್ತುವು ಮತ್ತೊಂದು ವಸ್ತುವಿನಿಂದ ಅಂತ್ಯವಾಗುತ್ತದೆ. ಹೀಗೆ ಅಂತ್ಯವೆಂಬುದು ಬೇರೆ ಬೇರೆಯಾಗಿರುವ ವಸ್ತುಗಳಲ್ಲಿ ಕಂಡುಬರುತ್ತದೆ. ಆದರೆ ಬ್ರಹ್ಮವು ಯಾವ ವಸ್ತುವಿನಿಂದಲೂ ಬೇರೆಯಾಗಿರುವುದಿಲ್ಲ, ಅದು ಎಲ್ಲದರೊಡನೆಯೂ ಅನನ್ಯವಾಗಿದೆ. ಎಂದರೆ ಸಮಸ್ತವಸ್ತುವಿನಲ್ಲಿಯೂ ಬ್ರಹ್ಮವು ಪರಿಪೂರ್ಣವಾಗಿ ತುಂಬಿರುವುದು. ಆದ್ದರಿಂದ ಬ್ರಹ್ಮಕ್ಕೆ ವಸ್ತುವಿನಿಂದಲೂ ಆನಂತ್ಯವಿದೆ. ಬ್ರಹ್ಮವು ಎಲ್ಲದರೊಡನೆಯೂ ಅನನ್ಯವಾಗಿರುತ್ತದೆ ಎಂಬುದು ಹೇಗೆ ? ಎಂದರೆ ಬ್ರಹ್ಮವೇ ಕಾಲ, ಆಕಾಶ, ಮೊದಲಾದ ಸಮಸ್ತವಸ್ತುಗಳಿಗೂ ಕಾರಣವಾಗಿರುತ್ತದೆ. ಕಾರ್ಯಕ್ಕೆ ಹೋಲಿಸಿದರೆ ಬ್ರಹ್ಮವು ಅಂತವುಳ್ಳದ್ದೆಂದಾಗುವದಲ್ಲ! ಎಂದರೆ ಇದು ಸರಿಯಲ್ಲ. ಏಕೆಂದರೆ ನೂಲೆಂಬ ಕಾರಣಕ್ಕಿಂತ ಬೇರೆಯಾಗಿ ಬಟ್ಟೆಯೆಂಬ ಕಾರ್ಯವು ನಿಜವಾಗಿ ಇರುವುದೇ ಇಲ್ಲ. ಬಟ್ಟೆ ಎಂಬ ಕಾರ್ಯವು ನೂಲೆಂಬ ಕಾರಣದಲ್ಲಿ ಕೇವಲ ಕಲ್ಪಿತವಾಗಿದೆ. ಕಾರ್ಯವು, ವಿಕಾರವು, ಬರಿಯ ಹೆಸರು ಮಾತ್ರ. ಹಾಗೆಯೇ ಬ್ರಹ್ಮವೆಂಬ ಕಾರಣಕ್ಕಿಂತ ಬೇರೆಯಾಗಿ ಆಕಾಶಾದಿ ವಸ್ತುಗಳೆಂಬ ಕಾರ್ಯವು ನಿಜವಾಗಿ ಇಲ್ಲವೇ ಇಲ್ಲ. ಸಮಸ್ತವೂ ಬ್ರಹ್ಮದಲ್ಲಿ ಕೇವಲ ಅವಿದ್ಯೆಯಿಂದ ಕಲ್ಪಿತವಾಗಿದೆ. ಹೀಗೆ ಸರ್ವತ್ರ ಇರುವ ಆಕಾಶಕ್ಕೂ ಬ್ರಹ್ಮವು ಕಾರಣವಾದ್ದರಿಂದ ಅದು ದೇಶದಿಂದ ಅನಂತವಾಯಿತು. ಅದು ಕಾರ್ಯವಲ್ಲದ್ದರಿಂದ ಕಾಲದಿಂದ ಆನಂತ್ಯವು ಸಿದ್ಧವಾಗುತ್ತದೆ. ಅದಕ್ಕಿಂತಲೂ ಬೇರೆಯಾದ ಮತ್ತೊಂದು ವಸ್ತುವಿಲ್ಲದ್ದರಿಂದ ವಸ್ತುವಿನಿಂದಲೂ ಆನಂತ್ಯವು ಸಿದ್ಧವಾಯಿತು. ಹೀಗೆ ಬ್ರಹ್ಮವು ದೇಶ, ಕಾಲ, ವಸ್ತು– ಇವೆಲ್ಲವುಗಳಿಂದಲೂ ಅನಂತವಾಗಿರುತ್ತದೆ.

ಈ ಮೇಲೆ ವಿವರಿಸಿದಂತೆ ಸದ್ರೂಪ, ಚಿದ್ರೂಪ, ಅನಂತಸ್ವರೂಪವಾಗಿರುವದೇ ಬ್ರಹ್ಮ ಅಥವಾ ಪರಮಾತ್ಮ. ಇಂತಹ ಪರಮಾರ್ಥಸ್ವರೂಪವೇ ತನ್ನ ಆತ್ಮವಾಗಿದೆ ; ಎಂದರೆ ತನ್ನ ನಿಜವಾದ ಸ್ವರೂಪವಾಗಿದೆ ; ನಾನು ನಾನೆನ್ನುವದರ ತಿರುಳಾಗಿದೆ. ಪರಮಾತ್ಮಸ್ವರೂಪವೇ ಈ ನಾನು ಎನ್ನುವುದರ ಮೂಲಸ್ವರೂಪವಾಗಿದೆ. ತಾತ್ಪರ್ಯವೇನೆಂದರೆ : ಪರಮಾತ್ಮಸ್ವರೂಪವೇ ನಾನಾಗಿದ್ದೇನೆ. ಇದು ಹೇಗೆಂಬುದನ್ನು ಇನ್ನುಮುಂದೆ ಅನುಭವದ ದೃಷ್ಟಿಯಿಂದ ನೋಡೋಣ.

## 12. ಪರಮಾತ್ಮಸ್ವರೂಪವೇ ನಾನು

**ನಾನು ಸದ್ರೂಪನು :–** ಸದ್ರೂಪ, ಚಿದ್ರೂಪ, ಅನಂತರೂಪ – ಇಂಥ ಸ್ವರೂಪವೇ ಬ್ರಹ್ಮ ಅಥವಾ ಪರಮಾತ್ಮನೆಂದು ನಿರ್ಣಯವಾಗಿದೆ. ಇನ್ನು ಈಗ ಇಂಥ ಪರಮಾತ್ಮಸ್ವರೂಪವೇ ನಾನಾದರೆ, ಪರಮಾತ್ಮನ ಲಕ್ಷಣಗಳು ನನ್ನಲ್ಲಿವೆಯೇ ? ಇದ್ದರೆ ಅವು ನನ್ನಲ್ಲಿ ಹೇಗಿವೆ ? ಎಂಬುದನ್ನು ವಿಮರ್ಶೆಮಾಡಿ ನೋಡೋಣ. ಮೊದಲು ನಾನು ಸದ್ರೂಪನು ಹೇಗೆಂಬುದನ್ನು ವಿಚಾರಮಾಡಿ ನೋಡೋಣ. ನಾನು ಈ ದೇಹಾದಿಗಳು ಹುಟ್ಟುವುದಕ್ಕಿಂತ ಮೊದಲೂ ಇರುತ್ತೇನೆ, ಇವು ಸತ್ತಮೇಲೂ ಇರುತ್ತೇನೆ. ಇದಕ್ಕೆ ಪ್ರಮಾಣ ವೇನೆಂದರೆ : **"ಅವಿನಾಶೀ ವಾ ಅರೇಽಯಮಾತ್ಮಾ"** (ಬೃ. 4–5–14) ಎಲೆ, ಈ ಆತ್ಮನು ಅವಿನಾಶಿಯಾಗಿದ್ದಾನೆ ಎಂದರೆ ನಾಶವಿಲ್ಲದವನು ; **"ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯಃ"** (ಬೃ. 4–4–25) ಆತನೇ ಮಹಾನ್ ಅಜ ಆತ್ಮನು. ಇವನು ಅಜರನು, ಅಮರನು, ಅಮೃತನು, ಅಭಯನು. **"ನ ಜಾಯತೇ ಮ್ರಿಯತೇ ವಾ ಕದಾಚಿತ್"** (ಗೀ. 2–20) ಈತನು ಎಂದಿಗೂ ಹುಟ್ಟುವುದಿಲ್ಲ, ಸಾಯುವುದಿಲ್ಲ – ಇತ್ಯಾದಿ ಶ್ರುತಿಸ್ಮೃತಿಗಳು. ಆದರೆ ಈ ದೇಹಾದಿಗಳು ಮೊದಲಲ್ಲೂ ಇರುವುದಿಲ್ಲ, ಕೊನೆಯಲ್ಲೂ ಇರುವುದಿಲ್ಲ. **"ಅನ್ತವನ್ತ ಇಮೇ ದೇಹಾಃ ನಿತ್ಯಸ್ಯೋಕ್ತಾಃ ಶರೀರಿಣಃ"** (ಗೀ. 2–18) ನಿತ್ಯವಾಗಿರುವ ಆತ್ಮನ ಈ ಶರೀರಗಳು ಅಂತವುಳ್ಳವುಗಳು ಎಂದರೆ ನಾಶವುಳ್ಳವುಗಳು. ಆದುದರಿಂದ ನಾನು ಸದ್ರೂಪನು. ಈ ದೇಹೇಂದ್ರಿಯಾದಿಗಳು ಬಾಲ್ಯದಲ್ಲಿ ಒಂದು ರೀತಿ, ಕೌಮಾರದಲ್ಲಿ ಮತ್ತೊಂದು ರೀತಿ, ಯೌವನದಲ್ಲಿ ಬೇರೊಂದು ರೀತಿ, ಅನಂತರ ವೃದ್ಧಾಪ್ಯದಲ್ಲಿ ಇನ್ನೂ ವಿಚಿತ್ರವಾಗಿ ತೋರಿ ಕೊನೆಗೆ ಇಲ್ಲವೇ ಇಲ್ಲದಂತಾಗುತ್ತವೆ. ಬಾಲ್ಯವಿದ್ದಾಗ ಕೌಮಾರವಿಲ್ಲ, ಕೌಮಾರವಿದ್ದಾಗ ಯೌವನವಿಲ್ಲ, ಯೌವನವಿದ್ದಾಗ ವೃದ್ಧಾಪ್ಯವಿಲ್ಲ, ಇವುಗಳು ಒಂದರಲ್ಲೊಂದಿರುವದಿಲ್ಲ. ಆದರೆ ನಾನು ಮಾತ್ರ ಈ ಎಲ್ಲಾ ಅವಸ್ಥೆಗಳಲ್ಲಿಯೂ ಸ್ವಲ್ಪವೂ ಹೆಚ್ಚುಕಡಿಮೆಯಾಗದೆ, ಬದಲಾಯಿಸದೆ ಒಂದೇ ಸಮನಾಗಿರುತ್ತೇನೆ. ಆದುದರಿಂದ ನಾನು ಸದ್ರೂಪನು. ಎಚ್ಚರದಲ್ಲಿ ಕನಸುನಿದ್ರೆಗಳಿಲ್ಲ; ಕನಸಿನಲ್ಲಿ ಎಚ್ಚರನಿದ್ರೆಗಳಿಲ್ಲ. ನಿದ್ರೆಯಲ್ಲಿ ಎಚ್ಚರಕನಸುಗಳಿಲ್ಲ. ಆದರೆ ಈ ಎಲ್ಲಾ ಅವಸ್ಥೆಗಳಲ್ಲಿಯೂ ನಾನು ಮಾತ್ರ ಬದಲಾಯಿಸದೆ ಒಂದೇ ಸಮನಾಗಿರುತ್ತೇನೆ. ಆದುದರಿಂದ ನಾನು ಸದ್ರೂಪನು. ಗಾಢನಿದ್ರೆಯಲ್ಲಿ ನಾನು ಹೇಗಿದ್ದೆ? ವಿಚಾರವನ್ನು ಮಾಡಿ ಅನುಭವದಿಂದ ಹೇಳುವುದಾದರೆ ಆ ಸಮಯದಲ್ಲಿ ನಾನು ಹೀಗಿದ್ದೆನೆಂದಾಗಲಿ ಹಾಗಿದ್ದೆನೆಂದಾಗಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಹೀಗೆಂದೂ ಹಾಗೆಂದೂ ಹೇಳಲಿಕ್ಕೆ

ಬಾರದಂತಹ ಸ್ವರೂಪದಿಂದ ಆಗ ನಾನು ಇದ್ದದ್ದು ನಿಜ. ಅನಿಸುವಿಕೆ ತೋರುವಿಕೆ ಇಲ್ಲದ, ಹೀಗೆಂದು ಹಾಗೆಂದು ಹೇಳಲುಬಾರದ ಆ ಕೇವಲ ಇರುವಿಕೆಯೇ ಸದ್ರೂಪ. ಅದೇ ಪರಮಾತ್ಮ, ಅದೇ ಬ್ರಹ್ಮ, ಅದೇ ನಾನು.

**ನಾನು ಚಿದ್ರೂಪನು :** – ಈಗ ನಾನು ಚಿದ್ರೂಪನು ಹೇಗೆಂಬುದನ್ನು ವಿಚಾರ ಮಾಡಿ ನೋಡೋಣ. ಜಾಗ್ರದವಸ್ಥೆಯೂ, ಈ ಅವಸ್ಥೆಯಲ್ಲಿ ತೋರುವ ದೇಹ, ಇಂದ್ರಿಯ, ಮನಸ್ಸು , ಬುದ್ಧಿ, ಅಹಂಕಾರಾದಿಗಳೂ, ಇಲ್ಲಿಯ ದೃಶ್ಯವಸ್ತುಗಳೂ ಇವೆಲ್ಲವೂ ಜಡವಾಗಿದ್ದು ಇವು ಯಾವುವೂ ಸ್ವಪ್ನಾವಸ್ಥೆಯಲ್ಲಿ ತೋರುವುದಿಲ್ಲ. ಇದರಂತೆಯೇ ಸ್ವಪ್ನಾವಸ್ಥೆಯೂ, ಅಲ್ಲಿಯ ದೃಶ್ಯಪ್ರಪಂಚವೂ, ಅಲ್ಲಿಯ ದೇಹೇಂದ್ರಿಯಾದಿಗಳೂ ವಿಕಾರದಿಂದ ಕೂಡಿದ್ದು ನಿದ್ರೆಯಲ್ಲಿ ಅವುಗಳ ಸುಳಿವೇ ಇರುವುದಿಲ್ಲ. ಆದರೆ ನಾನು ಮಾತ್ರ ಇವುಗಳು ಇರುವುದನ್ನೂ ಇಲ್ಲದಿರುವುದನ್ನೂ ಸಾಕ್ಷಿರೂಪದಿಂದ ನೋಡುತ್ತಾ, ಬದಲಾಯಿಸದೇ ಒಂದೇ ಸಮಾನಾಗಿ ಎಚ್ಚರ, ಕನಸು, ನಿದ್ರೆ – ಈ ಎಲ್ಲಾ ಅವಸ್ಥೆಗಳಲ್ಲೂ ಅಖಂಡವಾಗಿರುತ್ತೇನೆ. ಹೀಗೆ ಇವೆಲ್ಲವುಗಳಲ್ಲಿಯೂ ಸಾಕ್ಷಿರೂಪದಿಂದಿದ್ದು ಇವೆಲ್ಲವುಗಳನ್ನೂ ಅರಿಯುತ್ತಿರುವುದರಿಂದ ನಾನು ಚಿದ್ರೂಪನಾಗಿದ್ದೇನೆ. ಈ ಸಮಸ್ತದೃಶ್ಯಪ್ರಪಂಚವನ್ನೆಲ್ಲ ಅರಿಯುವವನು ಯಾರು? ನಾನೇ ಅಲ್ಲವೆ? ಆದ್ದರಿಂದ ನಾನು ಚಿದ್ರೂಪನು. ಬಾಲ್ಯಕೌಮಾರಾದಿಗಳಲ್ಲಾಗುವ ಈ ದೇಹಾದಿಗಳ ಬದಲಾವಣೆಗಳನ್ನು ಅರಿಯುವವನು ಯಾರು? ನಾನೇ ಅಲ್ಲವೆ ? ಆದ್ದರಿಂದ ನಾನು ಚಿದ್ರೂಪನು. ಇಂದ್ರಿಯಗಳ ವ್ಯಾಪಾರಗಳನ್ನೂ, ಮನಸ್ಸಿನ ಚೇಷ್ಟೆಯನ್ನೂ , ಬುದ್ಧಿಯ ಕುಶಲತೆಯನ್ನೂ ಅರಿಯುವವನು ಯಾರು? ನಾನೇ ಆಗಿರುತ್ತೇನೆ. ಆದುದರಿಂದ ನಾನು ಚಿದ್ರೂಪನು. ದೃಶ್ಯರೂಪವಾದ ಈ ಜಗತ್ತನ್ನು ಅರಿಯುವ ದ್ವಾರಗಳು ಇಂದ್ರಿಯಗಳು ; ಇವುಗಳನ್ನು ಅರಿಯುವುದು ಮನಸ್ಸು ; ಇದನ್ನರಿಯುವುದು ಬುದ್ಧಿ; ಎಲ್ಲವನ್ನೂ ಅರಿಯುವ ಈ ಬುದ್ಧಿಯನ್ನು ಅರಿಯುವದು ಯಾವದು ? "**ನಾನು**" ಎಂಬ (ಅಹಂಕಾರ)ವದು. ಈ "**ನಾನು**" ಎಂಬುದನ್ನು ಅರಿಯುವುದು ಯಾವದೋ ಅದೇ ನಿಜವಾದ "**ನಾನು**" (ತಾನು, ಆತ್ಮ). ಆದ್ದರಿಂದ ನಾನು ಚಿದ್ರೂಪನು. ಕತ್ತಲೆಯ ಮನೆಯಲ್ಲಿ ಬಾಗಿಲನ್ನು ಹಾಕಿಕೊಂಡು ಮಲಗಿದ್ದಾಗ ಸ್ವಪ್ನದಲ್ಲಿ ತೋರಿದ ಅಗಾಧವಾದ ದೃಶ್ಯಪ್ರಪಂಚವು ಯಾವ ದೀಪದ ಅಥವಾ ಯಾವ ಸೂರ್ಯಚಂದ್ರರ ಬೆಳಕಿನಿಂದ ಬೆಳಗಿತು? ಅಲ್ಲಿ ಯಾರಿದ್ದರು ? ಅದೆಲ್ಲವನ್ನೂ ನಾನು ನನ್ನ ಸ್ವಪ್ರಕಾಶದಿಂದಲೇ ಬೆಳಗಿದೆನು. ಅಲ್ಲವೆ ? ಆದ್ದರಿಂದ ನಾನು ಚಿದ್ರೂಪನು. ಈ ವಿಷಯದಲ್ಲಿ ಶ್ರುತಿಯು ಹೀಗೆ ಹೇಳುತ್ತಿದೆ : "**ಅಸ್ತಮಿತ ಆದಿತ್ಯೇ ಯಾಜ್ಞವಲ್ಕ್ಯ**

ಚನ್ದ್ರಮಸ್ಯಸ್ತಮಿತೇ ಶಾನ್ತೇऽಗ್ನೌ ಶಾನ್ತಾಯಾಂ ವಾಚಿ ಕಿಂ ಜ್ಯೋತಿರೇವಾಯಂ ಪುರುಷ ಇತ್ಯಾತ್ಮೈವಾಸ್ಯ ಜ್ಯೋತಿರ್ಭವತೀತ್ಯಾತ್ಮನೈವಾಯಂ ಜ್ಯೋತಿಷಾऽऽಸ್ತೇ ಪಲ್ಯಯತೇ ಕರ್ಮ ಕುರುತೇ ವಿಪಲ್ಯೇತೀತಿ'' (ಬೃ. 4–3–6). ಈ ಮಂತ್ರಕ್ಕೆ ಪೂರ್ವದಲ್ಲಿ ಯಾವ ಜ್ಯೋತಿಯ ಬೆಳಕಿನಿಂದ ಈ ಪುರುಷನು ವ್ಯವಹರಿಸುತ್ತಾನೆಂದು ಜನಕನು ಪ್ರಶ್ನೆ ಮಾಡಿದಾಗ ಯಾಜ್ಞವಲ್ಕ್ಯನು ಆದಿತ್ಯನೆಂಬ ಜ್ಯೋತಿಯಿಂದ ವ್ಯವಹರಿಸುತ್ತಾನೆ – ಎಂದನು. ಆದಿತ್ಯನು ಮುಳುಗಿದರೆ ಆಗ ಯಾವ ಜ್ಯೋತಿಯಿಂದ? ಎಂದರೆ ಆಗ ಚಂದ್ರನೇ ಇವನಿಗೆ ಜ್ಯೋತಿಯು. ಚಂದ್ರನೂ ಮುಳುಗಿದಾಗ ಯಾವ ಜ್ಯೋತಿಯಿಂದ? ಎಂದರೆ ಆಗ ಅಗ್ನಿ ಎಂಬ ಜ್ಯೋತಿಯಿಂದ. ಅಗ್ನಿಯೂ ಆರಿದರೆ ಆಗ ಇವನು ಯಾವ ಜ್ಯೋತಿಯಿಂದ ವ್ಯವಹರಿಸುತ್ತಾನೆ ? ಎಂದರೆ ಆಗ ವಾಕ್‌ಜ್ಯೋತಿಯಿಂದ ಅಥವಾ ವಾಕ್ಕಿನಿಂದ ಬರುವ ಶಬ್ದವನ್ನನುಸರಿಸಿ ವ್ಯವಹರಿಸುತ್ತಾನೆ – ಎಂಬುದಾಗಿ ಹೇಳಿದೆ. ಈ ಮಂತ್ರದಲ್ಲಿ ಆದಿತ್ಯನೂ ಮುಳುಗಿ ಚಂದ್ರನೂ ಮುಳುಗಿ ಅಗ್ನಿಯೂ ಶಾಂತವಾಗಿ ವಾಕ್ಕೂ ಶಾಂತವಾಗಲು ಆಗ ಈ ಪುರುಷನು ಯಾವ ಜ್ಯೋತಿಯಿಂದ ವ್ಯವಹರಿಸುತ್ತಾನೆ? ಎಂಬುದಾಗಿ ಪ್ರಶ್ನೆಮಾಡಿ ಇದಕ್ಕೆ ಹೀಗೆಂದು ಉತ್ತರವನ್ನು ಹೇಳಿದೆ. ಏನೆಂದರೆ ಆಗ ಇವನಿಗೆ ಆತ್ಮನೇ ಜ್ಯೋತಿಯಾಗಿರುವನು ; ಆತ್ಮನೆಂಬ ಜ್ಯೋತಿಯಿಂದಲೇ ಇವನು ವ್ಯವಹರಿಸುತ್ತಾನೆ ಎಂಬುದಾಗಿ ಹೇಳಿದೆ. ತಾತ್ಪರ್ಯವೇನೆಂದರೆ : ಆತ್ಮನು ಸ್ವಯಂ ಜ್ಯೋತಿಸ್ಸ್ವರೂಪನು, ಚಿದ್ರೂಪನು – ಎಂದು ಸಿದ್ಧವಾಯಿತು. ಬೃಹದಾರಣ್ಯಕ ಶ್ರುತಿಯಲ್ಲಿ **''ಕತಮ ಆತ್ಮೇತಿ''** ಆತ್ಮ (ತಾನು) ನೆಂದರೆ ಯಾರು ? ಎಂಬುದಾಗಿ ಪ್ರಶ್ನಿಸಿ ಅದಕ್ಕೆ ಉತ್ತರವನ್ನು **''ಯೋऽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯನ್ತರ್ಜ್ಯೋತಿಃ ಪುರುಷಃ ಸಃ''** (ಬೃ. 4–3–7) ಪ್ರಾಣಗಳಲ್ಲಿರುವ ವಿಜ್ಞಾನಮಯನಾದ ಹೃದಯದೊಳಗಿರುವ ಜ್ಯೋತಿಯಾದ ಈ ಪುರುಷನು ಆತ್ಮನು ಎಂಬುದಾಗಿ ಉತ್ತರವನ್ನು ಹೇಳಿದೆ. ಇವೆಲ್ಲ ಪ್ರಮಾಣದಿಂದಲೂ ತಾನು ಜ್ಯೋತಿಸ್ಸ್ವರೂಪನೆಂಬುದು ಸಿದ್ಧವಾಗುತ್ತದೆ. ಸ್ವಪ್ನಾವಸ್ಥೆಯಲ್ಲಿ ತೋರಿದ ಸೂರ್ಯ, ಚಂದ್ರ, ನಕ್ಷತ್ರಮಂಡಲ, ಭೂಮಿ, ಆಕಾಶ – ಮೊದಲಾದವುಗಳನ್ನೂ ಗುಡ್ಡ, ಬೆಟ್ಟ, ನದಿ, ಗಿಡ, ಮರ, ಮನೆ, ಮಠ – ಮುಂತಾದವುಗಳನ್ನೂ ಪಶುಪಕ್ಷಿ ಮೊದಲಾದ ಸಮಸ್ತ ಜೀವರಾಶಿಗಳನ್ನೂ ಯಾರು ಬೆಳಗಿದವರು ? ಎಂದರೆ ಇದೆಲ್ಲವನ್ನೂ ಬೆಳಗುತ್ತಿದ್ದವನು, ಅರಿಯುತ್ತಿದ್ದವನು ನಾನೇ. ಆದ್ದರಿಂದ ನಾನು ಚಿದ್ರೂಪನಾಗಿರುತ್ತೇನೆ. ಇದನ್ನೇ ಬೃಹದಾರಣ್ಯಕಶ್ರುತಿಯು ಹೀಗೆ ಹೇಳುತ್ತಿದೆ : **''ಅತ್ರಾಯಂ ಪುರುಷಃ ಸ್ವಯಂಜ್ಯೋತಿರ್ಭವತಿ''** (ಬೃ. 4–3–9) ಇಲ್ಲಿ ಈ ಪುರುಷನು ಸ್ವಯಂಜ್ಯೋತಿಯಾಗಿರುತ್ತಾನೆ.

ಒಂದು ಪಕ್ಷ ನಾನು ಜಡನೆಂದಾಗಿದ್ದರೆ, ಯಾವ ದೇಹೇಂದ್ರಿಯಾದಿ ದೃಶ್ಯ ಪ್ರಪಂಚದ ಲವಲೇಶವೂ ಇಲ್ಲದಿರುವ ಗಾಢನಿದ್ರೆಯನ್ನು ಅರಿಯಲು ಸಾಧ್ಯವಿರಲಿಲ್ಲ. ಆದರೆ ಹೀಗಿರದೆ ಗಾಢನಿದ್ರೆಯಲ್ಲಿ ನಾನು ನನ್ನ ಕೇವಲ ಚಿದ್ರೂಪದಿಂದ ಇರುತ್ತೇನೆ. ಆದುದರಿಂದಲೇ ಎದ್ದಮೇಲೆ 'ನಾನು ಸುಖವಾಗಿದ್ದೆ; ಅಲ್ಲಿ ಏನೂ ಇರಲಿಲ್ಲ' ಎಂದು ಹೇಳುತ್ತೇನೆ. ಇದು ಅನುಭವವಲ್ಲವೆ ? ಆದುದರಿಂದ ನಾನು ಜಡರೂಪನಾಗಿರದೆ ಚಿದ್ರೂಪನೇ ಆಗಿರುತ್ತೇನೆಂಬುದು ಸಿದ್ಧವಾಯಿತು.

**ನಾನು ಅನಂತನು :–** ನನ್ನ ಸ್ವರೂಪವು ಅನಂತವು ಎಂದರೆ ಅಂತವಿಲ್ಲದ್ದು. ಇದು ಹೇಗೆಂಬುದನ್ನು ವಿಚಾರಮಾಡಿ ನೋಡೋಣ. ಈಗ ನಾನು ಈ ದೇಹಾದಿಗಳ ರೂಪದಿಂದ ಪರಿಚ್ಛಿನ್ನನಾಗಿಯೂ ಅಂತವುಳ್ಳವನಾಗಿಯೂ ತೋರುತ್ತಿದ್ದೇನೆ. ಗಾಢನಿದ್ರೆಯಲ್ಲಿ ಈ ಅಂತವುಳ್ಳ ಪರಿಚ್ಛಿನ್ನವಾದ ದೇಹಾದಿಗಳ ರೂಪದಿಂದ ನಾನು ಇದ್ದೇನೆಯೇ ? ಎಂದರೆ ಇಲ್ಲವೆಂದೇ ಹೇಳಬೇಕಾಗುತ್ತದೆ. ಏಕೆಂದರೆ ಅಲ್ಲಿ ದೇಹಾದಿಗಳೇ ಇಲ್ಲ. ಆದರೂ ನಾನು ಮಾತ್ರ ಈ ಅವಸ್ಥೆಗಿಂತ ಬೇರೆಯಾಗಿ ಇದ್ದೇನೆ. ಆ ನನ್ನ ಸ್ವರೂಪವು ಹೇಗಿದೆ, ಎಷ್ಟಿದೆ, ಎಲ್ಲಿದೆ, ಎಂದು ಹೇಳಲು ಸಾಧ್ಯವೆ? ಸಾಧ್ಯವಿಲ್ಲ. ನನ್ನ ಸ್ವರೂಪವು ಹುಡುಗನಾಗಿ ದೊಡ್ಡವನಾಗಿ ಮುದುಕನಾಗಿ ಸ್ತ್ರೀಯಾಗಿ ಪುರುಷನಾಗಿ ಬೆಳ್ಳಗೆ ಕೆಂಪಗೆ –ಇವೇ ಮೊದಲಾದ ವಿಕಲ್ಪಗಳಿಂದ ಹೀಗಿದೆ ಎಂದು ಎಚ್ಚರದಲ್ಲಿ ಹೇಳುವಂತೆ ಗಾಢನಿದ್ರೆಯಲ್ಲಿ ನನ್ನ ಸ್ವರೂಪವು ಹೀಗಿದೆ, ನಾನು ಈ ರೂಪದಿಂದ ಇದ್ದೇನೆ – ಎಂಬುದಾಗಿ ಹೇಳಲು ಬರುವುದಿಲ್ಲ. ಇದರಂತೆಯೇ ಈಗ ನಾನು ಇಷ್ಟಿದ್ದೇನೆ, ನನ್ನ ಸ್ವರೂಪವು ಇಷ್ಟಿದೆ ಎಂದರೆ ಉದ್ದ, ದಪ್ಪ , ತೆಳವು, ತೂಕ ಇವೇ ಮೊದಲಾದ ವಿಶೇಷಗಳಿಂದ ನಾನು ಇಷ್ಟಿದ್ದೇನೆ ಎನ್ನುವಂತೆ ಆಗ ನಾನು ಹೀಗಿದ್ದೇನೆ ಇಷ್ಟಿದ್ದೇನೆ ಎಂದು ಹೇಳಲು ಬರುವುದಿಲ್ಲ. ಈಗ ನಾನು ಇಂಥ ದೇಶದಲ್ಲಿ ಈ ಕಾಲದಲ್ಲಿ ಇದ್ದೇನೆ ಎನ್ನುವಂತೆ ಆಗ ನಾನು ಇಂಥ ದೇಶದಲ್ಲಿ ಇಂಥ ಕಾಲದಲ್ಲಿ ಇದ್ದೆನೆಂದು ಹೇಳುವುದಕ್ಕೆ ಬರುವುದಿಲ್ಲ. ಗಾಢನಿದ್ರೆಯಲ್ಲಿ ನಾನು ದೇಶಕಾಲ ವಸ್ತು ಪರಿಚ್ಛೇದರಹಿತನಾಗಿ ಹೀಗೆಂದು ವರ್ಣಿಸಲು ಬಾರದಂತಹ ಸ್ವರೂಪದಿಂದಿರುತ್ತೇನೆ. ಇಂತಹ ನನ್ನ ಸ್ವರೂಪವು ಅನಂತವಾಗಿದೆ. ಇಷ್ಟೇ ಅಲ್ಲದೆ ಎಚ್ಚರ, ಕನಸು, ನಿದ್ರೆ – ಮೊದಲಾದ ಅವಸ್ಥೆಗಳನ್ನೆಲ್ಲ ಅರಿಯುವಂಥ ನಾನು (ಅರಿವು) ಹೀಗಿದ್ದೇನೆ ಹೀಗಿದ್ದೆನೆಂದು ಹೇಳಲು ಸಾಧ್ಯವಿಲ್ಲ. ಇವೆಲ್ಲವನ್ನೂ ಅರಿಯುವಂತಹ ಅರಿವು ಎಂದಾದರೂ ಇಲ್ಲದಂತಾಗುತ್ತದೆಯೊ ? ಇಲ್ಲ. ಆದುದರಿಂದ ನಾನು ಅನಂತನು. **"ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ। ಕರ್ಮಾಧ್ಯಕ್ಷಃ**

**ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ''** (ಶ್ವೇ. 6–11) ಒಬ್ಬನೇ ಒಬ್ಬನು ಪರಮಾತ್ಮನು. ಅವನು ಸರ್ವಭೂತಗಳಲ್ಲಿಯೂ ಗೂಢನಾಗಿ ಇದ್ದಾನೆ. ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದ್ದಾನೆ. ಸಮಸ್ತ ಜೀವರಲ್ಲಿಯೂ ಆತ್ಮರೂಪದಿಂದ ಇದ್ದಾನೆ. ಸಮಸ್ತ ಕರ್ಮಗಳಿಗೂ ಅಧ್ಯಕ್ಷನಾಗಿದ್ದಾನೆ. ಸರ್ವ ಭೂತಗಳೊಳಗೆ ಇದ್ದಾನೆ, ಸಾಕ್ಷಿಯಾಗಿದ್ದಾನೆ , ಚೈತನ್ಯಸ್ವರೂಪನಾಗಿದ್ದಾನೆ, ತಾನೇತಾನಾಗಿದ್ದಾನೆ, ಗುಣರಹಿತನಾಗಿದ್ದಾನೆ – ಎಂಬುದಾಗಿ ಶ್ರುತಿಯು ಸಾರುತ್ತಿದೆ.

ಸಾಮಾನ್ಯವಾಗಿ ಎಲ್ಲರೂ, ವಿಶಾಲವಾದ ಪ್ರಪಂಚವಿದೆ, ಈ ಪ್ರಪಂಚದಲ್ಲಿ ನಾನೊಬ್ಬನಿದ್ದೇನೆ, ನನಗೆ ಈ ದೇಹದಲ್ಲಿ ಎಚ್ಚರಕನಸುನಿದ್ರೆಗಳಾಗುತ್ತಿವೆ, ಇವುಗಳನ್ನು ನಾನು ಅನುಭವಿಸುತ್ತಾ ಇದ್ದೇನೆ, ಇವು ಒಂದಾದಮೇಲೊಂದು ಆಗುತ್ತವೆ, ಹೀಗೆಯೇ ಕೆಲವು ಕಾಲವು ಕಳೆದು ಕೊನೆಗೆ ಒಂದು ದಿವಸ ನಾನು ಈ ಪ್ರಪಂಚವನ್ನು ಬಿಟ್ಟು ಹೋಗುತ್ತೇನೆ, ನಾನು ಹೋದಮೇಲೂ ಈ ಪ್ರಪಂಚವು ಹೀಗೆಯೇ ಇರುತ್ತದೆ – ಎಂಬುದಾಗಿ ತಿಳಿದಿರುತ್ತಾರೆ. ಆದರೆ ಇದು ಸತ್ಯವೆ ? ಎಂಬುದನ್ನು ವಿಚಾರಮಾಡಿ ನೋಡಬೇಕು. ಇದು ಹೇಗಿದೆ ? ಎಂದರೆ ಹೇಗೆ ನನ್ನಲ್ಲಿಯೇ ಸ್ವಪ್ನಾವಸ್ಥೆಯು ತೋರುತ್ತದೆಯೋ ಮತ್ತು ಆ ಅವಸ್ಥೆಯಲ್ಲಿಯೇ ಸ್ವಪ್ನಪ್ರಪಂಚ ಅದರಲ್ಲಿ ಈಗಿರುವಂತೆಯೇ ಒಂದು ದೇಹ ಇಂದ್ರಿಯಮನಸ್ಸುಬುದ್ಧಿಗಳುಳ್ಳ ನಾನು ಮತ್ತು ನನ್ನಂತೆಯೇ ಅನೇಕ ಜೀವರು ಇರುತ್ತಾರೆಯೋ ಅದರಂತೆಯೇ, ಆತ್ಮಸ್ವರೂಪನಾದ ನನ್ನಲ್ಲಿ ಈ ಜಾಗ್ರದವಸ್ಥೆಯು ತೋರುತ್ತಿದೆ. ಈ ಜಾಗ್ರದವಸ್ಥೆಯಲ್ಲಿ ಈ ಸ್ಥೂಲಪ್ರಪಂಚವು ತೋರುತ್ತಿದೆ. ಇದರಲ್ಲಿ ದೇಹ ಇಂದ್ರಿಯಮನಸ್ಸುಬುದ್ಧಿಗಳಿಂದ ಕೂಡಿದ ನಾನು, ನನ್ನಂತೆಯೇ ಇತರ ಅನೇಕ ಜೀವರು, ಎಲ್ಲರಿಗೂ ಸುಖದುಃಖ ಗಳನ್ನುಂಟುಮಾಡುವ ಅನೇಕಪದಾರ್ಥಗಳು ; ಸೂರ್ಯ, ಚಂದ್ರ, ಗುಡ್ಡ ಬೆಟ್ಟ, ನದಿ –ಇವೇ ಮೊದಲಾದ ಜಡಚೈತನ್ಯವಸ್ತುಗಳು ಇವೆಲ್ಲವೂ ತೋರುತ್ತಿವೆ. ಆದರೆ ಈ ಅವಸ್ಥೆಯಾಗಲಿ, ಈ ಜಗತ್ತಾಗಲಿ , ಈ ದೇಹಾದಿಗಳಾಗಲಿ ಇವೆಲ್ಲವೂ ಆತ್ಮಸ್ವರೂಪ ನಾದ ನನ್ನನ್ನು ಬಿಟ್ಟು ತೋರುವದಕ್ಕೆ ಶಕ್ಯವಿಲ್ಲ. ಇದರಿಂದ ಏನಾಯಿತೆಂದರೆ : ಈಗ ನಾವು ತಿಳಿದುಕೊಂಡಿರುವಂತೆ ಇದು ಒಂದು ಸ್ವತಂತ್ರವಾಗಿರುವ ಪ್ರಪಂಚ, ಇದರಲ್ಲಿ ನಾನು ಒಬ್ಬ ದೇಹಿ, ನಾನು ಅವಸ್ಥೆಗಳನ್ನನುಭವಿಸುತ್ತಿದ್ದೇನೆ ಎನ್ನುವದು ತಪ್ಪಾಯಿತು, ಸುಳ್ಳಾಯಿತು. ಮತ್ತೇನೆಂದರೆ ಈ ಅವಸ್ಥೆಯೂ, ಈ ಪ್ರಪಂಚವೂ, ಈ ದೇಹವೂ ನನ್ನಲ್ಲಿಯೇ ಕಲ್ಪಿತವಾಗಿ ತೋರುತ್ತಿವೆ. ಇವೆಲ್ಲಕ್ಕೂ ಆಧಾರನಾಗಿ ನಾನು ಅನಂತ ನಾಗಿದ್ದೇನೆ – ಎನ್ನುವುದು ನಿರ್ಣಯವಾಯಿತು.

ಅವಸ್ಥೆಗಳು ಒಂದಾದಮೇಲೊಂದು ಬರುವವೆಂದು ನಾವು ತಿಳಿದು ಕೊಂಡಿದ್ದೇವೆ. ಆದರೆ ವಾಸ್ತವವಾಗಿ ಹಾಗಿಲ್ಲ. ದೇಶಕಾಲಗಳಿಗೆ ಕಟ್ಟುಬಿದ್ದ ವಸ್ತು ಅಥವಾ ಘಟನೆಗಳನ್ನು ಒಂದಾದಮೇಲೊಂದು ಎನ್ನಬೇಕು. ಆದರೆ ಆಯಾ ಅವಸ್ಥೆಗೇ ಆಯಾ ದೇಶಕಾಲಗಳು ಕಟ್ಟುಬಿದ್ದಿರುವುದರಿಂದ ಅವಸ್ಥೆಗಳನ್ನು ಒಂದಾದಮೇಲೊಂದು ಎಂದು ಕಾಲಕ್ರಮದಿಂದ ತಿಳಿಯುವುದು ತಪ್ಪು. ಅನಂತಸ್ವರೂಪನಾದ ತನ್ನಲ್ಲಿ ಅಂತವುಳ್ಳ ಈ ಅವಸ್ಥೆಗಳೂ ಈ ಸಮಗ್ರಪ್ರಪಂಚವೂ ಕಲ್ಪಿತವಾಗಿದೆ. ತೋರಿ ಅಡಗುತ್ತಿವೆ, ಎಂದರೆ ಜಾಗ್ರದಾದಿ ಅವಸ್ಥೆಗಳಲ್ಲಿ ದೇಶಕಾಲಾದಿರೂಪದಿಂದ ಜಗತ್ತು ತೋರುವಾಗ ಇದು ಅನಂತವಾಗಿ ಕಂಡರೂ, ಆತ್ಮನಲ್ಲಿಯೇ ಈ ಅವಸ್ಥೆಗಳು ಕಲ್ಪಿತವೆಂದು ತಿಳಿದಾಗ ಆತ್ಮನು ಈ ಅನಂತಕ್ಕೂ ಅನಂತನೆಂಬುದು ಗೊತ್ತಾಗುತ್ತದೆ. ವಾಸ್ತವವಾಗಿ ಸಾಕ್ಷಿಯಾಗಿರುವ ತನ್ನಲ್ಲಿ ಎಚ್ಚರವೂ ಇಲ್ಲ ಕನಸೂ ಇಲ್ಲ, ನಿದ್ರೆಯೂ ಇಲ್ಲ, ಇವೆಲ್ಲವೂ ಕೇವಲ ಕಲ್ಪನಾ ಮಾತ್ರ. ಇಂತಹ ಎಚ್ಚರಕನಸುನಿದ್ರೆಗಳೆಲ್ಲಕ್ಕೂ ಬೇರೆಯಾದ, ಇವೆಲ್ಲವನ್ನೂ ಬೆಳಗುವಂಥ ಕೇವಲ ಸಾಕ್ಷಿಚೈತನ್ಯವೇ ತಾನು. ಈ ತಾನೇ ಅನಂತನು.

## 13. ನಾನು ನಿಷ್ಕ್ರಿಯನು

ಈ ರೀತಿಯಲ್ಲಿ ಆತ್ಮವಿಚಾರವನ್ನು ಮಾಡುತ್ತಾ ನನ್ನ ನಿಜರೂಪವಾದ ಪರಮಾತ್ಮಸ್ವರೂಪದಲ್ಲಿರುವವರೆಗೂ ಲವಲೇಶವೂ ದುಃಖದ ಸೋಂಕಿಲ್ಲದೆ ಬ್ರಹ್ಮಾನಂದದಲ್ಲಿರುವಂತೆ ಅನ್ನಿಸುತ್ತದೆ. ಆದರೆ ಪುನಃ ವಿಚಾರವನ್ನು ಬಿಟ್ಟು ಕರ್ಮಗಳನ್ನೂ, ವ್ಯವಹಾರಗಳನ್ನೂ ಮಾಡುವಾಗ ಆ ಆನಂದವು ಹೋಗಿ ಬಿಡುವುದಲ್ಲಾ, ಇದಕ್ಕೇನು ಗತಿ ? ಎಂಬುದಾಗಿ ಅನೇಕಸಾಧಕರಿಗೆ ಸಂಶಯವು ಉತ್ಪನ್ನವಾಗುತ್ತದೆ. ಇದಕ್ಕೆ ಪರಿಹಾರವೇನೆಂದರೆ: ವಿಚಾರಮಾಡಿನೋಡಬೇಕು. ಆಗ ಏನು ತಿಳಿಯುತ್ತದೆ ? ಎಂದರೆ ಈಗ ನಾವು ತಿಳಿದಿರುವಂತೆ ನಮಗೆ ಆನಂದವು ಹೊಸದಾಗಿ ಆಗುವುದಿಲ್ಲ. ಮತ್ತೇನೆಂದರೆ ಆನಂದಸ್ವರೂಪರೇ ನಾವಾಗಿರುತ್ತೇವೆ. ಹೇಗೆ ನಾವು ನಮ್ಮ ಹೆಸರನ್ನು ಪದೇಪದೇ ಸ್ಮರಿಸಿಕೊಳ್ಳದಿದ್ದರೂ ಸಹ ಅದರ ಬಗ್ಗೆ ನಮಗೆ ವಿಪರೀತಭಾವನೆಯಾಗುವುದಿಲ್ಲವೋ ಹಾಗೆಯೇ ನಾವು ನೆನಪುಮಾಡಿಕೊಳ್ಳ ದಿದ್ದರೂ ಸಹ ನಮ್ಮ ಸ್ವರೂಪದ ಆನಂದವು ಹೋಗುವುದಿಲ್ಲ. ಅಷ್ಟೇ ಅಲ್ಲದೆ ಅದು ಯಾವ ಕಾರಣದಿಂದಲೂ ಕಡಿಮೆಯಾಗುವುದಿಲ್ಲ ಮತ್ತು ವಿಕಾರವಾಗುವುದೂ ಇಲ್ಲ. ನಾನು ಎಂದೆಂದಿಗೂ ಆನಂದದ ನಿಧಿಯೇ ಆಗಿರುವ ಆತ್ಮಸ್ವರೂಪವೇ. ವಾಸ್ತವವಾಗಿ

ನಾನು ಯಾವ ಕರ್ಮಗಳನ್ನೂ ಯಾವ ವ್ಯವಹಾರಗಳನ್ನೂ ನಿಜವಾಗಿ ಮಾಡುವುದೇ ಇಲ್ಲ. ನನ್ನಲ್ಲಿ ಯಾವ ಕ್ರಿಯೆಯೂ ಇಲ್ಲವೇ ಇಲ್ಲ. ನಿಜವಾಗಿ ನಾನು ನಿಷ್ಕ್ರಿಯನೇ ಆಗಿರುತ್ತೇನೆ. ಇದಕ್ಕೆ "ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್" (ಶ್ವೇ. 6–19) ಎಂಬ ಶ್ರುತಿಯೇ ಪ್ರಮಾಣವಾಗಿದೆ.

ಮಾಡುತ್ತಿರುವುದು ಮತ್ತು ಅನುಭವಿಸುವುದು ಹೀಗೆ ಕರ್ತೃತ್ವಭೋಕ್ತೃತ್ವಗಳು ನನ್ನಲ್ಲಿ ಪ್ರತ್ಯಕ್ಷವಾಗಿ ತೋರುವುವಲ್ಲ? ಎಂದು ಅನ್ನಿಸಬಹುದು. ಇದಕ್ಕೆ ಸಮಾಧಾನ ವೇನೆಂದರೆ ಇದು ಕೇವಲ ತೋರುವಿಕೆಮಾತ್ರವೊ, ಅಥವಾ ಹೀಗೆ ತೋರುವುದು ನಿಜವೊ, ಎಂಬುದನ್ನು ವಿಚಾರಮಾಡಿನೋಡಬೇಡವೆ ? ಯಾವುದನ್ನೂ ವಿಚಾರ ಮಾಡದೆ ಸುಮ್ಮನೆ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಹೀಗೆಯೇ ಕನಸಿನಲ್ಲಿಯೂ ಸಹ ಅನೇಕಕರ್ಮಗಳನ್ನು, ವ್ಯವಹಾರಗಳನ್ನು ಮಾಡಿದ ಹಾಗೆ ಮತ್ತು ಅವುಗಳ ಫಲಗಳಾದ ಸುಖದುಃಖಗಳನ್ನು ಅನುಭವಿಸುತ್ತಿದ್ದ ಹಾಗೆ ತೋರುತ್ತಿದ್ದಿತಲ್ಲ? ಆಗ ನಾನು ಮಾಡುತ್ತಿದ್ದದ್ದೂ ಮತ್ತು ಅನುಭವಿಸುತ್ತಿದ್ದದ್ದೂ ನಿಜವೆ ? ಇಲ್ಲ. ಏನನ್ನೂ ಮಾಡದೆ ಏನನ್ನೂ ಅನುಭವಿಸದೆ ಸುಮ್ಮನೆ ಹಾಸಿಗೆಯಮೇಲೆ ಹಾಯಾಗಿ ಮಲಗಿದ್ದೆನಲ್ಲವೆ ? ಕನಸಿನಲ್ಲಿ ನಾನು ಏನೇನೋ ಮಾಡಿದಂತೆಯೂ ಏನೇನೋ ಅನುಭವಿಸಿದಂತೆಯೂ ತೋರಿದರೂ ಯಥಾರ್ಥವಾಗಿ ಹೇಗೆ ನಾನು ಏನನ್ನೂ ಮಾಡದೆ ಯಾವುದನ್ನೂ ಅನುಭವಿಸದೆ ನಿರ್ವಿಕಾರನೂ, ನಿಷ್ಕ್ರಿಯನೂ, ಅಸಂಗನೂ ಆಗಿದ್ದೆನೋ ಹಾಗೆಯೇ, ಈ ಎಚ್ಚರದಲ್ಲಿಯೂ ಸಹ ಇದ್ದೇನೆ – ಎಂದು ತಿಳಿಯಬೇಕು.

ಇದಕ್ಕೆ ದೃಷ್ಟಾಂತ : ಒಬ್ಬ ರಾಜನು ಒಂದುದಿನ ಸಮೃದ್ಧಿಯಾಗಿ ಪಂಚಭಕ್ಷ್ಯ ಪರಮಾನ್ನವನ್ನು ಊಟಮಾಡಿ ದಾಸದಾಸಿಯರಿಂದ ಸೇವೆಯನ್ನು ಮಾಡಿಸಿಕೊಳ್ಳುತ್ತಾ ವಿಶ್ರಾಂತಿ ತೆಗೆದುಕೊಳ್ಳುವುದಕ್ಕಾಗಿ ಹಂಸತೂಲಿಕಾತಲ್ಪದ ಮೇಲೆ ಸುಮ್ಮನೆ ಮಲಗಿದ್ದನು. ಆಗ ಹಾಗೆಯೇ ಅವನಿಗೆ ಸ್ವಲ್ಪ ನಿದ್ರೆ ಬಂದು ಒಂದು ಕನಸುಬಿದ್ದಿತು. ಅದರಲ್ಲಿ ಶತ್ರುಗಳು ಬಂದು ಅವನ ರಾಜ್ಯಕ್ಕೆ ಮುತ್ತಿಗೆಯನ್ನು ಹಾಕಿ ಯುದ್ಧವನ್ನು ಮಾಡಿ ರಾಜ್ಯವನ್ನು ಗೆದ್ದುಬಿಟ್ಟರು. ರಾಜನು ರಾಜ್ಯವನ್ನು ಕಳೆದುಕೊಂಡು ಅಡವಿಯ ಪಾಲಾದನು. ಅಲ್ಲಿ ಬಹಳ ಕಷ್ಟದಿಂದ ದುಃಖಪಡುತ್ತಾ ಕೆಲವು ಕಾಲವನ್ನು ಕಳೆದನು. ಹೀಗಿರಲು ಒಂದುಸಲ ಮೂರು ದಿನಗಳವರೆಗೂ ಎಲ್ಲಿ ಸುತ್ತಿದರೂ ತಿನ್ನಲು ಏನೂ ಸಿಕ್ಕದೆ ಉಪವಾಸದಿಂದ ಬಳಲುತ್ತಾ ಕೊನೆಗೆ ದೈವವಶಾತ್ ಸಿಕ್ಕಿದ ಸ್ವಲ್ಪ ಅನ್ನವನ್ನು ತಿನ್ನಬೇಕೆಂದು ಒಂದು ಮರದ ಕೆಳಗೆ ಬಂದು ಕುಳಿತುಕೊಂಡನು. ಅನ್ನವನ್ನು ತಿನ್ನಬೇಕೆನ್ನುವಷ್ಟರಲ್ಲಿಯೇ ಒಂದು ಕಡೆಯಿಂದ ಎತ್ತು, ಮತ್ತೊಂದು ಕಡೆಯಿಂದ

ನಾಯಿ ಬಂದು ಒಂದಕ್ಕೊಂದು ಹೊಡೆದಾಡಿ ಅನ್ನವನ್ನು ಮಣ್ಣುಪಾಲು ಮಾಡಿದವು. ಆಗ ಅವನು 'ಕೈಗೆ ಬಂದ ತುತ್ತು ಬಾಯಿಗಿಲ್ಲವಾಯಿತೆ ? ನನಗೆ, ಈ ದುರವಸ್ಥೆಯು ಬಂದಿತಲ್ಲ!' ಎಂಬುದಾಗಿ ಗಟ್ಟಿಯಾಗಿ ಅತ್ತುಬಿಟ್ಟನು, ಕೂಡಲೇ ಎಚ್ಚರವಾಯಿತು. ಆಗ ನೋಡಲಾಗಿ ತಾನು ಹೊಟ್ಟೆಯತುಂಬ ಪಂಚಭಕ್ಷ್ಯಪರಮಾನ್ನವನ್ನುಂಡು ಮಂಚದಮೇಲೆ ಮಲಗಿರುವುದು ಗೊತ್ತಾಯಿತು. ಆಗ ಅವನು ಆಶ್ಚರ್ಯಭರಿತನಾಗಿ ಅದುವರೆಗೂ ಕಂಡದ್ದೆಲ್ಲವೂ ಕೇವಲ ತನ್ನ ಮನಸ್ಸಿನ ಭ್ರಮೆಯೆಂದು ತಿಳಿದುಕೊಂಡು ಸಮಾಧಾನಗೊಂಡನು.

ಇದರಂತೆಯೇ ಮತ್ತೊಂದು ಉದಾಹರಣೆ : ಒಬ್ಬ ಭಿಕ್ಷುಕನು ಭಿಕ್ಷೆಯನ್ನು ಬೇಡಿಕೊಂಡುಬಂದು ಒಂದು ಧರ್ಮಶಾಲೆಯಲ್ಲಿಮಲಗಿದ್ದನು. ಆಗ ಅವನಿಗೊಂದು ಕನಸುಬಿದ್ದಿತು. ಅದರಲ್ಲಿ ಆ ದೇಶದ ಅರಸನು ಸತ್ತುಹೋಗಿದ್ದಾನೆ. ಅರಸನಿಗೆ ಮಕ್ಕಳಿರಲಿಲ್ಲ. ಆಗ ಅಲ್ಲಿಯ ಪ್ರಮುಖರೆಲ್ಲರೂ ಸೇರಿ ಪಟ್ಟದ ಆನೆಯ ಸೊಂಡಿಲಿನಲ್ಲಿ ಒಂದು ಹೂವಿನಮಾಲೆಯನ್ನು ಕೊಟ್ಟು ಅದನ್ನು ಆ ಆನೆಯು ಯಾರಿಗೆ ಹಾಕುವುದೋ ಅವರೇ ಆ ದೇಶಕ್ಕೆ ಅರಸರಾಗುವರೆಂದು ಸಾರಿದರು. ಆಗ ಆನೆಯು ಆ ಭಿಕ್ಷುಕನಿದ್ದೆಡೆಗೆ ಬಂದು ಅವನಿಗೇ ಮಾಲೆಯನ್ನು ಹಾಕಿತು. ಆಗ ಎಲ್ಲರೂ ಸೇರಿ ಅವನನ್ನೇ ರಾಜನನ್ನಾಗಿ ಮಾಡಿದರು. ಆನಂತರ ಅವನಿಗೆ ರಾಜಕನ್ಯೆಯೊಡನೆ ಲಗ್ನವಾಯಿತು. ಅನಂತರ ಮಕ್ಕಳಾದರು. ಹೀಗೆಯೇ ಸುಖವಾಗಿ ಇರುವಾಗ ಶತ್ರುಗಳು ಬಂದು ಆ ರಾಜ್ಯಕ್ಕೆ ಮುತ್ತಿಗೆ ಹಾಕಿದರು. ಘೋರವಾಗಿ ಯುದ್ಧವು ನಡೆಯಿತು. ಆಗ ಅವನು ಗಾಬರಿಯಾಗಿ ಕಿರಿಚಿದನು. ಕೂಡಲೆ ಎಚ್ಚರವಾಯಿತು. ಕಣ್ಣುಬಿಟ್ಟು ನೋಡಿದಾಗ ಅವನಿಗೆ 'ನಾನು ರಾಜನೂ ಆಗಿರಲಿಲ್ಲ, ರಾಜ್ಯಕ್ಕೆ ಶತ್ರುಗಳೂ ಬಂದಿರಲಿಲ್ಲ ; ಇದೆಲ್ಲವೂ ನನಗಾದ ಕೇವಲ ಕನಸು ' – ಎಂದು ತಿಳಿಯಿತು. ತಾತ್ಪರ್ಯವೇನೆಂದರೆ :

**ಉತ್ತಮಾಧಮಭಾವಶ್ಚೇತ್ತೇಷಾಂ ಸ್ಯಾದಸ್ತು ತೇನ ಕಿಮ್ ।**
**ಸ್ವಪ್ನಸ್ಥರಾಜ್ಯಭಿಕ್ಷಾಭ್ಯಾಂ ನ ಬುದ್ಧಃ ಸ್ಪೃಶ್ಯತೇ ಖಲು ॥**

ಆ ರಾಜನು ಕನಸಿನಲ್ಲಿ ರಾಜ್ಯವನ್ನು ಕಳೆದುಕೊಂಡು ದರಿದ್ರನಾದಂತೆ ಕಂಡರೂ ಸಹ ಅವನು ನಿಜವಾಗಿ ದರಿದ್ರನಾಗಿದ್ದನೇನು ? ಇಲ್ಲ. ಅವನು ಭಿಕ್ಷಕ್ಕೆ ಹೋಗಿದ್ದನೇನು? ಇಲ್ಲ. ಅದರಂತೆಯೇ ಭಿಕ್ಷುಕನು ರಾಜನಾದದ್ದು ನಿಜವೇನು ? ಇಲ್ಲ. ಹೇಗೆ ಕನಸಿನಲ್ಲಿ ರಾಜನು ಭಿಕ್ಷುಕನಾದಂತೆ ತೋರಿದರೂ ಸಹ ಅವನು ಭಿಕ್ಷುಕನಾಗಿರಲಿಲ್ಲವೋ ಮತ್ತು ಭಿಕ್ಷುಕನು ರಾಜನಾದಂತೆ ತೋರಿದರೂ ಸಹ ಅವನು ರಾಜನಾಗಿರಲಿಲ್ಲವೋ ಹಾಗೆಯೇ

ಎಚ್ಚರದಲ್ಲಿ ನಾವು ಸಂಸಾರಿಗಳಾಗಿ ಕಂಡರೂ ಅಸಂಸಾರಿಸ್ವರೂಪರೆಂದೇ ತಿಳಿಯಬೇಕು. ನಾವು ಸಂಸಾರವನ್ನು ಮಾಡುವುದೂ, ಸುಖದುಃಖಗಳನ್ನನುಭವಿಸುವುದೂ, ಮಾನಾಪಮಾನಗಳನ್ನು ಹೊಂದುವದೂ, ಸಿರಿತನಬಡತನಗಳೂ, ಬಂಧನವೂ, ಹುಟ್ಟುಸಾವುಗಳೂ, ಪಾಪಪುಣ್ಯಗಳೂ, ಸ್ತ್ರೀಪುರುಷಭಾವನೆಗಳೂ ಇವೆಲ್ಲವೂ ಈ ದೊರೆಯ ಕನಸಿನಂತಿವೆ. ಎಚ್ಚರ ಮತ್ತು ಕನಸಿನ ಪ್ರಪಂಚಕ್ಕೆಲ್ಲ ಆಧಾರನಾದ ಆತ್ಮಸ್ವರೂಪನಾದ ತನ್ನಲ್ಲಿ ಯಾವುದಾದರೂ ಕ್ರಿಯೆಗಳಿವೆಯೆ? ಎಂದರೆ ತನ್ನ ಸ್ವರೂಪವು ಏನನ್ನೂ ಮಾಡುವುದಿಲ್ಲ. ಅದರಲ್ಲಿ ಯಾವ ಕ್ರಿಯೆಗಳೂ ಇಲ್ಲವೇ ಇಲ್ಲ. ಇಂಥ ಸ್ವರೂಪವೇ ನಾನಾಗಿರುವಾಗ ನಾನು ಮಾಡುವವನು (ಕರ್ತೃ) , ನಾನು ಅನುಭವಿಸುವವನು (ಭೋಕ್ತೃ) – ಎನ್ನುವುದು ಶುದ್ಧ ತಪ್ಪಲ್ಲವೇ? ಅನುಭವಸ್ವರೂಪನಾಗಿರುವ ತನ್ನಲ್ಲಿ ಕರ್ತೃತ್ವಭೋಕ್ತೃತ್ವಗಳು ಇರುವಂತೆ ಎಚ್ಚರಸ್ವಪ್ನಗಳಲ್ಲಿ ಭಾಸವಾಗುತ್ತಿದೆಯೇ ಹೊರತು ಸ್ವತಃ ತನ್ನ ಸ್ವರೂಪದಲ್ಲಿ ಇವು ಇಲ್ಲ. ಆಚಾರ್ಯರು ಹೇಳುವಂತೆ:

''ನ ಹಿ ಸುಷುಪ್ತಿಸಮಾಧ್ಯಾದಿಷು ಭ್ರಾನ್ತಿಪ್ರತ್ಯಯಸನ್ತಾನವಿಚ್ಛೇದೇಷು ಕರ್ತೃತ್ವಭೋಕ್ತೃತ್ವಃ ಉಪಲಭ್ಯತೇ । ತಸ್ಮಾತ್ ಭ್ರಾನ್ತಿಪ್ರತ್ಯಯನಿಮಿತ್ತ ಏವಾಯಮ್'' (ಗೀ. 18–66) ಎಂದೇ ತಿಳಿಯಬೇಕು.

ಈ ಎಲ್ಲಾ ವಿಚಾರಗಳಿಂದ ನಾನು ನಿಷ್ಕ್ರಿಯನೆಂಬುದು ಸಿದ್ಧವಾಯಿತು.

## 14. ಈ ಸಂಸಾರವು ಒಂದು ಕನಸು

ಜೀವರೂಪದಿಂದಲೂ, ಜಡಚೈತನ್ಯವಾಗಿಯೂ ತೋರುತ್ತಿರುವ ಸಮಸ್ತ ಜಗತ್ತೂ ಪರಮಾತ್ಮಸ್ವರೂಪದಲ್ಲಿ ತೋರುವ ಒಂದು ಕನಸು.

**ಸಂಸಾರ ಹಾ ಚಿ ದೀರ್ಘ ಸ್ವಪ್ನ । ಲೋಭೇ ವೋಸಣಾತೀ ಜನ ।**
**ಮಾಝಿ ಕಾಂತಾ ಮಾಝೇ ಧನ । ಕನ್ಯಾ ಪುತ್ರ ಮಾಝೇ ॥**

(ದಾ. 7–1–20)

''ಈ ಸಂಸಾರವೆಂದರೆ ಒಂದು ದೀರ್ಘಸ್ವಪ್ನ ; ನಿದ್ರೆಯ ವಶವಾಗಿ ಕಾಣುವ ಕನಸು ಅದು. ಇದು ಅವಿದ್ಯೆಯ ವಶವಾಗಿ ಕಾಣುವ ಕನಸು. ಕನಸೆಂದರೆ ಅದೊಂದು ಇದ್ದದ್ದೇನು? ಇಲ್ಲ. ಎಂದಿಗೂ ಇಲ್ಲವೇ ಇಲ್ಲ. ಕಾಣುವಾಗಲೂ ಸಹ ಸತ್ಯವಾಗಿ ಇಲ್ಲವೇ ಇಲ್ಲ. ಇದನ್ನು ತಿಳಿಯದೆ ಜನರು ಸಂಸಾರವು ಸತ್ಯವಾಗಿಯೂ ಇದೆ ಎಂದು

ಭಾವಿಸಿಕೊಂಡು ನನ್ನ ಮನೆ, ನನ್ನ ಹೊಲ, ನನ್ನ ಆಸ್ತಿ, ನನ್ನ ಹೆಂಡತಿ, ನನ್ನ ಮಕ್ಕಳು ಎಂದೂ, ಇವುಗಳೆಲ್ಲವೂ ನಿಜವಾದವುಗಳೆಂದೂ ತಿಳಿದುಕೊಂಡು ರಾಗದ್ವೇಷಶೋಕ ಮೋಹಾದಿಗಳಿಗೆ ಸಿಲುಕಿಕೊಂಡು ಹೊಡೆದಾಡುತ್ತಾ ನಾನಾ ದುಃಖವನ್ನನುಭವಿಸುತ್ತಾರೆ ಎಂಬುದಾಗಿ ಸಮರ್ಥರಾಮದಾಸಸದ್ಗುರುಗಳು ಹೇಳುತ್ತಾರೆ. ಕನಸಿಗೂ ಎಚ್ಚರಕ್ಕೂ ಏನೂ ಭೇದವಿಲ್ಲ, ಎರಡೂ ಸಮಾನವೇ ಎಂಬುದಕ್ಕೆ ಮಾಂಡೂಕ್ಯಕಾರಿಕೆಯ ವೈತಥ್ಯಪ್ರಕರಣದಲ್ಲಿ ಹೀಗೆ ಹೇಳಿದೆ :

**ಸ್ವಪ್ನಜಾಗರಿತಸ್ಥಾನೇ ಹ್ಯೇಕಮಾಹುರ್ಮನೀಷಿಣಃ ।**
**ಭೇದಾನಾಂ ಹಿ ಸಮತ್ವೇನ ಪ್ರಸಿದ್ಧೇನೈವ ಹೇತುನಾ ॥** (ಮಾಂ. ಕಾ. 2–5)

ಎಚ್ಚರಕ್ಕೂ ಕನಸಿಗೂ ಏನು ಹೆಚ್ಚುಕಡಿಮೆ ಇದೆ ? ಏನೂ ಹೆಚ್ಚು ಕಡಿಮೆ ಇಲ್ಲ. ಎಲ್ಲಾ ವಿಧದಿಂದಲೂ ಎಚ್ಚರದಂತೆಯೇ ಕನಸಿದೆ ; ಕನಸಿನಂತೆಯೇ ಎಚ್ಚರವಿದೆ. ವಿಚಾರವನ್ನು ಮಾಡದಿದ್ದರೆ ಮಾತ್ರ ಎಚ್ಚರವು ಹೆಚ್ಚು, ಕನಸು ಕಡಿಮೆ ; ಎಚ್ಚರವು ಸತ್ಯ, ಕನಸು ಸುಳ್ಳು – ಎಂಬುದಾಗಿ ತೋರುತ್ತದೆ. ವಿಚಾರಮಾಡಿದರೆ ಎಚ್ಚರಕನಸುಗಳು ಎರಡೂ ಸಮಾನವೇ ಆಗಿ ತೋರುತ್ತವೆ. ಇದು ಹೇಗೆಂಬುದನ್ನು ಸ್ವಲ್ಪ ವಿಚಾರಮಾಡಿ ನೋಡೋಣ.

ಎಚ್ಚರವು ಸತ್ಯವೆಂಬುದಾಗಿಯೂ ಕನಸು ಸುಳ್ಳೆಂಬುದಾಗಿಯೂ ಹೇಳಲು ಕಾರಣವೇನು? ಎಚ್ಚರವನ್ನು ನಾವು ಪ್ರತ್ಯಕ್ಷವಾಗಿ ಅನುಭವಿಸುತ್ತೇವೆ. ಕನಸನ್ನು ಕಾಣುತ್ತೇವೆ. ಕನಸಿನ ಪ್ರಪಂಚವು ಎಚ್ಚರವಾದೊಡನೆಯೇ ಇಲ್ಲದಂತಾಗುತ್ತದೆ. ಆದುದರಿಂದ ಎಚ್ಚರವು ನಿಜವಾದದ್ದು, ಕನಸು ಸುಳ್ಳಾದದ್ದು– ಎಂದು ತಿಳಿಯುತ್ತೇವೆ. ಇದು ಸರಿಯಲ್ಲ. ಕಾರಣವೇನೆಂದರೆ ಸ್ವಪ್ನಪ್ರಪಂಚವಾಗಲಿ ಸ್ವಪ್ನಾವಸ್ಥೆಯಾಗಲಿ ಹೇಗೆ ಅದು ಅನುಭವಸ್ವರೂಪರಾದ ನಮಗೆ ದೃಶ್ಯವಾಗಿದೆಯೋ ಹಾಗೆಯೇ ಜಾಗ್ರದವಸ್ಥೆಯೂ ಜಾಗ್ರತ್‌ಪ್ರಪಂಚವೂ ನಮಗೆ ದೃಶ್ಯವೇ ಆಗಿದೆ. ಮೊದಲು ತಾನು, ಆನಂತರ ಜಾಗ್ರದವಸ್ಥೆ ಅಥವಾ ಸ್ವಪ್ನಾವಸ್ಥೆ, ಅನಂತರ ಜಾಗ್ರತ್‌ಪ್ರಪಂಚ ಅಥವಾ ಸ್ವಪ್ನಪ್ರಪಂಚ ಅಲ್ಲವೆ ? ಎಂದಮೇಲೆ ಎರಡವಸ್ಥೆಗಳೂ ಸಮಾನವೇ ಆಯಿತು. ಇದನ್ನು ಮತ್ತೊಂದು ರೀತಿಯಲ್ಲಿ ಇನ್ನೂ ಸ್ವಲ್ಪ ವಿಚಾರಮಾಡಿ ನೋಡೋಣ.

ಎಚ್ಚರದಲ್ಲಿ ನಾವು ನಮ್ಮ ಸುಖಕ್ಕಾಗಿ ವಿವಿಧಭೋಗಸಾಮಗ್ರಿಗಳನ್ನು ಕೂಡಿಹಾಕುವಂತೆಯೇ ಕನಸಿನಲ್ಲಿಯೂ ಸಹ ಸುಖದ ಪ್ರಾಪ್ತಿಗೋಸ್ಕರ ಅನೇಕ ಸಾಮಾನುಗಳನ್ನು ಕೂಡಿಹಾಕುತ್ತಿರುತ್ತೇವೆ. ಅಲ್ಲಿಯೂ ಸಹ ಇಲ್ಲಿಯಂತೆಯೇ ಕೆಲವು

ವಸ್ತುಗಳಿಂದ ನಮಗೆ ಸುಖವಾಗುವದೆಂದೂ ಮತ್ತೆ ಕೆಲವು ವಸ್ತುಗಳಿಂದ ದುಃಖವಾಗುವದೆಂದೂ ತಿಳಿದು ದುಃಖಕ್ಕೆ ಕಾರಣವಾದ ವಸ್ತುಗಳನ್ನು ಬಿಡುವುದಕ್ಕೂ ಸುಖಕ್ಕೆ ಕಾರಣವಾದ ವಸ್ತುಗಳನ್ನು ಪಡೆಯುವುದಕ್ಕೂ ಪ್ರಯತ್ನಮಾಡುತ್ತೇವೆ. ಅಲ್ಲಿಯೂ ಸಹ ಸುಖದುಃಖಗಳನ್ನನುಭವಿಸುವುದಕ್ಕೆ ಇಲ್ಲಿಯಂತೆಯೇ ಒಂದು ಶರೀರವು ಕಾಣಿಸುತ್ತದೆ. ಆಗ ಆ ಶರೀರದಲ್ಲಿಯೂ ಈ ಶರೀರದಲ್ಲಿರುವಷ್ಟೇ ಅಭಿಮಾನವು ನಮಗಿರುತ್ತದೆ. ಆ ಶರೀರದಿಂದಲೇ ಅನೇಕ ಭೋಗಗಳನ್ನು ಅನುಭವಿಸುತ್ತೇವೆ. ಇದಲ್ಲದೆ ಅಲ್ಲಿಯೂ ಇಲ್ಲಿಯಂತೆಯೇ ಬಹು ಕಾಲದಿಂದಲೂ ಹೀಗೆಯೇ ನಾವು ಸುಖದುಃಖಗಳನ್ನನುಭವಿಸುತ್ತಾ ಬಂದಿರುವಂತೆಯೂ ಮುಂದೆಯೂ ಸುಖದುಃಖಗಳನ್ನನುಭವಿಸುವುದಕ್ಕೆ ಸಿದ್ಧರಾಗಿರುವಂತೆಯೂ ತೋರುತ್ತದೆ. ಇಲ್ಲಿಯಂತೆಯೇ ಅಲ್ಲಿಯೂ ಸಹ ಅನೇಕ ಜನರಿರುವಂತೆಯೂ ಅವರಲ್ಲಿಯೂ ಕೆಲವರು ನಮ್ಮವರು, ಮತ್ತೆ ಕೆಲವರು ಬೇರೆಯವರು – ಇವೇ ಮೊದಲಾಗಿ ಭೇದಗಳಿರುವಂತೆಯೂ ತೋರುತ್ತದೆ. ಆ ಕಾಲಕ್ಕೆ ಅದು ಸತ್ಯವಾದದ್ದೆಂದೇ ತಿಳಿದು ಬರುತ್ತಿರುತ್ತದೆ. ಹೀಗಿದ್ದರೂ ಸಹ ಕನಸಿನಲ್ಲಿ ಕಂಡ ದೇಹಾದಿಗಳು ಮೊದಲುಗೊಂಡು ಜಗತ್ತಿನವರೆಗಿನ ಸಮಸ್ತಭೋಗ್ಯವಸ್ತುಗಳೂ, ಭೋಗಸಾಧನಗಳೂ, ಭೋಕ್ತೃತ್ವವೂ ಮಿಕ್ಕ ಜೀವರಾಶಿಯೂ ಎಲ್ಲವೂ ಸುಳ್ಳೇ, ಬರಿಯ ಹುಸಿತೋರಿಕೆಯೇ ಎಂದು ಎಚ್ಚತ್ತಮೇಲೆ ನಮ್ಮೆಲ್ಲರಿಗೂ ನಿಶ್ಚಿತವಾಗಿರುವುದಲ್ಲವೆ ? ಇದರಂತೆಯೇ ಎಚ್ಚರದಲ್ಲಿಯೂ ಸಹ ತೋರುತ್ತಿರುವ ದೇಹಾದಿಗಳು ಮೊದಲುಗೊಂಡು ಸಮಸ್ತ ಜಗತ್ತೂ, ಇದರಲ್ಲಿಯ ವಿವಿಧವಾದ ಭೋಗ್ಯಗಳೂ ಭೋಗಸಾಧನಗಳೂ ಭೋಕ್ತೃತ್ವವೂ ನಾನು ಎಂಬ ಕಲ್ಪಿತವಸ್ತುವೂ –ಇವೆಲ್ಲವೂ ಮಿಥ್ಯೆಯೇ, ಎಂದರೆ ಬರಿಯ ಹುಸಿ ತೋರಿಕೆಯೇ ಆಗಿರುತ್ತವೆ.

ಎಚ್ಚರದಲ್ಲಿ ತೋರುವುದು ಸುಳ್ಳೆಂಬ ವಿಷಯಕ್ಕೆ ಸಂಶಯವು ಬಂದಾಗ ಈ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳಬೇಕು. ಕನಸಿನಲ್ಲಿ ತೋರಿದ್ದೆಲ್ಲವೂ ಆ ಕಾಲಕ್ಕೆ ಇಲ್ಲಿಯ ಹಾಗೆಯೇ ನಿಜವೆಂದೇ ತೋರಿತಲ್ಲವೆ ? ಆಗ ಅದು ಸುಳ್ಳು ಎಂದೇನೂ ನಮಗೆ ಕಾಣಲಿಲ್ಲವಷ್ಟೆ ? ಇನ್ನು ಮುಂದಕ್ಕೆ ನಮಗೆ ಕನಸಾಗುವಾಗಲೂ 'ಇದು ಕನಸು, ಆದ್ದರಿಂದ ಸುಳ್ಳು' ಎಂದು ಕನಸಿನ ಕಾಲಕ್ಕೇ ಗುರುತುಹಿಡಿದು ಕಂಡುಕೊಳ್ಳುವುದಕ್ಕೆ ಆಗುವಹಾಗಿಲ್ಲವಲ್ಲ! ಹೀಗಿರುವಾಗ ಕನಸಿಗೂ ಎಚ್ಚರಕ್ಕೂ ಏನು ಭೇದವಾಯಿತು ? ಕನಸನ್ನೂ ಕೂಡ ಆಗ ನಾವು ಎಚ್ಚರವೆಂದೇ ತಿಳಿದುಕೊಂಡಿದ್ದೆವಲ್ಲ, ಅದರಂತೆಯೇ ಈ ಎಚ್ಚರವೂ ಸಹ ಕನಸಿನಂತೆಯೇ ಮಿಥ್ಯೆಯಲ್ಲವೆಂಬುದಕ್ಕೆ ಏನು

ಪ್ರಮಾಣವಿರುವುದು? ಕನಸಿಗೂ ಎಚ್ಚರಕ್ಕೂ ಏನಾದರೂ ವ್ಯತ್ಯಾಸವಿದೆಯೆ ? ಎಚ್ಚರವು ತನ್ನ ಕಾಲಕ್ಕೆ ಸತ್ಯವೆಂದೇ ತೋರುತ್ತದೆ. ಅದರಂತೆಯೇ ಕನಸೂ ತನ್ನ ಕಾಲಕ್ಕೆ ಸತ್ಯವೆಂದೇ ತೋರುತ್ತದೆ. ಆದರೆ ಎಚ್ಚರವು ಕನಸಿನ ಕಾಲದಲ್ಲಿರುವುದಿಲ್ಲ, ಕನಸು ಎಚ್ಚರದ ಕಾಲದಲ್ಲಿರುವುದಿಲ್ಲ. ಆದ್ದರಿಂದ ಎಚ್ಚರಕನಸುಗಳೆರಡೂ ಮಿಥ್ಯೆಯೇ. ಇವೆರಡಕ್ಕೂ ಏನೂ ಭೇದವಿಲ್ಲವೆಂದು ವಿಚಾರಮಾಡುವುದರಿಂದ ಎಚ್ಚರದ ಪ್ರಪಂಚದಲ್ಲಿರುವ ಸತ್ಯತ್ವಬುದ್ಧಿಯು ಹೋಗುತ್ತದೆ.

ಒಬ್ಬ ವಕೀಲನು ತನ್ನ ಕಕ್ಷಿಗಾರನ ಪರವಾಗಿ ನಿಂತು ವಾದಮಾಡುವಾಗ ತನ್ನ ಪಕ್ಷವೇ ಸರಿಯೆಂದೂ ಮತ್ತೊಬ್ಬನದು ತಪ್ಪೆಂದೂ ಹೇಗೆ ವಾದಿಸುತ್ತಾನೆಯೋ ಹಾಗೆಯೇ ಈ ಬುದ್ಧಿಯು ಒಂದುಪಕ್ಷದ ವಕೀಲನ ಹಾಗೆ ಎಚ್ಚರದ ಅಭಿಮಾನವನ್ನಿಟ್ಟು ಕೊಂಡು ಎಚ್ಚರವು ಸತ್ಯವೆಂದೂ ಕನಸು ಸುಳ್ಳೆಂದೂ ವಾದಮಾಡುತ್ತಿದೆ. ಏಕೆಂದರೆ ಇದು ಈ ಎಚ್ಚರದ ಅವಸ್ಥೆಗೇ ಸೇರಿದ್ದಾಗಿರುವುದು. ಇದರಂತೆಯೇ ಕನಸಿನ ಅವಸ್ಥೆಗೆ ಕಟ್ಟುಬಿದ್ದಿರುವ ಬುದ್ಧಿಯು ಆ ಅವಸ್ಥೆಗೇ ಸೇರಿದ್ದಾಗಿರುವುದರಿಂದ ಆಗ ಅದನ್ನೇ ಎಚ್ಚರವೆಂದೂ ಕನಸೆಂಬುದು ಇದಕ್ಕಿಂತಲೂ ಬೇರೆ ಇದೆ, ಅದು ಸುಳ್ಳು ಎಂದೂ ಆಗ್ಗೆ ವಾದಿಸುತ್ತದೆ.

ಈಗ ನಾವು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ– ಎಂಬ ಮೂರು ಬಗೆಯ ಪ್ರಪಂಚದಿಂದ ಕೂಡಿರುವ ಈ ಎರಡೂ ಅವಸ್ಥೆಗಳನ್ನು ನೇರವಾಗಿ ಅರಿಯುವ ಅನುಭವದಿಂದ –ಎಂದರೆ ಎಚ್ಚರದ ನಾನು ಎಚ್ಚರಕ್ಕೇ ಸೇರಿಕೊಂಡು ಅದಕ್ಕೇ ಅಂಟಿರುವದನ್ನೂ, ಕನಸಿನ ನಾನು ಕನಸಿಗೇ ಸೇರಿಕೊಂಡು ಅದಕ್ಕೇ ಅಂಟಿರುವದನ್ನೂ ಎರಡನ್ನೂ ಒಟ್ಟಿಗೇ ಅರಿಯುವ ಸಾಕ್ಷಿಚೈತನ್ಯದ ದೃಷ್ಟಿಯಿಂದ ನೋಡಿದರೆ – ಇವೆರಡೂ ತೋರಿಹಾರುವ ಅವಸ್ಥೆಗಳು ಮಾತ್ರವೆಂದೂ ಇವೆರಡೂ ಆತ್ಮನಲ್ಲಿ ಕಲ್ಪಿತ ವಾಗಿರುವ ಹುಸಿತೋರಿಕೆಗಳೆಂದೂ ತಟ್ಟನೆ ಹೊಳೆಯುವುದು. ಎಲ್ಲಿಯವರೆಗೆ ನಾವು 'ನಾನು' ಎಂಬುದನ್ನಿಟ್ಟುಕೊಂಡು ವಿಚಾರಿಸುವೆವೋ ಅಲ್ಲಿಯವರೆಗೂ ಎಚ್ಚರದಭಿಮಾನವು ಬಿಡುವುದಿಲ್ಲ. ಯಾವಾಗ ''ತಾನು'' (ಆತ್ಮ) ಎಂಬ ಅನುಭವರೂಪವಾದ ಸ್ವರೂಪದೃಷ್ಟಿಯಿಂದ ನೋಡುವೆವೋ ಆಗಲೇ ಸಂಶಯವು ಬಿಟ್ಟುಹೋಗುವುದು. ಆ ಸಾಕ್ಷಿಯ ಅರಿವೇ ಜಡ್ಜಿಯ ಹಾಗೆ ನಿಂತು ನಿರ್ಣಯವನ್ನು ಕೊಡುವುದು. ಕಠೋಪನಿಷತ್ತಿನ ಈ ವಾಕ್ಯವು ಕೆಳಗೆ ಕಂಡಂತೆ ನಿರ್ಣಯವನ್ನು ಕೊಟ್ಟಿದೆ:

ಸ್ವಪ್ನಾನ್ತಂ ಜಾಗರಿತಾನ್ತಂ ಚೋಭೌ ಯೇನಾನುಪಶ್ಯತಿ ।
ಮಹಾನ್ತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥
(ಕಠ. 2–1–4)

ಕನಸಿನ ಮತ್ತು ಎಚ್ಚರದ ಅಂತ್ಯವನ್ನು ಯಾವ ಆತ್ಮನಿಂದ ನೋಡುತ್ತಾನೆಯೋ ಆ ದೊಡ್ಡವನಾದ ವಿಭುವಾದ ಆತ್ಮನನ್ನು ತಿಳಿದುಕೊಂಡ ಧೀರನು ಶೋಕಿಸುವುದಿಲ್ಲ. ಇಲ್ಲಿ ಆತ್ಮನಲ್ಲಿ ಎಚ್ಚರದವಸ್ಥೆಯೂ ಕನಸಿನ ಅವಸ್ಥೆಯೂ ಕಲ್ಪಿತವಾಗಿ ತೋರುವುವು. ಮತ್ತು ಈ ಅವಸ್ಥೆಗಳನ್ನೆಲ್ಲಾ ತನ್ನ ಚೈತನ್ಯದಿಂದಲೇ ವ್ಯಾಪಿಸಿಕೊಂಡಿರುವ ಇವನು ದೃಶ್ಯವಾದ ಎರಡವಸ್ಥೆಗಳಿಗಿಂತಲೂ ಬೇರೆಯವನು – ಎಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿ ತಂದುಕೊಳ್ಳಬೇಕು; ಎಂದರೆ "ತಾನು" ತನ್ನಲ್ಲಿ ಎಚ್ಚರದ ಅವಸ್ಥೆ, ಅದರಲ್ಲಿ "ನಾನು" ಎಂಬ ಅನಿಸುವಿಕೆ – ಹೀಗೆ ಸೇರಿ ದೇಹದವರೆಗಿನ ಆಧ್ಯಾತ್ಮಿಕಪ್ರಪಂಚ, ಎದುರಿಗಿರುವ ಆಧಿಭೌತಿಕಪ್ರಪಂಚ, ಮೇಲಿರುವ ಆಧಿದೈವಿಕಪ್ರಪಂಚ, ದೇಶಕಾಲಕ್ರಿಯಾಕಾರಕ ಫಲಗಳ ನಿಯಮಗಳೊಡನೆ ತೋರುವದು ಮತ್ತು ಇದರಂತೆಯೇ "ತಾನು" ತನ್ನಲ್ಲಿ ಸ್ವಪ್ನ, ಸ್ವಪ್ನದಲ್ಲಿಯ "ನಾನು" ಎಂಬ ಅನಿಸುವಿಕೆ ಸಹಿತ ಎಲ್ಲಾ ಪ್ರಪಂಚಗಳೂ ತನ್ನಲ್ಲಿ ಆತ್ಮಸ್ವರೂಪದಲ್ಲಿಯೇ ತೋರುವವು. ಇಲ್ಲಿ "ತನ್ನನ್ನು" ಬಿಟ್ಟು ಅವಸ್ಥೆಗಳಿರಲೇ ಆರವು. ಇವೆರಡೂ ತೋರಿ ಅಡಗುತ್ತಿದ್ದರೂ ಇವುಗಳ ತೋರುವಿಕೆ ಅಡಗುವಿಕೆಗಳನ್ನು ಬೆಳಗುತ್ತಿರುವ ಈ ಆತ್ಮನಾದ ಸಾಕ್ಷಿಯ ದೃಷ್ಟಿಯಿಂದ ನೋಡಿದರೆ ಎಚ್ಚರವೂ ಸ್ವಪ್ನವೂ ಸಮಾನವಾದವುಗಳೆಂದು ಸ್ಪಷ್ಟವಾಗಿ ತಿಳಿಯುವುದು.

ಇನ್ನು "ಆತ್ಮನಾದ ತಾನು ಮತ್ತು ಈ ಎರಡು ಅವಸ್ಥೆಗಳು" ಹೀಗೆ ಮೂರಾಗಲಿಲ್ಲವೆ? ಎಂಬ ಶಂಕೆಯು ಕೆಲವರಿಗೆ ಬರಬಹುದು; ಆದರೆ ತಾನು ಇಲ್ಲದೆ ಅವಸ್ಥೆಗಳಿಲ್ಲವೇ ಇಲ್ಲವೆಂಬುದನ್ನು ಮನಸ್ಸಿಗೆ ತಂದುಕೊಂಡರೆ ತನ್ನನ್ನೇ ಅವಸ್ಥೆಗಳೆಂದು ಕಲ್ಪಿಸಿಕೊಂಡು ವ್ಯವಹರಿಸುತ್ತಾನೆಂಬುದು ಹೊಳೆಯುವುದು. ಹಾಗೂ ತನ್ನನ್ನರಿಯದ್ದರಿಂದ ಎಂದರೆ ಅವಿದ್ಯೆಯಿಂದ ಅವಸ್ಥೆಗಳು ತನ್ನಲ್ಲಿ ಹುಟ್ಟುಗಟ್ಟಿಕೊಂಡವುಗಳಾಗಿವೆ. ಈ ದೃಷ್ಟಿಯಿಂದ ನೋಡಿದರೆ ಈಗ ನಾವು ಕಾಣುತ್ತಿರುವ ಪ್ರಪಂಚವು ಅದು ಎಚ್ಚರದಲ್ಲಿರಲಿ ಅಥವಾ ಕನಸಿನಲ್ಲಿರಲಿ ಅದೆಲ್ಲವೂ ಆತ್ಮನೇ ಎಂಬುದು ಗೊತ್ತಾಗುವುದು. ಆತ್ಮನನ್ನು ಅರಿಯದೆ ಇರುವಾಗ ನಮಗೆ ಇದು ಪ್ರಪಂಚವಾಗಿದೆ. ಆತ್ಮನನ್ನು ತಿಳಿದೊಡನೆಯೇ "ಆತ್ಮೈವೇದಂ ಸರ್ವಮ್" ಇದೆಲ್ಲವೂ ಕೇವಲ ಆತ್ಮನೇ ಎಂಬುದು ಸ್ಪಷ್ಟವಾಗುವುದು. ಆತ್ಮದೃಷ್ಟಿಯಿಂದ ಈ ಸಂಸಾರವು ಒಂದು ಕನಸೇ ಆಗಿದೆ. ಈ ವಿಷಯವನ್ನು ಚೆನ್ನಾಗಿ ಮನಸ್ಸಿನಲ್ಲಿ ತಂದುಕೊಂಡು ನಿರ್ವಿಕಲ್ಪವಾದ ಸಾಕ್ಷಿಸ್ವರೂಪದಲ್ಲಿ ನೆಲೆನಿಲ್ಲುವುದನ್ನು ಅಭ್ಯಾಸಮಾಡಬೇಕು.

## 15. ಪ್ರಪಂಚವೂ ಸಹ ಪರಮಾತ್ಮಸ್ವರೂಪವೇ ಆಗಿದೆ

''ಆತ್ಮೈವೇದಂ ಸರ್ವಮ್'', ''ಬ್ರಹ್ಮೈವೇದಂ ಸರ್ವಮ್ '', ''ಸರ್ವಂ ಖಲ್ವಿದಂ ಬ್ರಹ್ಮ'' – ಎಂಬ ಶ್ರುತಿಗಳಂತೆ ಇದೆಲ್ಲವೂ ಆತ್ಮಸ್ವರೂಪವೇ ಆಗಿದೆ, ಈ ಸಮಸ್ತವೂ ನಿಶ್ಚಯವಾಗಿಯೂ ಪರಮಾತ್ಮಸ್ವರೂಪವೇ ಆಗಿದೆ ಎಂದು ವೇದಾಂತಗಳು ಸಾರುತ್ತಿವೆ.

**ನಭೀ ವಾವರೇ ಜೋ ಅಣೂರೇಣುಕಾಹೀ ।**
**ರಿತಾ ಠಾವ ಯಾ ರಾಘವೇವೀಣ ನಾಹೀ ॥ (ಮ.)**

''ಅಣುರೇಣುತೃಣಕಾಷ್ಠಗಳಲ್ಲಿಯೂ ಸಹ ಸಚ್ಚಿದಾನಂದಸ್ವರೂಪನಾದ ಪರಮಾತ್ಮನು ಪರಿಪೂರ್ಣನಾಗಿರುತ್ತಾನೆ. ಅವನಿಲ್ಲದ ಸ್ಥಳವೇ ಇರುವುದಿಲ್ಲ; ಅಷ್ಟೇ ಅಲ್ಲದೆ ಅವನ ಹೊರತು ಮತ್ತೊಂದೇನೂ ಇರುವುದೇ ಇಲ್ಲ'' – ಎಂಬುದಾಗಿ ಸದ್ಗುರುಸಮರ್ಥರಾಮದಾಸರು ಹೇಳಿರುತ್ತಾರೆ. ಪರಮಾತ್ಮನು ಎಲ್ಲದರಲ್ಲೂ ಇದ್ದಾನೆಂದರೆ ಈ 'ಪಕ್ವಾನ್ನವು ಸಕ್ಕರೆಯಾಗಿದೆ' ಎಂಬಂತಲ್ಲ, ಏತಕ್ಕೆಂದರೆ ಅದರಲ್ಲಿ ಸಕ್ಕರೆಯೂ ಮತ್ತು ಹಿಟ್ಟೂ ಎರಡೂ ಸೇರಿವೆ. ಅದರಂತೆ ಜಗತ್ತಿನಲ್ಲೆಲ್ಲಾ ಪರಮಾತ್ಮನೂ ಇದ್ದಾನೆಂದರೆ ಜಗತ್ತೊಂದು ಇದೆ; ಅದರಲ್ಲಿ ಪರಮಾತ್ಮನು ಪಕ್ವಾನ್ನದಲ್ಲಿ ಸಕ್ಕರೆಯು ಬೆರೆತಂತೆ ಇದ್ದಾನೆ ಎಂದರ್ಥವಲ್ಲ. ಹಾಗಾದರೆ ಮತ್ತೇನೆಂದರೆ ಬಟ್ಟೆಯಲ್ಲಿ ನೂಲಿದ್ದಂತೆ, ಮಡಕೆಕುಡಿಕೆಗಳಲ್ಲಿ ಮಣ್ಣಿದ್ದಂತೆ, ಆಭರಣಗಳಲ್ಲಿ ಬಂಗಾರವಿದ್ದಂತೆ, ಹೇಗೆ ಬಟ್ಟೆ ಎಂದರೆ ನೂಲೇ ಆಗಿದೆಯೋ, ಮಡಕೆ ಎಂದರೆ ಮಣ್ಣೇ ಆಗಿದೆಯೋ, ಆಭರಣಗಳೆಂದರೆ ಬಂಗಾರವೇ ಆಗಿದೆಯೋ ಹಾಗೆ ಜಗತ್ತೆಂದರೆ ಪರಮಾತ್ಮನೇ ಆಗಿದ್ದಾನೆ. ಈ ಆಭರಣಗಳೆಲ್ಲವೂ ಬಂಗಾರವೇ ಎಂದರೆ ಆಭರಣಗಳು ಬೇರೆ, ಬಂಗಾರವು ಬೇರೆ ಇಲ್ಲದೇ, ಹೇಗೆ ಬಂಗಾರವೇ ಆಭರಣಗಳಾಗಿ ತೋರುತ್ತಿರುವುದೋ ಹಾಗೆ, ಪರಮಾತ್ಮನೇ ಚರಾಚರಾತ್ಮಕವಾದ ಸಮಸ್ತಜಗತ್ತಾಗಿ ತೋರುತ್ತಿದ್ದಾನೆ. ಪರಮಾತ್ಮನೇ ಈಶನಾಗಿಯೂ, ಜೀವನಾಗಿಯೂ, ಜಡನಾಗಿಯೂ, ಚೈತನ್ಯನಾಗಿಯೂ ತೋರುತ್ತಿದ್ದಾನೆ. ಈ ವಿಚಾರವನ್ನು ಶ್ರೀಸದಾಶಿವಬ್ರಹ್ಮೇಂದ್ರರು ತಮ್ಮ **''ಅದ್ವೈತತಾರಾವಳಿ''** ಯಲ್ಲಿ ಹೀಗೆ ಹೇಳಿರುತ್ತಾರೆ :

**ದನ್ತಿನಿ ದಾರುವಿಕಾರೇ । ದಾರು ತಿರೋ ಭವತಿ ಸೋಽಪಿ ತತ್ರೈವ ।**
**ಜಗತಿ ತಥಾ ಪರಮಾತ್ಮಾ । ಪರಮಾತ್ಮನ್ಯಪಿ ಜಗತ್ತಿರೋಧತ್ತೇ ॥**

ಇದನ್ನೇ ಕನ್ನಡದ ''ಅನುಭವಾಮೃತ''ದಲ್ಲಿ ಹೀಗೆ ಹೇಳಿರುತ್ತಾರೆ :

ದಾರು ದಂತಿವಿಕಾರದಂದದಿ ।
ತೋರಿತಲ್ಲದೆ ದಂತಿಯುಳಿದಾ ।
ದಾರುವದು ತಾ ಬೇರೆ ತೋರಿತೆ ? ನಾಮರೂಪಗಳ ॥
ತೋರಿಕೆಯು ಕಲ್ಪಿತವು ನಿಜವೇ ? ದಾರುವಿನ ಪರಿ ಬ್ರಹ್ಮ ಜಗದಾ ।
ಕಾರವಾಗಿಯೆ ತೋರಿತಲ್ಲದೆ ಬೇರೆ ಜಗವಿಲ್ಲ ॥

ಒಂದು ಮರದ ತುಂಡಿನಲ್ಲಿ ಆನೆಯನ್ನು ಮಾಡಿಟ್ಟಿದ್ದರೆ ಆಗ ಅದು ಆನೆಯಂತೆಯೇ ತೋರುವುದಲ್ಲವೆ ? ಆಗ ಅದು ಮರದ ತುಂಡೆಂದು ತೋರುವುದಿಲ್ಲ. ಆದರೆ ವಿಚಾರಮಾಡಿನೋಡಿದರೆ ಮರದ ತುಂಡೇ ಆನೆಯಂತೆ ತೋರಿತಲ್ಲದೆ ನಿಜವಾಗಿಯೂ ಆನೆಯು ಆಗ ಇರಲಿಲ್ಲ. ಆನೆಯ ರೂಪವೂ ನಾಮವೂ ಮರದಲ್ಲಿ ಕಲ್ಪಿಸಲ್ಪಟ್ಟಿದ್ದವು ಅಲ್ಲವೆ ? ಮರದ ತುಂಡನ್ನು ಬಿಟ್ಟು ಆನೆಯು ಸ್ವತಂತ್ರವಾಗಿ ತೋರಲಿಲ್ಲ. ಅದರಂತೆಯೇ ನಿರ್ವಿಕಲ್ಪನಿರಾಕಾರನಿಷ್ಕ್ರಿಯನಾದ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನೇ ಜಗತ್ತಾಗಿ ತೋರುತ್ತಿದ್ದಾನೆ. ಹೇಗೆ ಮರದ ತುಂಡನ್ನು ಬಿಟ್ಟು ಆನೆಯು ಸ್ವತಂತ್ರವಾಗಿ ತೋರಲಿಲ್ಲವೋ ಹಾಗೆ, ಪರಮಾತ್ಮನನ್ನು ಬಿಟ್ಟು ಜಗತ್ತು ಸ್ವತಂತ್ರವಾಗಿ ತೋರುವುದಿಲ್ಲ. ಹೇಗೆ ಆ ಮರದಲ್ಲಿ ತೋರಿದ ಆನೆಯು ಎಂದೂ ಇಲ್ಲವೇ ಇಲ್ಲವೋ, ತೋರಿಕೆಯು ಕಲ್ಪಿತವೋ ಹಾಗೆ ಪರಮಾತ್ಮನಲ್ಲಿ ತೋರುವ ಪ್ರಪಂಚವು ಎಂದೂ ಸತ್ಯವಾಗಿ ಇಲ್ಲವೇ ಇಲ್ಲ. ಇರುವುದೆಲ್ಲವೂ, ತೋರುವುದೆಲ್ಲವೂ ಪರಮಾತ್ಮಸ್ವರೂಪವೇ.

''ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್'' (ಛಾಂ.) ಆಭರಣಗಳಾಗುವ ಮೊದಲು ವಿಕಾರರಹಿತವಾಗಿ ಒಂದೇ ಒಂದಾಗಿದ್ದ ಬಂಗಾರದ ಗಟ್ಟಿಯು ಹೇಗೆ ತಾನೊಂದೇ ಇದ್ದಿತ್ತೋ ಹಾಗೆ, ಜಗತ್ತು ಹುಟ್ಟುವದಕ್ಕಿಂತಲೂ ಮೊದಲು ವಿಕಾರರಹಿತವಾದ ಎರಡನೆಯದಿಲ್ಲದ ಒಂದೇ ಒಂದಾದ ಪರಿಪೂರ್ಣವಾದ ಪರಮಾನಂದಸ್ವರೂಪನಾದ ಪರಮಾತ್ಮನೊಬ್ಬನೇ ಇದ್ದನು – ಎಂಬುದಾಗಿ ಛಾಂದೋಗ್ಯ ಉಪನಿಷತ್ತು ಹೇಳುತ್ತಿದೆ. ''ತದಾತ್ಮಾನಗ್‌ಂ ಸ್ವಯಮಕುರುತ । ಸಚ್ಚ ತ್ಯಚ್ಚಾಭವತ್'' ಇಂಥ ಪರಮಾತ್ಮನು ತಾನೇ ಜಗದಾಕಾರವನ್ನು ತಾಳಿದನು. ''ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್'' (ತೈ. 2–2–6). ''ಅನೇನ ಜೀವೇನಾತ್ಮನಾನುಪ್ರವಿಶ್ಯ'' (ಛಾಂ. 6–3–2) ಈ ಪ್ರಕಾರವಾಗಿ ಸೃಷ್ಟಿಸಲ್ಪಟ್ಟ ಪ್ರಪಂಚದಲ್ಲಿ ತಾನೇ ಜೀವರೂಪದಿಂದ

ಪ್ರವೇಶಿಸಿದನೆಂದು ಶ್ರುತಿಗಳು ಹೇಳುತ್ತಿವೆ. ಹೀಗೆಂದದ್ದರಿಂದ ಹಾಲು ಪರಿಣಮಿಸಿ ಮೊಸರಾದಂತೆ ಪರಮಾತ್ಮನು ವಿಕಾರವಾಗಿ ಜಗತ್ತಾಗಿದ್ದಾನೆಂದಲ್ಲ. ಏತಕ್ಕೆಂದರೆ ಒಂದು ಪಕ್ಷ ಹೀಗಾಗಿದ್ದರೆ ಆಗ ಪರಮಾತ್ಮನ ನಿರ್ವಿಕಾರತ್ವವೂ ನಿಷ್ಕ್ರಿಯತ್ವವೂ ಪರಿಪೂರ್ಣವೂ ಹೋಗಿಬಿಡುತ್ತಿತ್ತು. ಹಾಗಾದರೆ ಇದರ ತಾತ್ಪರ್ಯವೇನೆಂದರೆ, ಹೇಗೆ ಬಂಗಾರವು ತನ್ನ ಸ್ವರೂಪದಲ್ಲಿ ಮಾರ್ಪಾಡನ್ನು ಹೊಂದದೆಯೇ ಆಭರಣಗಳಾಗಿ ತೋರುತ್ತದೆಯೋ ಹಾಗೆ, ನಿರ್ವಿಕಲ್ಪನಿರಾಕಾರನಿಷ್ಕ್ರಿಯವಾದ ಪರಮಾತ್ಮಸ್ವರೂಪವು ತನ್ನಲ್ಲಿ ಯಾವ ಮಾರ್ಪಾಡನ್ನೂ (ವಿಕಾರ) ಹೊಂದದೆ ಮಾಯೆಯಿಂದ ಜಗತ್ತಾಗಿಯೂ, ಜೀವರಾಗಿಯೂ, ಜಡವಾಗಿಯೂ, ಚೈತನ್ಯವಾಗಿಯೂ ನಾನಾರೂಪವಾಗಿ ತೋರುತ್ತಿದೆ. ಉದಾಹರಣೆಗೆ ಒಂದು ಚಿತ್ರಪಟದಲ್ಲಿ ನಿಜವಾಗಿಯೂ ಅಲ್ಲಿ ಏನೂ ಇಲ್ಲದಿದ್ದರೂ ಸಹ ಬಣ್ಣದಿಂದ ಬರೆದಿರುವಾಗ ಮನೆ, ಮನುಷ್ಯ, ಪಶು, ಪಕ್ಷಿ, ಗಿಡಮರಗಳು, ಗುಡ್ಡಬೆಟ್ಟಗಳು –ಮೊದಲಾದ ನಾನಾವಿಧವಾದ ರೂಪಗಳು ಹೇಗೆ ತೋರುತ್ತವೆಯೋ ಹಾಗೆ ಸತ್ಯವಾಗಿಯೂ ಇಲ್ಲದೆ ಇರುವ ಜಗತ್ತು ಮಾಯೆಯಿಂದ ಪರಮಾತ್ಮನಲ್ಲಿ ತೋರುತ್ತಿದೆ.

ತಾನೊಬ್ಬನೇ ಮಲಗಿದ್ದವನು ಕನಸಿನಲ್ಲಿ ಅನೇಕವಾಗಿ ಗಂಡ, ಹೆಂಡತಿ, ಮಕ್ಕಳು, ಬಂಧುಗಳು, ತನ್ನವರು, ಬೇರೆಯವರು, ಮನೆಮಠ, ಗಿಡಮರಗಳು, ಗುಡ್ಡಬೆಟ್ಟಗಳು, ನದಿಸರೋವರಗಳು, ಸೂರ್ಯಚಂದ್ರರು, ಎಲ್ಲವೂ ತಾನೇ ಹೇಗಾಗಿರುತ್ತಾನೆಯೋ ಹಾಗೆ ಪರಮಾತ್ಮನೊಬ್ಬನೇ ನಾನಾವಿಧವಾದ ಜಗತ್ತಾಗಿ ತೋರುತ್ತಿದ್ದಾನೆ. ಕನಸಿನಲ್ಲಿ ತಾನು ಅಷ್ಟೆಲ್ಲ ಆದದ್ದು ಸತ್ಯವೋ? ಎಂದರೆ ಇಲ್ಲ. ಏಕೆಂದರೆ ಮಲಗುವಾಗ ಇದ್ದವನು ಒಬ್ಬನೇ, ಎದ್ದಮೇಲೆ ಇರುವವನೂ ಒಬ್ಬನೇ, ಮಧ್ಯದಲ್ಲಿಯೂ ಇರುವವನು ಒಬ್ಬನೇ. ಆದರೆ ಕಲ್ಪನೆಯಿಂದ ಬಹಳವಾದಂತೆ ತೋರಿತು. ಹಾಗೆಯೇ ಜಗತ್ತು ಸೃಷ್ಟಿಯಾಗುವುದಕ್ಕಿಂತ ಮೊದಲೂ ಇದ್ದದ್ದು ಒಂದೇ ಒಂದಾದ ನಿರ್ಗುಣನಿರಾಕಾರನಿಷ್ಕ್ರಿಯವಾದ ಪರಮಾತ್ಮಸ್ವರೂಪ. ಅದು ನಮ್ಮ ಅನುಭವದಲ್ಲಿ ಹೇಗಿದೆ ಎಂದರೆ ಗಾಢನಿದ್ರೆಯಲ್ಲಿದ್ದಂತೆ ಇದೆ. ಜಗತ್ತು ಪ್ರಲಯವಾದಮೇಲಿರುವದೂ ಒಂದೇ ಒಂದಾದ ಪರಬ್ರಹ್ಮಸ್ವರೂಪ. ಹೀಗೆ ಮೊದಲಿನಲ್ಲೂ ಕೊನೆಯಲ್ಲೂ ಒಂದೇ ಒಂದಾದ ಸದ್ವಸ್ತುವಿರುವುದರಿಂದ ಮಧ್ಯದಲ್ಲೂ ಸಹ ಒಂದೇ ಒಂದಿದೆ. ಮಧ್ಯದಲ್ಲಿ ಬಹಳವಾದಂತೆ ತೋರಿದರೂ ಸಹ, ಹೇಗೆ ಕನಸಿನ ಕಾಲಕ್ಕೆ ಬಹಳವಾಗಿ ತೋರಿದರೂ ಸಹ ತಾನು ಒಬ್ಬನೇ ಇದ್ದನೋ ಹಾಗೆ, ಒಂದೇ ಒಂದಾದ ಪರಮಾತ್ಮಸ್ವರೂಪವೇ ಇದೆ. ಇದರಲ್ಲಿ ಎಂದೂ ಯಾವ

ವಿಕಾರವೂ ಆಗಿಯೇ ಇಲ್ಲ, ಮಾಯೆಯಿಂದ ಆದಂತೆ ತೋರುತ್ತಿದೆ ಅಷ್ಟೆ. ಇದನ್ನೇ ಆತ್ಮಬೋಧೋಪನಿಷತ್ತು ಹೀಗೆ ಹೇಳುತ್ತಿದೆ.

ಬ್ರಹ್ಮಾದಿಕೀಟಪರ್ಯನ್ತಾಃ ಪ್ರಾಣಿನೋ ಮಯಿ ಕಲ್ಪಿತಾಃ ।
ಬುದ್ಬುದಾದಿವಿಕಾರಾನ್ತಾಸ್ತರಙ್ಗಾಸ್ಸಾಗರೇ ಯಥಾ ॥ (ಆ.)

''ಹೇಗೆ ತೆರೆನೊರೆಗುಳ್ಳೆಗಳೇ ಮೊದಲಾದ ವಿಭಾಗಗಳು ಸಮುದ್ರದಲ್ಲಿ ಕಲ್ಪಿಸಲ್ಪಟ್ಟಿವೆಯೋ ಹಾಗೆ, ಬ್ರಹ್ಮಾದಿದೇವತೆಗಳು ಮೊದಲುಗೊಂಡು ಮನುಷ್ಯನು ಕ್ರಿಮಿಕೀಟಾದಿಪರ್ಯಂತವಾದ ಚರಾಚರಾತ್ಮಕವಾದ ಸಮಸ್ತಬ್ರಹ್ಮಾಂಡಗಳೂ ಆತ್ಮಸ್ವರೂಪನಾದ ನನ್ನಲ್ಲಿಯೇ ಕಲ್ಪಿಸಲ್ಪಟ್ಟಿರುತ್ತವೆ''–ಎಂಬುದಾಗಿ ಶ್ರುತಿಯು ಬೋಧಿಸುತ್ತಿದೆ.

'ಆತ್ಮನು ಒಬ್ಬನೇ ಸತ್ಯನು', 'ಒಂದೇಒಂದಾದ ತತ್ತ್ವಸ್ವರೂಪನು' ಎಂದಾಗ, ಒಂದು ಎರಡು ಎಂಬ ಸಂಖ್ಯೆಯನ್ನಿಟ್ಟುಕೊಳ್ಳಬಾರದು. ಮತ್ತೇನೆಂದರೆ : ಒಂದು , ಎರಡು ಎಂಬ ಸಂಖ್ಯೆಗಳಿಗೆ ಕಾಲದೇಶಗಳು ಬೇಕೇಬೇಕು. ಆದರೆ ಆತ್ಮನು ಕಾಲದೇಶಗಳನ್ನು ಮೀರಿದವನಾದ್ದರಿಂದ ಇವನನ್ನು (ಎರಡಿಲ್ಲದ ಒಂದು) 'ಅದ್ವಯ' ಎಂಬ ಮಾತಿನಿಂದಲೇ ಶ್ರುತಿಯು ಹೇಳುತ್ತದೆ. ಆದ್ದರಿಂದ ಆತ್ಮನಿಗಿಂತ ಬೇರಾಗಿ ತೋರುವ ಈ ಪ್ರಪಂಚವೆಂಬುದರ ಸಾರ(ತತ್ತ್ವ , ಅಸ್ತಿತ್ವ)ವೆಲ್ಲವೂ ಈ ಆತ್ಮನೇ ಆಗಿದ್ದಾನೆ. 'ಸರ್ವಂ ಖಲ್ವಿದಂ ಬ್ರಹ್ಮ', 'ಇದಂ ಸರ್ವಂ ಯದಯಮಾತ್ಮಾ' ಎಂಬ ಶ್ರುತಿವಾಕ್ಯಗಳಂತೆ ಇದೆಲ್ಲವೂ ಆತ್ಮನೇ ಎಂದು ಅರಿತುಕೊಳ್ಳಬೇಕು.

## 16. ಮನಸ್ಸು ಆತ್ಮನಲ್ಲಿ ಕಲ್ಪಿತವಾಗಿದೆ

ಯಾವಾಗಲೂ ಅನಾತ್ಮರೂಪವಾದ ವಿಷಯಗಳನ್ನೇ ಚಿಂತಿಸುವ ಅಭ್ಯಾಸವುಳ್ಳ ಮನಸ್ಸಿಗೆ ನಿರ್ವಿಷಯವಾದ ಆತ್ಮಸ್ವರೂಪದಲ್ಲಿಯೇ ನೆಲೆನಿಲ್ಲುವುದು ತುಂಬಾ ಕಷ್ಟವಾಗುತ್ತದೆ. ಇದಕ್ಕೆ ಏನುಮಾಡಬೇಕು ? ಯಾವ ರೀತಿ ಮಾಡಿದರೆ ಮನಸ್ಸು ಸುಲಭವಾಗಿ ಆತ್ಮನಲ್ಲಿ ನಿಲ್ಲುತ್ತದೆ ? –ಇವೇ ಮೊದಲಾದ ಸಂದೇಹಗಳು ಬಹಳಜನ ಸಾಧಕರಿಗೆ ಉತ್ಪನ್ನವಾಗುತ್ತವೆ. ಇದಕ್ಕೆ ಉತ್ತರವೇನೆಂದರೆ :

ಮನಸ್ಸನ್ನು ತಡೆದುನಿಲ್ಲಿಸುವುದಕ್ಕೇ ಹೋದರೆ ಹೀಗೆಯೇ ಕಷ್ಟವಾಗುತ್ತದೆ. ತನ್ನ ನೆರಳನ್ನು ಹಿಡಿಯಲು ಹೋದರೆ ಅದು ತನ್ನ ಕೈಗೆ ಸಿಕ್ಕುತ್ತದೆಯೆ ? ಇಲ್ಲ. ಏಕೆಂದರೆ ನೆರಳೆಂಬುದು ಒಂದು ಸ್ವತಂತ್ರವಸ್ತುವಾಗಿದ್ದರೆ ಅದು ಹಿಡಿತಕ್ಕೆ ಸಿಕ್ಕುತ್ತಿತ್ತು,

ವಾಸ್ತವವಾಗಿ ನೆರೆಳು ತನ್ನನ್ನು ಬಿಟ್ಟು ಇಲ್ಲವೇ ಇಲ್ಲ. ಅಷ್ಟೇ ಅಲ್ಲ, ತನ್ನಲ್ಲಿ ಎಂದಿಗೂ ನೆರಳು ಇಲ್ಲವೇ ಇಲ್ಲ. ಅಲ್ಲವೆ ? ಹಾಗೆಯೇ ಮನಸ್ಸನ್ನು ಹಿಡಿಯಲು ಹೋದರೆ ಅದು ತನ್ನ ಕೈಗೆ ಸಿಕ್ಕುವುದಿಲ್ಲ; ಏಕೆಂದರೆ ಅದು ಮನುಷ್ಯನ ನೆರಳಿನಂತೆ ಆತ್ಮಸ್ವರೂಪನಾದ ತನ್ನಲ್ಲಿ ಕಲ್ಪಿಸಲ್ಪಟ್ಟಿದೆ. ಆತ್ಮನನ್ನು ಬಿಟ್ಟು ಮನಸ್ಸು ಒಂದು ಸ್ವತಂತ್ರವಾಗಿ ಎಂದಿಗೂ ಎಲ್ಲಿಯೂ ಇಲ್ಲವೇ ಇಲ್ಲ.

ಸಮುದ್ರದಲ್ಲಿ ತೋರುವ ಅಲೆಗಳು ಸ್ವತಂತ್ರವಾಗಿ ಇವೆಯೆ ? ಎಂದೂ ಇಲ್ಲವೇ ಇಲ್ಲ. ಸಮುದ್ರವೇ ಅಲುಗಾಡಿದಾಗ (ಉಕ್ಕಿ ಬಂದಾಗ) ಮೇಲುಗಡೆಗೆ ಅಲೆಗಳಾಗಿ ತೋರುತ್ತದೆ ; ಒಳಗಡೆ ಹೋದರೆ ಅಲೆಗಳು ಇರುವುದೇ ಇಲ್ಲ; ಅವು ಸಮುದ್ರವೇ ಆಗಿರುತ್ತವೆ ಎಂದರೆ ಯಾವಾಗಲೂ ಅಲೆಗಳು ಸಮುದ್ರಕ್ಕಿಂತ ಬೇರೆಯಾಗಿ ಇಲ್ಲವೇ ಇಲ್ಲ. ನಿಜವೇನೆಂದರೆ : ಸಮುದ್ರವೇ ಅಲೆಗಳಾಗಿ ತೋರಿತು. ಅದರಂತೆಯೇ ಸಚ್ಚಿದಾನಂದಸ್ವರೂಪನಾದ ಆತ್ಮನೆಂಬ ಸಮುದ್ರದಲ್ಲಿ ತೋರುವ ಅಲೆಯೇ ಈ ಮನಸ್ಸು. ಸಮುದ್ರವನ್ನು ಬಿಟ್ಟು ಅಲೆಗಳು ಹೇಗೆ ಬೇರೆಯಾಗಿ ಇರಲಾರವೋ ಹಾಗೆ ಆತ್ಮನನ್ನು ಬಿಟ್ಟು ಬೇರೆಯಾಗಿ ಮನಸ್ಸು ಇರಲಾರದು. ಹೇಗೆ ಸಮುದ್ರವೇ ಅಲುಗಾಡಿದಾಗ ತನಗಿಂತ ಬೇರೆಯಾಗಿ ಅಲೆಗಳಾಗಿ ತೋರುತ್ತದೆಯೋ ಹಾಗೆ, ಆತ್ಮನೇ ಅಲುಗಾಡಿದಂತೆ ತೋರಿದಾಗ ಮನಸ್ಸಾಗಿ, ಕಲ್ಪನೆಗಳಾಗಿ ತೋರುತ್ತಾನೆ. ಒಳಗಡೆ ಹೋದರೆ ಹೇಗೆ ಅಲೆಗಳಿರುವುದಿಲ್ಲವೋ ಅವೆಲ್ಲವೂ ಸಮುದ್ರವೇ ಆಗಿಬಿಟ್ಟಿರುತ್ತವೆಯೋ ಹಾಗೆ , ಈ ಮನಸ್ಸು. ಈ ಕಲ್ಪನೆಗಳು ಎಲ್ಲಿಂದ, ಹೇಗೆ ಬಂದವೆಂದು ವಿಚಾರಮಾಡಿ ನೋಡಿದರೆ, ಅಲ್ಲಿ ಮನಸ್ಸು ಇಲ್ಲವೇ ಇಲ್ಲ. ಈಗ ನಾನು ಕಲ್ಪನೆಗಳ ಜೊತೆಗೆ ಹೊರಗಡೆ ಬರುತ್ತಿದ್ದೇನೆ. ಇದನ್ನು ಬಿಟ್ಟು ಕಲ್ಪನೆಗಳು ಎಲ್ಲಿಂದ , ಹೇಗೆ ಹೊರಗಡೆ ಬರುತ್ತವೆಯೋ ಹಾಗೆಯೇ ಅವುಗಳನ್ನು ಅನುಸರಿಸಿ ಹಿಂದಿರುಗಿ ಒಳಗಡೆ ಹೋಗಿ ಅವುಗಳ ಮೂಲವನ್ನು ನೋಡಿದರೆ ಅಲ್ಲಿ ಕಲ್ಪನೆಗಳು ಕಲ್ಪನೆಯಾಗಿರುವುದಿಲ್ಲ ; ಮನಸ್ಸು ಮನಸ್ಸಾಗಿರುವುದಿಲ್ಲ. ಆಗ ಅದು ಅಮನಸ್ಸಾಗಿರುತ್ತದೆ ; ಆತ್ಮನೇ ಆಗಿಬಿಟ್ಟಿರುತ್ತದೆ. ಈ ವಿಧವಾಗಿ ವಿಚಾರಮಾಡಿ ನೋಡಿದರೆ ಮನಸ್ಸೊಂದು ಪ್ರತ್ಯೇಕವಾಗಿ ಎಲ್ಲಿದೆ ? ಎಲ್ಲಿಯೂ ಇಲ್ಲವೇ ಇಲ್ಲ. ಆತ್ಮನನ್ನೇ ಮನಸ್ಸಾಗಿ ಕಾಣುತ್ತಿದ್ದೇವೆ. ಅಷ್ಟೆ.

ಮನಸ್ಸಿಗೆ ಒಂದು ನಿಶ್ಚಿತವಾದ ಸ್ವರೂಪವು ಇಲ್ಲವೇ ಇಲ್ಲ. ಹಾಗೆ ಇದ್ದದ್ದೇ ಆದರೆ ಅದು ಬದಲಾವಣೆಯನ್ನು ಹೊಂದುತ್ತಿರಲಿಲ್ಲ. ಅದು ವಿವಿಧ ರೂಪಗಳನ್ನು ತಾಳುತ್ತದೆ, ವಿಕಾರವಾಗುತ್ತದೆ. ನೀರಿಗೆ ಸ್ವತಃ ಯಾವ ಬಣ್ಣವೂ ಇರುವುದಿಲ್ಲ. ಆದರೆ

ಅದು ಹೇಗೆ ಯಾವ ಬಣ್ಣದ ಜೊತೆಗೆ ಸೇರಿದರೆ ಆ ಬಣ್ಣವೇ ಆಗಿ ತೋರುತ್ತದೆಯೋ ಹಾಗೆ ಮನಸ್ಸಿಗೆ ಒಂದು ರೂಪವಿಲ್ಲ. ಅದು ಇಂದ್ರಿಯಗಳ ಮೂಲಕ ಶಬ್ದಸ್ಪರ್ಶಾದಿ ವಿಷಯಗಳನ್ನು ಅರಿಯುವಾಗ ಆಯಾ ವಿಷಯಾಕಾರವಾಗಿಯೇ ಪರಿಣಾಮವಾಗಿ ತೋರುತ್ತದೆ. ಹೇಗೆ ನೀರು ಬಣ್ಣದೊಡನೆ ಸೇರಿದಾಗ ನೀರಿನ ಬಣ್ಣವೆಂಬುದು ಬೇರೆಯಾಗಿರುವುದಿಲ್ಲವೋ ಹಾಗೆ, ವಿಷಯಗಳೊಡನೆ ಬೆರೆತಾಗ ಮನಸ್ಸು ಬೇರೆಯಾಗಿರದೆ ವಿಷಯಾಕಾರವಾಗಿಯೇ ತೋರುತ್ತದೆ. ಅದು ವಿಷಯಗಳ ಸಂಗವನ್ನು ಬಿಟ್ಟರೆ, ಅವುಗಳ ಸ್ಮರಣೆಯನ್ನು ಬಿಟ್ಟರೆ ಆಗ ಅಂತರ್ಮುಖವಾಗಿ ತನ್ನ ನಿಜಸ್ವರೂಪವನ್ನು ಮುಟ್ಟಿಬಿಡುತ್ತದೆ; ಮನಸ್ಸು ಅಮನಸ್ಕಾಗುತ್ತದೆ– ಎಂದರೆ ಆತ್ಮನೇ ಆಗುತ್ತದೆ.

ಒಂದು ಕಲ್ಪನೆಯಲ್ಲಿ ಮತ್ತೊಂದು ಕಲ್ಪನೆಯು ಇರುವುದಿಲ್ಲ. ಮನೆ ಎನ್ನುವ ಕಲ್ಪನೆಯಲ್ಲಿ ಮರ ಎನ್ನುವ ಕಲ್ಪನೆ ಇಲ್ಲ. ಮರ ಎನ್ನುವ ಕಲ್ಪನೆಯಲ್ಲಿ ನದಿ ಎನ್ನುವ ಕಲ್ಪನೆ ಇಲ್ಲ. ಮನೆ, ಮರ, ನದಿ – ಎನ್ನುವ ವಿಷಯಗಳನ್ನು ತೆಗೆದುಹಾಕಿದರೆ ಆಗ ಕಲ್ಪನೆಯು ಕಲ್ಪನೆಯಾಗಿರುವುದಿಲ್ಲ. ತನಗೆ ಆಧಾರವಾದ ಚಿದ್ರೂಪದಲ್ಲಿಯೇ ಲಯವಾಗಿ ಬಿಡುತ್ತದೆ.

ವಿವಿಧಕಲ್ಪನೆಗಳು ಏಕಕಾಲದಲ್ಲಿ ಬರುವುದಿಲ್ಲ. ಒಂದು ಕಲ್ಪನೆ ಬಂದು ಹೋದನಂತರವೇ ಮತ್ತೊಂದು ಕಲ್ಪನೆಯು ಬರುತ್ತದೆ. ಉದಾಹರಣೆಗೆ ದೇವಸ್ಥಾನ ಎನ್ನುವ ಕಲ್ಪನೆ ಬಂದಾಗ ಮಠ, ಆಶ್ರಮ – ಎನ್ನುವ ಕಲ್ಪನೆ ಇರುವುದಿಲ್ಲ. ಆಶ್ರಮ ಎನ್ನುವ ಕಲ್ಪನೆ ಇದ್ದಾಗ ನದಿ ಎನ್ನುವ ಕಲ್ಪನೆ ಇರುವುದಿಲ್ಲ. ಹೀಗೆ ಕಲ್ಪನೆಗಳು ಒಂದಾದ ಮೇಲೊಂದು ಬರುತ್ತವೆ. ದೇವಸ್ಥಾನ ಎನ್ನುವ ಕಲ್ಪನೆಯು ಹೋದಮೇಲೆಯೇ ನದಿ ಎನ್ನುವ ಕಲ್ಪನೆಯು ಬರುತ್ತದೆ. ಹೊಳೆ ಎನ್ನುವ ಕಲ್ಪನೆಯು ಹೋದ ತರುವಾಯವೇ ಆಶ್ರಮ ಎನ್ನುವ ಕಲ್ಪನೆಯು ಬರುತ್ತದೆ. ಹೀಗೆ ಒಂದು ಕಲ್ಪನೆಯಿದ್ದಾಗ ಮತ್ತೊಂದು ಕಲ್ಪನೆಯು ಇರುವುದಿಲ್ಲ. ಆದರೆ ಇವೆಲ್ಲಕ್ಕೂ ಸಾಕ್ಷಿಯಾದ, ಇವುಗಳಿಗೆ ಆಧಾರವಾದ, ಇವು ಬಂದುಹೋಗುವುದನ್ನು ನೋಡುತ್ತಿರುವ ಆತ್ಮಸ್ವರೂಪನಾದ ತಾನು ಮಾತ್ರ ಇವೆಲ್ಲವುಗಳಲ್ಲಿಯೂ ಒಂದೇಸಮನಾಗಿ ಬದಲಾವಣೆಯನ್ನು ಹೊಂದದೆ ನಿರ್ವಿಕಾರವಾಗಿರುತ್ತದೆ. ಇಂತಹ ತನ್ನ ಸ್ವರೂಪದಲ್ಲಿ ನಿಂತುನೋಡಿದರೆ ಆಗ ಅಲ್ಲಿ ಕಲ್ಪನೆಗಳೇ ಇರುವುದಿಲ್ಲ. ತನಗಿಂತಲೂ ಬೇರೆಯಾಗಿ ಮತ್ತೊಂದೇನೂ ಉಳಿಯು ವುದೇ ಇಲ್ಲ. ಈ ವಿಧವಾಗಿ ವಿಚಾರಮಾಡಿನೋಡಿದರೆ ಮನಸ್ಸು ಮತ್ತು ಮನಸ್ಸಿನಿಂದಲೇ ತೋರುವ ಸಮಸ್ತಸಂಸಾರವೂ ಕೇವಲ ಚಿದ್ರೂಪನಾದ ತನ್ನ ಸ್ವರೂಪವೇ ಆದ ಆತ್ಮನಲ್ಲಿ ಕಲ್ಪಿತವಾಗಿದೆ.

ಸಿನೆಮಾದಲ್ಲಿ ಒಂದುಸಲ ಬರಿಯ ಬಟ್ಟೆ ಇರುವುದನ್ನು ನೋಡಿದಮೇಲೆ ಪದೇಪದೇ ಬಟ್ಟೆಯನ್ನು ನೋಡುವ ಅವಶ್ಯಕತೆ ಇರುವುದಿಲ್ಲ. ಸಿನೆಮಾದಲ್ಲಿ ಏನು ತೋರಿದರೂ ಸಹ ಹೇಗೆ ಗಾಬರಿಯಾಗದೆ ಅಲ್ಲಿರುವುದು, ತೋರುವುದು ಎಲ್ಲವೂ ಕೇವಲ ಬಟ್ಟೆಯೇ ಹೊರತು ಮತ್ತೊಂದೇನೂ ಇರುವುದಿಲ್ಲವೆಂದು ತಿಳಿಯುತ್ತೇವೆಯೋ ಹಾಗೆ, ಸಿನೆಮಾದಲ್ಲಿಯ ಬಟ್ಟೆಯಹಾಗಿರುವ ಕೇವಲ ಅರಿವಿನ ಸ್ವರೂಪವೇ ಆದ, ತಾನೇತಾನಾದ ಆತ್ಮಸ್ವರೂಪನಾದ ತನ್ನಲ್ಲಿ ಎಂದೆಂದಿಗೂ ಮನಸ್ಸಿಲ್ಲವೆಂದು ವಿಚಾರವನ್ನು ಮಾಡಬೇಕು. ಸಿನೆಮಾದಲ್ಲಿ ಏನೂ ತೋರಿದರೂ ಏನು ಅನುಭವಿಸಿದರೂ ಸಹ, ಅದು ಹೇಗೆ ಸುಳ್ಳೋ ಹಾಗೆ, ತೋರಿ ಅಡಗುವ ಸುಳ್ಳಾದ ಮನಸ್ಸಿಗೆ ಏನುತೋರಿದರೂ ಏನು ಅನುಭವವಾದರೂ ಸಹ ಅದು ಸುಳ್ಳೇ ಎಂದು ಸತತವಾಗಿ ವಿಚಾರವನ್ನು ಮಾಡಬೇಕು. ನೀರಿನಮೇಲಿರುವ ಹಸಿರುಪಾಚಿಯನ್ನು ನೋಡಿದಾಗ ಎಂದಾದರೂ ಇಲ್ಲಿ ಬರಿಯ ಪಾಚಿ ಇದೆ, ನೀರಿಲ್ಲವೆಂದು ಭ್ರಮಿಸುತ್ತೇವೆಯೆ ? ಎಂದೂ ಇಲ್ಲ. ಪಾಚಿಯನ್ನು ನೋಡಿದರೂ ಸಹ ಇಲ್ಲಿರುವುದು ಬರಿಯ ನೀರೇ ಹೊರತು ಮತ್ತೇನೂ ಇಲ್ಲವೆಂದು ಹೇಗೆ ತಿಳಿಯುತ್ತೇವೆಯೋ ಹಾಗೆ, ಆತ್ಮಸ್ವರೂಪವೆಂಬ ನೀರಿನಮೇಲೆ ತೋರುತ್ತಿರುವ ಈ ಮನಸ್ಸೆಂಬ ಪಾಚಿಯನ್ನು ಕಂಡು ಭ್ರಮಿಸುವುದೇಕೆ? ಇದು ಎಂದೂ ಇಲ್ಲದ್ದೆಂದೇ ವಿಚಾರವನ್ನು ಮಾಡಿ ತಿಳಿಯಬೇಕು. ಈ ಸಮಸ್ತಜಗತ್ತೂ ಆತ್ಮಸ್ವರೂಪನಾದ ತನ್ನಲ್ಲಿ ಕೇವಲ ಕಲ್ಪಿಸಲ್ಪಟ್ಟಿದೆಯಲ್ಲದೆ ಸತ್ಯವಾಗಿ ಇಲ್ಲವೇ ಇಲ್ಲ. ಕೇವಲ ಜ್ಞಾನರೂಪನಾದ ತನ್ನನ್ನು ಅರಿಯದೆ ಮರೆತು ಈ ಜಗತ್ತು ಸತ್ಯವೆಂದೂ ಇದರಲ್ಲಿ ಕೆಲವು ತನಗೆ ಅನುಕೂಲವಾಗಿವೆ, ಮತ್ತೆ ಕೆಲವು ಅನನುಕೂಲವಾಗಿವೆ ಎಂಬ ತಪ್ಪು ತಿಳಿವಳಿಕೆಯಿಂದಲೇ ರಾಗದ್ವೇಷಗಳಿಂದ ಕೂಡಿಕೊಂಡು ನಾನು ಏನನ್ನೋ ಮಾಡಬೇಕು, ಯಾವುದನ್ನೋ ಪಡೆಯಬೇಕು, ಏನನ್ನೋ ತಿಳಿಯಬೇಕು. 'ಜ್ಞಾತವ್ಯ, ಕರ್ತವ್ಯ, ಪ್ರಾಪ್ತವ್ಯ' ಎನ್ನುವ ಮುಪ್ಪುರಿಯ ಪಾಶದಿಂದ ಜೀವನು ಬಂಧಿಸಲ್ಪಟ್ಟು ಒಂದು ಕ್ಷಣವೂ ಸುಮ್ಮನಿರದೆ ಏನೇನೋ ಮಾಡುತ್ತಾ ದುಃಖವನ್ನನುಭವಿಸುತ್ತಿದ್ದಾನೆ. ಸದ್ಗುರುವಿನ ಕೃಪೆಯಿಂದಲೂ ಮತ್ತು ಅವನ ಬೋಧೆಯಿಂದಲೂ ಇದೆಲ್ಲವೂ ಕನಸಿನಂತೆ, ಗಾರುಡಿಯವನ ಆಟದಂತೆ ಕೇವಲ ಹುಸಿತೋರಿಕೆಯೆಂದೂ ಮಾಯಾಮಾತ್ರವೆಂದೂ ಕೇವಲ ಪರಮಾನಂದಸ್ವರೂಪನಾದ ಆತ್ಮನೇ ತಾನೆಂದೂ, ಇಂಥ ತನ್ನಲ್ಲಿ ತನಗಿಂತಲೂ ಬೇರೆಯಾಗಿ ಮತ್ತೊಂದೇನೂ ಇಲ್ಲವೇ ಇಲ್ಲವೆಂದೂ ಯಾವಾಗ ತಾನೇ ತನ್ನಲ್ಲಿಯೇ ತಿಳಿಯುತ್ತಾನೆಯೋ ಆಗ ಜ್ಞಾತವ್ಯ ಕರ್ತವ್ಯ ಪ್ರಾಪ್ತವ್ಯ ವೆನ್ನುವ ಪಾಶಗಳಿಂದ ಬಿಡುಗಡೆ ಹೊಂದಿ ಶಾಂತಿಯನ್ನು ಪಡೆಯುತ್ತಾನೆ. ತಾನು ಕೇವಲ ನಿಷ್ಕ್ರಿಯನಾದ ಆತ್ಮಸ್ವರೂಪನೇ ಆಗಿರುವಾಗ ಕರ್ತವ್ಯವೆಲ್ಲಿಯದು? ತನಗಿಂತಲೂ

ಬೇರೆಯಾಗಿ ಮತ್ತೊಂದೇನೂ ಇಲ್ಲದೆ, ಸಕಲವೂ ತಾನೇ ಆಗಿರುವಾಗ ಇನ್ನು ಪಡೆಯುವುದಾದರೂ ಏನಿದೆ? ಪಡೆಯಲು ತನಗಿಂತಲೂ ಭಿನ್ನವಾಗಿ ಮತ್ತೊಂದಿದ್ದರೆ ತಾನೆ ? ಕೇವಲ ಜ್ಞಾನಸ್ವರೂಪನೇ ತಾನಾಗಿರುವಾಗ ಇನ್ನು ತಿಳಿಯುವುದೇನಿದೆ ? ಈ ರೀತಿ ಸರಿಯಾಗಿ ಅನುಭವಪೂರ್ವಕವಾಗಿ ತಿಳಿದಾಗಲೇ ಪೂರ್ಣವಾದ ನಿತ್ಯವಾದ ಪರಮಶಾಂತಿಯು ಲಭಿಸುತ್ತದೆ. ದೇಹಬುದ್ಧಿಯು ಹೋಗಿ ಆತ್ಮಬುದ್ಧಿಯು ಪ್ರಾಪ್ತಿಯಾಗುತ್ತದೆ.

## 17. ಸ್ವರೂಪಾನುಸಂಧಾನ

ಅಧ್ಯಾತ್ಮಸಾಧಕರು ನಿರಂತರವೂ ತಾನಾರೆಂದು ವಿಚಾರವನ್ನು ಮಾಡಬೇಕು ; ತಮ್ಮ ನಿಜಸ್ವರೂಪವನ್ನೇ ಚಿಂತಿಸಬೇಕು ; ಅದನ್ನೇ ಸ್ಮರಿಸಬೇಕು ; ಆತ್ಮಸ್ವರೂಪವನ್ನೇ ಧ್ಯಾನಿಸಬೇಕು; ಅದನ್ನು ಕುರಿತೇ ವಿಚಾರಮಾಡಬೇಕು – ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ. ವಿಚಾರವನ್ನು ಮಾಡುವುದು ಮತ್ತು ವಿಚಾರಕ್ಕೆ ಲಕ್ಷ್ಯವಾದ ತನ್ನ ನಿಜಸ್ವರೂಪದಲ್ಲಿ ನೆಲೆನಿಲ್ಲಿಸುವುದಕ್ಕೆ ಯತ್ನಿಸುವುದು – ಇದೇ ಮುಖ್ಯಸಾಧನವಾದ್ದರಿಂದ ಸ್ವರೂಪಾನುಸಂಧಾನವನ್ನು ಹೇಗೆ ಮಾಡಬೇಕೆಂಬುದನ್ನು ಇನ್ನುಮುಂದೆ ವಿಚಾರ ಮಾಡೋಣ.

ಈ ದೇಹವು ನಾನಲ್ಲ, ಇಂದ್ರಿಯಗಳು ನಾನಲ್ಲ, ಪ್ರಾಣವು ನಾನಲ್ಲ, ಮನಸ್ಸು ನಾನಲ್ಲ, ಬುದ್ಧಿಯು ನಾನಲ್ಲ, ಚಿತ್ತವು ನಾನಲ್ಲ , ನಾನು ನಾನೆನ್ನಿಸುವುದು ಯಾವುವೂ ನಾನಲ್ಲ, ಎಚ್ಚರವು ನಾನಲ್ಲ, ಕನಸು ನಾನಲ್ಲ, ನಿದ್ರೆಯು ನಾನಲ್ಲ. ಯಾವುದು ಈ ಸಮಸ್ತವನ್ನೂ ಅರಿಯುತ್ತಿದೆಯೋ, ಯಾವುದನ್ನು ಮತ್ತೊಂದು ಅರಿಯಲಾರದೋ ಅಂತಹ ಚೈತನ್ಯವೇ, ಅರಿವೇ ನಾನು. ಯಾವುದು ಈ ದೇಹೇಂದ್ರಿಯಪ್ರಾಣಮನಸ್ಸು ಬುದ್ಧಿಗಳನ್ನೂ ನಾನುನಾನೆನ್ನಿಸುವುದೆಲ್ಲವನ್ನೂ ಎಚ್ಚರಕನಸುನಿದ್ರೆಗಳನ್ನೂ ನೋಡುತ್ತಿದೆಯೋ, ಯಾವುದನ್ನು ಇವುಗಳ್ಯಾವುವೂ ನೋಡಲಾರವೋ ಅಂತಹ ಸಾಕ್ಷಿಸ್ವರೂಪನೇ ನಾನು. ಯಾವುದು ದೇಹೇಂದ್ರಿಯಪ್ರಾಣಮನಸ್ಸುಬುದ್ಧ್ಯಹಂಕಾರಾದಿ ಗಳಿಗೂ ಎಚ್ಚರಕನಸು ನಿದ್ರೆಗಳಿಗೂ ಆಧಾರವಾಗಿದೆಯೋ, ಯಾವುದಕ್ಕೆ ಮತ್ತೊಂದರ ಆಧಾರವಿಲ್ಲವೋ ಅಂಥ ಸತ್ಯಸ್ವರೂಪವೇ ನಾನು. ಯಾವುದು ಎಚ್ಚರವಾಗಿಯೂ ಕನಸಾಗಿಯೂ ನಿದ್ರೆಯಾಗಿಯೂ ಅಜ್ಞಾನದಿಂದ ತೋರುತ್ತಿದೆಯೋ, ಯಾವುದು ತಾನುಮಾತ್ರ ಎಚ್ಚರವಾಗದೆಯೂ ಕನಸಾಗದೆಯೂ ನಿದ್ರೆಯಾಗದೆಯೂ ಯಾವ ಬದಲಾವಣೆಯನ್ನೂ ಹೊಂದದೆ ತಾನಿದ್ದಂತೆಯೇ ಇದೆಯೋ ಅಂತಹ

ನಿರ್ವಿಕಾರವಾದ ಆತ್ಮಸ್ವರೂಪವೇ ನಾನು. ಯಾವುದು ಈ ಎಲ್ಲದರ ಒಳಗೂ ಹೊರಗೂ ತುಂಬಿದೆಯೋ ಯಾವುದಕ್ಕೆ ಒಳಗು, ಹೊರಗು – ಎಂಬ ವಿಭಾಗವಿಲ್ಲವೋ ಅಂಥ ಆತ್ಮಸ್ವರೂಪವೇ ನಾನು. ಯಾವುದರಲ್ಲಿ ಈ ಮಾಯೆಯು ಎಂದರೆ ಅವಿದ್ಯೆಯಿಂದ ಕಲ್ಪಿಸಲ್ಪಟ್ಟಿರುವ ವ್ಯಾಕೃತಾವ್ಯಾಕೃತಾತ್ಮಕವಾದ ಹುಸಿತೋರಿಕೆಯು ಇಲ್ಲವೇ ಇಲ್ಲವೋ ಯಾವುದು ಈ ಮಾಯೆಗೆ ಆಶ್ರಯವಾಗಿದೆಯೋ ಅಂಥ ಸತ್ಯಸ್ವರೂಪವೇ ನಾನು. ಸಮುದ್ರದಲ್ಲಿ ತೆರೆನೊರೆಗುಳ್ಳೆಗಳು ತೋರಿ ಅಲ್ಲಿಯೇ ಅಡಗುವಂತೆ, ಯಾವುದರಲ್ಲಿ ಈ ಸಮಸ್ತಬ್ರಹ್ಮಾಂಡಗಳೂ ತೋರಿ ಅಲ್ಲಿಯೇ ಅಡಗುತ್ತಿವೆಯೋ ಅಂಥ ಸತ್ಯಸ್ವರೂಪವೇ ನಾನು. ಸುಖದುಃಖಗಳಿಲ್ಲದ ಹುಟ್ಟುಸಾವುಗಳಿಲ್ಲದ ಪಾಪಪುಣ್ಯಗಳಿಲ್ಲದ ಸ್ತ್ರೀಪುರುಷಭೇದಗಳಿಲ್ಲದ ಏನೂ ಕಲ್ಪನೆಗಳಿಲ್ಲದ ಏನೊಂದೂ ವ್ಯವಹಾರವಿಲ್ಲದ ತಾನೇತಾನಾಗಿರುವ ನಿರ್ವಿಕಲ್ಪವಾದ ನಿರಾಕಾರವಾದ ನಿಷ್ಕ್ರಿಯವಾದ ಆತ್ಮಸ್ವರೂಪವೇ ನಾನು. ಅದು ಅನುಭವದಲ್ಲಿ ಹೇಗಿದೆ? ಎಂದರೆ ನಿದ್ರೆಯಲ್ಲಿರುವಂತೆ ನಿರ್ವಿಕಲ್ಪವಾಗಿ ಹೀಗೆ ಹಾಗೆ ಎಂದು ಹೇಳಲು ಬಾರದ ಸ್ವರೂಪಾನುಭವವಾಗಿಯೇ ಇದೆ. ಅದನ್ನು ತಿಳಿಯುವುದು ಹೇಗೆಂದರೆ , **''ಯೇನೇದಂ ಸರ್ವಂ ವಿಜಾನಾತಿ ತಂ ಕೇನ ವಿಜಾನೀಯಾದ್ವಿಜ್ಞಾತಾರಮರೇ ಕೇನ ವಿಜಾನೀಯಾತ್''** ಯಾವುದರಿಂದ ಇದೆಲ್ಲವನ್ನೂ ತಿಳಿಯುತ್ತೇವೆಯೋ ಅದನ್ನು ಯಾವುದರಿಂದ ತಿಳಿಯಲು ಸಾಧ್ಯ ? ತಿಳಿಯುವವನನ್ನು ಹೇಗೆತಾನೆ ತಿಳಿಯಲಾದೀತು? – ಎಂದು ಶ್ರುತಿಯು ಹೇಳುತ್ತಿದೆ. ಇದರ ತಾತ್ಪರ್ಯವೇನೆಂದರೆ ಎಲ್ಲ ದೃಶ್ಯಗಳನ್ನೂ ನೋಡುವಂಥ ನಮ್ಮ ಕಣ್ಣುಗಳನ್ನು ಹೇಗೆ ನಾವು ನೋಡಲು ಸಾಧ್ಯವಿಲ್ಲವೋ ಹಾಗೆ ಎಲ್ಲವನ್ನೂ ಅರಿಯುವಂಥ ಆತ್ಮಸ್ವರೂಪವನ್ನು ಜ್ಞೇಯವಾಗಿ ಅರಿಯಲು ಸಾಧ್ಯವಿಲ್ಲ. ಒಂದುಪಕ್ಷ ಅರಿತರೆ ಅದು ತನಗಿಂತಲೂ ಭಿನ್ನವಾಯಿತಾದ್ದರಿಂದ ಅರಿತದ್ದು ಆತ್ಮವಾಗುವುದಿಲ್ಲ. ಹಾಗಾದರೆ ತಾನು ಆತ್ಮನನ್ನರಿಯುವುದು ಹೇಗೆಂದರೆ, ಅರಿವಿನ ಸ್ವರೂಪವೇ ತಾನು. ಆತ್ಮನಲ್ಲಿ ಕಲ್ಪಿಸಿದ ಅನಾತ್ಮಗಳ ನಿವೃತ್ತಿಯೇ ಅರಿಯುವುದೇ ಹೊರತು ಆತ್ಮನನ್ನು ವಿಷಯೀಕರಿಸುವದಲ್ಲ. **''ತಸ್ಮಾತ್ ಅನಾತ್ಮನಿ ಆತ್ಮಬುದ್ಧಿ–ನಿವೃತ್ತಾವೇವ ಕ್ರಿಯಾ ಕರ್ತವ್ಯಾ । ನ ತು ಬ್ರಹ್ಮಜ್ಞಾನೇ ಯತ್ನಃ ಕರ್ತವ್ಯಃ ॥''** (ಗೀ. 18–50) ಇದನ್ನು ನಮ್ಮ ಅನುಭವದ ದೃಷ್ಟಿಯಿಂದ ನೋಡಬೇಕೆಂದರೆ :

**ಸ್ವಪ್ನೋ ಜಾಗರಣೇऽಲೋಕಃ ಸ್ವಪ್ನೇऽಪಿ ಜಾಗರೋ ನ ಹಿ ।**
**ದ್ವಯಮೇವ ಲಯೇ ನಾಸ್ತಿ ಲಯೋऽಪಿ ಹ್ಯುಭಯೋರ್ನ ಚ ॥**

ಸ್ವಪ್ನವು ಎಚ್ಚರಿಕೆಯಲ್ಲಿ ತೋರುವುದಿಲ್ಲ. ಎಚ್ಚರವು ಸ್ವಪ್ನದಲ್ಲಿ ತೋರುವುದಿಲ್ಲ. ಈ ಎಚ್ಚರಕನಸುಗಳೆರಡೂ ಗಾಢನಿದ್ರೆಯಲ್ಲಿ ಇರುವುದಿಲ್ಲ. ಗಾಢನಿದ್ರೆಯು ಈ ಎಚ್ಚರ ಕನಸುಗಳೆರಡರಲ್ಲೂ ಇರುವುದಿಲ್ಲ. ಆತ್ಮಸ್ವರೂಪನಾದ ತಾನುಮಾತ್ರ ಇವು ತೋರುವುದಕ್ಕೂ ಅಡಗುವುದಕ್ಕೂ ಆಧಾರವಾಗಿ ಇದ್ದೇ ಇರಬೇಕು. 'ಅವಸ್ಥೆ ಇದೆ' ಎಂದಾಗ ತಾನು ಇದ್ದು ತನ್ನಲ್ಲಿ ಅವಸ್ಥೆ ಎಂಬುದು ಕಲ್ಪಿತವಾಗಿದೆ ಎಂದೇ ತಿಳಿಯಬೇಕು. ಸಾಕ್ಷಿಸ್ವರೂಪನಾದ ತನ್ನ ಬೆಳಕಿನಲ್ಲಿಯೇ ಈ ಅವಸ್ಥೆಗಳು ತೋರಬೇಕೇ ಹೊರತು ಬೇರೆ ಇನ್ನೊಂದು ಆಧಾರವೇ ಇಲ್ಲ. ಇಲ್ಲಿಯೂ ಸಹ ಸಾಕ್ಷಿ ಎಂಬ ಮಾತಿಗೆ ಒಂದುಕಡೆಗೆ ಅವಸ್ಥೆಗಳಿದ್ದು ಆತ್ಮನು ಇನ್ನೊಂದುಕಡೆಯಲ್ಲಿದ್ದು ಆ ಅವಸ್ಥೆಗಳನ್ನು ಬೆಳಗುವವ ನಾಗಿರುವನೆಂದೇನೂ ತಾತ್ಪರ್ಯವಿಲ್ಲ. ಮತ್ತೇನೆಂದರೆ ಲೋಕದಲ್ಲಿ ಸಾಕ್ಷಿ ಎನಿಸುವವನು ಎದುರಿಗೆ ಕಾಣುತ್ತಿರುವ ದೃಶ್ಯಗಳಿಂದ ಹೇಗೆ ಅಲಿಪ್ತನಾಗಿರುವನೋ ಹಾಗೆಯೇ ಆತ್ಮನೂ ತೋರುವ (ಅವಿದ್ಯಾಕಲ್ಪಿತ) ಅವಸ್ಥೆಗಳ ಲೇಪವಿಲ್ಲದವನು ಎಂಬುದನ್ನು ತಿಳಿಸಲು ಶಾಸ್ತ್ರವು ಸಾಕ್ಷಿತ್ವವನ್ನು ಆತ್ಮನಲ್ಲಿ ಆರೋಪ ಮಾಡಿದೆ. ಹೇಗೆಂದರೆ ಅವಸ್ಥೆಗಳಲ್ಲಿಯೇ (ಎಚ್ಚರ, ಕನಸು) ಬೇರೆಬೇರೆ ದೇಶಕಾಲಗಳು ತೋರಿಬರುವದರಿಂದ ಅವಸ್ಥೆಗಳು ದೇಶಕ್ಕಾಗಲಿ ಕಾಲಕ್ಕಾಗಲಿ ಒಳಪಟ್ಟ ವಸ್ತುಗಳಲ್ಲ. ಅದರಂತೆ ಆತ್ಮನೂ ದೇಶಕಾಲ ಸಮೇತವಾದ ಅವಸ್ಥೆಗಳನ್ನರಿಯುವ ಚೈತನ್ಯಸ್ವರೂಪನಾದ್ದರಿಂದ ಅವನು ದೇಶಕಾಲದಲ್ಲಿಲ್ಲ. ಈ ರೀತಿಯಾಗಿ ಏಕಾಗ್ರತೆಯಿಂದ ವಿಚಾರಿಸುವಾಗ ಜಿಜ್ಞಾಸುವಿನ ಬುದ್ಧಿಯು ಅವಸ್ಥೆಗಳನ್ನು ದಾಟಿ ತನ್ನ ಸ್ವರೂಪವಾದ ಆತ್ಮನಲ್ಲಿಯೇ ಆತ್ಮನಾಗಿಯೇ ನಿಂತುಬಿಟ್ಟಿರುತ್ತದೆ. **''ನಿವೃತ್ತಸ್ಯಾಪ್ರವೃತ್ತಸ್ಯ ನಿಶ್ಚಲಾ ಹಿ ತದಾ ಸ್ಥಿತಿಃ । ವಿಷಯಃ ಸ ಹಿ ಬುದ್ಧಾನಾಂ ತತ್ ಸಾಮ್ಯಂ ಅಜಮದ್ವಯಮ್ ''॥** (ಗೌ. ಮಾಂ. ಕಾ. 4–80) ತನ್ನಲ್ಲಿ ಅವಸ್ಥೆಗಳು ಕಲ್ಪಿತ ಎಂದರಿತೊಡನೆಯೇ ಬುದ್ಧಿಯು ಅವಸ್ಥೆಗಳಿಂದ (ಅವಸ್ಥೆಗಳ ಯೋಚನೆಯಿಂದ) ಹಿಂದೆಳೆಯಲ್ಪಡುತ್ತದೆ. ಕೇವಲ ತಾನಲ್ಲದೆ ಇನ್ನೊಂದಿಲ್ಲ ಎಂದು ನಿಶ್ಚಯಿಸಿದಾಗ ಬೇರೆಯಾಗಿ ಕಾಣಲು ಇನ್ನೊಂದು ವಸ್ತುವೇ ಇಲ್ಲದ್ದರಿಂದ ಅಪ್ರವೃತ್ತವಾಗಿರುತ್ತದೆ. ಆಗ ಆ ಬುದ್ಧಿಯು ನಿಶ್ಚಲ– ಆತ್ಮಸಮ– ಅದ್ವಯವಾಗಿರು ತ್ತದೆ. ಇದು ವಿವೇಕದಿಂದಲೂ ಏಕಾಗ್ರತೆಯಿಂದಲೂ ಚಿತ್ತವು ನೆಲೆ ನಿಂತಿರುವವರಿಗೇ ಅನುಭವಕ್ಕೆ ಬರುವದಾದ್ದರಿಂದ ಇದು ತಿಳಿದವರಿಗೇ ಗೊತ್ತಾಗತಕ್ಕದ್ದು ಎಂದಿದ್ದಾರೆ. ಹೀಗೆ ಬುದ್ಧಿಯನ್ನು ಹಿಂದೆಳೆದು ಆತ್ಮನಲ್ಲಿ ನಿಲ್ಲಿಸುವದೇ **'ಆತ್ಮಾನುಸಂಧಾನ'** ಎನಿಸುತ್ತದೆ. ಇಲ್ಲಿ ಹೊರಗಿನವರ ದೃಷ್ಟಿಯಿಂದ ಬುದ್ಧಿಯು ಇದೆ ಎಂದೆನಿಸಿದರೂ ಈ ಅನುಭವದ ದೃಷ್ಟಿಯಿಂದ ಅದು ಬ್ರಹ್ಮವೇ ಆಗಿರುತ್ತದೆ. ಹೇಗೆಂದರೆ ಥಳಥಳಿಸುವ ಕೆಂಡದ ಕುಂಡದಲ್ಲಿ ಒಂದು ಸೌದೆಯನ್ನೊಗೆದರೆ ಅದು ಸುಟ್ಟು ಕೆಂಡವಾಗುತ್ತದೆ.

ಹಾಗಾದರೆ ಮೊದಲು ಸೌದೆ ಇದ್ದಾಗಿನ ಆಕಾರದ ಡೊಂಕು, ಗಂಟು – ಮುಂತಾದವುಗಳು ಈಗಲೂ ಇರುವಂತೆಯೇ ಕಂಡರೂ ಸಹ ಅವೆಲ್ಲವುಗಳೂ ಸ್ವರೂಪತಃ ಈಗ ಬೆಂಕಿಯಾಗಿಯೇ ಇರುವಂತೆ ಆತ್ಮಾನುಸಂಧಾನದಿಂದ ಎಂದರೆ ವಿವೇಕದಿಂದ ಆತ್ಮಸ್ವರೂಪದಲ್ಲಿಯೇ ನಿಂತಿರುವ ಬುದ್ಧಿಯು ಲೋಕದ ಜನರ ದೃಷ್ಟಿಯಿಂದ ಬುದ್ಧಿಯಾಗಿ ತೋರುತ್ತಿದ್ದರೂ, **'ತತ್ ಸಾಮ್ಯಂ ಅಜಂ ಅದ್ವಯಂ'** ಎಂಬಂತೆ ಅದು ಸ್ವರೂಪತಃ ಆತ್ಮನೇ ಆಗಿ ನಿಂತಿರುತ್ತದೆ. ಇದೇ ಆತ್ಮಾನುಸಂಧಾನದ ಮಹಿಮೆ. ಇದು ಸಾಧಕರಿಗೆ ಇಲ್ಲಿಯೇ (ವಿವೇಕಸಮಯದಲ್ಲಿಯೇ) ಅನುಭವಕ್ಕೆ ಬರುತ್ತದೆ.

**ಜಾಗ್ರತ್ಸ್ವಪ್ನಸುಷುಪ್ತ್ಯಾದಿಪ್ರಪಂಚಂ ಯತ್ಪ್ರಕಾಶತೇ।**
**ತದ್ಬ್ರಹ್ಮಾಹಮಿತಿ ಜ್ಞಾತ್ವಾ ಸರ್ವಬನ್ಧೈಃ ಪ್ರಮುಚ್ಯತೇ ॥** (ಕೈ.)

**"ಜಾಗ್ರತ್ ಪ್ರಪಂಚ"** ಎಚ್ಚರ ಎನ್ನುವ ಅವಸ್ಥೆಯನ್ನೂ ಎಚ್ಚರದಲ್ಲಿ ತೋರುವ ಸಮಸ್ತಪ್ರಪಂಚವನ್ನೂ ಎಂದರೆ ತನ್ನ ದೇಹದಿಂದ ಬೇರೆಯಾಗಿ ತೋರುವುದು ಅಷ್ಟೇ ಅಲ್ಲ; ಈ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ– ನಾನುನಾನೆನಿಸುವುದು – ಇವೆಲ್ಲವೂ ಜಾಗ್ರತ್‌ಪ್ರಪಂಚದಲ್ಲಿಯೇ ಸೇರಿರುತ್ತವೆ. ಕೆಲವರಿಗೆ ಈ ದೇಹಾದಿಗಳೆಲ್ಲವೂ ಪ್ರಪಂಚಕ್ಕೇ ಸೇರಿದವುಗಳು ಎಂದರೆ ತಿಳಿಯುವುದಿಲ್ಲ ಮತ್ತು ಒಪ್ಪಾಗುವುದೂ ಇಲ್ಲ. ಅದು ಹೇಗೆ ? –ಎನ್ನುತ್ತಾರೆ. ಹೇಗೆ ಈ ಪ್ರಪಂಚವು ಪಂಚಭೂತಗಳಿಂದಾಗಿದೆಯೋ ಮತ್ತು ದೃಶ್ಯವಾಗಿದೆಯೋ ಹಾಗೆಯೇ, ಈ ದೇಹವನ್ನು ಮೊದಲುಮಾಡಿ ನಾನು ನಾನೆನ್ನಿಸುವುದರವರೆಗೂ ಇರುವುದೆಲ್ಲವೂ ಸಹ ಪಂಚಭೂತಗಳಿಂದಲೇ ಆಗಿದ್ದು ಆತ್ಮನಿಗೆ ದೃಶ್ಯವಾಗಿರುತ್ತವೆ ಮತ್ತು ಇವುಗಳನ್ನೂ ಸಹ ಅವನು ಸಾಕ್ಷಿಯಾಗಿ ನೋಡುತ್ತಾನೆ, ನೇರಾಗಿ ಅರಿಯುತ್ತಾನೆ. ಆದುದರಿಂದ ತೋರುವುದು ಮತ್ತು ವಾಚ್ಯವಾದದ್ದು ಎಲ್ಲವೂ ಪ್ರಪಂಚವೇ. ಒಂದುವೇಳೆ ದೇಹಾದಿಗಳು ಪ್ರಪಂಚಕ್ಕೆ ಸೇರದೆ ಬೇರೆಯಾಗಿದ್ದು ಅವುಗಳೇ ಆತ್ಮನಾಗಿದ್ದರೆ ಅವು ಯಾವಾಗಲೂ ಇರಬೇಕಾಗಿತ್ತು, ಆದರೆ ಕನಸಿನಲ್ಲಿ ಈ ಆತ್ಮನ ಜೊತೆಗೆ ಈ ಎಚ್ಚರದ ದೇಹೇಂದ್ರಿಯಾದಿಗಳಾವುವೂ ತೋರುವುದಿಲ್ಲ. ಆದುದರಿಂದ ಅಹಂಕಾರದಿಂದ ಮೊದಲುಮಾಡಿಕೊಂಡು ಎಂದರೆ ನಾನುನಾನೆನಿಸುವುದರಿಂದ ಪ್ರಾರಂಭಿಸಿಕೊಂಡು ದೇಹದವರೆಗೆ ತೋರುವುದೆಲ್ಲವೂ ದೃಶ್ಯಪ್ರಪಂಚಕ್ಕೇ ಸೇರಿದೆ. ಎಚ್ಚರ ಎನ್ನುವ ಇಡೀ ಅವಸ್ಥೆಯನ್ನೂ ಅದರಲ್ಲಿ ತೋರುವ ಸಮಸ್ತ ಪ್ರಪಂಚವನ್ನೂ ಯಾವುದು ಬೆಳಗುತ್ತದೆಯೋ ಎಂದರೆ ಯಾವುದರಿಂದ ಇದು ತಿಳಿಯಲ್ಪಡುತ್ತದೆಯೋ ಮತ್ತು

ಕನಸೆಂಬ ಅವಸ್ಥೆಯನ್ನೂ ಅದರಲ್ಲಿ ತೋರುವ ಸಮಸ್ತಪ್ರಪಂಚವನ್ನೂ ಯಾವುದು ಬೆಳಗುತ್ತದೆಯೋ ಹಾಗೆಯೇ ನಿದ್ರೆಯೆಂಬ ಅವಸ್ಥೆಯನ್ನೂ ನಿದ್ರೆಯಲ್ಲಿ ಏನೂ ತೋರಲಿಲ್ಲ, ಸುಖವಾಗಿದ್ದೆ ಎನ್ನುವುದನ್ನೂ ಯಾವುದು ಬೆಳಗುತ್ತದೆಯೋ ಅದೇ ಪರಮಾತ್ಮಸ್ವರೂಪವು. ಹೇಗೆ ತೋರುವ ಸಿನೆಮಾ ದೃಶ್ಯಕ್ಕೆ ಬಟ್ಟೆಯೇ ಆಧಾರವಾಗಿದೆಯೋ, ಹೇಗೆ ಬಟ್ಟೆಯಲ್ಲಿಯೇ ಸಿನೆಮಾವು ತೋರಿ ಅಡಗುತ್ತದೆಯೋ ಹಾಗೆ, ಎಚ್ಚರ ಕನಸು ನಿದ್ರೆ ಎನ್ನುವ ಅವಸ್ಥೆಗಳು ತೋರುವುದಕ್ಕೆ ಯಾವುದು ಆಧಾರವಾಗಿದೆಯೋ, ಯಾವುದರಲ್ಲಿ ಇವೆಲ್ಲವೂ ತೋರಿ ಅಡಗುತ್ತದೆಯೋ ಅದೇ ಪರಮಾತ್ಮಸ್ವರೂಪವು. ಅನುಭವದ ದೃಷ್ಟಿಯಿಂದ ನೋಡಿದರೆ ಎಚ್ಚರಕನಸುನಿದ್ರೆಗಳು ಯಾರಲ್ಲಿ ತೋರಿ ಅಡಗುತ್ತವೆ ? ಎಂದರೆ ತನ್ನಲ್ಲಿಯೇ ತೋರಿ ಅಡಗುತ್ತವೆ. ಇವೆಲ್ಲವುಗಳನ್ನೂ ಅರಿಯುವವನು, ಬೆಳಗುವವನು ಮತ್ತು ನೋಡುವವನು ಯಾರು? ನಾನೇ ಆಗಿರುತ್ತೇನೆ. ಆದುದರಿಂದ ಪರಮಾತ್ಮಸ್ವರೂಪವೇ ನಾನಾಗಿದ್ದೇನೆ ಎಂಬುದಾಗಿ ತಿಳಿದುಕೊಂಡರೆ ಆಗ ಸಮಸ್ತಬಂಧನಗಳಿಂದಲೂ ಬಿಡುಗಡೆಯಾಗುತ್ತದೆ ಎಂಬುದಾಗಿ ಕೈವಲ್ಯೋಪನಿಷತ್ತು ಡಂಗುರವನ್ನು ಹೊಡೆಯುತ್ತಿದೆ.

ಈ ವಿಧವಾಗಿ ವಿವಿಧಯುಕ್ತಿಗಳಿಂದಲೂ ಅನುಭವದಿಂದಲೂ ನೋಡಿಕೊಂಡು ಕ್ಷಣಕ್ಷಣವೂ ತಪ್ಪದೆ ಆತ್ಮಸ್ವರೂಪವನ್ನೇ ಚಿಂತಿಸಬೇಕು ; ಆತ್ಮಸ್ವರೂಪವನ್ನೇ ಧ್ಯಾನಿಸಬೇಕು. ಈ ಅಭ್ಯಾಸವನ್ನು ನಿರಂತರದಲ್ಲೂ ಮಾಡುವುದರಿಂದ ದೇಹಾತ್ಮಬುದ್ಧಿಯು ಹೋಗಿ ನಿಜವಾದ ಆತ್ಮಬುದ್ಧಿಯು ಬರುತ್ತದೆ.

## 18. ಪೂರ್ಣಸ್ಥಿತಿಯ ಲಕ್ಷಣ

**ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ ।**
**ಏವಂ ಮುನೇರ್ವಿಜಾನತ ಆತ್ಮಾ ಭವತಿ ಗೌತಮ ॥** (ಕಠ. 2–1–15)

ಯಾವ ರೀತಿ ಒಂದು ಸಣ್ಣ ಪಾತ್ರೆಯಲ್ಲಿರುವ ಶುದ್ಧವಾದ ನೀರನ್ನು ಒಂದು ದೊಡ್ಡ ಪಾತ್ರೆಯಲ್ಲಿರುವ ಶುದ್ಧವಾದ ನೀರಿಗೆ ಸುರಿದರೆ ಆಗ ಅದು ಹೇಗೆ ಬೇರೆಯಾಗಿ ಉಳಿಯದೇ ಒಂದೇ ಆಗಿಬಿಡುತ್ತದೆಯೋ ಪುನಃ ಅದನ್ನು ಬೇರೆ ಮಾಡಲು ಸಾಧ್ಯವಿಲ್ಲವೋ ಹಾಗೆ, ಅಖಂಡವಾಗಿರುವ ಪರಿಪೂರ್ಣವಾಗಿರುವ ನಿತ್ಯಮುಕ್ತವಾಗಿರುವ ತಾನೇತಾನಾಗಿರುವ ಕೇವಲ ಜ್ಞಾನಸ್ವರೂಪವಾಗಿರುವ ತನ್ನ ನಿಜತತ್ತ್ವವನ್ನು ಸದ್ಗುರುವಿನಿಂದ ಸರಿಯಾಗಿ ತಿಳಿದುಕೊಂಡು ಅನವರತವೂ ಮನನಮಾಡುವವನು

ಎಂದರೆ ನಿರಂತರವೂ ಆತ್ಮಸ್ವರೂಪವನ್ನೇ ಚಿಂತಿಸುವವನು ಅಥವಾ ಧ್ಯಾನಿಸುವವನು ಉಪಾಧಿಯಿಂದಾಗಿರುವ ಭೇದದೃಷ್ಟಿಯನ್ನು ಕಳೆದುಕೊಂಡು ಅತ್ಯಂತಶುದ್ಧವಾದ ಕೇವಲ ವಿಜ್ಞಾನಸ್ವರೂಪವಾದ ತನಗಿಂತ ಬೇರೆಯಲ್ಲದ ಆತ್ಮನೇ ಆಗಿಬಿಡುತ್ತಾನೆ– ಎಂಬುದಾಗಿ ಕಠೋಪನಿಷತ್ತು ಘೋಷಿಸುತ್ತಿದೆ.

**ಯಥಾ ನದ್ಯಃ ಸ್ಯನ್ದಮಾನಾಃ ಸಮುದ್ರೇಽಸ್ತಂ**
**ಗಚ್ಛನ್ತಿ ನಾಮರೂಪೇ ವಿಹಾಯ ।**
**ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ**
**ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥** (ಮುಂ. 3–2–8)

ನಾನಾ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಾ ಬೇರೆಬೇರೆಯಾಗಿ ಹರಿಯುವ ಗಂಗಾಯಮುನಾದಿನದಿಗಳು ಸಮುದ್ರಕ್ಕೆ ಹೋಗಿ ಸೇರಿದ ಕೂಡಲೇ ಹೇಗೆ ಬೇರೆಯಾಗಿ ಉಳಿಯದೆ ತಮ್ಮತಮ್ಮ ನಾಮರೂಪಗಳನ್ನು ಕಳೆದುಕೊಂಡು ವಿಶೇಷಸ್ವರೂಪವು ಇಲ್ಲದಿರುವ ಸಾಮಾನ್ಯರೂಪವನ್ನು ಹೊಂದುವವೋ ಎಂದರೆ ಸಮುದ್ರವೇ ಆಗಿಬಿಡುತ್ತವೆಯೋ ಹಾಗೆ, ಯಥಾರ್ಥವಾಗಿರುವ ತನ್ನ ಆತ್ಮಸ್ವರೂಪವನ್ನು ವಿವೇಕ ವಿಚಾರಗಳಿಂದ ತಿಳಿದುಕೊಂಡ ಸಾಧಕನು ಅವಿದ್ಯೆಯಿಂದ ಆಗಿರುವ ನಾಮರೂಪಗಳನ್ನು ಕಳೆದುಕೊಂಡು ಏನೂ ವಿಕಲ್ಪವಿಲ್ಲದ ಪರಮಶ್ರೇಷ್ಠವಾದ ಸಮಸ್ತಕ್ಕೂ ಕಾರಣನಾಗಿ ಸರ್ವಕ್ಕೂ ಆಧಾರನಾಗಿ ಸರ್ವರ ಆತ್ಮನಾಗಿ ಎಲ್ಲರ ಹೃದಯದಲ್ಲಿಯೂ ಇರುವ ಪರಮಪುರುಷನನ್ನು ಹೊಂದುವನು ಎಂದರೆ ಪರಮಾತ್ಮಸ್ವರೂಪವೇ ಆಗಿಬಿಡುತ್ತಾನೆ – ಎಂಬುದಾಗಿ ಮುಂಡಕೋಪನಿಷತ್ತು ಡಂಗುರವನ್ನು ಹೊಡೆಯುತ್ತಿದೆ.

## 19. ಜ್ಞಾನಿಯ ದೃಷ್ಟಿಯು ಹೇಗಿರುತ್ತದೆ ?

**ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥** (ಈ.6)

ಯಾವನು ಸರ್ವಜೀವರಾಶಿಗಳನ್ನೂ ಮತ್ತು ಚರಾಚರಾತ್ಮಕವಾದ ಸಮಸ್ತ ಪ್ರಪಂಚವನ್ನೂ ತನ್ನ ನಿಜಸ್ವರೂಪವಾದ ಆತ್ಮನಲ್ಲಿಯೇ ನೋಡುವನೋ ಎಂದರೆ ಆತ್ಮನಿಗಿಂತ ಅಥವಾ ತನಗಿಂತ ಬೇರೆಯಾಗಿ ಕಾಣುವದಿಲ್ಲವೋ ಸಮಸ್ತಭೂತಗಳಲ್ಲಿ ಎಂದರೆ ಸರ್ವರಲ್ಲಿಯೂ ತನ್ನನ್ನು ನೋಡುವನೋ ಎಂದರ್ಥ. (ಇದರಲ್ಲಿ ತನ್ನ ಮತ್ತು

ಇತರರ ದೇಹೇಂದ್ರಿಯಾದಿಗಳೂ ಸೇರಿವೆ) ತನ್ನ ಆತ್ಮನೇ ಸರ್ವರಿಗೂ ಆತ್ಮನಾಗಿರುವನೆಂದು, ಹೇಗೆ ಈ ದೇಹೇಂದ್ರಿಯಾದಿಗಳಿಗೂ ಎಲ್ಲಾ ಕಲ್ಪನೆಗಳಿಗೂ ಸಾಕ್ಷಿಯಾಗಿ ಚೈತನ್ಯರೂಪನಾಗಿ ಕೇವಲ ನಿರ್ಗುಣನಾಗಿರುವ ಆತ್ಮನೇ ಸ್ವರೂಪವೋ ಹಾಗೆ ಇದೇ ಸ್ವರೂಪದಿಂದಲೇ ಸರ್ವರಿಗೂ ನಾನೇ ಆತ್ಮನು ಎಂಬುದಾಗಿ ಸರ್ವಭೂತಗಳಲ್ಲಿಯೂ ನಿರ್ವಿಶೇಷನಾದ ಆತ್ಮನನ್ನು ಯಾವನು ಕಾಣುವನೋ ಅವನು ಜಿಗುಪ್ಸೆಯನ್ನು ಮಾಡುವುದಿಲ್ಲ. ತನಗಿಂತಲೂ ಬೇರೆಯಾಗಿ ಮತ್ತೊಂದನ್ನು ಕಂಡಾಗಲೇ ರಾಗದ್ವೇಷಾದಿಗಳು ಸಂಭವಿಸುತ್ತವೆ. ಅತ್ಯಂತ ಪರಿಶುದ್ಧನಾದ ಆತ್ಮನನ್ನೇ ಸರ್ವತ್ರ ಕಾಣುವುದರಿಂದ ತನಗಿಂತಲೂ ಬೇರೆಯಾಗಿ ಯಾವುದೂ ಇಲ್ಲವಾದ್ದರಿಂದ ಅವನು ಯಾವುದನ್ನೂ ನಿಂದಿಸುವುದಿಲ್ಲ.

**ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ।**
**ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ॥** (ಈ. 7)

ಮೇಲೆ ಹೇಳಿದಂತೆ ಪರಮಾರ್ಥತತ್ತ್ವವನ್ನು ಕಂಡುಕೊಂಡವನಿಗೆ ಸತ್ಯಸ್ವರೂಪವನ್ನು ತಿಳಿದುಕೊಂಡವನಿಗೆ ಯಾವಾಗ ಸರ್ವಪ್ರಪಂಚವೂ ಆತ್ಮಸ್ವರೂಪವೇ ಆಗಿ ತೋರಿಬಿಡುವುದೋ ಆಗ ಅವನಿಗೆ ಮೋಹವೆಲ್ಲಿ? ಶೋಕವೆಲ್ಲಿ? ಶೋಕವೂ ಮೋಹವೂ ಕಾಮಕರ್ಮಗಳಿಗೆ ಮೂಲವು. ಇದು ಅಜ್ಞಾನಿಗೇ ಆಗುತ್ತದೆ. ಆತ್ಮಸ್ವರೂಪವು ಒಂದೇ ಇರುವುದೆಂದು ತಿಳಿದುಕೊಂಡ ವಿವೇಕಿಗೆ ಅವಿದ್ಯೆಯಿಂದಲೇ ತೋರುವ ಶೋಕಮೋಹಗಳಿರುವುದಿಲ್ಲ.

ಜ್ಞಾನಿಯ ದೃಷ್ಟಿಯು ಹೇಗಿರುತ್ತದೆಂದರೆ: ರಾಜನೂ ತಾನೇ ಭಿಕ್ಷುಕನೂ ತಾನೇ, ಶತ್ರುವೂ ತಾನೇ ಮಿತ್ರನೂ ತಾನೇ, ಪುರುಷನೂ ತಾನೇ ಸ್ತ್ರೀಯೂ ತಾನೇ, ಬಾಲಕನೂ ತಾನೇ ವೃದ್ಧನೂ ತಾನೇ, ವಿದ್ಯಾವಂತನೂ ತಾನೇ ಅವಿದ್ಯಾವಂತನೂ ತಾನೇ, ಪಾಪಿಯೂ ತಾನೇ ಪುಣ್ಯಾತ್ಮನೂ ತಾನೇ, ಹಗಲುರಾತ್ರಿಗಳೂ ತಾನೇ, ಸೂರ್ಯ ಚಂದ್ರರೂ ತಾನೇ, ಪಂಚಮಹಾಭೂತಗಳೂ ತಾನೇ, ಸ್ವರ್ಗಾದಿಲೋಕಗಳೂ ತಾನೇ, ಅಷ್ಟದಿಕ್ಪಾಲಕರೂ ತಾನೇ, ಅಷ್ಟೇ ಅಲ್ಲದೆ ಬ್ರಹ್ಮವಿಷ್ಣುಮಹೇಶ್ವರರೂ ಸಹ ತಾನೇ, ಚರಾಚರಾತ್ಮಕವಾದ ಸಮಸ್ತಬ್ರಹ್ಮಾಂಡಗಳೂ ತಾನೇ, ಎಂದರೆ ಏನೇನು ತೋರುವುದೋ, ಏನೇನು ಕೇಳಬರುವುದೋ ಅದೆಲ್ಲವೂ ತಾನೇ ಆಗಿರುತ್ತಾನೆ. ತನಗಿಂತಲೂ ಭಿನ್ನವಾಗಿ ಮತ್ತೊಂದೇನೂ ಇಲ್ಲವೇ ಇಲ್ಲವೆಂದು ತಿಳಿದುಕೊಂಡಿರುತ್ತಾನೆ. ಹೀಗೆ ಸಮಸ್ತವೂ ತಾನೇ ಆಗಿರುವುದರಿಂದ ಜ್ಞಾನಿಯು ಆಪ್ತಕಾಮನಾಗಿರುತ್ತಾನೆ; ಎಂದರೆ ತನ್ನೊಳಗೇ ತಾನು ಸುಖಪಡುತ್ತಾನೆ; ಸ್ವಾನಂದಾಮೃತದಿಂದ ತೃಪ್ತನಾಗಿರು

ತ್ತಾನೆ. ಅವನಿಗೆ ಇನ್ನೊಂದರ ಇಚ್ಛೆಯೇ ಇರುವುದಿಲ್ಲ. ಇದನ್ನೇ ಗೀತೆಯಲ್ಲಿ ಭಗವಂತನು ಹೀಗೆ ಹೇಳಿರುತ್ತಾನೆ :

> ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ ।
> ಆತ್ಮನ್ಯೇವ ಚ ಸನ್ತುಷ್ಟಸ್ತಸ್ಯ ಕಾರ್ಯಂ ನ ವಿದ್ಯತೇ ॥ (ಗೀ. 3–17)

ಹೇಗೆ ಅಜ್ಞಾನಿಯು ವಿಷಯಗಳಲ್ಲಿಯೇ ಪ್ರೀತಿಯುಳ್ಳವನಾಗಿ ಅದರಲ್ಲಿಯೇ ರಮಿಸುತ್ತಾನೆಯೋ ಹಾಗೆ, ಜ್ಞಾನಿಯು ತನ್ನ ಆತ್ಮಸ್ವರೂಪದಲ್ಲೇ ಎಂದರೆ ತನ್ನ ನಿಜಸ್ವರೂಪದಲ್ಲಿಯೇ ಪ್ರೀತಿಯುಳ್ಳವನಾಗಿ ತನ್ನಲ್ಲಿಯೇ ತಾನು ರಮಿಸುತ್ತಾನೆ ; ತನ್ಮಯತೆಯನ್ನು ಹೊಂದುತ್ತಾನೆ. ಹೇಗೆ ಸಾಮಾನ್ಯ ಮನುಷ್ಯನು ವಿಷಯೋಪಭೋಗ ಗಳಿಂದಲೇ ತೃಪ್ತನಾಗುತ್ತಾನೆಯೋ ಹಾಗೆ, ಇವನು ಆತ್ಮನಲ್ಲಿಯೇ ಆತ್ಮನಿಷ್ಠೆಯಿಂದಲೇ ಬ್ರಹ್ಮನಿಷ್ಠೆಯಿಂದಲೇ ಎಂದರೆ ಆತ್ಮಸ್ವರೂಪದಲ್ಲಿ ನೆಲೆನಿಲ್ಲುವುದರಿಂದಲೇ ಸದಾ ತೃಪ್ತನಾಗಿರುತ್ತಾನೆ. ಹೇಗೆ ಸಾಮಾನ್ಯವಾಗಿ ಸರ್ವರೂ ಹೊರಗಿನ ವಿಷಯಗಳ ಪ್ರಾಪ್ತಿಯಿಂದಲೇ ಸಂತೋಷಪಡುತ್ತಾರೆಯೋ ಹಾಗೆ, ಇವನು ತನ್ನ ಆತ್ಮಸ್ವರೂಪ ದಲ್ಲಿಯೇ ತಾನು ಸಂತೋಷಪಡುತ್ತಾನೆ ; ತನ್ನಲ್ಲಿಯೇ ತಾನು ಆನಂದವನ್ನು ಅನುಭವಿಸುತ್ತಾನೆ. ಅರ್ಥಾತ್ ಇವನಿಗೆ ಯಾವ ವಿಧವಾದ ವಿಷಯೋಪಭೋಗಗಳ ಇಚ್ಛೆಯೂ ಇರುವುದಿಲ್ಲ. ಇಂತಹ ಜ್ಞಾನಿಗೆ ಯಾವ ಕರ್ತವ್ಯವೂ ಇರುವುದಿಲ್ಲ. ಮಾಡುವಂತಹದೇನೂ ಇರುವುದಿಲ್ಲ. ಇವನು ಹೇಗಿರುತ್ತಾನೆಂದರೆ :

> ತದ್ಬುದ್ಧಯಸ್ತದಾತ್ಮಾನಸ್ತನ್ನಿಷ್ಠಾಸ್ತತ್ಪರಾಯಣಾಃ ।
> ಗಚ್ಛನ್ತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥ (ಗೀ. 5–17)

ಅಜ್ಞಾನಿಯು ಹೇಗೆ ಯಾವಾಗಲೂ ವಿಷಯಗಳಲ್ಲಿಯೇ ತನ್ನ ಮನಸ್ಸು , ಬುದ್ಧಿಗಳನ್ನಿಟ್ಟಿರುತ್ತಾನೆಯೋ ಹಾಗೆ, ಜ್ಞಾನಿಯು ಯಾವಾಗಲೂ ತನ್ನ ನಿಜರೂಪವೇ ಆದ ಪರಮಾನಂದಸ್ವರೂಪನಾದ ಪರಮಾತ್ಮನಲ್ಲಿಯೇ ತನ್ನ ಮನಸ್ಸು ಬುದ್ಧಿಗಳ ನ್ನಿಟ್ಟಿರುತ್ತಾನೆ. ಅಜ್ಞಾನಿಯು ಹೇಗೆ ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ ಅಹಂಕಾರಾದಿಗಳೇ ತಾನೆಂದೂ, ತಾನು ಸ್ತ್ರೀ ಅಥವಾ ಪುರುಷ ಎಂಬದನ್ನೂ ಎಷ್ಟು ಧೃಢವಾಗಿ ತಿಳಿದಿರುತ್ತಾನೆಯೋ ಹಾಗೆ, ಜ್ಞಾನಿಯು ಹುಟ್ಟುಸಾವುಗಳಿಲ್ಲದ ನಾಮರೂಪಗಳಿಲ್ಲದ ನಿರ್ವಿಕಾರವಾದ ನಿಷ್ಕ್ರಿಯವಾದ ಎಲ್ಲಕ್ಕೂ ಆಧಾರವಾದ ಸಚ್ಚಿದಾನಂದಸ್ವರೂಪವಾದ ಪರಿಪೂರ್ಣವಾದ ಎಲ್ಲೆಲ್ಲೂ ತುಂಬಿರುವಂತಹ ನಿತ್ಯಮುಕ್ತವಾದ ದುಃಖದ ಸೋಂಕಿಲ್ಲದ ಪರಮಶಾಂತವಾದ ಪರಮಾತ್ಮಸ್ವರೂಪವೇ

ತಾನೆಂದು ದೃಢವಾಗಿ ಎಂದರೆ ನಿಶ್ಚಯವಾಗಿ ತಿಳಿದುಕೊಂಡಿರುತ್ತಾನೆ. ಸಮಸ್ತಕರ್ಮ ಗಳನ್ನೂ ಮನಸಾ ತ್ಯಜಿಸಿ ತನ್ನ ನಿಜಸ್ವರೂಪವೇ ಆದ ಪರಬ್ರಹ್ಮಸ್ವರೂಪದಲ್ಲಿ ನೆಲೆನಿಂತಿರುತ್ತಾನೆ. ಸುಖರೂಪವಾದದ್ದು ಸುಖವನ್ನು ಕೊಡುವಂತಹದು ತನ್ನ ಆತ್ಮಸ್ವರೂಪಕ್ಕಿಂತ ಹೆಚ್ಚಿನದು ಮತ್ತೊಂದು ಯಾವುದೂ ಇಲ್ಲವೆಂದು ತಿಳಿದು ತನ್ನಲ್ಲೇ ತಾನು ಕ್ರೀಡಿಸುತ್ತಾನೆ ; ತನ್ನಲ್ಲೇ ತಾನು ರಮಿಸುತ್ತಾನೆ ; ತನ್ನಲ್ಲೇ ತಾನು ಆನಂದಿಸುತ್ತಾನೆ. ಈ ವಿಧವಾದ ಜ್ಞಾನನಿಷ್ಠೆಯಿಂದ ಸಂಸಾರಕ್ಕೆ ಜನನಮರಣಗಳಿಗೆ ಕಾರಣವಾದ ಸಮಸ್ತಪಾಪದೋಷಗಳನ್ನೂ ಮತ್ತು ಅಜ್ಞಾನವನ್ನೂ ಕಳೆದುಕೊಂಡು ಪುನರಾವೃತ್ತಿ ರಹಿತವಾದ ಪರಮಪದವಿಯನ್ನು ಹೊಂದುವನು.

## 20. ಸಾಧಕರಿಗೆ ಸೂಚನೆ

ಇದನ್ನು ತಿಳಿದುಕೊಂಡು ಸಾಧಕರಾದವರು ಏನುಮಾಡಬೇಕೆಂದರೆ ಉಪಾಧ್ಯಾಯ ಪದವಿಯನ್ನೇರಿದವರಿಗೆ ಸಹಜವಾಗಿಯೇ ಇರುವ ವಿದ್ಯೆಯನ್ನು ಹೇಗೆ ವಿದ್ಯಾರ್ಥಿಗಳು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿ ಪಡೆಯುತ್ತಾರೆಯೋ ಹಾಗೆಯೇ ಜ್ಞಾನಿಗಳಿಗೆ ಯಾವ ಸ್ಥಿತಿಯು ಸ್ವಭಾವಸಿದ್ಧವಾಗಿಯೇ ಸಹಜವಾಗಿಯೇ ಇದೆಯೋ ಅಂಥ ಸ್ಥಿತಿಯನ್ನು ಪ್ರಯತ್ನಪೂರ್ವಕವಾಗಿ ಅಭ್ಯಾಸಮಾಡಿ ಪಡೆಯಬೇಕು. ಇದೇ ನಿಜವಾದ ಸಾಧನೆಯಾಗಿರುತ್ತದೆ. ಇದನ್ನೇ ಆಚಾರ್ಯರು **"ಸರ್ವತ್ರೈವ ಹ್ಯಧ್ಯಾತ್ಮಶಾಸ್ತ್ರೇ ಕೃತಾರ್ಥಲಕ್ಷಣಾನಿ ಯಾನಿ ತಾನ್ಯೇವ ಸಾಧನಾನ್ಯುಪದಿಶ್ಯನ್ತೇ ಯತ್ನಸಾಧ್ಯತ್ವಾತ್"** (ಗೀ. ಭಾ.2–54) ಎಂಬುದಾಗಿ ಹೇಳಿರುತ್ತಾರೆ. ಇಂಥ ಯೋಗ್ಯತೆಯನ್ನು ಪಡೆಯುವುದಕ್ಕಾಗಿಯೇ ಸಕಲಸಾಧನೆಗಳನ್ನೂ ಮಾಡಬೇಕು. ಇದು ಶ್ರೀಗುರುದೇವತಾಕೃಪಾಪ್ರಸಾದದಿಂದಲೇ ಲಭಿಸಬೇಕಾಗಿದೆ. ಅದಕ್ಕಾಗಿ ನಾವು ಸರ್ವೋಪರಿ ಪ್ರಯತ್ನವನ್ನು ಮಾಡಬೇಕು. ದಯಾಮಯನಾದ, ನಮ್ಮೆಲ್ಲರ ಆತ್ಮನಾದ ಆತ್ಮಾರಾಮನು ಸರ್ವರಿಗೂ ಹಾಗೆ ಅನುಗ್ರಹ ಮಾಡಲೆಂದು ಪ್ರಾರ್ಥಿಸೋಣ.

**ಜಯ ಜಯ ರಘುವೀರ ಸಮರ್ಥ !**

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀ ಶಂಕರ ಭಗವತ್ಪಾದರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು - ವೈ. ಸುಬ್ಬರಾಯರು, ಜನನ 5.1.1880), ಶ್ರೀ ಶಂಕರ ವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದ ಪುರುಷ ಸರಸ್ವತಿ ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೇ, ಅನಂತರ ಶ್ರೀ ಗೋಂದಾವಳಿ ಮಹಾರಾಜರಲ್ಲಿ ಶ್ರೀ ರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವೂ ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ.

ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾ ವಿಗ್ರಹವು ಹೊಳೆನರಸೀಪುರದ ಸಮಾಧಿ ಮಂದಿರದಲ್ಲಿ ರಾರಾಜಿಸುತ್ತಿದೆ.